# ಮಂಗಳೂರು ವಿಶ್ವವಿದ್ಯಾನಿಲಯ

**ದೂರ ಶಿಕ್ಷಣ ಕೇಂದ್ರ, ಮಂಗಳಗಂಗೋತ್ರಿ – 574 199**

## ಕೋರ್ಸ್ - 6

# ಅಂಗತ್ವ, ಶಾಲೆ ಮತ್ತು ಸಮಾಜ

## (ಶಿಕ್ಷಣದ ದೃಷ್ಟಿಕೋನಗಳು)

## ಬ್ಲಾಕ್ಸ್ 1 ಮತ್ತು 2

## ಬಿ.ಎಡ್. ಪದವಿ ಕಾರ್ಯಕ್ರಮ

**(ಮುಕ್ತ ಮತ್ತು ದೂರ ಕಲಿಕೆ)**

## ಪ್ರಥಮ ವರ್ಷ ಬಿ.ಎಡ್.

**ಪ್ರಕಾಶಕರು**

**ಮಂಗಳೂರು ವಿಶ್ವವಿದ್ಯಾನಿಲಯ**

**ಮಂಗಳಗಂಗೋತ್ರಿ - 574 199**

**Gender School and Society :** Self learning Material for B.Ed. Degree Programme (Open and Distance Learning) of First Year prepared by Dr. Annie Dimple Castelino, Dr Shashikala A. and others translated by Dr. Shashikala A. and others, Published by The Registrar, Mangalore University, Mangalagangothri - 574 199, Karnataka.
**Year 2018-19**
**Developed by:**
**The Director,**
**Centre for Distance Education, Mangalore University,**
**Mangalagangothri - 574 199, Karnataka.**

**Course Co-ordinator**
**Dr. Chidananda A.L., B.Ed.(ODL) Programme,**
**Centre for Distance Education, Mangalore University,**
**Mangalagangothri - 574 199, Karnataka.**

Printed at Datacon Technologies, #31/10, Left of Magadi Main Road,
Behind Saraswathi Convention Centre, Bangalore - 560 079, Bangalore.

© The Registrar, Mangalore University
DTP at: Sagar Offset Printers, Alake , Mangalore

| | | |
|---|---|---|
| **ಲಿಂಗತ್ವ, ಶಾಲೆ ಮತ್ತು ಸಮಾಜ** (ಶಿಕ್ಷಣದ ದೃಷ್ಟಿಕೋನಗಳು) | : | **ಪ್ರಥಮ ವರ್ಷದ ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮದ ಸ್ವ ಕಲಿಕಾ ಅಧ್ಯಯನ ಸಾಮಗ್ರಿ** |
| **ರಚನಕಾರರು** | : | ಡಾ. ಆ್ಯನಿ ಡಿಂಪಲ್ ಕ್ಯಾಸ್ಟೊಲಿನೋ, ಡಾ. ಶಶಿಕಲ ಎ. ಮತ್ತು ಇತರರು |
| **ಅನುವಾದಕರು** | : | ಡಾ. ಶಶಿಕಲ ಎ. ಮತ್ತು ಇತರರು |
| **ಪ್ರಕಾಶಕರು** | : | ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ<br>ಮಂಗಳಗಂಗೋತ್ರಿ - 574 199, ಕರ್ನಾಟಕ |
| **ವರ್ಷ** | : | 2018–19 |
| **©ಹಕ್ಕುಗಳು** | : | ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ |
| **ಸಿದ್ಧಪಡಿಸಿದವರು** | : | **ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ,**<br>ಮಂಗಳಗಂಗೋತ್ರಿ 574 199, ಕರ್ನಾಟಕ |
| **ಕೋರ್ಸ್ ಸಂಯೋಜಕರು** | : | **ಡಾ. ಚಿದಾನಂದ ಎ.ಎಲ್.**<br>ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮ,<br>ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ,<br>ಮಂಗಳಗಂಗೋತ್ರಿ 574 199, ಕರ್ನಾಟಕ |
| **ಡಿ.ಟಿ.ಪಿ.** | : | ಸಾಗರ್ ಆಫ್‌ಸೆಟ್ ಪ್ರಿಂಟರ್ಸ್, ಅಳಕೆ, ಮಂಗಳೂರು |
| **ಮೊಬೈಲ್** | : | 9480228399 |
| **ಮುದ್ರಕರು** | : | ಡಾಟಾಕಾನ್ ಟೆಕ್ನಾಲಜೀಸ್, # 31/10, ಮಾಗಡಿ ಮುಖ್ಯರಸ್ತೆ ಎಡಭಾಗ,<br>ಸರಸ್ವತಿ ಕನ್ವೆನ್ಷನ್ ಸೆಂಟರ್ ಹಿಂಭಾಗ, ಬೆಂಗಳೂರು – 560 079 |

**(ಖಾಸಗಿ ಪ್ರಸಾರಕ್ಕಾಗಿ ಮಾತ್ರ)**

**ಕೋರ್ಸ್ - 6**

# ಲಿಂಗತ್ವ, ಶಾಲೆ ಮತ್ತು ಸಮಾಜ

## (ಶಿಕ್ಷಣದ ದೃಷ್ಟಿಕೋನಗಳು)

---


**ಕುಲಸಚಿವರು** — **ಪ್ರಕಾಶಕರು**

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ–574 199


---


**ಕೋರ್ಸ್ ಲೇಖಕರು**

**ಡಾ. ಆ್ಯನಿ ಡಿಂಪಲ್ ಕ್ಯಾಸ್ಟೊಲಿನೋ** : **ಬ್ಲಾಕ್–1**
**ಬ್ಲಾಕ್–2 (ಘಟಕ: 1, 2 ಮತ್ತು 3)**

**ಡಾ. ಶಶಿಕಲ ಎ.** : **ಬ್ಲಾಕ್–2 (ಘಟಕ: 4 ಮತ್ತು 5)**

**ಶ್ರೀಮತಿ ಜಾನಕಿ ಎ.** : **ಬ್ಲಾಕ್–2 (ಘಟಕ: 6)**

---

**ಕೋರ್ಸ್ ಅನುವಾದಕರು**

**ಡಾ. ಶಶಿಕಲ ಎ.** : **ಬ್ಲಾಕ್–1 (ಘಟಕ: 2, 3, 4, 5, 6)**
**ಬ್ಲಾಕ್–2 (ಘಟಕ: 1, 2, 3, 4, 6)**

**ಡಾ. ರಾಘವೇಂದ್ರ ಹೆರಳೆ** : **ಬ್ಲಾಕ್–1 (ಘಟಕ: 1)**

**ಶ್ರೀಮತಿ ಹರಿಣಿ ಆನಂದ ಆಚಾರ್ಯ** : **ಬ್ಲಾಕ್–2 (ಘಟಕ: 5)**

---

**ಕೋರ್ಸ್ ಪರಿಶೀಲಕರು**

**ಡಾ. ಶಶಿಕಲ ಎ.** :

ಸಲಹೆಗಾರರರು

ಬಿ.ಎಡ್. ದೂರ ಶಿಕ್ಷಣ ಕಾರ್ಯಕ್ರಮ

(ಮುಕ್ತ ಮತ್ತು ದೂರ ಕಲಿಕೆ)

ದೂರ ಶಿಕ್ಷಣ ಕೇಂದ್ರ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ –574 199

---

**ಡಾ. ಚಿದಾನಂದ ಎ.ಎಲ್.** — **ಸಂಪಾದನ ಸಹಾಯಕರು**


---

## ವಿಷಯ ಸೂಚಿ

### ಕೋರ್ಸಿನ ಪಕ್ಷಿನೋಟ

### ಬ್ಲಾಕ್–1 : ಭಾರತದಲ್ಲಿ ಲಿಂಗತ್ವ ವಿಚಾರಗಳು ಮತ್ತು ಸಾಮಾಜೀಕರಣ ಪ್ರಕ್ರಿಯೆ


| | | |
|---|---|---|
| ಘಟಕ–1 | : ಲಿಂಗತ್ವ ಸಾಮಾಜೀಕರಣ ಮತ್ತು ಲಿಂಗತ್ವದ ಪಾತ್ರಗಳು | 1 |
| ಘಟಕ–2 | : ಸಂಸ್ಥೆಗಳ ವಿವಿಧ ಹಂತಗಳಲ್ಲಿ ಲಿಂಗತ್ವ ತಾರತಮ್ಯ | 14 |
| ಘಟಕ–3 | : ಭಾರತದ ವಿಭಿನ್ನ ಕುಟುಂಬಗಳಲ್ಲಿ ಲಿಂಗತ್ವ ಅನನ್ಯತೆ (ಅಸ್ಮಿತೆ) ಮತ್ತು ಸಾಮಾಜೀಕರಣ ಅಭ್ಯಾಸಗಳು | 24 |
| ಘಟಕ–4 | : ಶಾಲಾ ಪ್ರವೇಶಾತಿ, ದಾಖಲಾತಿ, ಉಳಿಕೆ, ಭಾಗವಹಿಕೆ ಮತ್ತು ಒಟ್ಟು ಸಾಧನೆ ಇವುಗಳಿಗೆ ಸಂಬಂಧಿಸಿದ ಲಿಂಗತ್ವ ಕಾಳಜಿಗಳು | 35 |
| ಘಟಕ–5 | : ಪಠ್ಯಕ್ರಮದಲ್ಲಿ ಲಿಂಗತ್ವ ವಿಚಾರಗಳು | 44 |
| ಘಟಕ–6 | : ಲಿಂಗತ್ವ ನ್ಯಾಯಶಾಸ್ತ್ರ (ನ್ಯಾಯವಿಧಿಗಳು) | 56 |


### ಬ್ಲಾಕ್–2: ಲಿಂಗತ್ವ ಮತ್ತು ಶಿಕ್ಷಣ


| | | |
|---|---|---|
| ಘಟಕ–1 | : ಧನಾತ್ಮಕ ಸ್ವ–ಪರಿಕಲ್ಪನೆ ಮತ್ತು ಸ್ವ–ಗೌರವವನ್ನು ಬೆಳೆಸುವುದು | 63 |
| ಘಟಕ–2 | : ಲಿಂಗತ್ವ ವಿಚಾರಗಳನ್ನು ಬೋಧಿಸಲು ಕಲಿಕಾ ಸಾಮಗ್ರಿಗಳು | 75 |
| ಘಟಕ–3 | : ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದ ತರಗತಿ ವ್ಯವಹಾರಗಳು | 83 |
| ಘಟಕ–4 | : ಲಿಂಗತ್ವ ಮತ್ತು ಸಮಾಜದ ಸಂದರ್ಭದಲ್ಲಿ ಬದಲಾವಣೆಯ ನಿಯೋಗಿಯಾಗಿ ಶಿಕ್ಷಕರು | 91 |
| ಘಟಕ–5 | : ಲಿಂಗತ್ವ ಮತ್ತು ಶಿಕ್ಷಣದ ಸಿದ್ಧಾಂತಗಳ ಪರಿಚಯ (ಭಾರತೀಯ ಹಿನ್ನೆಲೆ) : ಸಾಮಾಜೀಕರಣ ಸಿದ್ಧಾಂತ ಮತ್ತು ರಚನಾತ್ಮಕ ಸಿದ್ಧಾಂತ | 105 |
| ಘಟಕ–6 | : ಪಠ್ಯಕ್ರಮದಲ್ಲಿ ಲಿಂಗತ್ವ ವಿಚಾರಗಳು : ಲಿಂಗತ್ವ, ಸಂಸ್ಕೃತಿ ಮತ್ತು ಸಂಸ್ಥೆ, ಕಲಿಕಾರ್ಥಿಗಳಾಗಿ ಬಾಲಕಿಯರು; ಲಿಂಗತ್ವ ಮತ್ತು ಅಡಗು ಪಠ್ಯಕ್ರಮ | 120 |

# ಕೋರ್ಸಿನ ಪಕ್ಷಿನೋಟ

ಒಬ್ಬ ಹುಡುಗನಾಗಿರುವ ಅಥವಾ ಹುಡುಗಿಯಾಗಿರುವುದರ ಅರ್ಥ ಮತ್ತು ಅನುಭವಗಳು ವಿವಿಧ ಸಾಮಾಜಿಕ ಗುಂಪುಗಳು ಮತ್ತು ಕಾಲಘಟ್ಟಗಳಲ್ಲಿ ಒಂದೇ ಆಗಿರುವುದಿಲ್ಲ. ಹಾಗಾಗಿ ಹುಡುಗ ಅಥವಾ ಹುಡುಗಿಯಿಂದ ಸಮಾಜ ಅಪೇಕ್ಷಿಸುವ ಪಾತ್ರವೂ ಭಿನ್ನವಾಗಿರುತ್ತದೆ. ಇದನ್ನು ಇವರು ಹೇಗೆ ಕಲಿಯುತ್ತಾರೆ ಎಂಬುದು ಕುತೂಹಲದ ಮತ್ತು ಆಸಕ್ತಿಯುತವಾದ ಸಂಗತಿ. ಇದನ್ನೇ ಈ ಕೋರ್ಸಿನ ಅಡಿಯಲ್ಲಿ ವಿಚಾರ ಮಾಡಲಾಗಿದೆ. ಸಮಾಜ ಅಪೇಕ್ಷಿಸುವ ಈ ಪಾತ್ರಗಳನ್ನು ಕುರಿತ ಅರಿವನ್ನು ಕುಟುಂಬ, ಧರ್ಮ, ಸಂಸ್ಕೃತಿ, ಮಾಧ್ಯಮ ಇತ್ಯಾದಿ ಅನೇಕ ನಿಯೋಗಗಳು ಹೇಗೆ ಬೆಳೆಸುತ್ತವೆ ಎಂಬುದನ್ನು ನೀವು ಈ ಕೋರ್ಸಿನಲ್ಲಿ ಕಲಿಯುತ್ತೀರಿ.

ಲಿಂಗ ಅಸಮಾನತೆಯ ಮೇಲೆ ಸೃಷ್ಟಿಯಾಗಿರುವ ಬಹುತೇಕ ಸಮಾಜದ ಅಲೋಚನೆಗಳನ್ನು ಪುನರ್ವಿಮರ್ಶೆ ಮಾಡಿ ಲಿಂಗ ಸಮಾನತೆಯ ಅಥವಾ ಲಿಂಗ ತಟಸ್ಥ ಆಲೋಚನೆಯ ಆಧಾರದಲ್ಲಿ ಸಮಾಜವನ್ನು ಪುನಾರಚಿಸುವಂತೆ ನಮ್ಮ ಮಕ್ಕಳನ್ನು ಸಿದ್ಧಗೊಳಿಸುವುದು ಈ ಕೋರ್ಸಿನ ಪ್ರಮುಖ ಉದ್ದೇಶ. ಈ ನಿಟ್ಟಿನಲ್ಲಿ ಹುಡುಗಿಯರಿಗೆ ಶಿಕ್ಷಣಕ್ಕೆ ಇರುವ ಅವಕಾಶಗಳಲ್ಲಿ ಅಸಮಾನತೆ ಇರುವುದು ಸ್ಪಷ್ಟವಾಗಿ ದಾಖಲಾಗಿದ್ದರೂ ಇದೊಂದು ಅಂಶದ ಸಾಧನೆಯಿಂದ ಲಿಂಗ ಸಮಾನತೆ ಸಾಧ್ಯವಾಯಿತೆಂದು ಹೇಳಲಾಗದು. ಲಿಂಗ ನ್ಯಾಯಯುತ ಸಮಾಜವು ಇದಕ್ಕಿಂತಲೂ ಹೆಚ್ಚಿನ ವ್ಯಾಪ್ತಿಯದು. ಭಾರತದ ಸನ್ನಿವೇಶದಲ್ಲಿ ಲಿಂಗತ್ವ ಅನನ್ಯತೆಯನ್ನು ಮೂಡಿಸುವಲ್ಲಿ ಅನೇಕ ಒತ್ತಡ ಮತ್ತು ಒತ್ತಾಯಗಳಿರುತ್ತವೆ. ಅಲ್ಲದೆ ಅಧಿಕಾರದ ಮೂಲದಲ್ಲಿ ಪುರುಷ ಪ್ರಾಧಾನ್ಯತೆ ಪ್ರಬಲವಾಗಿದೆ. ಈ ಎಲ್ಲದರ ನಡುವೆಯೂ ಎಲ್ಲವನ್ನೂ ಮೀರಿ ಪ್ರತಿಯೊಬ್ಬರೂ ತಮ್ಮ ಮೂಲಭೂತ ಸಾಮರ್ಥ್ಯಗಳನ್ನು ಬೆಳೆಸಿಕೊಂಡು ಅವುಗಳ ನೆಲೆಯಲ್ಲಿ ತಮ್ಮ ಅನನ್ಯತೆಯನ್ನು ಕಂಡುಕೊಳ್ಳಲು ಸಾಧ್ಯವಾಗಬೇಕಾದರೆ ಪ್ರಮುಖವಾಗಿ ಶಿಕ್ಷಣ ಕ್ಷೇತ್ರದಲ್ಲಿ ಏನೆಲ್ಲ ಸಾಧಿಸಬೇಕು ಎಂಬುದನ್ನು ಪರಿಚಯಿಸುವುದು ಈ ಕೋರ್ಸಿನ ಮತ್ತೊಂದು ಉದ್ದೇಶ. ಈ ಹಿನ್ನೆಲೆಯಲ್ಲಿ ಅಧ್ಯಾಪಕರಾದ ನಾವು ಶಾಲೆ, ಸಹಪಾಠಿಗಳು, ಅಧ್ಯಾಪಕರು, ಪಠ್ಯಕ್ರಮ ಮತ್ತು ಪಠ್ಯಪುಸ್ತಕ ಇವುಗಳು ಎಷ್ಟರಮಟ್ಟಿಗೆ ಲಿಂಗತ್ವ ಸಮಾನತೆಯನ್ನು ಸಾಧಿಸುತ್ತಿವೆ ಅಥವಾ ಲಿಂಗತ್ವ ಮುಕ್ತವಾಗಿದೆ ಎಂಬುದನ್ನು ನಿರಂತರವಾಗಿ ಪರಿಶೀಲಿಸಬೇಕಾಗುತ್ತದೆ. ಈ ಉದ್ದೇಶದಿಂದ ನೀವು ಶಾಲೆ, ತರಗತಿ, ಶಾಲಾ ಅಭ್ಯಾಸಗಳು, ರೂಢಿಗಳು, ಶಿಸ್ತು ಬೆಳೆಸುವ ಮಾರ್ಗಗಳು, ಅಂತರ್ ಕ್ರಿಯೆಗಳು ಈ ಎಲ್ಲ ವಿಷಯಗಳಲ್ಲಿ ನಿಮ್ಮ ಪಾತ್ರವೇನು ಎಂಬುದನ್ನು ಗಮನಿಸಿಕೊಳ್ಳಬೇಕು ಎಂಬ ಅಪೇಕ್ಷೆಯಿಂದ ಇದರ ಕುರಿತ ವಿಚಾರಗಳನ್ನೂ ಈ ಪತ್ರಿಕೆಯಲ್ಲಿ ವಿಶ್ಲೇಷಿಸಲಾಗಿದೆ. ಜೀವನ ಕೌಶಲಗಳನ್ನು ಬೋಧಿಸುವ ಸಂದರ್ಭಗಳಲ್ಲಿ ಲಿಂಗತ್ವ ವಿಚಾರಗಳನ್ನು ಕುರಿತಾದ ಅರಿವು ಮೂಡಿಸುವ ಪ್ರಯತ್ನಗಳನ್ನು ಪಠ್ಯಕ್ರಮಗಳಲ್ಲಿ ಗುರುತಿಸಿಕೊಂಡಿರುವುದಾದರೂ ಅದರ ಅನ್ವಯ ಕೇವಲ ಪಠ್ಯವಿಷಯದಿಂದಾಚೆಗೆ ಅಥವಾ ಸಹಪಠ್ಯ ವಿಷಯದ ಜೊತೆಗೆ ಅಳವಡಿಸಲಾಗಿದೆ. ಆದರೆ ಇದು ಲಿಂಗತ್ವ ವಿಚಾರಗಳ ಸಂಪೂರ್ಣ ಅರಿವು ಬೆಳೆಸಲು ಮಿತಿಯುಳ್ಳ ಪ್ರಯತ್ನವೆಂಬುದನ್ನು ಅರಿತು ಈ ಕೋರ್ಸಿನಲ್ಲಿ ಪಠ್ಯವಿಷಯಗಳಲ್ಲೂ ಲಿಂಗತ್ವ ವಿಚಾರಗಳನ್ನು ಅನ್ವಯಿಸಿ, ಲಿಂಗ ಸಮಾನ ಅಥವಾ ಲಿಂಗ ತಟಸ್ಥ ಸಮಾಜವನ್ನು ರೂಪಿಸುವುದು ಹೇಗೆ ಎಂಬುದನ್ನು ಮನಗಾಣಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಒಟ್ಟಿನಲ್ಲಿ ಈ ಕೋರ್ಸು, ಸಮುದಾಯ ಮತ್ತು ಶಾಲೆಗಳಲ್ಲಿನ ಲಿಂಗತ್ವ ಆಧಾರಿತ ರೂಢಿಗಳನ್ನು ಅಭ್ಯಾಸಗಳನ್ನು ಆರೋಗ್ಯಕರವಾದ ಮನಸ್ಸಿನಿಂದ ವಿಮರ್ಶಿಸಿ ಅವುಗಳನ್ನು ಆಲೋಚನೆಗಳಾಗಿ ಸ್ಥಗಿತಗೊಳಿಸದೇ ಕ್ರಿಯಾಶೀಲವಾಗಿ ಅನ್ವಯಿಸಿ, ಲಿಂಗಸಮಾನ ಸಮಾಜವನ್ನು ಸೃಷ್ಟಿಸುವಲ್ಲಿ ಅಗತ್ಯವಾದ ಚಿಂತನೆ, ಕೌಶಲಗಳಿಗೆ ಎಡೆಕೊಡುತ್ತದೆ.

ಈ ಮೇಲಿನ ಉದ್ದೇಶಗಳನ್ನು ಸಾಧಿಸಲು ಎರಡು ಬ್ಲಾಕ್‌ಗಳಲ್ಲಿ ವಿಚಾರ ಮಾಡಲಾಗಿದೆ. ಮೊದಲನೆಯ ಬ್ಲಾಕ್‌ನಲ್ಲಿ, ವಿದ್ಯಾರ್ಥಿ-ವಿದ್ಯಾರ್ಥಿನಿಯರು ತಮ್ಮ ಲಿಂಗತ್ವ ಪರಿಕಲ್ಪನೆಯನ್ನು ಹೇಗೆ ಬೆಳೆಸಿಕೊಳ್ಳುತ್ತಾರೆ, ವಿವಿಧ ಸಂಸ್ಥೆಗಳು ಲಿಂಗತ್ವದ ಪರಿಕಲ್ಪನೆಯನ್ನು ಹೇಗೆ ಮೂಡಿಸುತ್ತವೆ, ಇವೇ ಸಂಸ್ಥೆಗಳು ಲಿಂಗಭೇದ ಮತ್ತು ಲಿಂಗ ಅಸಮಾನತೆಯನ್ನು ಹೇಗೆ ಸೃಷ್ಟಿಸುತ್ತವೆ, ಶಾಲಾ ಪ್ರವೇಶಾತಿ, ದಾಖಲಾತಿ, ಉಳಿಕೆ, ಭಾಗವಹಿಕೆ, ಶೈಕ್ಷಣಿಕ ಸಾಧನೆ ಇವುಗಳನ್ನು ಕುರಿತ ಲಿಂಗತ್ವ ಕಾಳಜಿಗಳಾವುವು, ಪಠ್ಯಕ್ರಮದಲ್ಲಿ ಕಾಣಬೇಕಾದ ಲಿಂಗತ್ವ ವಿಚಾರಗಳೇನು, ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದ ಕಾನೂನು ಸಂಹಿತೆಗಳೇನು ಎಂಬ ಅಂಶಗಳನ್ನು ಮೊದಲ ಬ್ಲಾಕ್‌ನಲ್ಲಿ ವಿಚಾರ ಮಾಡಲಾಗಿದೆ. ಎರಡನೇ ಬ್ಲಾಕ್‌ನಲ್ಲಿ ಪರಿಸ್ಥಿತಿಯ ಸುಧಾರಣೆಗೆ ಅಗತ್ಯವಾಗಿ ಮಾಡಬೇಕಾದುದೇನು ಎಂಬುದರ ಕುರಿತು ಗಮನಿಸಲಾಗಿದೆ. ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಸ್ವಗೌರವವನ್ನು ಬೆಳೆಸುವುದರ ಮೂಲಕ ಲಿಂಗಸಮಾನತೆಯನ್ನು ಅನ್ವಯಿಸಿಕೊಳ್ಳಲು ಬೇಕಾದ ಮನೋಭೂಮಿಕೆಯನ್ನು ರೂಪಿಸುವುದು ಹೇಗೆ, ಪ್ರಗತಿಪರವಾದ ಚಿಂತನೆಯನ್ನು ಮೂಡಿಸುವುದರ ಮೂಲಕ ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದ ಧನಾತ್ಮಕ ಮೌಲ್ಯಗಳನ್ನು ಬೆಳೆಸುವುದು ಹೇಗೆ, ಈ ನಿಟ್ಟಿನಲ್ಲಿ ಪರಿಣಾಮಕಾರಿಯಾದ ಬೋಧನಾ ವಿಧಾನಗಳಾವುವು, ಅವುಗಳಿಗೆ ಅಗತ್ಯವಾದ ಬೋಧನಾ ಕಲಿಕಾ ಸಾಮಗ್ರಿಗಳಾವುವು, ಅಧ್ಯಾಪಕರು ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದ ನಿಯೋಗಿಗಳಾಗಿ ಯಾವ ಪಾತ್ರಗಳನ್ನು ವಹಿಸಬೇಕು, ಸಂಸ್ಕೃತಿ, ಲಿಂಗತ್ವ ಮತ್ತು ನಿಯೋಗಗಳ ನಡುವಿನ ಅವಿನಾಭಾವ ಸಂಬಂಧವೇನು, ಈ ನಿಟ್ಟಿನಲ್ಲಿ ಯಾವ ಮಧ್ಯವರ್ತನಗಳು ಅವಶ್ಯಕ ಇತ್ಯಾದಿ ವಿಚಾರಗಳನ್ನು ಗಮನಿಸಲಾಗಿದೆ.

ಈ ಎಲ್ಲ ವಿಚಾರಗಳನ್ನು ಗಮನಿಸಿಕೊಂಡು, ಅದಕ್ಕನುಗುಣವಾದ ಮನೋಭಾವ ಮತ್ತು ಸಾಮರ್ಥ್ಯಗಳನ್ನು ಬೆಳೆಸಿಕೊಂಡು ಲಿಂಗಸಮಾನತೆಯ ಆಧಾರದ ಮೇಲಿನ ಆರೋಗ್ಯಕರ ಸಮಾಜವನ್ನು ರೂಪಿಸುವಲ್ಲಿ ಕೊಡುಗೆ ನೀಡಿರಿ.

# ಬ್ಲಾಕ್–1 : ಭಾರತದಲ್ಲಿ ಲಿಂಗತ್ವ ವಿಚಾರಗಳು ಮತ್ತು ಸಾಮಾಜೀಕರಣ ಪ್ರಕ್ರಿಯೆ

## ಘಟಕ – 1 : ಲಿಂಗತ್ವ ಸಾಮಾಜೀಕರಣ ಮತ್ತು ಲಿಂಗತ್ವದ ಪಾತ್ರಗಳು

**ಘಟಕದ ರಚನೆ**


1.1.1. ಕಲಿಕೆಯ ಉದ್ದೇಶಗಳು

1.1.2. ಪೀಠಿಕೆ

1.1.3. ಕಲಿಕಾಂಶಗಳು ಮತ್ತು ಕಲಿಕೆಯ ಚಟುವಟಿಕೆಗಳು

1.1.3.1. ಲಿಂಗ ಮತ್ತು ಲಿಂಗತ್ವದ ಅರ್ಥ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

1.1.3.2. ಲಿಂಗತ್ವದ ಸಾಮಾಜೀಕರಣ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

1.1.3.3. ಲಿಂಗತ್ವದ ಪಾತ್ರಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –3

1.1.4. ಸಾರಾಂಶೀಕರಿಸೋಣ.

1.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

1.1.6. ಘಟಕಾಂತ್ಯ ಅಭ್ಯಾಸಗಳು

1.1.7. ಪರಾಮರ್ಶನ ಸೂಚಿ


### 1.1.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಲಿಂಗತ್ವ ಮತ್ತು ಲಿಂಗ ಪರಿಕಲ್ಪನೆಗಳನ್ನು ವಿವರಿಸುವರು;
- ಲಿಂಗತ್ವ ಮತ್ತು ಲಿಂಗಗಳ ನಡುವಿನ ವ್ಯತ್ಯಾಸ ತಿಳಿಸುವರು;
- ಲಿಂಗತ್ವ ಸಾಮಾಜೀಕರಣ ಮತ್ತು ಲಿಂಗತ್ವ ಪಾತ್ರಗಳ ಅರ್ಥವನ್ನು ವಿವರಿಸುವರು;
- ಲಿಂಗತ್ವ ಸಾಮಾಜೀಕರಣದ ನಿಯೋಗಗಳನ್ನು ಗುರುತಿಸುವರು;
- ಲಿಂಗತ್ವದ ಪಾತ್ರಗಳ ಸ್ವಭಾವವನ್ನು ನಿರ್ದಿಷ್ಟ ಪಡಿಸುವರು; ಮತ್ತು
- ಲಿಂಗತ್ವದ ಪಾತ್ರಗಳನ್ನು ನಿರ್ಧರಿಸಬಲ್ಲ ಅಂಶಗಳನ್ನು ಗುರುತಿಸುವರು.

## 1.1.2. ಪ್ರಸ್ತಾವನೆ

ನೀವು ಎಂದಾದರೂ ಒಮ್ಮೆ ನಿಮ್ಮ ತರಗತಿಯಲ್ಲಿರುವ ಹುಡುಗರು ಮತ್ತು ಹುಡುಗಿಯರು ವಿಭಿನ್ನವಾಗಿ ವರ್ತಿಸುತ್ತಿರುವುದನ್ನು ಅವಲೋಕಿಸಿದ್ದೀರಾ? ಅವರ ಅಗತ್ಯಗಳು ವಿಭಿನ್ನವಾಗಿರುತ್ತದೆ ಎಂದು ಎಂದಾದರೂ ಯೋಚಿಸಿದ್ದೀರಾ? ನಮ್ಮ ತರಗತಿಗಳು ವಿವಿಧ ಲಿಂಗತ್ವದ ಹಿನ್ನೆಲೆಯಿಂದ ಬಂದಿರುವ ವಿದ್ಯಾರ್ಥಿಗಳನ್ನು ಒಳಗೊಂಡಿರುತ್ತವೆ. ಆದರೂ ನಾವು ವಿದ್ಯಾರ್ಥಿಗಳನ್ನು ಹುಡುಗರು ಮತ್ತು ಹುಡುಗಿಯರು ಎಂದು ವರ್ಗೀಕರಿಸುತ್ತೇವೆ. ನಮ್ಮ ವಿದ್ಯಾರ್ಥಿಗಳ ನಡುವೆ ತೃತೀಯ ಲಿಂಗತ್ವದ ನೆಲೆಯ ವಿದ್ಯಾರ್ಥಿಗಳೂ ಇರಬಹುದು ಎಂಬುದನ್ನೂ ಕಡೆಗಣಿಸುವಂತಿಲ್ಲ. ವಿದ್ಯಾರ್ಥಿಗಳನ್ನು ಅವರ ಅಗತ್ಯಕ್ಕೆ ತಕ್ಕಂತೆ ಲಿಂಗತ್ವದ ಹಿನ್ನೆಲೆಯಲ್ಲಿ ವರ್ಗೀಕರಿಸುವಾಗ ಶಿಕ್ಷಕರಾಗಿ ನಮಗೆ ಮನಶಾಸ್ತ್ರೀಯ ಅಂಶಗಳ ಅರಿವಿರಬೇಕಾಗುತ್ತದೆ. ಹಾಗಾಗಿ ನಮ್ಮನ್ನು ನಾವು ಆವಶ್ಯಕವಾದ ಜ್ಞಾನ ಹಾಗೂ ಸಾಧನ ತಂತ್ರಗಳೊಂದಿಗೆ ಮಕ್ಕಳ ಕಲಿಕೆಯ ಪ್ರಗತಿಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಸಜ್ಜುಗೊಳಿಸಿಕೊಳ್ಳಬೇಕಾಗುತ್ತದೆ.

ನಮ್ಮ ತರಗತಿಗಳಿಗೆ ಬರುವ ಮಕ್ಕಳು ವೈವಿಧ್ಯ ಪೂರ್ಣವಾದ ಸಮಾಜಶಾಸ್ತ್ರೀಯ ಹಿನ್ನೆಲೆಯಿಂದ ಬಂದಿರುತ್ತಾರೆ. ಅವರು ಬೇರೆ ಬೇರೆ ಕುಟುಂಬಗಳಿಂದ, ಬೇರೆ ಬೇರೆ ಧರ್ಮಗಳಿಂದ ಬೇರೆ ಬೇರೆ ಪ್ರದೇಶಗಳಿಂದ ಬಂದಿರುತ್ತಾರೆ. ಇದು ಅವರಿಗೆ ವಿಭಿನ್ನವಾದ ಅನುಭವಗಳನ್ನು ನೀಡುವುದರ ಜೊತೆಗೆ ಅವರಲ್ಲಿ ಲಿಂಗತ್ವದ ಕುರಿತಾದ ದೃಷ್ಟಿಕೋನವನ್ನು ಬೆಳೆಸುತ್ತದೆ. ಅವರ ಜೈವಿಕ ರಚನೆಯ ಮೂಲವೂ ಅವರಿಗೆ ತಾವು ಯಾರು ಎಂಬುದನ್ನು ನಿರ್ಧರಿಸುವಲ್ಲಿ ಸಹಾಯ ಮಾಡುತ್ತದೆ ಮತ್ತು ಅವರ ಲಿಂಗತ್ವದ ಗ್ರಹಿಕೆ ಏನು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಶಿಕ್ಷಕರಾಗಿ ನಾವು ನಮ್ಮ ವಿದ್ಯಾರ್ಥಿಗಳಿಗೆ ಸರಿಯಾದ ಕ್ರಮದಲ್ಲಿ ಲಿಂಗತ್ವದ ಚೌಕಟ್ಟನ್ನು ರೂಪಿಸಲು ಮಾರ್ಗದರ್ಶಿಸುವ ಗುರುತರವಾದ ಜವಬ್ದಾರಿಯನ್ನು ಹೊಂದಿದ್ದೇವೆ ಮತ್ತು ಅದು ಪ್ರಗತಿಪರವೂ, ನೈತಿಕವೂ, ಸುಸ್ಥಿರವೂ ಆಗಬೇಕಾಗಿದೆ. ಹಾಗಾಗಿ, ಈ ಘಟಕದಲ್ಲಿ ನಾವು ಈ ಕುರಿತಂತೆ ಮೂಲಭೂತ ವಿಚಾರಗಳಾದ ಲಿಂಗ, ಲಿಂಗತ್ವ , ಲಿಂಗತ್ವ ಸಾಮಾಜೀಕರಣ ಮತ್ತು ಲಿಂಗತ್ವ ಪಾತ್ರಗಳು – ಈ ವಿಷಯಗಳನ್ನು ಕುರಿತು ವಿಚಾರಮಾಡೋಣ.

## 1.1.3. ಕಲಿಕಾಂಶಗಳು ಮತ್ತು ಕಲಿಕೆಯ ಚಟುವಟಿಕೆಗಳು

### 1.1.3.1. ಲಿಂಗ ಮತ್ತು ಲಿಂಗತ್ವದ ಅರ್ಥ

ನಾವೀಗ ಲಿಂಗ ಮತ್ತು ಲಿಂಗತ್ವದ ಅರ್ಥವನ್ನು ನೋಡೋಣ ಹಾಗೂ ಅವುಗಳೆರಡರ ಅರ್ಥ ಸಮಾನವಾದುದೇ ಅಥವಾ ಭಿನ್ನವೇ ಎಂಬುದನ್ನು ನೋಡೋಣ.

**ಅಭ್ಯಾಸ–1:**

ಈ ಕೆಳಗೆ ಕೆಲವು ಪದಗಳು ಮತ್ತು ವಿಚಾರಗಳ ಒಂದು ಪಟ್ಟಿಯನ್ನು ನೀಡಲಾಗಿದೆ. ಅವುಗಳನ್ನು ವರ್ಗೀಕರಿಸಿ ಅವು ಯಾವ ಗುಂಪಿಗೆ ಸೇರತಕ್ಕದ್ದೆಂದು ಚಿಂತನೆ ನಡೆಸಿ ಕೆಳಗೆ ಒದಗಿಸಿದ ಸ್ಥಳದಲ್ಲಿ ಬರೆಯಿರಿ.

1. ಜೀವಶಾಸ್ತ್ರೀಯ ಅಂಶಗಳು
2. ಸಮಾಜ ಶಾಸ್ತ್ರೀಯ ಅಂಶಗಳು
3. ಕ್ರೊಮೊಸೋಮುಗಳು (ವರ್ಣ ತಂತುಗಳು)
4. ಹಾರ್ಮೋನುಗಳು (ರಸದೂತಗಳು)
5. ಸಂಸ್ಕೃತಿ
6. ಮನಶ್ಶಾಸ್ತ್ರೀಯ ಅಂಶಗಳು
7. ಭೌತಿಕ ಅಂಶಗಳು (ದೇಹ ಸಂಬಂಧಿತ)
8. ಸಮಾಜ

| ಲಿಂಗ | ಲಿಂಗತ್ವ |
|---|---|
| | |

ಜೀವಶಾಸ್ತ್ರೀಯ ಅಂಶಗಳು, ವರ್ಣತಂತುಗಳು, ರಸದೂತಗಳು, ಹಾಗೂ ಭೌತಿಕ ಅಂಶಗಳು (ದೇಹ ಸಂಬಂಧಿತ) ಮಾನವ ದೇಹಕ್ಕೆ ಸಂಬಂಧಪಟ್ಟ ಅಂಶಗಳಾಗಿವೆ. ಅದೇ ರೀತಿ ಸಮಾಜ ಶಾಸ್ತ್ರೀಯ ಅಂಶಗಳು, ಸಂಸ್ಕೃತಿ, ಮನಶಾಸ್ತ್ರೀಯ ಅಂಶಗಳು ಮತ್ತು ಸಮಾಜ ಮಾನವ ಪರಸ್ಪರ ಕ್ರಿಯೆಗೆ ಸಂಬಂಧಿಸಿದ ಬಾಹ್ಯ ಅಂಶಗಳು. ನಾವು ಬಹಳ ಸ್ಪಷ್ಟವಾಗಿ ಈ ಎಲ್ಲಾ ಪದಗಳ ನಡುವಿನ ಅರ್ಥ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಾಗುತ್ತದೆ. ಮಾನವ ದೇಹಕ್ಕೆ ಸಂಬಂಧಪಟ್ಟ ಘಟಕಾಂಶಗಳನ್ನು ವಿವರಿಸುವ ಅಂಶಗಳನ್ನು ನಾವು 'ಲಿಂಗ' ಎನ್ನಬಹುದು. ಮಿಕ್ಕುಳಿದ ಅಂಶಗಳು 'ಲಿಂಗತ್ವ'ವನ್ನು ವರ್ಣಿಸುತ್ತವೆ.

ಲಿಂಗ ಮತ್ತು ಲಿಂಗತ್ವಗಳು ಒಂದೇ ನಾಣ್ಯದ ಎರಡು ಮುಖಗಳಿದ್ದ ಹಾಗೆ. ಲಿಂಗ ಎಂದು ಹೇಳುವಾಗ ಅದು ಜೀವಶಾಸ್ತ್ರೀಯ ಮತ್ತು ದೈಹಿಕ ಅಂಶಗಳಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಲಿಂಗತ್ವ ಎಂದು ಹೇಳುವಾಗ ಅದು ಸಮಾಜಶಾಸ್ತ್ರೀಯ ಮತ್ತು ಸಾಂಸ್ಕೃತಿಕ ಅಂಶಗಳಿಗೆ ಸಂಬಂಧಪಡುತ್ತದೆ.

ಈ ಕೆಳಗಿನ ಅಂಶಗಳು 'ಲಿಂಗ' ಮತ್ತು 'ಲಿಂಗತ್ವ' ಪರಿಕಲ್ಪನೆಗಳನ್ನು ಹೆಚ್ಚು ಸ್ಪಷ್ಟಪಡಿಸುತ್ತವೆ:

**ಲಿಂಗ:**

- 'ಸೆಕ್ಸ್' ಎಂಬ ಪದವು 'ಸೆಕ್ಸಸ್' ಎಂಬ ಲ್ಯಾಟಿನ್ ಭಾಷೆಯ ಪದದಿಂದ ಬಂದಿದೆ. ಅದು ಸಂತಾನೋತ್ಪತ್ತಿಯ ಒಂದು ಲಿಂಗವನ್ನು ನಿರ್ಧರಿಸುತ್ತದೆ.
- ಇದೊಂದು ಜೀವಶಾಸ್ತ್ರೀಯ ಪದ. ಜನರು ತಮ್ಮ ತಮ್ಮ ಲೈಂಗಿಕ ಅಂಗಗಳ ಹಿನ್ನೆಲೆಯಲ್ಲಿ ಒಂದು ಗಂಡಾಗಿಯೋ ಇಲ್ಲವೇ ಹೆಣ್ಣಾಗಿಯೋ ಗುರುತಿಸಲ್ಪಡುತ್ತಾರೆ.
- ಸಂತಾನೋತ್ಪತ್ತಿಯ ಅಂಗಗಳು ಮತ್ತು ಜೀನ್ಸ್‌ಗಳು (ವಂಶವಾಹಿಗಳು.)–ಇದು ವಂಶವಾಹಿತ್ವ ಮತ್ತು ದೈಹಿಕ ಅಂಶಗಳ ಲಕ್ಷಣಗಳಿಗೆ ಸಂಬಂಧಪಟ್ಟದ್ದಾಗಿದೆ. ಅವುಗಳು ಒಬ್ಬ ವ್ಯಕ್ತಿ ಗಂಡು ಅಥವಾ ಹೆಣ್ಣು ಎಂಬುದನ್ನು ನಿರ್ಧರಿಸುತ್ತದೆ.
- ಲಿಂಗವು ಗಂಡು ಮತ್ತು ಹೆಣ್ಣಿನ ನಡುವೆ ಇರುವ ಜೀವಶಾಸ್ತ್ರೀಯ ವ್ಯತ್ಯಾಸಗಳನ್ನು ತಿಳಿಸುತ್ತದೆ. ಇದು ಗಂಡು ಮತ್ತು ಹೆಣ್ಣುಗಳ ಜನನಾಂಗಗಳಲ್ಲಿ ಕಂಡುಬರುವ ವೀಕ್ಷಣಾತ್ಮಕ ವ್ಯತ್ಯಾಸ ಮತ್ತು ಸಂತಾನೋತ್ಪತ್ತಿಯ ಪ್ರಕ್ರಿಯೆಯಲ್ಲಿ ಅವುಗಳ ಮನಶಾಸ್ತ್ರೀಯ ಕಾರ್ಯಗಳನ್ನು ತಿಳಿಸುತ್ತದೆ.
- ಇರುವುದು ಎರಡೇ ಲಿಂಗಗಳು ಒಂದು ಗಂಡು ಇನ್ನೊಂದು ಹೆಣ್ಣು. ಲಿಂಗವನ್ನು ನಿರ್ಧರಿಸುವಾಗ ವರ್ಣತಂತುಗಳು, ಬಾಹ್ಯ ಜನನಾಂಗಗಳು ರಸದೂತಗಳ ಸ್ಥಿತಿಗತಿ ಆನುಷಂಗಿಕ ಲೈಂಗಿಕ ಲಕ್ಷಣಗಳನ್ನು ಪರಿಗಣಿಸಬೇಕು.

ಒಬ್ಬನ ಲಿಂಗ ಎಂಬುದು ನಿರ್ಧರಿಸಲ್ಪಡುವುದು ಮೇಲೆ ಕಾಣಿಸಿದ ಈ ಎಲ್ಲಾ ಗುಣಾಂಶಗಳ ನೆಲೆಯಲ್ಲಿ ಮತ್ತು ಇದು ಹೆಚ್ಚು ಸ್ಪಷ್ಟವಾದುದು. ಬಹುತೇಕ ಮಂದಿ ಯಾವುದಾದರೂ ಒಂದು ಪ್ರತ್ಯೇಕ 'ಬೆಲ್‌ಕರ್ವ್'ನಲ್ಲಿ ಬೀಳುತ್ತಾರೆ. ಆ ಒಂದನ್ನೇ 'ಗಂಡು' ಎಂದೂ ಇನ್ನೊಂದು 'ಹೆಣ್ಣು' ಎಂದು ಕರೆಯಲಾಗುತ್ತದೆ.

– ರಾಬರ್ಟ್‌ಸ್ಟೋಲರ್

## ಲಿಂಗತ್ವ :

- ಜೆಂಡರ್ ಎಂಬ ಪದವು 'ಜೆನಸ್' ಎಂಬ ಲ್ಯಾಟಿನ್ ಪದದಿಂದ ಬಂದಿದೆ. ಅದರ ಪ್ರಕಾರ ಜೆಂಡರ್ ಎಂದರೆ ಜನಾಂಗ, ಬುಡಕಟ್ಟು ಎಂಬರ್ಥ ಬರುತ್ತದೆ.
- ಜೆಂಡರ್ (ಲಿಂಗತ್ವ) ಎಂಬುದು ಮನಶಾಸ್ತ್ರೀಯ ಮತ್ತು ಸಾಂಸ್ಕೃತಿಕ ಪದವಾಗಿದೆ. ಇದು ವ್ಯಕ್ತಿಯೊಬ್ಬನ 'ಗಂಡುತನ' ಮತ್ತು 'ಹೆಣ್ಣುತನ'ದ ಕುರಿತಾದ ವ್ಯಕ್ತಿನಿಷ್ಠ ಭಾವನೆಗೆ ಸಂಬಂಧಪಟ್ಟಿದೆ.
- ಜೆಂಡರ್ (ಲಿಂಗತ್ವ) ಎಂಬುದು ಸಮಾಜದ ವರ್ತನೆಯ ಮೌಲ್ಯಮಾಪನದ ಅಂಶಗಳಿಗೂ ಸಂಬಂಧ ಪಟ್ಟದ್ದಾಗಿದೆ. ಅದು ಪುಲ್ಲಿಂಗ ಸ್ತ್ರೀಲಿಂಗದ ನೆಲೆಯು (ಪುರುಷನಿಷ್ಠ ಅಥವಾ ಸ್ತ್ರೀನಿಷ್ಠ ನೆಲೆಯಲ್ಲಿ) ಇರಬಹುದಾಗಿದೆ.
- ಗಂಡು ಮತ್ತು ಹೆಣ್ಣುಗಳ (ಗಂಡಸು ಅಥವಾ ಹೆಂಗಸಿನ) ಕುರಿತ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯಾಖ್ಯೆಗಳು 'ಲಿಂಗತ್ವ' (ಜೆಂಡರ್) ಎಂದು ಕರೆಯಲ್ಪಟ್ಟಿವೆ. ಉದಾಹರಣೆಗೆ ಒಂದು ಸಮಾಜವು ಹೆಣ್ಣೊಬ್ಬಳು ಮನೆಯಲ್ಲಿಯೇ ಇರಬೇಕೆಂದು ಮಾಡುವ ನಿಯಮ. ಅಥವಾ ಗಂಡೊಬ್ಬನು ಮನೆಯ ಹೊರಗೆ ಹೋಗಬಹುದು ಎಂದು ಮಾಡುವ ನಿಯಮ. ಅದೇ ರೀತಿ ಹೆಣ್ಣಿಗೆ ತಿನ್ನಲು ಗಂಡಿಗಿಂತ ಕಡಿಮೆ ಆಹಾರ ಕೊಡುವುದು, ಆಟವಾಡಲು ಹುಡುಗನಿಗಿಂತ ಕಡಿಮೆ ಸಮಯ ನೀಡುವುದು. ಅದೇ ಹುಡುಗನನ್ನು ಹುಡುಗಿಯರು ಹೋಗುವ ಶಾಲೆಗಿಂತ ಒಳ್ಳೆಯ ಶಾಲೆಗೆ ಸೇರಿಸುವುದು ಇತ್ಯಾದಿ. ಇದರ ಪರಿಣಾಮವಾಗಿ ಹುಡುಗನು ಬೆಳೆದಂತೆ ಆತನು ತನ್ನ ಕುಟುಂಬವನ್ನು, ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುವುದು ಅಥವಾ ಒಳ್ಳೆಯ ಕೆಲಸವನ್ನು ಹೊಂದುವುದು. ಇದೇ ವೇಳೆಗೆ ಹೆಣ್ಣಿನ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನವನ್ನು ವಹಿಸದೆ ಇರುವುದು. ಈ ಎಲ್ಲಾ ಸಾಮಾಜಿಕ ವ್ಯಾಖ್ಯೆಗಳ ಕಾರಣದಿಂದಾಗಿ ಗಂಡು ಮತ್ತು ಹೆಣ್ಣುಗಳ ನಡುವಿನ ವ್ಯತ್ಯಾಸವು ಎರಡು ಪ್ರತ್ಯೇಕವಾದ ಸಂಪೂರ್ಣ ಭಿನ್ನವಾದ ಜಗತ್ತನ್ನು ಸೃಷ್ಟಿಸಿದೆ ಎನ್ನಬಹುದು.

ಈಗ ನೀವೆಲ್ಲರೂ ಲಿಂಗ ಮತ್ತು ಲಿಂಗತ್ವಗಳೆರಡೂ ಪ್ರತ್ಯೇಕವಾದ ಪರಿಕಲ್ಪನೆಗಳು ಎಂಬುದನ್ನು ಕಂಡುಕೊಂಡಿದ್ದೀರಿ. ಅವು ಒಂದೇ ನೆಲೆಯಲ್ಲಿ ಪ್ರಯೋಗಿಸಲ್ಪಡುತ್ತಿವೆ ಎಂಬುದನ್ನು ಗಮನಿಸಿದ್ದೀರಿ. ಲಿಂಗ ಎಂಬುದು ಹುಟ್ಟಿನಿಂದ ನಮಗೆ ಬರುವ ಜೀವಶಾಸ್ತ್ರೀಯವಾದ ಮತ್ತು ವೈಯಕ್ತಿಕ ಮಟ್ಟದ ಅಂಶ, ಲಿಂಗತ್ವ ಎಂಬುದು ಸಮಾಜದಿಂದ ಸಂಸ್ಕೃತಿಯಿಂದ ಬರುವಂತಹ ಅಂಶ. ಹಾಗಾಗಿ ಅದು ಮನುಷ್ಯನ ಗ್ರಹಿಕೆಗೆ ಬಿಟ್ಟಂತಹ ವಿಷಯವಾಗಿದೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

ಲಿಂಗ ಮತ್ತು ಲಿಂಗತ್ವಗಳ ನಡುವಿನ ವ್ಯತ್ಯಾಸವನ್ನು ಗುರುತಿಸಿ ನಿಗದಿಪಡಿಸಿದ ಕೆಳಗಿನ ಕಾಲಂ (ವಿಭಾಗ) ಗಳಲ್ಲಿ ಬರೆಯಿರಿ.

| ಲಿಂಗ | ಲಿಂಗತ್ವ |
|---|---|
| | |
| | |
| | |
| | |

## 1.1.3.2. ಲಿಂಗತ್ವದ ಸಾಮಾಜೀಕರಣ

ಈಗಾಗಲೇ ನಾವು ತಿಳಿದುಕೊಂಡಂತೆ ಲಿಂಗತ್ವವು ಸಮಾಜಶಾಸ್ತ್ರೀಯವಾಗಿ ಸಂರಚಿತವಾದ ಪರಿಕಲ್ಪನೆ. ನಾವು ಸಮಾಜದಲ್ಲಿ ಈ ಪ್ರಕ್ರಿಯೆಯು ಹೇಗೆ ನಡೆಯುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾದ ಆವಶ್ಯಕತೆಯಿದೆ. ನಾವು ನಮ್ಮ ವಿದ್ಯಾರ್ಥಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಒಬ್ಬ ಹುಡುಗ ಅಥವಾ ಒಬ್ಬ ಹುಡುಗಿಯಿಂದ ಏನನ್ನು ನಿರೀಕ್ಷಿಸಲಾಗುತ್ತಿದೆ ಎಂಬ ಬಗ್ಗೆ ಅವರಿಗೆ ವಿಭಿನ್ನವಾದ ನಂಬಿಕೆಗಳು ಹಾಗೂ ಅಪೇಕ್ಷೆಗಳಿರುವುದು ಕಂಡುಬರುತ್ತದೆ ಮತ್ತು ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವರ ಲಿಂಗತ್ವ ಆಧಾರಿತ ವರ್ತನೆಗಳ ಆಳಕ್ಕೆ ಇಳಿಯ ಬಯಸಿದರೆ ವಿದ್ಯಾರ್ಥಿಗಳು ದೊಡ್ಡ ಮಟ್ಟದಲ್ಲಿ ತಮ್ಮ ಕುಟುಂಬ, ಸಮುದಾಯ, ನೆರೆಹೊರೆ ಹಾಗೂ ಸಮಾಜದಿಂದ  ತಮ್ಮ ನಂಬಿಕೆಗಳು ಮತ್ತು ಆಚರಣೆಗಳನ್ನು ಪ್ರತಿಫಲಿಸಿಕೊಂಡಿರುವುದು ಅರಿವಿಗೆ ಬರುತ್ತದೆ. ಸಾಮಾಜಿಕ ಕ್ರಿಯೆಗಳ ಮೂಲಕ ಲಿಂಗತ್ವ ಸಂಬಂಧಿತ ವರ್ತನೆಗಳು ಮತ್ತು ಮನೋಭಾವಗಳನ್ನು ಗಳಿಸುವ ಈ ಪ್ರಕ್ರಿಯೆಯು 'ಲಿಂಗತ್ವ ಸಾಮಾಜೀಕರಣ' ಎನ್ನಿಸಿಕೊಳ್ಳುತ್ತದೆ.

**ಅಭ್ಯಾಸ –2:**

ನಿಮ್ಮ ಜೀವನವನ್ನೊಮ್ಮೆ ಹಿಂತಿರುಗಿನೋಡಿ ಸ್ಮರಿಸಿಕೊಳ್ಳಿರಿ ಹಾಗೂ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1.ನಿಮ್ಮ ಕುಟುಂಬದಲ್ಲಿರುವ / ಸುತ್ತಮುತ್ತಲಿರುವ ಹುಡುಗಿಯರು ಮತ್ತು ಹುಡುಗರು (ಗಂಡಸರು ಮತ್ತು ಹೆಂಗಸರು )ಒಂದೇ ರೀತಿಯಲ್ಲಿ ವರ್ತಿಸುತ್ತಾರಾ? ಹೌದು ಎಂದಾದ ಪಕ್ಷದಲ್ಲಿ ಹೇಗೆ? ವಿವರಿಸಿ ಅಲ್ಲ ಎಂದಾದ ಪಕ್ಷದಲ್ಲಿ ಹೇಗೆ ಎಂದು ವಿವರಿಸಿ.

ಜೀವನದ ಹೆಚ್ಚಿನ ಅಂಶಗಳಲ್ಲಿ  ಗಂಡಸರು ಮತ್ತು ಹೆಂಗಸರು ವಿಭಿನ್ನವಾಗಿ ವರ್ತಿಸುತ್ತಾರೆ ಎಂಬುದು ನಿಮ್ಮ ಗಮನಕ್ಕೆ ಬಂದಿರಬಹುದು.  ಅವರ ವರ್ತನೆಯ ವ್ಯತ್ಯಾಸಕ್ಕೆ ಮುಖ್ಯಕಾರಣ ಸಾಮಾಜಿಕ ನಿರೀಕ್ಷೆಯೇ ಆಗಿದೆ.

ಸಮಾಜವು ಪ್ರತಿಯೊಬ್ಬ ವ್ಯಕ್ತಿಗೂ ಅವರ ಲಿಂಗತ್ವವನ್ನು ಆಧರಿಸಿ ವಿಭಿನ್ನವಾದ ಪಾತ್ರವನ್ನು ನಿರ್ದೇಶಿಸುತ್ತದೆ ಮತ್ತು ಪ್ರತಿಯೊಬ್ಬ ವ್ಯಕ್ತಿಯೂ ಈ ಒಂದು ಸಾಮಾಜಿಕ ಕಟ್ಟುಪಾಡಿನ ವ್ಯಾಪ್ತಿಯಲಿಯೇ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ಪ್ರಕ್ರಿಯೆಯನ್ನು 'ಲಿಂಗತ್ವ ಸಾಮಾಜೀಕರಣ' ಎಂದು ಕರೆಯಲಾಗುತ್ತದೆ.

ಈಗ ನಾವು ಲಿಂಗತ್ವ ಸಾಮಾಜೀಕರಣವನ್ನು ಕುರಿತಂತೆ ಕೆಲವು ವ್ಯಾಖ್ಯೆಗಳನ್ನು ನೋಡೋಣ. ಅವುಗಳು ಲಿಂಗತ್ವ ಸಾಮಾಜೀಕರಣದ ಬಗ್ಗೆ ಇನ್ನಷ್ಟು ಉತ್ತಮ ವಿಚಾರಗಳನ್ನು ನಮಗೆ ನೀಡಲಿವೆ.

ಹೆನ್ಸ್ಲಿನ್ (1999) ಅವರ ಪ್ರಕಾರ – "ದತ್ತ/ನಿಗದಿತ ಲಿಂಗಕ್ಕೆ ಸಮರ್ಪಕವಾಗಿ ಪರಿಗಣಿತವಾಗುವ ವರ್ತನೆಗಳನ್ನು ಮತ್ತು ಮನೋಭಾವಗಳನ್ನು ಕಲಿಯುವಿಕೆಯೇ ಲಿಂಗತ್ವ ಸಾಮಾಜೀಕರಣ."

ಸಿಂಥಿಯಾವಿನ್ನೆ (2019) ಯವರ ಪ್ರಕಾರ – "ನಾವು ನಮ್ಮ ಸಂಸ್ಕೃತಿಯ ಲಿಂಗತ್ವ ಸಂಬಂಧಿತ ಕಟ್ಟುಪಾಡುಗಳು, ನಿಯಮಗಳು ಮತ್ತು ನಿರೀಕ್ಷೆಗಳಿಂದ ಕಲಿಯುವ ಪ್ರಕ್ರಿಯೆಯೇ ಲಿಂಗತ್ವ ಸಾಮಾಜೀಕರಣ."

ಈ ವ್ಯಾಖ್ಯಾಗಳನ್ನು ನಾವು ಸಾರಾಂಶೀಕರಿಸುವುದಾದರೆ – ಲಿಂಗತ್ವ ಸಾಮಾಜೀಕರಣವು ಒಂದು ಪ್ರಕ್ರಿಯೆಯಾಗಿದ್ದು ಅದರ ಮೂಲಕ ವ್ಯಕ್ತಿಯೊಬ್ಬ 'ಲಿಂಗತ್ವ'ವೊಂದಕ್ಕೆ ಸಂಬಂಧಿಸಿದಂತೆ ವರ್ತನೆಗಳನ್ನು, ಮನೋಭಾವಗಳನ್ನು, ಕಟ್ಟುಪಾಡುಗಳನ್ನು ಕಲಿಯುವ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ ನಿರೀಕ್ಷೆಗಳನ್ನು ಅರ್ಥಮಾಡಿಕೊಳ್ಳುವ ವ್ಯವಸ್ಥೆ.

**ಅಭ್ಯಾಸ – 3 :**

ನೀವು ಯಾವ ಲಿಂಗತ್ವದ ಹಿನ್ನೆಲೆಯಿಂದ ಬಂದವರು ಎಂಬುದು ನಿಮಗೆ ಸ್ಪಷ್ಟವಾಗಿಯೇ?

ನೀವು ಹೇಗೆ ದಿರಿಸನ್ನು ಹಾಕಿಕೊಳ್ಳಬೇಕು ಎಂದು ನಿಮಗೆ ಹೇಳಿದ ಮೊದಲ ವ್ಯಕ್ತಿ / ಜನ ಯಾರು?

ನೀವು ನಿಮ್ಮ ಲಿಂಗತ್ವದ ಕಾರಣದಿಂದಾಗಿ ಒಂದು ನಿರ್ದಿಷ್ಟ ರೀತಿಯ ವರ್ತನೆಯನ್ನು ತೋರುತ್ತಿದ್ದೀರಿ ಎಂದು ನಿಮಗೆ ಎಂದಾದರೂ ಅನ್ನಿಸಿದ್ದಿದೆಯೇ? ಒಂದು ವೇಳೆ ಹೌದಾಗಿದ್ದ ಪಕ್ಷದಲ್ಲಿ ಆ ಅರಿವು ನಿಮಗೆ ಮೂಡಿದ್ದು ಎಲ್ಲಿ?

| |
|---|
| |

ನೀವು ಮೇಲಿನ ಪ್ರಶ್ನೆಗಳಿಗೆ ಉತ್ತರಿಸಿರುವಿರಿ. ಲಿಂಗತ್ವದ ಅರಿವು ನಮ್ಮ ಸುತ್ತಮುತ್ತಲಿನವರೊಂದಿಗೆ ಉಂಟಾಗುವ ಪರಸ್ಪರ ಕ್ರಿಯೆಯಿಂದ ಬರುತ್ತದೆ ಎಂಬ ಅರಿವು ನಿಮಗುಂಟಾಗಿದೆ. ಅದು ನಮ್ಮ ಕುಟುಂಬ, ಸಮುದಾಯ ಮತ್ತು ದೊಡ್ಡಮಟ್ಟದಲ್ಲಿ ಸಮಾಜವನ್ನು ಒಳಗೊಳ್ಳುತ್ತದೆ. ಲಿಂಗತ್ವವೆನ್ನುವುದು ನಮ್ಮ ಸಮಾಜದ ಸಾಂಸ್ಕೃತಿಕವಾದ, ಸಾಮಾಜಿಕವಾದ ಆರ್ಥಿಕವಾದ ಮೌಲ್ಯಗಳಿಂದ ನಿರ್ಧರಿಸಲ್ಪಡುತ್ತದೆ ಮತ್ತು ಇದು ಸಮಾಜದಿಂದ ಸಮಾಜಕ್ಕೆ ಬದಲಾಗುತ್ತಾ ಹೋಗುತ್ತದೆ. ಸಮಾಜದ ವಿಭಿನ್ನ ಘಟಕಗಳು – ಸಮುದಾಯ, ಕುಟುಂಬ, ಸ್ನೇಹಿತರು, ಸಮವಯಸ್ಕರರು– ಲಿಂಗತ್ವ ಸಾಮಾಜೀಕರಣದ ಪ್ರಮುಖ ನಿಯೋಗಗಳಾಗಿದ್ದಾರೆ. ಇದರ ಜೊತೆಗೆ ಸಮೂಹ ಮಾಧ್ಯಮ ಕೂಡ ಈ ಪ್ರಕ್ರಿಯೆಯಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ.

ಈಗ ನಾವು ಲಿಂಗತ್ವ ಸಾಮಾಜೀಕರಣದ ಕೆಲವು ಸಾಮಾನ್ಯ ನಿಯೋಗಗಳನ್ನು ನೋಡೋಣ

**ಅಭ್ಯಾಸ –4:**

**ಪ್ರಕರಣ – 1 :** ಸಾನಿಯಾ ಮತ್ತು ಹರ್ಷ ಒಡಹುಟ್ಟಿದವರು. ಅವರನ್ನು ಭೇಟಿಯಾಗಲು ಅವರ ಅಜ್ಜಿ ಬಂದರು. ಅವರು ಸಾನಿಯಾಳಿಗಾಗಿ ಒಂದು ಬೊಂಬೆಯನ್ನು ಮತ್ತು ಹರ್ಷನಿಗಾಗಿ ಒಂದು ಆಟವಾಡುವ ಪಿಸ್ತೂಲನ್ನು (ಗನ್) ತಂದರು. ಹರ್ಷನು ತನ್ನ ಗನ್‌ನಿಂದ ಶೂಟ್ ಮಾಡುತ್ತಿರುವಾಗ ಸಾನಿಯಾಳು ಸಿಡಿಮಿಡಿಯಿಂದ ಅಳುತ್ತಾ ತನಗೂ ಗನ್ ಕೊಡಲು ಹೇಳಿದಳು. ಆಗ ಅವಳ ತಾಯಿಯು ಅವಳನ್ನು ಸಮಾಧಾನಪಡಿಸುತ್ತಾ "ಸಾನಿಯಾ ನೀನು ಹುಡುಗಿ, ಹುಡುಗಿಯರು ಗನ್ ಹಿಡಿದು ಆಡಬಾರದು. ಅವರು ಕೇವಲ ಬೊಂಬೆಯೊಂದಿಗೆ ಆಡಬೇಕು ಎಂದು ಹೇಳಿದರು. ಇದನ್ನು ಕೇಳಿ ಸಾನಿಯಾಳು ಅಳುವುದನ್ನು ನಿಲ್ಲಿಸಿ ತನ್ನ ಬೊಂಬೆಯೊಂದಿಗೆ ಆಡಲು ಹೊರಟಳು.

**ಪ್ರಕರಣ–2:** ಅರುಣ ಮತ್ತು ಮರಿಯಾ ಸಹಪಾಠಿಗಳು ಹಾಗೂ ಸ್ನೇಹಿತರು. ಅವರು ಪ್ರತಿದಿನವೂ ಜೊತೆಯಾಗಿ ಕೆಲಸ ಮಾಡುತ್ತಾ ಆಡುವವರು. ಅವರ ಶಿಕ್ಷರರು ಅರುಣನಿಗೆ ತರಗತಿಯ ಕೊನೆಯ ಸಾಲಿನಿಂದ ಕುರ್ಚಿಗಳನ್ನು ಎತ್ತಿ ಮುಂದೆ ತಂದು ಇರಿಸಲು ಹೇಳಿದರು. ಮರಿಯಾಳು ಅವನಿಗೆ ಸಹಾಯ ಮಾಡಲು ನಿರ್ಧರಿಸಿದಳು. ಆಗ ಶಿಕ್ಷಕರು ಅರುಣನಿಗೆ "ಅರುಣ್ ಏಕೆ ನೀನು ಹುಡುಗಿಯೊಬ್ಬಳು ನಿನ್ನೊಂದಿಗೆ ಕೆಲಸ ಮಾಡಬೇಕೆಂದು ಬಯಸುತ್ತಿ? ಒಬ್ಬ ಹುಡುಗನಾಗಿ ನಿನಗೆ ಒಂದು ಕುರ್ಚಿಯನ್ನು ನೀನಾಗಿ ಎತ್ತಿಕೊಂಡು

ಬರುವಷ್ಟು ಸಾಮರ್ಥ್ಯವಿಲ್ಲವೆ?" ಎಂದು ಕೇಳಲು ಮರಿಯಾಳು ತನ್ನ ಕೆಲಸದಿಂದ ಹಿಂದೆ ಸರಿದಳು ಮತ್ತು ಅರುಣ್ ತಾನೊಬ್ಬನೇ ಎಲ್ಲಾ ಕುರ್ಚಿಗಳನ್ನು ಸಾಗಿಸಿದನು.

**ಪ್ರಕರಣ– 3:** "ರಾಕೇಶ್ ತನ್ನ ತಂದೆಯು ಪಾತ್ರೆಗಳನ್ನು ತೊಳೆಯುತ್ತಿರುವುದನ್ನು ನೋಡಿದನು ಹಾಗೂ ತನ್ನ ತಂದೆಯನ್ನು ಕೇಳಿದನು "ಅಪ್ಪ ನೀನೇನು ಮಾಡುತ್ತಿರುವೆ? ಹೊರಗಡೆ ನನ್ನ ಸ್ನೇಹಿತರ ಮನೆಯಲ್ಲಿ ಯಾವತ್ತೂ ಅವರ ಅಪ್ಪಂದಿರು ಪಾತ್ರೆಯನ್ನು ತೊಳೆಯುವುದಿಲ್ಲ. ನನ್ನ ಸ್ನೇಹಿತರು ನಿನ್ನನ್ನು ನೋಡಿದಾಗ ನನ್ನ ಬಳಿ ತಮಾಷೆ ಮಾಡುತ್ತಾರೆ. ಹಾಗಾಗಿ ದಯವಿಟ್ಟು ಅಮ್ಮನ ಬಳಿ ಪಾತ್ರೆಗಳನ್ನು ತೊಳೆಯಲು ಹೇಳು."

ಈ ಮೇಲಿನ ಪ್ರಕರಣಗಳನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಹುಡುಗಿಯು ಗೊಂಬೆಗಳೊಂದಿಗೆ ಮಾತ್ರ ಆಡತಕ್ಕದ್ದೆಂದು ಸಾನಿಯಾಳು ಯಾವಾಗ ಕಲಿತುಕೊಂಡಳು?
2. ಅರುಣ್ ಮತ್ತು ಮರಿಯಾ ಅವರಿಗೆ ಅವರ ಶಿಕ್ಷಕರು ನೀಡಿದ ಸಂದೇಶವೇನು?
3. ರಾಕೇಶ್‌ನು ತನ್ನ ತಂದೆಗೆ ಪಾತ್ರೆಗಳನ್ನು ತೊಳೆಯಲು ನಿಲ್ಲಿಸಲು ಹೇಳಿದ್ದು ಏಕೆ?

ಈ ಮೇಲಿನ ಪ್ರಕರಣಗಳಿಂದ ನಾವು ಸಂಗ್ರಹಿಸಬಹುದಾದ ಅಂಶವೇನೆಂದರೆ – ನಮ್ಮ ಸುತ್ತಮುತ್ತಲಿರುವ ಜನರು ಒಂದು ನಿರ್ದಿಷ್ಟ ಲಿಂಗತ್ವದ ಕುರಿತು ನಮಗೆ ಅರಿವುಂಟುಮಾಡುತ್ತಾರೆ. ಮತ್ತು ನಾವು ಯಾವ ಲಿಂಗತ್ವದ ಹಿನ್ನೆಲೆಯಿಂದ ಬಂದಿದ್ದೇವೆಯೋ ಹಾಗೂ ಸಾಮಾಜಿಕವಾಗಿ ಸ್ವೀಕಾರಾರ್ಹವಾದ ಯಾವ ಕಾರ್ಯವನ್ನು ಯಾವ ಲಿಂಗತ್ವದ ಹಿನ್ನೆಲೆಯವರು ನಿರ್ವಹಿಸಬೇಕಾಗಿದೆಯೋ ಅದನ್ನು ಮಾತ್ರ ನಾವು ಮಾಡಬೇಕಾಗುತ್ತದೆ. ಈ ಸಂದೇಶವನ್ನು ನಿರ್ಧರಿಸುವ ಮೂಲಗಳೇ ಸಾಮಾಜೀಕರಣದ ನಿಯೋಗಗಳು ಎನ್ನಿಸಿಕೊಳ್ಳುತ್ತವೆ.

ಈಗ ನಾವು ಸಾಮಾಜೀಕರಣದ ಕೆಲವು ಪ್ರಮುಖ ನಿಯೋಗಗಳನ್ನು ನೋಡೋಣ.

## ಲಿಂಗತ್ವ ಸಾಮಾಜೀಕರಣದ ನಿಯೋಗಗಳು:

**ಪೋಷಕರು :** ಪೋಷಕರು ಲಿಂಗತ್ವಕ್ಕೆ ಸಂಬಂಧಿಸಿದಂತೆ ಮಕ್ಕಳಿಗೆ ಮಾಹಿತಿಯನ್ನು ಒದಗಿಸುವ ಅಧಿಕೃತ ಮೊದಲ ಮೂಲವಾಗಿರುತ್ತಾರೆ. ಮಕ್ಕಳ ಹುಟ್ಟಿನಿಂದ ಪ್ರಾರಂಭಿಸಿ ಹೆತ್ತವರು ತಮ್ಮ ಮಕ್ಕಳ ಲಿಂಗವನ್ನು ಆಧರಿಸಿ ಅವರಿಗೆ ವಿಭಿನ್ನ ನಿರೀಕ್ಷೆಗಳನ್ನು ಸಂವಹನ ಮಾಡುತ್ತಾರೆ.

ಉದಾಹರಣೆಗೆ ಒಬ್ಬ ಮಗನು ತನ್ನ ತಂದೆಯೊಂದಿಗೆ ಹೆಚ್ಚು ಕಠಿಣವಾದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾನೆ. ಅದೇ ತಾಯಿಯು ತನ್ನ ಮಗಳನ್ನು 'ಶಾಪಿಂಗ್'ಗೆ ಕರೆದೊಯ್ಯುತ್ತಾಳೆ. ಮಗುವು ತನ್ನ ಪೋಷಕರಿಂದ ತಿಳಿದುಕೊಳ್ಳುವ ಅಂಶವೇನೆಂದರೆ ಕೆಲವು ಚಟುವಟಿಕೆಗಳು ಅಥವಾ ಆಟದ ಸಾಮಾನುಗಳು ಒಂದು ನಿರ್ದಿಷ್ಟ ಲಿಂಗತ್ವದ ವ್ಯಾಪ್ತಿಗೆ ಒಳಪಡುತ್ತವೆ. ಜೊತೆಗೆ ಪೋಷಕರೂ ಸಹ ಲಿಂಗತ್ವ ಸಮಾನತೆಗೆ ಒತ್ತು ನೀಡುವಾಗ ತಮ್ಮ ಸ್ವಂತ ಲಿಂಗತ್ವ ಸಾಮಾಜೀಕರಣದ ಕುರಿತು ಪುನರ್ಬಲನಗೊಳ್ಳುವ ಸಾಧ್ಯತೆಯೂ ಇರುತ್ತದೆ.

**ಶಿಕ್ಷಕರು:** ಶಿಕ್ಷಕರು ಮತ್ತು ಶಾಲಾಡಳಿತ ವ್ಯವಸ್ಥೆಯ ಮಾದರಿ ಪಾತ್ರಗಳು ಹಾಗೂ ಕೆಲವೊಮ್ಮೆ ಲಿಂಗತ್ವದ ಪಡಿಯಚ್ಚುಗಳ (ಪ್ರತಿನಿಧೀಕರಣ) ಪ್ರಾತ್ಯಕ್ಷಿಕೆಗಳು ಹೆಣ್ಣು ಮತ್ತು ಗಂಡು ಮಕ್ಕಳು (ವಿದ್ಯಾರ್ಥಿ – ವಿದ್ಯಾರ್ಥಿನಿಯರು) ಬಿನ್ನ ರೀತಿಯಲ್ಲಿ ಪ್ರತಿಕ್ರಿಯಿಸುವುದಕ್ಕೆ ಕಾರಣವಾಗುತ್ತವೆ.

ಉದಾಹರಣೆಗೆ ಲಿಂಗತ್ವದ ಚಟುವಟಿಕೆಗಳ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಪ್ರತ್ಯೇಕಿಸುವಾಗ ಅಥವಾ ಅವರ ವಿಭಿನ್ನ ಲಿಂಗತ್ವವನ್ನು ಆಧರಿಸಿ ವಿದ್ಯಾರ್ಥಿಗಳ ಶಿಸ್ತನ್ನು ನಿಷ್ಕರ್ಷಿಸುವಾಗ ಹಾಗೂ ಮಕ್ಕಳ ನಂಬಿಕೆಗಳು ಮತ್ತು ಕಲ್ಪನೆಗಳನ್ನು ಸಂವರ್ಧಿಸುವಲ್ಲಿಯೂ ಕೂಡ ಲಿಂಗತ್ವವು ಪುನರ್ಬಲನಗೊಳ್ಳಲು ಅವಕಾಶವಾಗಬಹುದು.

**ಸಮವಯಸ್ಕರು (ಓರೆಗೆಯವರು):** ಸಮವಯಸ್ಕರು ಅಥವಾ ಓರೆಗೆಯವರ ಪರಸ್ಪರ ಕ್ರಿಯೆಗಳೂ ಸಹ ಲಿಂಗತ್ವದ ಸಾಮಾಜೀಕರಣಕ್ಕೆ ಕಾರಣವಾಗಬಹುದು. ಮಕ್ಕಳು ತಮ್ಮದೇ ಲಿಂಗತ್ವವುಳ್ಳ ಸಮವಯಸ್ಕರರೊಂದಿಗೆ

ಆಡುವ ಪ್ರವೃತ್ತಿಯನ್ನು ರೂಢಿಸಿಕೊಂಡಿರುತ್ತಾರೆ. ಹಾಗಾಗಿ ಈ ಪರಸ್ಪರ ಕ್ರಿಯೆಯಿಂದಾಗಿ ಅವರು ತಮ್ಮ ಸಮವಯಸ್ಕರು ತಮ್ಮಿಂದ ಹುಡುಗರು ಅಥವಾ ಹುಡುಗಿಯರಾಗಿ ಏನನ್ನು ನಿರೀಕ್ಷಿಸುತ್ತಿದ್ದಾರೆ ಎಂಬುದನ್ನು ಕಲಿತುಕೊಳ್ಳಲು ಸಹಾಯವಾಗುತ್ತದೆ. ಈ ಪಾಠಗಳು ನೇರವಾಗಿಯೂ ಇರಬಹುದು. ಉದಾಹರಣೆಗೆ ಒಬ್ಬ ಸಮವಯಸ್ಕನು ಮಗುವಿನ ಹತ್ತಿರ ಕೆಲವು ವರ್ತನೆಗಳು ಅದರ ಲಿಂಗತ್ವಕ್ಕೆ ಅನುಗುಣವಾಗಿ ಸರಿಯಾಗಿವೆ ಅಥವಾ ಸರಿಯಾಗಿಲ್ಲ ಎಂದು ಹೇಳಬಹುದು. ಅವರು ಪರೋಕ್ಷವಾಗಿ ಮಗುವನ್ನು ಅದೇ ರೀತಿಯಲ್ಲಿ ಅವಲೋಕಿಸಲೂ ಸಾಧ್ಯ. ಈ ಪ್ರಕ್ರಿಯೆಗಳು ಮತ್ತು ಹೋಲಿಕೆಗಳು ಕ್ರಮೇಣ ಹೆಚ್ಚೂ ಆಗಬಹುದು, ಕಡಿಮೆಯೂ ಆಗಬಹುದು. ಆದರೆ ವಯಸ್ಕರು ಅದೇ ಲಿಂಗತ್ವ ಆಧಾರಿತ ಸಮ ವಯಸ್ಕರರೊಂದಿಗೆ ತಮ್ಮ ಪರಸ್ಪರ ಕ್ರಿಯೆಯನ್ನು ಮುಂದುವರೆಸಿಕೊಂಡು ಹೋಗಬಹುದು. ತಾವು ಹೇಗೆ ಕಾಣಬೇಕು ಹಾಗೂ ಗಂಡಸು ಅಥವಾ ಹೆಂಗಸಾಗಿ ಹೇಗೆ ವರ್ತಿಸಬೇಕು ಎಂಬುದರ ಕುರಿತು ಮಕ್ಕಳು ಮಾಹಿತಿ ಗ್ರಹಿಸುವರು.

**ಮಾಧ್ಯಮ :** ಮಾಧ್ಯಮಗಳೆಂದಾಗ ಅವು ಚಲನಚಿತ್ರಗಳು, ದೂರದರ್ಶನ, ಪುಸ್ತಕಗಳನ್ನು ಒಳಗೊಳ್ಳುತ್ತವೆ. ಇವುಗಳು ಮಕ್ಕಳ ಕುರಿತಂತೆ ಹುಡುಗ ಅಥವಾ ಹುಡುಗಿ ಎಂಬುದರ ಅರ್ಥವನ್ನು ಬೋಧಿಸುತ್ತವೆ. ಮಾಧ್ಯಮಗಳು ಜನರ ಬದುಕಿನಲ್ಲಿ ಲಿಂಗತ್ವದ ಪಾತ್ರವನ್ನು ಕುರಿತ ಮಾಹಿತಿಯನ್ನು ವರ್ಗಾಯಿಸುತ್ತವೆ. ಹಾಗೂ ಲಿಂಗತ್ವದ ಪಡಿಯಚ್ಚು (ಪ್ರತಿನಿಧೀಕರಣ)ಗಳನ್ನು ಪುನರ್ಬಲಗೊಳಿಸುತ್ತವೆ. ಉದಾಹರಣೆಗೆ ಗ್ರಾಫಿಕ್ ತಂತ್ರಜ್ಞಾನವುಳ್ಳ 'ಅನಿಮೇಶನ್' ಸಿನಿಮಾವೊಂದನ್ನು ಪರಿಗಣಿಸಿದರೆ ಅದು ಎರಡು ಮಹಿಳಾ ಪಾತ್ರಗಳನ್ನು ಚಿತ್ರಿಸಿರುವುದನ್ನು ಕಾಣಬಹುದು. ಅದರಲ್ಲಿ ಒಂದು ಸುಂದರವಾದ ಮತ್ತು ನಿಷ್ಕ್ರಿಯವಾಗಿರುವ ನಾಯಕಿಯ ಪಾತ್ರ. ಇನ್ನೊಂದು ಕೊಳಕು ಕೊಳಕಾರದ ಆದರೆ ಕ್ರಿಯಾಶೀಲವಾಗಿರುವ ಖಳನಾಯಕಿಯ ಪಾತ್ರ. ಈ ಮಾಧ್ಯಮ ಮಾದರಿಗಳು ಮತ್ತು ಅಗಣಿತವಾದ ಇತರ ಅಂಶಗಳು ವಿಚಾರಗಳನ್ನು ಪುನರ್ಬಲಗೊಳಿಸಿ, ನಿರ್ದಿಷ್ಟ ಲಿಂಗತ್ವಕ್ಕೆ ಸಂಬಂಧಿಸಿ ಯಾವ ವರ್ತನೆಯು ಸ್ವೀಕಾರಾರ್ಹ ಮತ್ತು ಮೌಲ್ಯಯುತವಾಗಿವೆ ಮತ್ತು ಯಾವುವು ಸ್ವೀಕಾರಾರ್ಹವಲ್ಲ ಮತ್ತು ಮೌಲ್ಯಯುತವಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಈಗ ನೀವು ಯಾವುವು ಲಿಂಗತ್ವದ ಸಾಮಾಜೀಕರಣಕ್ಕೆ ಸಂಬಂಧಿಸಿವೆ ಮತ್ತು ಯಾವ ನಿಯೋಗಗಳು ಲಿಂಗತ್ವದ ಸಾಮಾಜೀಕರಣವನ್ನು ಉದ್ದೀಪಿಸುತ್ತವೆ ಎಂಬುದನ್ನು ಅರ್ಥಮಾಡಿಕೊಂಡಿರಬಹುದು.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

1. ಲಿಂಗತ್ವ ಸಾಮಾಜೀಕರಣವೆಂದರೆ ______________

   ಎ. ಒಬ್ಬ ವ್ಯಕ್ತಿಯ ನಿಷ್ಕ್ರಿಯ / ಜಡವಾದ ಗುಣ

   ಬಿ. ಪ್ರತ್ಯೇಕತೆಯಲ್ಲಿ ನಡೆಯುವ ಒಂದು ಪ್ರಕ್ರಿಯೆ

   ಸಿ. ವರ್ತನೆಯನ್ನು ಕಲಿಯುವ ಪ್ರಕ್ರಿಯೆ ಹಾಗೂ ದತ್ತ / ನಿಗದಿತ ಲಿಂಗತ್ವಕ್ಕಾಗಿ ಸಮರ್ಪಕವೆಂದು ಪರಿಗಣಿಸಿರುವ ಮನೋವೃತ್ತಿ

   ಡಿ. ಮೇಲಿನ ಎಲ್ಲವೂ ಹೌದು

2. ಲಿಂಗತ್ವದ ನಿಯಮ / ಕಟ್ಟುಪಾಡುಗಳು ರೂಪುಗೊಳ್ಳುವುದು______________

   ಎ. ಸರಕಾರದ ಪ್ರಾಧಿಕಾರ ಸಂಸ್ಥೆಗಳಿಂದ

   ಬಿ. ಸಮಾಜದಿಂದ

   ಸಿ. ವ್ಯಕ್ತಿಯೊಬ್ಬನ ವೈಯಕ್ತಿಕ ಗಳಿಕೆಯಿಂದ

   ಡಿ. ಮೇಲಿನ ಎಲ್ಲವೂ ಹೌದು

3. ಲಿಂಗತ್ವ ಸಾಮಾಜೀಕರಣದ ನಿಯೋಗಗಳು ____________

ಎ. ನಮಗೆ ಲಿಂಗತ್ವ ಮತ್ತು ಸಮಾನತೆ ಎರಡನ್ನೂ ಬೋಧಿಸುತ್ತವೆ.

ಬಿ. ಪ್ರತಿಯೊಂದು ಲಿಂಗತ್ವವೂ ತನ್ನದೇ ಆದ ನಿರ್ದಿಷ್ಟ ವರ್ತನೆಗಳನ್ನು ಮತ್ತು ಮನೋವೃತ್ತಿಗಳನ್ನು ಹೊಂದಿರುತ್ತವೆ ಎಂಬುದನ್ನು ಬೋಧಿಸುತ್ತವೆ.

ಸಿ. ಏನನ್ನೂ ಬೋಧಿಸುವುದಿಲ್ಲ.

ಡಿ. ಯಾವುದೂ ಇಲ್ಲ.

## 1.3.3.3. ಲಿಂಗತ್ವದ ಪಾತ್ರಗಳು

**ಅಭ್ಯಾಸ – 5 :**

ಸಮಾಜದಲ್ಲಿ ಕೆಲವು ಚಟುವಟಿಕೆಗಳನ್ನು ಗಂಡಸರು, ಕೆಲವನ್ನು ಹೆಂಗಸರು ಮಾಡುವುದನ್ನು ನೀವು ಗಮನಿಸಿರುವಿರಿ. ಅದಕ್ಕನುಗುಣವಾಗಿ ಕೆಳಕಂಡ ಚಟುವಟಿಕೆಗಳನ್ನು ವರ್ಗೀಕರಿಸಿ.

(ನಿರೀಕ್ಷೆಗಳನ್ನು ಗಮನಿಸಬೇಡಿ)

1. ಅಡುಗೆ ಮಾಡುವುದು
2. ಮನೆಗುಡಿಸುವುದು.
3. ಪಾತ್ರೆಗಳನ್ನು ತೊಳೆಯುವುದು.
4. ಅತಿ ಹೆಚ್ಚಿನ ಭಾರದ ವಸ್ತುಗಳನ್ನು ಸಾಗಿಸುವುದು.
5. ಮೋಟಾರು ಬೈಕನ್ನು ಚಲಾಯಿಸುವುದು.
6. ಸಮುದಾಯದ ಮುಂದಾಳತ್ವ ವಹಿಸುವುದು.
7. ಬಿಲ್ ಕಟ್ಟುವುದು.
8. ಕಾವಲು ಕಾಯುವುದು (ಕಾವಲುಗಾರ).
9. ಶಿಶುವಿಹಾರ ಕೇಂದ್ರವನ್ನು ನಡೆಸುವುದು.
10. ಕೊಳಾಯಿ ರಿಪೇರಿ ಕೆಲಸ.ಗಂಡಸುಹೆಂಗಸು ಇಬ್ಬರೂ

| **ಗಂಡಸು** | **ಹೆಂಗಸು** | **ಇಬ್ಬರೂ** |
|---|---|---|
| | | |
| | | |
| | | |

ಈ ಚಟುವಟಿಕೆಯ ಮೂಲಕ ಲಿಂಗತ್ವ ಆಧಾರಿತ ಚಟುವಟಿಕೆಗಳು ನಿಮಗೆ ಅರ್ಥವಾಗುತ್ತದೆ.

ಕೆಲವು ಚಟುವಟಿಕೆಗಳನ್ನು ನಿರ್ದಿಷ್ಟ ಲಿಂಗದವರೇ ಮಾಡಬೇಕೆಂಬುದು ಸಮಾಜದ ಅಪೇಕ್ಷೆ. ಹಾಗಾಗಿ ಸಮಾಜವು ಕೆಲವು ಪಾತ್ರಗಳನ್ನು ಗಂಡಸರಿಗೂ ಕೆಲವು ಪಾತ್ರಗಳನ್ನೂ ಹೆಂಗಸರಿಗೂ ನಿಷ್ಕರ್ಷೆ ಮಾಡಿದೆ. ಅದನ್ನು ನೇರವಾಗಿ ಹೇಳದಿದ್ದರೂ ಸಮಾಜಕ್ಕೆ ಆ ರೀತಿಯ ಅಪೇಕ್ಷೆ ಇದೆ. ಇದನ್ನೇ 'ಲಿಂಗತ್ವದ ಪಾತ್ರಗಳು' ಎಂದು ಕರೆಯಲಾಗುತ್ತದೆ.

ಈಗ ನಾವು ಇದರ ವಿವರವಾದ ಅರ್ಥವನ್ನು ನೋಡೋಣ ಹಾಗೂ ಲಿಂಗತ್ವದ ಪಾತ್ರಗಳ ಸ್ವಭಾವ ಮತ್ತು ಅವುಗಳನ್ನು ನಿರ್ಧರಿಸುವ ಅಂಶಗಳನ್ನು ನೋಡೋಣ.

**ಅರ್ಥ:** ಲಿಂಗತ್ವದ ಪಾತ್ರ ಎಂಬುದು ಸಾಮಾಜಿಕ ಅಪೇಕ್ಷೆಗೆ ಸಂಬಂಧಿಸಿದುದು. ಇದು ಸಾಮಾನ್ಯವಾಗಿ ಸ್ವೀಕಾರಾರ್ಹ ಎಂದು ಪರಿಗಣಿಸಬಹುದಾದ ಸಮರ್ಪಕವಾದ ಅಥವಾ ಅಪೇಕ್ಷಣೀಯವಾದ ವರ್ತನೆಗಳು ಮತ್ತು ಮನೋವೃತ್ತಿಯ ಶ್ರೇಣಿಯನ್ನು ಒಳಗೊಳ್ಳುತ್ತದೆ. ಇದು ಜನರ ನೈಜವಾದ ಅಥವಾ ಗೃಹೀತವಾದ ಲಿಂಗದ ಆಧಾರದ ಮೇಲೆ ನಿಗದಿಯಾಗುವಂತಹವು. ಲಿಂಗತ್ವದ ಪಾತ್ರಗಳು ಸಾಮಾನ್ಯವಾಗಿ ಸ್ತ್ರೀತ್ವ ಮತ್ತು ಪುಲ್ಲಿಂಗತ್ವದ ಪರಿಕಲ್ಪನೆಯನ್ನು ಕೇಂದ್ರೀಕರಿಸಿ ನಿರ್ಧರಿತವಾಗುತ್ತವೆ. ಇದಕ್ಕೆ ಹೊರತಾಗಿ ಕೆಲವು ಅಪವಾದಗಳು, ಭಿನ್ನತೆಗಳೂ ಇವೆ. ಈ ಕೆಲವು ನಿರ್ದಿಷ್ಟ ಲಿಂಗತ್ವಾಧಾರಿತ ಅಪವಾದಗಳೂ ವಿಭಿನ್ನವಾಗಿದ್ದು ಸಂಸ್ಕೃತಿಯ ಮೇಲೆ ಗಣನೀಯವಾದ ಪ್ರಭಾವ ಬೀರಬಲ್ಲಂಥವಾಗಿವೆ. ಇದರೊಂದಿಗೆ ಇತರ ಗುಣಲಕ್ಷಣಗಳು ಸಾಂಸ್ಕೃತಿಕ ಶ್ರೇಣಿಯುದ್ದಕ್ಕೂ ಸಾಮಾನ್ಯವಾಗಿ ಇರಬಹುದು.

ವ್ಯಾಖ್ಯೆಗಳು: ವರ್ಲ್ಡ್ ಹೆಲ್ತ್ ಆರ್ಗನೈಸೇಷನ್ (ವಿಶ್ವ ಆರೋಗ್ಯ ನಿಗಮ)ದ ಪ್ರಕಾರ – ಇವು ಸಮಾಜಕ್ಕೆ ನೀಡಲಾಗುವ, ಗಂಡಸರು ಮತ್ತು ಹೆಂಗಸರನ್ನು ಸಮರ್ಪಕವಾಗಿ ಪರಿಗಣಿಸಲು ಸಾಮಾಜಿಕವಾಗಿ ಸಂರಚಿತವಾದ ನಿಯಮಗಳು, ವರ್ತನೆಗಳು, ಚಟುವಟಿಕೆಗಳು ಮತ್ತು ಗುಣಲಕ್ಷಣಗಳು.

ಬ್ಲಾಕ್‌ರವರ ಪ್ರಕಾರ "ಲಿಂಗತ್ವದ ಪಾತ್ರವು ಒಬ್ಬ ವ್ಯಕ್ತಿಯ ಗುಣಾತ್ಮಕ ಅಂಶಗಳ ಸಮಷ್ಟಿಯಾಗಿದೆ. ಅದನ್ನು ಗಂಡಸರು ಮತ್ತು ಹೆಂಗಸರು ಅರ್ಥ ಮಾಡಿಕೊಂಡು ಗುಣಲಕ್ಷಣಗಳಿಗೆ ಅನುಗುಣವಾಗಿ ಆತ ಅಥವಾ ಆಕೆಯ ಸಂಸ್ಕೃತಿಯನ್ನು ಗ್ರಹಿಸಲು ಸಹಾಯಕವಾಗಿದೆ. ಈ ಗುಣಗಳು ಚಟುವಟಿಕೆಗಳು, ಪಾತ್ರಸಂಬಂಧಗಳು, ಸಾಮಾಜಿಕ ಅಂತಸ್ತು, ವ್ಯಕ್ತಿತ್ವದ ಗುಣಲಕ್ಷಣಗಳು ಸಾಮರ್ಥ್ಯಗಳು ಮತ್ತು ವರ್ತನೆಗಳ ಮೊತ್ತವನ್ನು ಒಳಗೊಳ್ಳುತ್ತದೆ".

ಸಮಾಜದಲ್ಲಿರುವ ಲಿಂಗತ್ವದ ಪಾತ್ರ ಎಂದರೆ – ನಾವು ಹೇಗೆ ಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು? ಮಾತಾಡಬೇಕು? ದಿರಿಸು ಹೇಗಿರಬೇಕು? ನಾವು ಹೇಗೆ ನಡತೆಯನ್ನು ತೋರ್ಪಡಿಸಬೇಕು? ಎಂಬುದನ್ನು ನಮಗೆ ನಿಗದಿತವಾದ ಲಿಂಗವನ್ನು ಆಧರಿಸಿ ಪ್ರಕಟಪಡಿಸುವುದಾಗಿದೆ. ಉದಾಹರಣೆಗೆ ಹುಡುಗಿಯರು ಮತ್ತು ಹೆಂಗಸರು ಸಾಮಾನ್ಯವಾಗಿ ಸ್ತ್ರೀತ್ವದ ನೆಲೆಯಲ್ಲಿ ಎಲ್ಲರೂ ಒಪ್ಪಿತವಾದ ರೀತಿಯಲ್ಲಿ ನಿರೀಕ್ಷಿತವಾದ ರೀತಿಯಲ್ಲಿ ದಿರಿಸನ್ನು ಧರಿಸುವುದು ಮತ್ತು ಸಭ್ಯವಾಗಿ ಆರೈಕೆಯಿಂದ ಬದುಕುವುದು. ಗಂಡಸರು ಸಾಮಾನ್ಯವಾಗಿ ಬಲಶಾಲಿಯಾಗಿ ಆಕ್ರಮಣಕಾರಿಯಾಗಿ ದಪ್ಪವಾಗಿ ಇರಲೇಬೇಕೆಂದು ನಿರೀಕ್ಷಿಸುವುದು. ಇವೆಲ್ಲವೂ ವಿವಿಧ ಪಾತ್ರಗಳು, ಚಟುವಟಿಕೆಗಳು, ನಿರೀಕ್ಷೆಗಳು ಮತ್ತು ವರ್ತನೆಗಳ ಗುಚ್ಛವಾಗಿದ್ದು ಸಮಾಜದಿಂದ ಗಂಡು ಮತ್ತು ಹೆಣ್ಣುಗಳಿಗೆ ನಿಗದಿಯಾಗಿರುವ ಅಂಶಗಳಾಗಿವೆ. ನಮ್ಮ ಸಂಸ್ಕೃತಿಯು ಎರಡು ಮೂಲ ಲಿಂಗತ್ವವನ್ನು ಗುರುತಿಸುತ್ತದೆ:

1. ಪುಲ್ಲಿಂಗತ್ವ (ಗಂಡು ಮಕ್ಕಳಿಗೆ ಸಂಬಂಧಿಸಿದ ಗುಣಲಕ್ಷಣಗಳು)
2. ಸ್ತ್ರೀತ್ವ (ಹೆಣ್ಣು ಮಕ್ಕಳಿಗೆ ಸಂಬಂದಿಸಿದ ಗುಣಲಕ್ಷಣಗಳು)

**ಲಿಂಗತ್ವ ಪಾತ್ರಗಳ ಲಕ್ಷಣಗಳು**

- ಲಿಂಗತ್ವ ಪಾತ್ರಗಳು ಕಲಿಕೆಯ ವರ್ತನೆಗಳು
- ಈ ಪಾತ್ರಗಳು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಆಯಾಮಗಳಿಂದ ವಿಭಿನ್ನವಾಗಿದ್ದು ಸಂಸ್ಕೃತಿಯುದ್ದಕ್ಕೂ ಚಾಚಿಕೊಂಡಿವೆ.
- ಕೆಲವು ಲಿಂಗತ್ವದ ಪಾತ್ರಗಳು ಸಾರ್ವತ್ರಿಕತೆಯನ್ನು ಹೊಂದಿವೆ. ಕೆಲವು ದೊಡ್ಡ ಮಟ್ಟದಲ್ಲಿ ಸಾಂಸ್ಕೃತಿಕವಾಗಿ ಬಿಂಬಿತವಾಗುತ್ತವೆ.

- ಲಿಂಗತ್ವದ ಪಾತ್ರಗಳು ಅನೇಕ ಅಂಶಗಳಿಂದ ಪ್ರಭಾವಿತವಾಗಿವೆ. ಅವು ಯಾವುವೆಂದರೆ ಪ್ರಾಯ (ವಯೋಮಾನ), ವರ್ಗ, ಬುಡಕಟ್ಟು, ಜನಾಂಗೀಯತೆ, ಧರ್ಮ, ತಾತ್ವಿಕತೆಗಳು ಇತ್ಯಾದಿ. ಇದಕ್ಕೆ ಪೂರಕವಾಗಿ ಭೌಗೋಳಿಕವಾದ ಆರ್ಥಿಕವಾದ ಮತ್ತು ರಾಜಕೀಯ ಪರಿಸರದ ಅಂಶಗಳೂ ಸೇರಿಕೊಂಡಿವೆ.
- ಪಾತ್ರಗಳು ಅಭಿನಂದನಾತ್ಮಕವಾಗಿಯೂ ಇರಬಹುದು; ಸಂಘರ್ಷಾತ್ಮಕವಾಗಿಯೂ ಇರಬಹುದು.

**ಲಿಂಗತ್ವದ ಪಾತ್ರಗಳು/ಪಡಿಯಚ್ಚುಗಳನ್ನು (ಪ್ರತಿನಿಧೀಕರಣ) ನಿರ್ಧರಿಸುವ ಅಂಶಗಳು:**

- ವ್ಯಕ್ತಿತ್ವದ ಗುಣಲಕ್ಷಣಗಳು: ಉದಾಹರಣೆಗೆ – ಮಹಿಳೆಯರು ಆಗಾಗ್ಗೆ ಭಾವನಾತ್ಮಕವಾಗಿರಲು ನೆಲೆ ಕಂಡುಕೊಳ್ಳಲು ನಿರೀಕ್ಷಿಸುತ್ತಾರೆ. ಅದೇ ಗಂಡಸರು ಸಾಮಾನ್ಯವಾಗಿ ಆತ್ಮವಿಶ್ವಾಸದಿಂದ ಇರಲು ಆಕ್ರಮಣಶೀಲರಾಗಲು ಬಯಸುತ್ತಾರೆ.
- ದೇಶೀಯ ನಡೆವಳಿಕೆ: ಉದಾಹರಣೆಗೆ–ಕೆಲವರ ಪ್ರಕಾರ, ಹೆಂಗಸರು ಮಕ್ಕಳ ನಿಗಾ ತೆಗೆದುಕೊಳ್ಳಬೇಕು, ಅಡುಗೆ ಮಾಡಬೇಕು, ಮನೆಯನ್ನು ಶುಚಿಗೊಳಿಸಬೇಕು. ಅದೇ ಗಂಡಸರು ಹಣಕಾಸಿನ ನಿಗಾ ತೆಗೆದುಕೊಳ್ಳುತ್ತಾರೆ, ಕಾರನ್ನು ಚಲಾಯಿಸಬೇಕು, ಮನೆಯನ್ನು ದುರಸ್ತಿಗೊಳಿಸಬೇಕು ಎಂದು ನಿರೀಕ್ಷಿಸುತ್ತಾರೆ.
- ಉದ್ಯೋಗಗಳು: ಕೆಲವು ಜನರು ಶಿಕ್ಷಕರು ಮತ್ತು ನರ್ಸ್‌ಗಳು ಎಂದರೆ ತಕ್ಷಣವೇ ಅವರು ಹೆಂಗಸರು ಎಂದು ಕಲ್ಪನೆ ಮಾಡುತ್ತಾರೆ, ಗಂಡಸರಾದವರು ಡಾಕ್ಟರರು ಮತ್ತು ಇಂಜಿನಿಯರ್‌ಗಳು ಆಗಿರುತ್ತಾರೆ ಎಂದು ಕಲ್ಪನೆ ಮಾಡುತ್ತಾರೆ.
- ದೈಹಿಕ ನೋಟ: ಉದಾಹರಣೆಗೆ ಹೆಂಗಸರು ಮನೋಹರವಾಗಿರಬೇಕು, ಆಕರ್ಷಕವಾಗಿರಬೇಕು ಎಂದು ನಿರೀಕ್ಷಿಸುತ್ತಾರೆ. ಅದೇ ಗಂಡಸರು ಉದ್ದವಾಗಿರಬೇಕು ಹಾಗೂ ದಷ್ಟಪುಷ್ಟವಾಗಿರಬೇಕು ಎಂಬ ನಿರೀಕ್ಷೆ ಇದೆ. ಗಂಡಸರು ಮತ್ತು ಹೆಂಗಸರು ತಮ್ಮ ಲಿಂಗತ್ವಕ್ಕನುಗುಣವಾಗಿ ಅದರ ಪಡಿಯಚ್ಚಿನಂತೆ (ಪ್ರತಿನಿಧೀಕರಣ) ದಿರಿಸನ್ನು ಧರಿಸಬೇಕು ಎಂದು ನಿರೀಕ್ಷಿಸುತ್ತಾರೆ. (ಗಂಡಸರು ಪ್ಯಾಂಟನ್ನು ಧರಿಸಬೇಕು. ಸಣ್ಣ ತಲೆಗೂದಲನ್ನು ಹೊಂದಿರಬೇಕು. ಹೆಂಗಸರು ಬಗೆ ಬಗೆಯ ದಿರಿಸುಹಾಕಬೇಕು ಮತ್ತು ಮೇಕಪ್ ಮಾಡಿಕೊಳ್ಳಬೇಕು ಎಂದು ಬಯಸುತ್ತಾರೆ).

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 3

ಈ ಕೆಳಗಿನ ಹೇಳಿಕೆಗಳು ಸರಿಯೇ ಅಥವಾ ತಪ್ಪೇ ಎಂಬುದನ್ನು ಗುರುತಿಸಿರಿ.

1. ಲಿಂಗತ್ವದ ಪಾತ್ರಗಳು ಒಬ್ಬ ವ್ಯಕ್ತಿಯು ತನ್ನ ಸ್ವಂತಕ್ಕಾಗಿ ನಿರ್ಧರಿಸುವ ಪಾತ್ರಗಳಾಗಿವೆ.
2. ಎಲ್ಲಾ ಲಿಂಗತ್ವದ ಪಾತ್ರಗಳು ಸಾರ್ವತ್ರಿಕವಾಗಿವೆ.
3. ವಯೋಮಾನ, ತರಗತಿ, ಬುಡಕಟ್ಟು, ಜನಾಂಗೀಯತೆ, ಧರ್ಮಗಳು ಲಿಂಗತ್ವದ ಪಾತ್ರಗಳ ಮೇಲೆ ಪ್ರಭಾವ ಬೀರುತ್ತವೆ
4. ಲಿಂಗತ್ವದ ಪಾತ್ರದ ಪ್ರಕಾರ ಮಹಿಳೆಯರಿಗೆ ನಿಗದಿಪಡಿಸಿದ ಪಾತ್ರವು ಅವರು ಭಾವನಾತ್ಮಕವಾಗಿ ಸೂಕ್ಷ್ಮತೆಯನ್ನು ಹೊಂದಿರಬೇಕು ಎಂದು ನಿರೀಕ್ಷಿಸುತ್ತದೆ.

## 1.1.4. ಸಾರಾಂಶಿಸೋಣ

- ಲಿಂಗ ಎಂದರೆ ಗಂಡು ಮತ್ತು ಹೆಣ್ಣುಗಳಲ್ಲಿ ಇರುವ ಜೀವಶಾಸ್ತ್ರೀಯ ಮತ್ತು ದೈಹಿಕ ಅಂಶಗಳ ನಡುವಿನ ವ್ಯತ್ಯಾಸಗಳು
- ಲಿಂಗತ್ವವು ಮನೋವೈಜ್ಞಾನಿಕವಾದ ಮತ್ತು ಸಾಂಸ್ಕೃತಿಕವಾದ ಪದವಾಗಿದೆ. ಇದು ವ್ಯಕ್ತಿಯೊಬ್ಬನ ವ್ಯಕ್ತಿನಿಷ್ಠಭಾವನೆಗಳು – ಪುರುಷತ್ವ ಮತ್ತು ಸ್ತ್ರೀತ್ವಗಳಿಗೆ ಸಂಬಂಧಪಟ್ಟದ್ದಾಗಿವೆ.
- ಲಿಂಗತ್ವ ಸಾಮಾಜೀಕರಣವು ಒಂದು ಪ್ರಕ್ರಿಯೆಯಾಗಿದ್ದು ಅದರ ಮೂಲಕ ಒಬ್ಬರ ವರ್ತನೆಗಳು, ಮನೋವೃತ್ತಿಗಳು, ಕಟ್ಟುಪಾಡುಗಳನ್ನು ಕಲಿಯಬಹುದಾಗಿದೆ ಹಾಗೂ ಇವು ಒಬ್ಬರ ಲಿಂಗತ್ವಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮತ್ತು ಸಾಂಸ್ಕೃತಿಕ ನಿರೀಕ್ಷೆಗಳನ್ನು ಅರ್ಥಮಾಡಿಕೊಳ್ಳಲು ಇರುವ ಘಟಕಾಂಶಗಳು.
- ಲಿಂಗತ್ವ ಸಾಮಾಜೀಕರಣದ ನಿಯೋಗಗಳು – ಪೋಷಕರು, ಶಿಕ್ಷಕರು, ಸಮವಯಸ್ಕರು (ಓರೆಗೆಯವರು), ಮಾಧ್ಯಮಗಳು.
- ಲಿಂಗತ್ವದ ಪಾತ್ರವು ಒಂದು ಸಾಮಾಜಿಕ ಪಾತ್ರವಾಗಿದ್ದು ಒಂದು ಶ್ರೇಣಿಯ ಮಟ್ಟದ ವರ್ತನೆಗಳು ಮತ್ತು ಮನೋಭಾವಗಳನ್ನು ಒಳಗೊಳ್ಳುತ್ತದೆ. ಅದು ಸಾಮಾನ್ಯವಾಗಿ ಜನರಲ್ಲಿ ಅದರ ನೈಜವಾದ ಅಥವಾ ಗ್ರಹೀತವಾದ ಲಿಂಗಕ್ಕೆ ಅನುಗುಣವಾಗಿ ನಿರೀಕ್ಷಿತವಾದ, ಸಮರ್ಪಕವಾದ ಅಥವಾ ಅಪೇಕ್ಷಣೀಯವಾದುದಾಗಿದ್ದು ಅದನ್ನು ಆಧರಿಸಿರುತ್ತದೆ.
- ಲಿಂಗತ್ವದ ಪಾತ್ರವನ್ನು ನಿರ್ಧರಿಸುವ ಅಂಶಗಳು– ವ್ಯಕ್ತಿತ್ವದ ಗುಣಲಕ್ಷಣಗಳು, ದೇಸೀಯ ನಡೆವಳಿಕೆ, ಉದ್ಯೋಗಗಳು (ವೃತ್ತಿಗಳು), ದೈಹಿಕನೋಟ.

## 1.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು– 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1**

ಸ್ವ ಕಲಿಕಾ ಸಾಮಗ್ರಿ –1.1.3.1. ಗಮನಿಸಿ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2**

1.) ಸಿ 2.) ಬಿ 3) ಬಿ

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 3**

1.) ತಪ್ಪು 2) ತಪ್ಪು 3) ಸರಿ 4) ಸರಿ

## 1.1.6. ಘಟಕಾಂತ್ಯ ಅಭ್ಯಾಸಗಳು

1. ಲಿಂಗ ಮತ್ತು ಲಿಂಗತ್ವಗಳ ನಡುವಿನ ಅಂತರವನ್ನು ತಿಳಿಸಿರಿ.
2. ಲಿಂಗತ್ವ ಸಾಮಾಜೀಕರಣದ ಅರ್ಥವನ್ನು ಸ್ಪಷ್ಟಪಡಿಸಿರಿ.
3. ಲಿಂಗತ್ವದ ಪಾತ್ರವನ್ನೂ ಮತ್ತು ಲಿಂಗತ್ವವನ್ನು ನಿರ್ಧರಿಸುವ ಅಂಶಗಳನ್ನು ವಿಶದೀಕರಿಸಿರಿ.

## 1.1.7. ಪರಾಮರ್ಶನ ಸೂಚಿ


1. ಡಾ. ಮಹಾಬಲೇಶ್ವರರಾವ್ – ಲಿಂಗತ್ವ, ಶಾಲಾ ಶಿಕ್ಷಣ (2017) – ವಿಸ್ಮಯ ಪ್ರಕಾಶನ, ಮೈಸೂರು.
2. ಡಾ. ಎನ್. ಬಿ. ಕೊಂಗವಾಡ– ಲಿಂಗತ್ವ, ಶಾಲೆ ಮತ್ತು ಸಮಾಜ (2018)– ವಿದ್ಯಾನಿಧಿ ಪ್ರಕಾಶನ, ಗದಗ.


****************

# ಬ್ಲಾಕ್–1 : ಭಾರತದಲ್ಲಿ ಲಿಂಗತ್ವ ವಿಚಾರಗಳು ಮತ್ತು ಸಾಮಾಜೀಕರಣ ಪ್ರಕ್ರಿಯೆ

## ಘಟಕ – 2 : ಸಂಸ್ಥೆಗಳ ವಿವಿಧ ಹಂತಗಳಲ್ಲಿ ಲಿಂಗತ್ವ ತಾರತಮ್ಯ

### ಘಟಕದ ರಚನೆ


1.2.1. ಕಲಿಕೆಯ ಉದ್ದೇಶಗಳು

1.2.2. ಪೀಠಿಕೆ

1.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.2.3.1. ಲಿಂಗತ್ವ ತಾರತಮ್ಯದ ಅರ್ಥ ಮತ್ತು ವಿಧಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

1.2.3.2. ವಿವಿಧ ಸಂಸ್ಥೆಗಳ ವಿವಿಧ ಆಯಾಮಗಳಲ್ಲಿ ಲಿಂಗತ್ವ ತಾರತಮ್ಯ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

1.2.4. ಸಾರಾಂಶಿಸೋಣ

1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

1.2.6. ಘಟಕಾಂತ್ಯ ಅಭ್ಯಾಸಗಳು

1.2.7. ಪರಾಮರ್ಶನ ಸೂಚಿ


### 1.2.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಲಿಂಗತ್ವ ತಾರತಮ್ಯದ ಪರಿಕಲ್ಪನೆಯನ್ನು ವಿವರಿಸುವರು;
- ಲಿಂಗತ್ವ ತಾರತಮ್ಯದ ವಿಧಗಳನ್ನು ಗುರುತಿಸುವರು;
- ಲಿಂಗತ್ವ ತಾರತಮ್ಯಕ್ಕೆ ಕಾರಣಗಳನ್ನು ಸ್ಪಷ್ಟಪಡಿಸುವರು; ಮತ್ತು
- ಭಾರತದ ಸಂಸ್ಥೆಗಳ ವಿವಿಧ ಆಯಾಮಗಳಲ್ಲಿ ಲಿಂಗತ್ವ ತಾರತಮ್ಯವನ್ನು ವಿವರಿಸುವರು.

### 1.2.2. ಪೀಠಿಕೆ

ಭಾರತವು ಶ್ರೀಮಂತ ಸಂಸ್ಕೃತಿಯ ದೇಶ. ಇದರ ಸಂಸ್ಕೃತಿ ಮತ್ತು ಪರಂಪರೆ ಧರ್ಮ ಮತ್ತು ಪ್ರಾದೇಶಿಕತೆಯನ್ನು ಕೇಂದ್ರೀಕರಿಸಿರುವುದು. ಆದರೆ ಈ ಸಂಸ್ಕೃತಿಗಳಲ್ಲಿ ಸಮಾನವಾಗಿ ಕಾಣಬರುವ ಒಂದು ಅಂಶ ಎಂದರೆ ಲಿಂಗತ್ವ ತಾರತಮ್ಯ. ಭಾರತವು ಬಹಳಮಟ್ಟಿಗೆ ಪಿತೃಪ್ರಧಾನ ಸಮಾಜವಾದುದರಿಂದ, ಹುಡುಗಿಯರಿಗಿಂತ ಹುಡುಗರಿಗೆ

ಅವಕಾಶಗಳು, ಸವಲತ್ತುಗಳು ಹೆಚ್ಚು. ಇದು ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಸಾಮಾನವಾದ ಅಂಶ. ಸಮಾಜದ ಎಲ್ಲ ಸಂಸ್ಥೆಗಳಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಶಿಕ್ಷಣ ಈ ಎಲ್ಲ ಕ್ಷೇತ್ರಗಳಲ್ಲಿ ಲಿಂಗತ್ವ ತಾರತಮ್ಯ ಕಾಣಬರುತ್ತದೆ. ಜನನ ಕಾಲದ ತಾರತಮ್ಯಗಳು ಭಾರತದಲ್ಲಿ ಅತಿ ಹೆಚ್ಚು ಎಂದು ಕಂಡುಬಂದಿದೆ. 2011ರಲ್ಲಿ ಪ್ರತಿ 1000 ಹುಡುಗರಿಗೆ 918 ಹುಡುಗಿಯರಿದ್ದುದು ವರದಿಯಾಗಿದೆ. ಮಹಿಳೆಯು ಹುಟ್ಟಿನಿಂದಲೇ ಲಿಂಗತ್ವ ಪಕ್ಷಪಾತವನ್ನು ಅನುಭವಿಸುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಇದು ಬದುಕಿನ ಕೊನೆಯವರೆಗೆ ಮುಂದುವರಿಯುತ್ತದೆ. ಹಾಗಾಗಿ ಈ ಲಿಂಗತ್ವ ತಾರತಮ್ಯತೆಯ ತೀವ್ರತೆಯನ್ನು, ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಅದರ ಪರಿಣಾಮವನ್ನು ಅದನ್ನು ಹತ್ತಿಕ್ಕುವ ಮಾರ್ಗಗಳನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಇದೇ ಅಂಶಗಳನ್ನು ನಾವು ಈ ಘಟಕದಲ್ಲಿ ವಿಚಾರಮಾಡೋಣ.

## 1.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

## 1.2.3.1. ಲಿಂಗತ್ವ ತಾರತಮ್ಯದ ಅರ್ಥ ಮತ್ತು ವಿಧಗಳು

ಕೆಳಗಿನ ಚಟುವಟಿಕೆಯ ಮೂಲಕ ಲಿಂಗತ್ವ ತಾರತಮ್ಯದ ಅರ್ಥವನ್ನು ಮನಗಾಣಲು ಪ್ರಯತ್ನಿಸೋಣ.

**ಅಭ್ಯಾಸ I :**

ನಿಮಗೆ ಒಬ್ಬ ಗಂಡು ಮತ್ತು ಒಂದು ಹೆಣ್ಣುಮಗಳು ಇದ್ದಾರೆ ಎಂದು ಕಲ್ಪಿಸಿಕೊಳ್ಳಿ. ನಿಮಗೆ ಒಂದೇ ಒಂದು ಮಗುವಿಗೆ ಶಿಕ್ಷಣಕೊಡುವಷ್ಟು ವರಮಾನವಿದೆ. ನೀವು ಅವರಿಬ್ಬರಲ್ಲಿ ಯಾರಿಗೆ ಶಿಕ್ಷಣ ಕೊಡುವಿರಿ? ಇದಕ್ಕೆ ಕಾರಣಗಳೇನು?

| |
|---|
| |

ನಿಮ್ಮಲ್ಲಿ ಎರಡು ರೀತಿಯ ಆಯ್ಕೆಗಳು ಮತ್ತು ಅವುಗಳಿಗೆ ಬಗೆಬಗೆಯ ಕಾರಣಗಳಿರಬಹುದು. ನೀವು ಭಾರತೀಯ ಸಾಂಪ್ರದಾಯಿಕ ಕುಟುಂಬವೊಂದನ್ನು ಗಮನಿಸಿದರೆ, ಇಲ್ಲಿಯ ಆಯ್ಕೆ 'ಗಂಡು' ಎಂದಾಗಿರುತ್ತದೆ. ಮಗ ಮುಂದೆ ಮನೆಯನ್ನು ನಡೆಸುವವನು, ಮಗಳು ಮಗದೊಂದು ಮನೆಗೆ ಹೋಗುವವಳು ಎಂಬುದು ಸಾಮಾನ್ಯವಾದ ಕಾರಣವಾಗಿರುತ್ತದೆ. ಹೀಗೆ ಗಂಡು ಅಥವಾ ಮಗ ಮಗಳಿಗಿಂತ ಹೆಚ್ಚು ಸಂಪಾದಿಸುವವ, ಪ್ರಯೋಜನಕ್ಕೆ ಬರುವವ ಎಂಬ ಭಾವನೆಯೇ ಲಿಂಗತ್ವ ತಾರತಮ್ಯಕ್ಕೆ ಕಾರಣವಾಗುತ್ತದೆ.

ಒಬ್ಬ ವ್ಯಕ್ತಿಯ ಲಿಂಗವನ್ನು ಅನುಸರಿಸಿ ಮಾಡಲಾಗುವ ತಾರತಮ್ಯವೇ ಲಿಂಗತ್ವ ತಾರತಮ್ಯ. ಸಾಮಾನ್ಯವಾಗಿ ಶಿಕ್ಷಣ, ವೃತ್ತಿ, ಆರ್ಥಿಕ ಪ್ರಗತಿ ಮತ್ತು ರಾಜಕೀಯ ಪ್ರಭಾವ ಇವುಗಳಲ್ಲೆಲ್ಲಾ ಮಹಿಳೆಯನ್ನು ಪುರುಷರಿಗಿಂತ ಭಿನ್ನವಾಗಿ ಮತ್ತು ಕೆಳಮಟ್ಟದಲ್ಲಿ ಪರಿಗಣಿಸಲಾಗುತ್ತದೆ. ಇದು, ಪ್ರಗತಿಪರ ರಾಷ್ಟ್ರಗಳನ್ನೊಳಗೊಂಡಂತೆ ಜಗತ್ತಿನಾದ್ಯಂತ ಕಾಣಬರುವ ಒಂದು ಸನ್ನಿವೇಶ. ಮಹಿಳೆಯನ್ನು ದೈಹಿಕವಾಗಿ ಮಾತ್ರವಲ್ಲ; ಎಲ್ಲ ಕ್ಷೇತ್ರಗಳಲ್ಲೂ ಪುರುಷರಿಗಿಂತ ಬಲಹೀನಳು ಅಥವಾ ಕಡಿಮೆ ಸಮರ್ಥಳು ಎಂದು ಪರಿಗಣಿಸಲಾಗುತ್ತದೆ.

ವಿಶಾಲಾರ್ಥದಲ್ಲಿ ಲಿಂಗತ್ವ ತಾರತಮ್ಯವೆಂದರೆ, ಲಿಂಗದ ಆಧಾರದ ಮೇಲೆ ವ್ಯಕ್ತಿಯನ್ನು ಅಥವಾ ಗುಂಪನ್ನು ಅವಕಾಶಗಳು, ಸವಲತ್ತುಗಳು ಅಥವಾ ಪುರಸ್ಕಾರಗಳಿಂದ ವಂಚಿತರಾಗಿ ಮಾಡುವ ಯಾವುದೇ ಕ್ರಿಯೆ ಅಥವಾ ಕಾರ್ಯವೆಂದಾಗುತ್ತದೆ.

## ಲಿಂಗತಾರತಮ್ಯತೆಯ ಕ್ಷೇತ್ರಗಳು

**ಜನನದ ನಿರಾಕರಣೆ:** ಹುಡುಗಿಯರಿಗೆ ತಾರತಮ್ಯವೆಂಬುದು ತಾಯಿಯ ಗರ್ಭದಲ್ಲಿರುವಾಗಲೇ ಪ್ರಾರಂಭವಾಗುತ್ತದೆ. ಸಮಾಜವೂ ಗಂಡು ಮಕ್ಕಳಿಗೆ ಹೆಚ್ಚಿನ ಬೆಲೆ ಕೊಡುವುದರಿಂದ ಕೆಲವು ಪೋಷಕರು ಮಗು ಹೆಣ್ಣು ಎಂದು ತಿಳಿದಾಗಲೇ ಗರ್ಭಪಾತ ಮಾಡಿಸಿಕೊಳ್ಳುತ್ತಾರೆ. ಆಧುನಿಕ ಕಾಲದಲ್ಲೂ ಈ ಅಭ್ಯಾಸ ಇರುವುದು ಕಂಡುಬರುತ್ತದೆ.

**ಮೂಲಭೂತ ಅಗತ್ಯಗಳ ನಿರಾಕರಣೆ :** ಹೆಣ್ಣುಮಗುವು ಎಳವೆಯಿಂದ ವಯಸ್ಕ ಹಂತದವರೆಗೂ ಪಕ್ಷಪಾತವನ್ನು ಎದುರಿಸುತ್ತದೆ. ಮೂಲಭೂತ ಅಗತ್ಯಗಳು ಮತ್ತು ಹಕ್ಕುಗಳ ನಿರಾಕರಣೆಯು ಅವಳಿಗಿರುವ ಕೆಳಗಿನ ಸ್ಥಾನಮಾನವನ್ನು ಮತ್ತು ಚಿಕ್ಕ ವಯಸ್ಸಿನಲ್ಲೇ ವಿವಾಹ, ಸ್ತ್ರೀ ಜನನಾಂಗ ವಿರೂಪಗೊಳಿಸುವಿಕೆ, ಗೃಹಸಂಬಂಧಿ ನಿಂದೆ, ಸಲ್ಲದ ಸಂಭೋಗ, ಲೈಂಗಿಕ ಶೋಷಣೆ, ಅಗತ್ಯಕ್ಕಿಂತ ಕಡಿಮೆ ಪೋಷಣೆ ಮತ್ತು ಶಿಕ್ಷಣಕ್ಕೆ ಕಡಿಮೆ ಅವಕಾಶ ಇತ್ಯಾದಿ ಅಭ್ಯಾಸಗಳು ಗಂಡುಮಕ್ಕಳ ಆಯ್ಕೆಯ ಒಲವನ್ನು ಎತ್ತಿ ತೋರಿಸುತ್ತವೆ.

**ಶಿಕ್ಷಣದಲ್ಲಿ ತಾರತಮ್ಯತೆ:** ಕುಟುಂಬದ ಆರ್ಥಿಕ ಸ್ಥಿತಿಯ ಕಾರಣದಿಂದಾಗಿ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ಬಹಳಷ್ಟು ಸನ್ನಿವೇಶಗಳಲ್ಲಿ ಅನುಕೂಲಸ್ಥ ಕುಟುಂಬಗಳೂ ಹೆಣ್ಣು ಮನೆಯ ತಾತ್ಕಾಲಿಕ ಸದಸ್ಯೆಯಾಗಿದ್ದು, ವಿವಾಹದ ನಂತರ ಮತ್ತೊಂದು ಮನೆಯ ಸದಸ್ಯಳಾಗುವ ಕಾರಣ ಉನ್ನತ ಶಿಕ್ಷಣವನ್ನು ನೀಡುವುದಿಲ್ಲ. ಅವರ ಪ್ರಕಾರ ಅವಳ ಮೇಲೆ ಹಣಹೂಡಿಕೆ ನಷ್ಟದ ಹೂಡಿಕೆಯಾಗುತ್ತದೆ.

**ಉದ್ಯೋಗದಲ್ಲಿ ತಾರತಮ್ಯತೆ:** ಉದ್ಯೋಗ ಕ್ಷೇತ್ರದಲ್ಲೂ ಲಿಂಗ ತಾರತಮ್ಯವನ್ನು ಕಾಣಬಹುದು. ಭಾರತದಲ್ಲಿ ಮಕ್ಕಳ ಪೋಷಣೆ ಮತ್ತು ಗೃಹಕೃತ್ಯಗಳು ಹೆಣ್ಣುಮಕ್ಕಳ ಜವಾಬ್ದಾರಿ. ಗ್ರಾಮೀಣ ಅಸಂಘಟಿತ ವಲಯಗಳಲ್ಲಿ ಬಹಳಷ್ಟು ಮಹಿಳೆಯರು ಕಾಣಬರುತ್ತಾರೆ.

ಸ್ವ ಉದ್ಯೋಗಿ ಮಹಿಳೆಯರ ಒಂದು ರಾಷ್ಟ್ರೀಯ ಆಯೋಗದ ಪ್ರಕಾರ ಸುಮಾರು ಶೇ. 94ರಷ್ಟು ಉದ್ಯೋಗಸ್ಥ ಮಹಿಳೆಯರು ಈ ಅತಿ ಶೋಷಿತ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದಾರೆ. ಕಡಿಮೆ ವೇತನ, ಅಧಿಕ ದುಡಿಮೆ ಈ ಕ್ಷೇತ್ರದ ಲಕ್ಷಣ. ಅವರ ಕಾರ್ಯ ಸನ್ನಿವೇಶವನ್ನು ನಿರ್ವಹಿಸುವಲ್ಲಿನ ಅಸಮರ್ಪಕ ಶಾಸನಗಳು, ಕಾರ್ಮಿಕರನ್ನು ರಕ್ಷಿಸಲು ಪೂರಕವಲ್ಲದ ಪರಿಣಾಮಕಾರಿಯಲ್ಲದ ಕಾನೂನು ಅನ್ವಯಗಳು ಇತ್ಯಾದಿ ಹಲವಾರು ಅಂಶಗಳಿಂದ ಈ ತಾರತಮ್ಯ ಉಂಟಾಗುತ್ತದೆ. ಹಲವಾರು ಸಾಮಾಜಿಕ ಸನ್ನಿವೇಶಗಳ ಕಾರಣಗಳಿಂದಲೂ ಪರ್ಯಾಯ ವೃತ್ತಿಗಳನ್ನು ಕೈಗೊಳ್ಳಲು ಅಗತ್ಯವಾದ ಕೌಶಲಗಳು ಮತ್ತು ಸಾಮರ್ಥ್ಯಗಳಿಗೆ ತರಬೇತಿ ಪಡೆಯಲು ಮಹಿಳೆಯರಿಗೆ ಅವಕಾಶಗಳಿರುವುದಿಲ್ಲ. ಗೃಹಕೃತ್ಯದ ಕೆಲಸಗಳಿಗೆ ಹೆಚ್ಚಿನ ಸಮಯ ಕೊಡಬೇಕಾಗುವುದು, ಮನೆಯ ಜವಾಬ್ದಾರಿಯನ್ನು ಬಿಟ್ಟು ಹೊರಹೋಗಲಾರದ ಪರಿಸ್ಥಿತಿ ಇವು ಊರ್ಧ್ವಮುಖವಾಗಿ ಬೆಳೆಯಲು ಅವಳಿಗೆ ಅಡ್ಡಿಯಾಗುತ್ತವೆ. ಉದ್ಯೋಗಸ್ಥ ಮಹಿಳೆಯರಲ್ಲಿ ಕೇವಲ ಶೇ10ರಷ್ಟು ಮಹಿಳೆಯರು ಸಂಘಟಿತ ಕ್ಷೇತ್ರಗಳಲ್ಲಿದ್ದಾರೆ.

**ವೇತನ ತಾರತಮ್ಯ:**

ದಿನಗೂಲಿಯಿಂದ ಹಿಡಿದು, ಕಟ್ಟಡ ಕೆಲಸಮಾಡುವುದು, ವ್ಯವಸಾಯ ಕ್ಷೇತ್ರದಲ್ಲಿ ದುಡಿಯುವುದು, ಸಿನೆಮಾ ಉದ್ಯಮದಲ್ಲಿ ತೊಡಗಿಕೊಳ್ಳುವುದು– ಈ ಎಲ್ಲ ಸನ್ನಿವೇಶದಲ್ಲೂ ಮಹಿಳೆ ಮತ್ತು ಪುರುಷರು ಪಡೆಯುವ ವೇತನ/ ಸಂಭಾವನೆಯಲ್ಲಿ ಅಂತರವಿದೆ. ಮಹಿಳೆಯರಿಗೆ ಹೋಲಿಸಿದರೆ ಪುರುಷರು ಹೆಚ್ಚಿನ ವರಮಾನವನ್ನು ಪಡೆಯುತ್ತಾರೆ.

## ಲಿಂಗತ್ವ ತಾರತಮ್ಯಕ್ಕೆ ಕಾರಣಗಳು

ಭಾರತದ ಸನ್ನಿವೇಶವನ್ನು ಗಮನಿಸಿದರೆ, ಆಡಳಿತದ ಬಹಳಷ್ಟು ಕ್ಷೇತ್ರಗಳಲ್ಲಿ ಲಿಂಗತ್ವ ತಾರತಮ್ಯ ಎದ್ದು ಕಾಣುತ್ತದೆ. ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಮಹಿಳೆ ಪುರುಷರಿಗೆ ಸಮಾನಾದ ಸ್ಥಾನಮಾನವನ್ನು ಪಡೆದಿರುವುದು ಬಹಳ ಅಪರೂಪ. ಇದಕ್ಕೆ ಅನೇಕ ಕಾರಣಗಳಿವೆ. ಅವುಗಳನ್ನು ವಿಶ್ಲೇಷಿಸೋಣ.

**ಬಡತನ:** ಭಾರತದಲ್ಲಿ ಬಡತನದ ರೇಖೆಯ ಕೆಳಗಿರುವ ಒಟ್ಟು ಶೇ 30 ಭಾಗದಲ್ಲಿ ಶೇ70ರಷ್ಟು ಪಾಲು ಮಹಿಳೆಯರದ್ದು. ಭಾರತದಲ್ಲಿ ಮಹಿಳೆಯ ಬಡತನ ಮತ್ತು ಮಹಿಳೆಗೆ ಆರ್ಥಿಕ ಅವಕಾಶಗಳು ಮತ್ತು ಸ್ವಾತಂತ್ರ್ಯ, ಆರ್ಥಿಕ ಸಂಪನ್ಮೂಲಗಳ ಕೊರತೆ, ಸಾಲ ಸೌಲಭ್ಯದ ಕೊರತೆ, ಭೂಮಿಯ ಒಡೆತನವಿಲ್ಲದಿರುವಿಕೆ, ವಂಶಪಾರಂಪರ್ಯವಾದ ಹಕ್ಕುಗಳ ಭಾಜನವಿಲ್ಲದಿರುವಿಕೆ, ಶಿಕ್ಷಣದ ಅವಕಾಶಗಳಿಂದ ವಂಚನೆ, ಬೆಂಬಲ ಸೇವೆಗಳ ಕೊರತೆ, ನಿರ್ಧಾರ ತೆಗೆದುಕೊಳ್ಳುವಿಕೆಗೆ ಕನಿಷ್ಟ ಅವಕಾಶ–ಇವುಗಳಿಗೆ ಧನಾತ್ಮಕವಾದ ನೇರ ಸಂಬಂಧವಿದೆ. ಹೀಗೆ, ನಮ್ಮ ಪಿತೃಪ್ರಧಾನ ಕುಟುಂಬದಲ್ಲಿ ಲಿಂಗತ್ವ ತಾರತಮ್ಯಕ್ಕೆ ಬಡತನವೇ ಮೂಲ ಕಾರಣ. ಅಲ್ಲದೆ ಪುರುಷರ ಮೇಲಿನ ಆರ್ಥಿಕ ಅವಲಂಬನೆ ಇದರ ಜೊತೆಯಲ್ಲೇ ಲಿಂಗ ತಾರತಮ್ಯಕ್ಕೆ ಕೊಡುಗೆ ನೀಡುತ್ತದೆ.

**ಅನಕ್ಷರತೆ:** ಹುಡುಗಿಯರು ಶಿಕ್ಷಣದಲ್ಲಿ ಹಿಂದುಳಿದಿರುವಿಕೆ ಲಿಂಗತ್ವ ತಾರತಮ್ಯಕ್ಕೆ ಮತ್ತೊಂದು ಕಾರಣ. ಈ ಅನಕ್ಷರತೆಯಿಂದಾಗಿಯೇ ಹುಡುಗಿಯರಿಗೆ ಜೀವನದ ಎಲ್ಲ ಕ್ಷೇತ್ರಗಳಲ್ಲಿ ತಮ್ಮ ಸಂಪೂರ್ಣ ಸಾಮರ್ಥ್ಯ ಮತ್ತು ಅನನ್ಯತೆಯನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ.

**ಉದ್ಯೋಗಾವಕಾಶಗಳ ಕೊರತೆ:** ಆಧುನಿಕ ಆರ್ಥಿಕ ಮತ್ತು ಸಾಂಪ್ರದಾಯಿಕ ಗೃಹಕೃತ್ಯದ ಪಾತ್ರಗಳ ನಡುವಿನ ಘರ್ಷಣೆಗಳನ್ನು ಪರಿಹರಿಸಿಕೊಳ್ಳಲು ಮಹಿಳೆಯರಿಗೆ ಕಷ್ಟವಾಗುತ್ತಿದೆ. ಅವರಿಗೆ ಆಧುನಿಕ ಜಗತ್ತಿನ ಉದ್ಯೋಗಗಳ ಬೇಡಿಕೆಗಳನ್ನು ಪೂರೈಸಲು ಆಗುತ್ತಿಲ್ಲ. ಅವರ ಕೌಶಲಗಳಿಗೆ ಗುಣಮಟ್ಟದ ಬದುಕು ನಡೆಸುವಷ್ಟು ವರಮಾನ ನೀಡುವ ಉದ್ಯೋಗಗಳು ಕಾಣುವುದಿಲ್ಲ. ಮನೆಯೊಳಗಿನ ಕೆಲಸಗಳೂ ಸಮಪ್ರಮಾಣದಲ್ಲಿ ಹಂಚಿಕೆಯಾಗಿಲ್ಲ. ಪುರುಷರ ಆಸ್ತಿಯನ್ನು ಕುರಿತ ಪುರುಷರ ಮಾಲೀಕತ್ವ, ಕೆಲಸದ ಸಾಂಪ್ರದಾಯಕ ವಿಂಗಡಣೆ ಇವು ಹೊಸ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಳ್ಳಲು ಅಡ್ಡಿಯಾಗುತ್ತಿವೆ. ಮನೆಯ ಜವಾಬ್ದಾರಿಗಳು ಕಾರ್ಮಿಕ ಜಗತ್ತಿನೊಡನೆ ಉತ್ತಮ ಸಂಪರ್ಕಗಳನ್ನು ಬೆಳೆಸಿಕೊಳ್ಳಲೂ ಅವಕಾಶಕೊಡುವುದಿಲ್ಲ. ಹೀಗಾಗಿ ಅವರು ಸ್ವಾವಲಂಬಿಗಳಾಗುವ ಸಾಧ್ಯತೆಗಳು ಬಹಳ ಕಡಿಮೆ.

**ಸಂಪ್ರದಾಯಗಳು ಮತ್ತು ರೂಢಿಗಳು:** ಮಹಿಳೆಯರು ರೂಢಿಗಳು, ನಂಬಿಕೆಗಳು ಮತ್ತು ಸಂಪ್ರದಾಯಗಳಿಂದ ಮುಕ್ತರಲ್ಲ. ಈ ಅಂಶಗಳು ಅವಳನ್ನು ಅಧೀನ ಸ್ಥಾನಮಾನದಲ್ಲೇ ಇರಿಸಿವೆ. ಪುರುಷರಿಗೆ ಹೋಲಿಸದರೆ ಕುಟುಂಬದ ಒಳಗೆಯೂ ಹೊರಗೆಯೂ ಅವಳ ಸ್ಥಾನಮಾನ ಎರಡನೆಯದೇ. ಗಂಡುಮಗುವಿನ ಜನನವನ್ನು ಕುಟುಂಬ ಸಂಭ್ರಮಿಸುತ್ತದೆ; ಹೆಣ್ಣು ಮಗುವಿನ ಜನನವಾದಾಗ ಈ ಸಂಭ್ರಮವಿರುವುದಿಲ್ಲ. ವರದಕ್ಷಿಣೆ, ಕಡಿಮೆ ಉತ್ಪಾದನೆ, ಇತ್ಯಾದಿ ಅಂಶಗಳು ಇದಕ್ಕೆ ಕಾರಣ. ಈ ಪುರುಷ ಪ್ರಧಾನ ಮನೋಧೋರಣೆ ಇಂದಿಗೂ ಇದೆ. ಇದರಿಂದಲೇ ಲಿಂಗಪತ್ತೆಹಚ್ಚುವಿಕೆ, ಹೆಣ್ಣು ಭ್ರೂಣಹತ್ಯೆ, ಇತ್ಯಾದಿ ಕಾನೂನಾತ್ಮಕವಲ್ಲದ ಅಭ್ಯಾಸಗಳು ಕಾಣಿಸಿಕೊಳ್ಳುತ್ತಿವೆ. ಈ ರೀತಿಯ ಸಾಂಪ್ರದಾಯಿಕ ಮನೋಭಾವಗಳೇ ಲಿಂಗತ್ವ ತಾರತಮ್ಯಕ್ಕೆ ಕಾರಣವಾಗುತ್ತವೆ.

**ಸಾಮಾಜಿಕ ಮನೋಭಾವ:** ಅಸಂಖ್ಯ ಸಾಮಾಜಿಕ ಕಾರ್ಯಕರ್ತರು ಸುಧಾರಕರು ಮಹಿಳೆಯರಿಗೆ ಸಮಸ್ಥಾನಮಾನಕ್ಕೆ ಯುದ್ಧವನ್ನೇ ಸಾರಿದರೂ ಗ್ರಾಮೀಣ ಜನರ ಮನೋಭಾವದಲ್ಲಿ ಈ ತಾರತಮ್ಯ ಕಡಿಮೆಮಾಡಲು ಸಾಧ್ಯವಾಗುತ್ತಿಲ್ಲ. ಸಾಮಾಜಿಕ ಪ್ರಗತಿ ಮತ್ತು ತಂತ್ರಜ್ಞಾನಾತ್ಮಕವಾದ ಇಂದಿನ ಆಧುನಿಕ ಯುಗದಲ್ಲೂ ಮಹಿಳೆಯರು ಶೋಷಣೆ, ಮೂಢನಂಬಿಕೆ, ಅನಕ್ಷರತೆ ಮತ್ತು ಸಾಮಾಜಿಕ ಅತ್ಯಾಚಾರಗಳಿಗೆ ಒಳಗಾಗುತ್ತಿದ್ದಾರೆ. ಮಹಿಳೆಯರು ಮನೆಯ ನಾಲ್ಕು ಗೋಡೆಗಳ ಮಧ್ಯೆ ಇರಬೇಕು ಎಂಬ ಸಾಮಾಜಿಕ ಕಳಂಕವೇ ಲಿಂಗತ್ವ ತಾರತಮ್ಯದ ಮೂಲ ಕಾರಕವಾಗಿ ಕಾಣಬರುತ್ತದೆ. ಕುಟುಂಬದ ಗೌರವದ ನೆಪದಲ್ಲಿ ಮಹಿಳೆಯರು ತಮ್ಮ ಭವಿಷ್ಯವನ್ನು ಕುರಿತು ಬಾಯಿಬಿಡದಂತೆ ಮಾಡಿಟ್ಟಿರುವ ಸಾಮಾಜಿಕ ಧೋರಣೆಗಳು ಮಹಿಳೆಯನ್ನು ಮತ್ತೂ ಅಧೋಗತಿಗೆ ತಳ್ಳುತ್ತವೆ.

**ಮಹಿಳೆಯರಿಗೆ ಅವರ ಹಕ್ಕುಗಳ ಕುರಿತ ಅರಿವು ಇಲ್ಲದಿರುವಿಕೆ :** ಬಹಳಷ್ಟು ಮಹಿಳೆಯರಿಗೆ ಅವರ ಹಕ್ಕುಗಳ ಕುರಿತಾದ ಅರಿವೇ ಇಲ್ಲ. ಸಮಾಜೋ ಆರ್ಥಿಕ ಮತ್ತು ರಾಜಕೀಯ ಶಕ್ತಿಗಳು ಅವರನ್ನು ಹೇಗೆ ದಮನಮಾಡುತ್ತಿವೆ ಎಂಬ ಅರಿವೇ ಅವರಿಗಿರುವುದಿಲ್ಲ. ಅವರ ಅಜ್ಞಾನದಿಂದಾಗಿಯೇ ಅವರು ಸಮಾಜ ಮತ್ತು ಕುಟುಂಬಗಳಲ್ಲಿನ ತಾರತಮ್ಯದ ಪದ್ಧತಿಗಳನ್ನು ಸಹಜವೇ ಎಂಬಂತೆ ಸ್ವೀಕರಿಸುತ್ತಾರೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ನಿಮ್ಮ ಸನ್ನಿವೇಶವನ್ನೇ ನೆನಪಿಸಿಕೊಳ್ಳಿ. ನೀವು ಮಹಿಳೆಯಾಗಿದ್ದರೆ ನೀವೇ ನಿಮ್ಮ ಪ್ರಗತಿಗೆ ಅಡ್ಡಿಯಾಗುವ ಸನ್ನಿವೇಶಗಳನ್ನು ಎದುರಿಸಿರಬಹುದು. ಪುರುಷರಿಗೂ ಲಿಂಗತ್ವದ ಕಾರಣದಿಂದಲೇ ಅಡ್ಡಿಯಾಗಿರುವ ಸನ್ನಿವೇಶಗಳಿರಬಹುದು. ಹೀಗೆ ನಿಮ್ಮ ಅನುಭವದಲ್ಲಿ ಮಹಿಳೆ ಅಥವಾ ಪುರುಷ ಎಂಬ ಕಾರಣಕ್ಕಾಗಿ ನಿಮ್ಮ ಪ್ರಗತಿಗೆ ಅಡ್ಡಿಯಾಗಿರುವ ಸನ್ನಿವೇಶಗಳನ್ನು ಆ ಸನ್ನಿವೇಶಗಳಲ್ಲಿ ನಿಮ್ಮ ಪ್ರತಿಕ್ರಿಯೆಯನ್ನೂ ತಿಳಿಸಿ. ಈ ಕುರಿತು ನೀವು ನಿಮ್ಮ ತರಗತಿಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹೇಳುವ ಕಿವಿಮಾತುಗಳನ್ನು ಗುರುತಿಸಿ, ಟಿಪ್ಪಣಿ ತಯಾರಿಸಿ. ಸನ್ನಿವೇಶಗಳನ್ನೂ ಗುರುತಿಸಿ.

## 1.2.3.2. ವಿವಿಧ ಸಂಸ್ಥೆಗಳ ವಿವಿಧ ಆಯಾಮಗಳಲ್ಲಿ ಲಿಂಗತ್ವ ತಾರತಮ್ಯ

ಲಿಂಗತ್ವ ತಾರತಮ್ಯ ಎಂದರೇನು, ಅದಕ್ಕೆ ಕಾರಣಗಳೇನು ಎಂಬುದು ನಮಗೀಗ ತಿಳಿದಿದೆ. ವಿವಿಧ ಸಂಸ್ಥೆಗಳಲ್ಲಿ ವಿವಿಧ ಆಯಾಮಗಳಲ್ಲಿ ಇದು ಹೇಗೆ ವ್ಯಕ್ತವಾಗುತ್ತದೆ ಎಂಬುದನ್ನು ನೋಡೋಣ.

ನಿಮ್ಮ ಬದುಕನ್ನೇ ಒಮ್ಮೆ ಹಿಂದಿರುಗಿ ನೋಡಿದರೆ, ನಿಮ್ಮ ಲಿಂಗತ್ವದ ಕಾರಣದಿಂದಾಗಿ ನಿಮಗೆ ಸಿಗದ ಕೆಲವು ಅವಕಾಶಗಳು ಕಣ್ಣಮುಂದೆ ಬರುತ್ತವೆ. ಅವು ಮುಂದೆ ಓದಲು ಸಾಧ್ಯವಾಗದ, ನಿಮ್ಮ ಆಯ್ಕೆಯ ಉದ್ಯೋಗವನ್ನು ಗಳಿಸಲಾಗದ, ನಿಮ್ಮ ಆಯ್ಕೆಯ ಕೋರ್ಸನ್ನು ಓದಲಾಗದ ಸನ್ನಿವೇಶಗಳಿರಬಹುದು. ಈ ರೀತಿಯ ಸನ್ನಿವೇಶಗಳಿಗೆ ಲಿಂಗತ್ವ ಹೇಗೆ ಕಾರಣವಾಗುತ್ತದೆ ಎಂಬುದನ್ನು ಗುರುತಿಸಿಕೊಳ್ಳಿ.

### ಸಾಮಾಜಿಕ ಸಂಸ್ಥೆಗಳು

ಸಾಮಾಜಿಕ ಸಂಸ್ಥೆಗಳು ಮತ್ತು ಲಿಂಗತ್ವ ಸೂಚಿ (The Social Institutions and Gender Index) ಎಂಬುದು ಅಂತರ್ದೇಶೀಯ ಮಟ್ಟದಲ್ಲಿ ಸಾಮಾಜಿಕ ಸಂಸ್ಥೆಗಳಲ್ಲಿ ಲಿಂಗತ್ವ ತಾರತಮ್ಯವನ್ನು ಅಳೆಯುವ ಒಂದು ಸೂಚಿ . ಇದರ ಪ್ರಕಾರ, ಸಾಮಾಜಿಕ ಸಂಸ್ಥೆಗಳಲ್ಲಿನ ತಾರತಮ್ಯ ಐದು ಆಯಾಮಗಳನ್ನು ಒಳಗೊಳ್ಳುತ್ತದೆ.

### ಕುಟುಂಬ ಸಂಕೇತಗಳು

ಇದು ಗೃಹಕೃತ್ಯದಲ್ಲಿ ಮಹಿಳೆಯ ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ನೇರವಾಗಿ ಪ್ರಭಾವಿಸುವ ಸಂಸ್ಥೆಗಳನ್ನು ಹಿಡಿದಿಡುತ್ತದೆ. ಕುಟುಂಬದಲ್ಲಿ ಪುರುಷರು ಮನೆಯೊಡೆಯರಾಗಿದ್ದು, ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವ ಅಧಿಕಾರದಿಂದ ವಂಚಿತರಾಗಿರುತ್ತಾರೆ. ಶೀಘ್ರವಿವಾಹ, ಪ್ರೌಢರಾಗುವ ಮೊದಲೇ ಮದುವೆ ಮಾಡುವುದು ಇವು ಭಾರತೀಯ ಸನ್ನಿವೇಶಗಳಲ್ಲಿ ಇಂದೂ ಕಾಣಬರುತ್ತವೆ. ಬಹುಪತ್ನಿತ್ವ ಒಪ್ಪಿಗೆಯಾಗಿರುವಂತೆ ಬಹುಪತಿತ್ವ ಒಪ್ಪಿಗೆಯಾಗಿಲ್ಲ.

### ಪೌರ ಸ್ವಾತಂತ್ರ್ಯ

ಇದು ಮಹಿಳೆಯ ಸಾಮಾಜಿಕ ಭಾಗವಹಿಕೆಯನ್ನು ಒಳಗೊಳ್ಳುತ್ತದೆ. ಭಾರತೀಯ ಸನ್ನಿವೇಶದಲ್ಲಿ ಮಹಿಳೆ ತನಗೆ ಅಗತ್ಯವಿರುವಂತೆ, ತನ್ನ ಆಶಯದಂತೆ ವರ್ತಿಸಲು ಸಾಧ್ಯವಿಲ್ಲ. ಅವಳು ಹಿರಿಯರ, ಕುಟುಂಬದ ಸದಸ್ಯರ ಮುಂದೆ 'ಸಭ್ಯತೆಯ ವರ್ತನೆ'ಯನ್ನೇ ಪ್ರದರ್ಶಿಸಬೇಕಾಗುತ್ತದೆ. ಬಹಳಷ್ಟು ಸಮುದಾಯಗಳಲ್ಲಿ 'ಪರ್ದಾ' ಮತ್ತು 'ಬುರ್ಕಾ' ಪದ್ಧತಿಗಳು ಇಂದಿಗೂ ಜಾರಿಯಲ್ಲಿವೆ.

### ದೈಹಿಕ ಭದ್ರತೆ

ಮಹಿಳೆಯರ ಮೇಲಿನ ದೌರ್ಜನ್ಯ ಭಾರತದಲ್ಲಿ ಅತಿಯಾಗಿ ಅಸ್ತಿತ್ವದಲ್ಲಿರುವ ಸಾಮಾಜಿಕ ಕೆಡುಕು. ಇದು ಗೃಹಕೃತ್ಯ ದೌರ್ಜನ್ಯ, ಲೈಂಗಿಕ ದೌರ್ಜನ್ಯ ಮತ್ತು ಸ್ತ್ರೀ ಜನನಾಂಗ ವಿರೂಪಗೊಳಿಸುವಿಕೆ ಇವುಗಳನ್ನು ಒಳಗೊಳ್ಳುತ್ತದೆ.

**ಗಂಡುಮಗುವಿನ ಆದ್ಯತೆ**

ಭಾರತದಲ್ಲಿ ಗಂಡುಮಗುವಿನ ಆದ್ಯತೆಯ ಕಾರಣದಿಂದಾಗಿ ಸುಮಾರು 63 ಮಿಲಿಯನ್ ಮಹಿಳೆಯರು ದೇಶದ ಜನಸಂಖ್ಯೆಯಿಂದ ಕಾಣೆಯಾಗಿದ್ದಾರೆ. ಇದೇ ಬಹುಸಂಖ್ಯೆಯಲ್ಲಿ ಹೆಣ್ಣು ಶಿಶುಹತ್ಯೆಗೂ ಹೆಣ್ಣು ಭ್ರೂಣಹತ್ಯೆಗೂ ಕಾರಣವಾಗಿದೆ. ಇದರಿಂದಾಗಿ ಗಂಡುಮಕ್ಕಳಿಗೆ ಹೆಣ್ಣುಮಕ್ಕಳಿಗಿಂತ ಉತ್ತಮ ಪೌಷ್ಟಿಕ ಆಹಾರ ಕೊಡುವುದು ಮತ್ತು ಇತರೆ ತಾರತಮ್ಯದ ಆಚರಣೆಗಳ ಪರಿಪಾಠಗಳಿವೆ. ಕೆಲವು ಕುಟುಂಬಗಳಲ್ಲಿ, ಹೆಣ್ಣುಮಗುವಿನ ಹುಟ್ಟುಹಬ್ಬವು ಗಂಡುಮಗುವಿನ ಹುಟ್ಟುಹಬ್ಬದಷ್ಟು ವಿಜೃಂಭಣೆಯಿಂದ ಸಾಗುವುದಿಲ್ಲ.

**ಮಾಲೀಕತ್ವದ ಹಕ್ಕುಗಳು**

ಕಾನೂನಿನ ಪ್ರಕಾರ ಹೆಣ್ಣುಮಕ್ಕಳಿಗೆ ಆಸ್ತಿ ಮತ್ತು ಪಿತ್ರಾರ್ಜಿತ ಹಕ್ಕುಗಳು ಗಂಡುಮಕ್ಕಳಿಗೆ ಸಮಾನವಾಗಿವೆ. ಆದರೆ ಹೆಣ್ಣುಮಕ್ಕಳು ರೂಢಿಯಲ್ಲಿ ಇದರಿಂದ ವಂಚಿತರಾಗಿದ್ದಾರೆ. ಶೇ 70ರಷ್ಟು ಗ್ರಾಮೀಣ ಭೂಮಿಗೆ ಪುರುಷರ ಒಡೆತನವಿದೆ ಎಂಬ ಅಂಶ ಇದನ್ನು ಸ್ಪಷ್ಟಪಡಿಸುತ್ತದೆ. ಕೆಲವೇ ಮಹಿಳೆಯರು ಈ ಕುರಿತು ನ್ಯಾಯ ಪರಿಹಾರ ಕೇಳುತ್ತಾರೆ.

**ಸಾಂಸ್ಕೃತಿಕ ಸಂಸ್ಥೆಗಳು**

ಪ್ರಾಚೀನ ಕಾಲದಿಂದಲೂ ಭಾರತೀಯ ಮಹಿಳೆ–ಮಗಳಾಗಲೀ, ಹೆಂಡತಿಯಾಗಲೀ, ತಾಯಿಯಾಗಲಿ–ಬೇರೆಯವರ ಜವಾಬ್ದಾರಿಯಲ್ಲಿ ಬೆಳೆಯಬೇಕಾದವಳು. ಕ್ರಿಸ್ತಶಕೆಯ ಮೊದಲಲ್ಲಿ ಕಾನೂನು ಬರೆದ ಮನುವಿನ ಪ್ರಕಾರ, ಮಹಿಳೆ ಮನೆಯಲ್ಲೂ ಸ್ವತಂತ್ರವಾಗಿ ಏನನ್ನೂ ಮಾಡಬಾರದು. ಎಳವೆಯಲ್ಲಿ ತಂದೆಯ ಆಶ್ರಯದಲ್ಲಿ, ಯೌವನದಲ್ಲಿ ಪತಿಯ ಆಶ್ರಯದಲ್ಲಿ ಮತ್ತು ವೃದ್ಧಾಪ್ಯದಲ್ಲಿ ಮಗನ ಆಶ್ರಯದಲ್ಲಿ ಬೆಳೆಯಬೇಕು, ಎಂಬುದು ಮನುವಿನ ಮಾತು.

**ಧಾರ್ಮಿಕ ಸಂಸ್ಥೆಗಳು**

ಬಹಳಷ್ಟು ಸಂಸ್ಕೃತಿಗಳು ಮತ್ತು ಧರ್ಮಗಳಲ್ಲಿ ನಂಬಿಕೆಗೆ ಸಂಬಂಧಪಟ್ಟ ಕಟ್ಟಳೆಗಳು–ಅದರಲ್ಲೂ ಮುಖ್ಯವಾಗಿ ಧಾರ್ಮಿಕ ಪ್ರಾಮುಖ್ಯತೆ ಇರುವ ಪೂಜಾಸ್ಥಳಗಳಿಗೆ ಸಂಬಂಧಿಸಿದಂತೆ–ಹೆಚ್ಚು ನಿಷ್ಠುರವಾಗಿ ಪುರುಷರಿಗಿಂತ ಮಹಿಳೆಯರಿಗೇ ಅನ್ವಯವಾಗುವಂತಹುದು

**ಪೂಜಾಸ್ಥಳಗಳಿಗೆ ಪ್ರವೇಶ ನಿಷೇಧ**

ಮಸೀದಿಗಳು, ಕೆಲವು ದೇವಸ್ಥಾನಗಳು ಮಹಿಳೆಯರಿಗೆ ಪ್ರವೇಶವನ್ನು ನಿಷೇಧಿಸುತ್ತವೆ. ಬಹಳಷ್ಟು ದೇವಸ್ಥಾನಗಳಲ್ಲಿ ಮಹಿಳೆಯರಿಗೆ ಗರ್ಭಗುಡಿಯೊಳಗೆ ಪ್ರವೇಶವಿಲ್ಲ. ಇವೆಲ್ಲವೂ ಪುರುಷ ಪ್ರಾಬಲ್ಯವಿರುವ ಸಮೂಹಗಳಿಂದ ಮಹಿಳೆಯರನ್ನು ನಿರ್ಬಂಧಿಸುವ ಪ್ರಯತ್ನಗಳು.

**ಧಾರ್ಮಿಕ ಹಕ್ಕುಗಳ ನಿರಾಕರಣೆ**

ಭಾರತದಲ್ಲಿ ಧಾರ್ಮಿಕ ಹಕ್ಕುಗಳನ್ನು ಕೇಳುವ ಮಹಿಳೆಯರ ಧ್ವನಿಗಳು ಈಗಷ್ಟೇ ಕೇಳಿಬರುತ್ತಿದೆ. ಮುಟ್ಟಾದ ಹೆಂಗಸರನ್ನು ಅವರು ಅಶುದ್ಧ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಗುಡಿಗಳು, ಅಡುಗೆ ಮನೆ ಇತ್ಯಾದಿ ಸ್ಥಳಗಳಿಂದ ನಿಷೇಧಿಸಲಾಗಿತ್ತು. ಬಹಳಷ್ಟು ಮಸೀದಿಗಳು ಮತ್ತು ಗುಡಿಗಳಲ್ಲಿ ಇಂದಿಗೂ ಮಹಿಳೆಯರಿಗೆ ಪ್ರವೇಶವಿಲ್ಲ. ಶಬರಿಮಲೆ ಪ್ರವೇಶದ ಕುರಿತಾದ ವಾದವಿವಾದಗಳನ್ನು ನೀವು ಗಮನಿಸುತ್ತಿರಬಹುದು.

**ಪೌರೋಹಿತ್ಯದ ನಿರಾಕರಣೆ**

ಬಹಳಷ್ಟು ಧರ್ಮಗಳಲ್ಲಿ ಪುರುಷರೇ ಪುರೋಹಿತರು. ಕೆಲವು ಸಮಾಜಗಳಲ್ಲಿ ಮಹಿಳೆಯರು ಕೆಲವು ಧಾರ್ಮಿಕ ಆಚರಣೆಗಳಲ್ಲಿ ಮುಂದಾಳತ್ವವನ್ನು ವಹಿಸುವರಾದರೂ ಪುರುಷ ಪ್ರಧಾನ ಸಮಾಜವು ಮಹಿಳಾ

ಪ್ರಾಬಲ್ಯವನ್ನು ಒಪ್ಪುವುದಿಲ್ಲ. ಕ್ರಿಶ್ಚಿಯನ್ ಸಮುದಾಯಗಳಲ್ಲೂ ಕ್ಯಾಥೊಲಿಕ್ ಚರ್ಚ್‌ಗಳು ಮಹಿಳೆಯರ ಸನ್ಯಾಸತ್ವವನ್ನು ಒಪ್ಪಿಕೊಳ್ಳುವುದಾದರೂ 'ಆರ್ಡಿನೇಶನ್' ಅನ್ನು ಒಪ್ಪಿಕೊಳ್ಳುವುದಿಲ್ಲ. ಕುರಾನ್‌ನ ಪ್ರಕಾರ, ಮಹಿಳೆ ಎಂದಿಗೂ ಪುರುಷನ ಹಕೀಮ್ (ಆಳುವವಳು/ ತೀರ್ಪುಗಾರಳು) ಆಗಲಾರಳು.

**ಆರ್ಥಿಕ ಸಂಸ್ಥೆಗಳು**

**ಕಾರ್ಮಿಕ ಭಾಗವಹಿಕೆ ಮತ್ತು ವೇತನ/ಕೂಲಿ**

ಭಾರತದಲ್ಲಿ ಕಾರ್ಮಿಕ ಶಕ್ತಿಯ ಭಾಗವಹಿಕೆಯಲ್ಲಿ ಮಹಿಳೆಯರಿಗಿಂತ ಪುರುಷರದ್ದೇ ಹೆಚ್ಚಿನ ಪಾಲು. ಶೇ 50ರಷ್ಟು ಜನರು ಭಾರತದಲ್ಲಿ ವ್ಯವಸಾಯದಲ್ಲಿ ತೊಡಗಿಕೊಂಡಿದ್ದಾರೆ. ಬಹಳಷ್ಟು ಗ್ರಾಮೀಣ ಪುರುಷರು ಬೆಳೆಗಾರರಾಗಿ ತೊಡಗಿಕೊಂಡಿದ್ದರೆ ಗರಿಷ್ಟ ಸಂಖ್ಯೆಯ ಮಹಿಳೆಯರು ಪಶುಪಾಲನೆಯಲ್ಲಿ ತೊಡಗಿಕೊಂಡಿದ್ದಾರೆ. ವ್ಯವಸಾಯದಲ್ಲಿ ಶೇ 63ರಷ್ಟು ಪುರುಷರ ಭಾಗವಹಿಕೆಯಾದರೆ, ಶೇ 78ರಷ್ಟು ಮಹಿಳೆಯರು ಅದೇ ಕ್ಷೇತ್ರದಲ್ಲಿದ್ದಾರೆ. ಇಷ್ಟಾದರೂ ಅವರ ವೇತನ/ ಕೂಲಿಯಲ್ಲಿ ವ್ಯತ್ಯಾಸವಿದೆ. ಬಹಳಷ್ಟು ಸಂದರ್ಭಗಳಲ್ಲಿ ಮಹಿಳೆಯರಿಗೆ ಪುರುಷರಿಗೆ ಕೊಡುವ ಕೂಲಿಯಲ್ಲಿ ಅರ್ಧಭಾಗ ಕೊಡಲಾಗುತ್ತದೆ.

**ಸಾಲಸೌಲಭ್ಯ**

ಕಾನೂನುಗಳು ಮಹಿಳಾ ಸಾಲ ಸೌಲಭ್ಯದ ಪರವಾಗಿದ್ದರೂ ಮೈಕ್ರೊ ಕ್ರೆಡಿಟ್ ಕಾರ್ಯಕ್ರಮಗಳು ಮಹಿಳೆಯನ್ನು ಉದ್ದೇಶಿಸಿ ಹೇರಳವಾಗಿದ್ದರೂ ಅವರಿಗೆ ಆಸ್ತಿಯ ಮಾಲಿಕತ್ವ ಇಲ್ಲದಿರುವುದರಿಂದ ಹೂಡಿಕೆಗಾಗುವ ಸಾಲ ಸುಲಭವಾಗಿ ಸಿಗುವುದಿಲ್ಲ. ಮಹಿಳೆಯರು ಸಾಲದ ಮೊತ್ತವನ್ನು ಹೆಚ್ಚಿಸಿಕೊಂಡು ಪುನರ್ ಪಾವತಿ ಮಾಡಲಾಗದೆ, ಅವಧಿಯನ್ನೂ ವಿಸ್ತರಿಸಿಕೊಂಡು ಕೊನೆಗೆ ಆತ್ಮಹತ್ಯೆಗೆ ಶರಣಾಗಿರುವ ಉದಾಹರಣೆಗಳಿವೆ ಎಂಬುದನ್ನು 2012ರ ಮೈಕ್ರೊ ಸಾಲಅಭ್ಯಾಸಗಳ ವರದಿಯು ತೆರೆದಿಟ್ಟಿದೆ.

**ಆಸ್ತಿ ಹಕ್ಕುಗಳು**

ಪಿತ್ರಾರ್ಜಿತವಾದ, ಗಂಡನ ಮಾಲೀಕತ್ವವಿರುವ ಆಸ್ತಿಯಲ್ಲಿ ಕಾನೂನಿನ ಪ್ರಕಾರ ಮಹಿಳೆಯರಿಗೆ ಹಕ್ಕು ಇದೆ. ಆದರೆ ವಾಸ್ತವದಲ್ಲಿ ಇದು ಸರಿಯಾಗಿ ಅನ್ವಯವಾಗುತ್ತಿಲ್ಲ.

**ಕಾರ್ಪೊರೆಟ್ ಕ್ಷೇತ್ರ**

ಕಾರ್ಪೊರೆಟ್ ಕ್ಷೇತ್ರದಲ್ಲಿ ಜಾಗತಿಕವಾಗಿ ಸೀನಿಯರ್ ನಾಯಕತ್ವದ ಪ್ರಮಾಣ ಶೇ. 20 ಇದ್ದರೆ, ಭಾರತದಲ್ಲಿ ಈ ಪ್ರಮಾಣ ಕೇವಲ ಶೇ5 ಎಂದು ಎನ್. ಡಿ. ಟಿ. ವಿ. ವರದಿ ಮಾಡಿದೆ. ಕಾರ್ಯಪಡೆಯ ಒಟ್ಟು ಮಹಿಳಾ ಭಾಗವಹಿಕೆ ಅತಿ ಕಡಿಮೆ ಇರುವ ಭಾರತದಲ್ಲಿ ಅದರಿಂದ ಹೊರಬರುವವರಿಗೆ ಸಂಬಂಧಿಸಿದಂತೆಯೂ ಜಾಗತಿಕವಾಗಿ ಎರಡನೇ ಸ್ಥಾನದಲ್ಲಿದೆ. ಇದಕ್ಕೆ ಈಗಾಗಲೇ ವಿಚಾರಮಾಡಿರುವಂತೆ ಕೌಟುಂಬಿಕ ಜವಾಬ್ದಾರಿಗಳು, ಮನೆವಾರ್ತೆ, ಹಿರಿಯರ ಪೋಷಣೆಯ ಜವಾಬ್ದಾರಿ ಇವೇ ಕಾರಣಗಳಾಗಿವೆ.

**ರಾಜಕೀಯ ಸಂಸ್ಥೆಗಳು**

ರಾಜಕೀಯ ನಿರ್ಣಯ ತೆಗೆದುಕೊಳ್ಳುವುದು: ಲಿಂಗ ಅಸಮಾನತೆಯ ಈ ಮಾಪನವು ಗರಿಷ್ಟ ಮಟ್ಟದಲ್ಲಿ ರಾಜಕೀಯ ನಿರ್ಣಯ ಕೈಗೊಳ್ಳುವದರಲ್ಲಿ ಲಿಂಗಗಳ ನಡುವೆ ಇರುವ ಅಂತರವನ್ನು ಪರಿಗಣಿಸುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಗರಿಷ್ಠ ಸ್ಥಾನದಲ್ಲಿರುವ 20 ದೇಶಗಳಲ್ಲಿ ಒಂದಾಗಿದ್ದು, 2013ರಲ್ಲಿ 9ನೇ ಸ್ಥಾನವನ್ನು ಪಡೆದಿದ್ದುದಲ್ಲದೆ, ಡೆನ್ಮಾರ್ಕ್, ಸ್ವಿಟ್ಜರ್‌ಲೆಂಡ್, ಜರ್ಮನಿ, ಫ್ರಾನ್ಸ ಮತ್ತು ಬ್ರಿಟನ್‌ಗಳಿಗಿಂತ ರಾಜಕೀಯ ಸಬಲೀಕರಣದಲ್ಲಿ ಕಡಿಮೆ ಲಿಂಗತ್ವ ತಾರತಮ್ಯವನ್ನು ಬಿಂಬಿಸಿದೆ. ಪ್ರಧಾನಮಂತ್ರಿಯ ಸ್ಥಾನದಿಂದ ಮುಖ್ಯಮಂತ್ರಿಗಳ ಸ್ಥಾನದವರೆಗೆ, ಪಾರ್ಲಿಮೆಂಟ್ ಮತ್ತು ವಿಧಾನಸಭೆಗಳಿಗೆ ಭಾರತೀಯರು ಮಹಿಳೆಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿಸಿದ್ದಾರೆ.

**ಮತದಾನ**

ಭಾರತದ ಅನೇಕ ಚುನಾವಣೆಗಳಲ್ಲಿ ಮತದಾನ ಮಾಡುವವರಲ್ಲಿ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಹೆಚ್ಚಿರುವುದು ಕಂಡುಬಂದಿದೆ. ಭಾರತ ಸಂವಿಧಾನದಲ್ಲಿ 1993ರಲ್ಲಿ 73 ಮತ್ತು 74 ನೇ ತಿದ್ದುಪಡಿಗಳಾಗಿದ್ದು ಸ್ಥಳೀಯ ಸರ್ಕಾರಗಳಲ್ಲಿ ಶೇ 33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲು ಅವಕಾಶ ಮಾಡಿಕೊಡಲಾಗಿದೆ.

**ಶಿಕ್ಷಣ ಸಂಸ್ಥೆಗಳು**

**ಶಾಲಾ ಶಿಕ್ಷಣ**

ಭಾರತದಲ್ಲಿ ಅದರಲ್ಲೂ ಗ್ರಾಮೀಣಪ್ರದೇಶದಲ್ಲಿ ಹುಡುಗಿಯರು ಹುಡುಗರಿಗಿಂತ ಕಡಿಮೆ ಶಿಕ್ಷಣ ಪಡೆದಿರುತ್ತಾರೆ. ಅಧ್ಯಯನಗಳ ಪ್ರಕಾರ, ಕುಟುಂಬದಲ್ಲಿ ಮೊದಲನೆಯ ಮಗುವಿನ ನಂತರದ ಒಂದು ಮಗುವಿನ ಜನನದೊಂದಿಗೆ, ಹುಡುಗಿಯರ ಒಟ್ಟು ಶಾಲಾಶಿಕ್ಷಣ ಕಾಲುವರ್ಷ ಕಡಿಮೆಯಾಗಿರುವುದು ಗಮನಕ್ಕೆ ಬಂದಿದೆ. ಇದು ಕುಟುಂಬಗಳು ಹೆಣ್ಣು ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುತ್ತಿಲ್ಲ ಎಂಬುದನ್ನು ತಿಳಿಸುತ್ತದೆ.

**ಸೆಕೆಂಡರಿ ಶಿಕ್ಷಣ**

ಈ ಹಂತದಲ್ಲಿ ಹುಡುಗರಿಗಿಂತ ಹುಡುಗಿಯರು ಶಾಲೆಬಿಡುವುದು–ಅದರಲ್ಲೂ ಪ್ರಮುಖವಾಗಿ 12 ವರ್ಷ ವಯೋಮಾನದ ನಂತರ–ಕಂಡುಬಂದಿದೆ. ಮಧ್ಯದಲ್ಲಿ ಶಾಲೆ ಬಿಡುವ ಶೇ 20ರಷ್ಟು ಮಕ್ಕಳಲ್ಲಿ ಶೇ70ರಷ್ಟು ಮಕ್ಕಳು ಹುಡುಗಿಯರೇ ಆಗಿರುತ್ತಾರೆ. ಮನೆ ಮತ್ತು ಶಾಲೆಗಳ ನಡುವೆ ಕ್ರಮಿಸಬೇಕಾದ ದೂರ, ಅಭದ್ರತೆ ಮತ್ತು ಇತರ ಸಾಮಾಜಿಕ ಅಂಶಗಳು ಇದಕ್ಕೆ ಕಾರಣ.

**ಸೆಕೆಂಡರಿ ನಂತರದ ಶಿಕ್ಷಣ**

ಹುಡುಗಿಯರ ಉನ್ನತ ಶಿಕ್ಷಣದ ಪ್ರವೇಶಾತಿಯಲ್ಲಿ ಹೆಚ್ಚಳ ಕಂಡುಬಂದಿರುವುದಾದರೂ ವಿವಿಧ ಜ್ಞಾನಶಿಸ್ತುಗಳಿಗಾಗುವ ದಾಖಲಾತಿಯ ನೆಲೆಯಲ್ಲಿ ವ್ಯತ್ಯಾಸ ಇದ್ದೇ ಇದೆ. ಹುಡುಗರು ಎಲ್ಲ ಜ್ಞಾನಶಿಸ್ತುಗಳಲ್ಲೂ ದಾಖಲಾದರೂ ಹುಡುಗಿಯರು ಆಯ್ಕೆಯ ಕೆಲವು ವಿಷಯಗಳಿಗೆ ಮಾತ್ರ ದಾಖಲಾಗುತ್ತಾರೆ.

**ಸಾಕ್ಷರತೆ**

ಭಾರತದಲ್ಲಿ ಹುಡುಗಿಯರ ಸಾಕ್ಷರತೆಯ ಮಟ್ಟ ನಿಧಾನವಾಗಿ ಏರುತ್ತಿದೆಯಾದರೂ ಹುಡುಗರ ಸಾಕ್ಷರತೆಯ ಮಟ್ಟಕ್ಕಿಂತಲೂ ಕಡಿಮೆಯೇ ಇದೆ. ಈ ಅಂತರ ಪ್ರಸ್ತುತ ಸನ್ನಿವೇಶದಲ್ಲಿ ಪ್ರಾಥಮಿಕ ಹಂತದಲ್ಲಿ ಇಲ್ಲವಾದರೂ ಹೆಚ್ಚಿನ ಮಟ್ಟಕ್ಕೆ ಹೋಗುತ್ತಿದ್ದಂತೆ ಹುಡುಗ–ಹುಡುಗಿಯರಲ್ಲಿ ದಾಖಲಾತಿಯಲ್ಲಿ ಅಂತರ ಇದೆ. ಇದರ ಜೊತೆಗೆ ಹುಡುಗರನ್ನು ಹೆಚ್ಚು ಗುಣಮಟ್ಟದಿರುವ ಸಂಸ್ಥೆಗಳಿಗೂ ಹುಡುಗಿಯರನ್ನು ಕಡಿಮೆ ಗುಣಮಟ್ಟವಿರುವ ಸಂಸ್ಥೆಗಳಿಗೂ ಕಳಿಸುವ ಪರಿಪಾಠವೂ ಮುಂದುವರೆದಿದೆ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

ನಿಮ್ಮ ಪರಿಸರದ ಐದು ಕುಟುಂಬಗಳನ್ನು ಸಂದರ್ಶಿಸಿ. ಕೆಳಗಿನ ದತ್ತಾಂಶಗಳನ್ನು ಸಂಗ್ರಹಿಸಿ, ಲಿಂಗತ್ವ ತಾರತಮ್ಯವನ್ನು ಕುರಿತಂತೆ ನಿಮ್ಮ ನಿಗಮನಗಳನ್ನು ಗುರುತಿಸಿ

| ಕ್ರಮ ಸಂಖ್ಯೆ | ಸದಸ್ಯರ ಶಿಕ್ಷಣ/ ಉದ್ಯೋಗ | ಮುಂದುವರಿಕೆ ಇಲ್ಲವೇ ಸ್ಥಗಿತತೆಗೆ ಕಾರಣಗಳು | ನಿಗಮನಗಳು |
|---|---|---|---|
| 1 | ಉದಾ : ಸದಸ್ಯರು–<br>1ಪಿ.ಯು.ಸಿ(ಹುಡುಗಿ)ಸದಸ್ಯರು–2<br>ಇಂಜಿನಿಯರಿಂಗ್ (ಹುಡುಗ) ಸದಸ್ಯರು–3<br>ಎಸ್ ಎಸ್ ಎಲ್ ಸಿ (ಹುಡುಗ) | ಪಿಯುಸಿ ನಂತರ ಮದುವೆ<br>ಮದುವೆಯ ನಂತರ ಮನೆಯ ಜವಾಬ್ದಾರಿ<br>ಅಡಚಣೆ ಇಲ್ಲ.<br>ಮನೆಯ ಆರ್ಥಿಕ ಜವಾಬ್ದಾರಿ ನೋಡಿಕೊಳ್ಳಲು ಕೆಲಸಕ್ಕೆ ಸೇರಿದುದು | • ಮದುವೆ/ಮನೆಯ ಜವಾಬ್ದಾರಿ ಎರಡೂ ಲಿಂಗ ಅಸಮಾನತೆ ಉಂಟಾಗಲು ಕಾರಣ<br>• ಹುಡುಗರಿಗೂ ಲಿಂಗಪಾತ್ರಗಳ ದೃಷ್ಟಿಯಿಂದ ಅನನುಕೂಲತೆ |

## 1.2.4. ಸಾರಾಂಶಿಸೋಣ

- ಒಬ್ಬ ವ್ಯಕ್ತಿಯ ಲಿಂಗವನ್ನು ಅನುಸರಿಸಿ ಮಾಡಲಾಗುವ ತಾರತಮ್ಯವೇ ಲಿಂಗತ್ವ ತಾರತಮ್ಯ.
- ವಿಶಾಲಾರ್ಥದಲ್ಲಿ ಲಿಂಗತ್ವ ತಾರತಮ್ಯವೆಂದರೆ, ಲಿಂಗದ ಆಧಾರದ ಮೇಲೆ ವ್ಯಕ್ತಿಯನ್ನು ಅಥವಾ ಗುಂಪನ್ನು ಅವಕಾಶಗಳು, ಸವಲತ್ತುಗಳು ಅಥವಾ ಪುರಸ್ಕಾರಗಳಿಂದ ವಂಚಿತರಾಗಿ ಮಾಡುವ ಯಾವುದೇ ಕ್ರಿಯೆ ಅಥವಾ ಕಾರ್ಯವೆಂದಾಗುತ್ತದೆ.
- ಲಿಂಗತಾರತಮ್ಯವು ಜನನದ ನಿರಾಕರಣೆ, ಮೂಲಭೂತ ಅಗತ್ಯಗಳ ನಿರಾಕರಣೆ, ಶಿಕ್ಷಣದಲ್ಲಿ ತಾರತಮ್ಯತೆ: ಉದ್ಯೋಗದಲ್ಲಿ ತಾರತಮ್ಯತೆ, ವೇತನ ತಾರತಮ್ಯ ಹೀಗೆ ಅನೇಕ ಕ್ಷೇತ್ರಗಳಲ್ಲಿ ಕಂಡುಬರುತ್ತದೆ.
- ಲಿಂಗತ್ವ ತಾರತಮ್ಯಕ್ಕೆ ಬಡತನ, ಅನಕ್ಷರತೆ, ಉದ್ಯೋಗಾವಕಾಶಗಳ ಕೊರತೆ, ಸಂಪ್ರದಾಯಗಳು ಮತ್ತು ರೂಢಿಗಳು, ಋಣಾತ್ಮಕ ಸಾಮಾಜಿಕ ಮನೋಭಾವ, ಮಹಿಳೆಯರಿಗೆ ಅವರ ಹಕ್ಕುಗಳ ಕುರಿತ ಅರಿವು ಇಲ್ಲದಿರುವಿಕೆ ಇತ್ಯಾದಿಯಾಗಿ ಅನೇಕ ಕಾರಣಗಳಿವೆ.
- ಲಿಂಗತ್ವ ತಾರತಮ್ಯವು ಸಾಮಾಜಿಕ ಸಂಸ್ಥೆಗಳುಸಾಂಸ್ಕೃತಿಕ ಸಂಸ್ಥೆಗಳು ಧಾರ್ಮಿಕ ಸಂಸ್ಥೆಗಳು ಆರ್ಥಿಕ ಸಂಸ್ಥೆಗಳು ರಾಜಕೀಯ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳು ಇತ್ಯಾದಿ ವಿವಿಧ ಸಂಸ್ಥೆಗಳ ವಿವಿಧ ಆಯಾಮಗಳಲ್ಲಿ ಕಂಡುಬರುತ್ತದೆ.

## 1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1**

ನಿಮ್ಮ ಅನುಭವದ ಟಿಪ್ಪಣಿಯನ್ನು ನಿಮ್ಮ ಸಹ ಶಿಕ್ಷಕರೊಂದಿಗ ಹಂಚಿಕೊಂಡು ಈ ಕುರಿತು ಚರ್ಚಿಸಿ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

ಇದು ಒಂದು ಉತ್ತಮ ಅಧ್ಯಯನವೇ. ನಿಮ್ಮ ನಿಗಮನಗಳನ್ನು ಒಂದು ಶೈಕ್ಷಣಿಕ ಸಭೆಯಲ್ಲಿ ಹಂಚಿಕೊಳ್ಳಿರಿ.

## 1.2.6. ಘಟಕಾಂತ್ಯ ಅಭ್ಯಾಸಗಳು

1. ಲಿಂಗತ್ವ ತಾರತಮ್ಯ ಎಂದರೇನು?ಅದಕ್ಕೆ ಕಾರಣಗಳನ್ನು ವಿಶ್ಲೇಷಿಸಿ
2. ಲಿಂಗತ್ವ ತಾರತಮ್ಯವು ವಿವಿಧ ಸಂಸ್ಥೆಗಳಲ್ಲಿ ಕಾಣಬರುವ ವಿಷಯವನ್ನು ವಿಶದೀಕರಿಸಿ.

## 1.2.7. ಪರಾಮರ್ಶನ ಸೂಚಿ :


1. Dr. Mahabaleshwar Rao, Gender, School Education(2017), Vismaya Prakashana.
2. Dr. N. B. Kongavada et al., Gender School and Society(2018), Vidyanidhi Prakashana.
3. Prerona Bura Gohain, "Gender Inequality and Development in Indian Scenario: Consequences, Causes, Challenges and Cures" IOSR Journal Of Humanities and Social Science (IOSR-JHSS) Volume 21, Issue 6, Ver. 5 (June. 2016), pp. 01-10.
4. www.child-encyclopedia.com
5. www.thoughtco.com
6. http://www.studylecturenotes.com/basics-of-sociology/gender-discrimination-definition-types-examples
7. http://www.yourarticlelibrary.com/india-2/gender-discrimination-in-india-6-major-causes/47671
8. https://www.elitedaily.com/women/religion-women-barrier-equality/1412604
9. https://www.dw.com/en/why-many-indians-prefer-sons-over-daughters/a-42385733


*********

# ಬ್ಲಾಕ್–1 : ಭಾರತದಲ್ಲಿ ಲಿಂಗತ್ವ ವಿಚಾರಗಳು ಮತ್ತು ಸಾಮಾಜೀಕರಣ ಪ್ರಕ್ರಿಯೆ

## ಘಟಕ– 3 : ಭಾರತದ ವಿಭಿನ್ನ ಕುಟುಂಬಗಳಲ್ಲಿ ಲಿಂಗತ್ವ ಅನನ್ಯತೆ (ಅಸ್ಮಿತೆ) ಮತ್ತು ಸಾಮಾಜೀಕರಣ ಅಭ್ಯಾಸಗಳು

**ಘಟಕದ ರಚನೆ**


1.3.1. ಕಲಿಕೆಯ ಉದ್ದೇಶಗಳು

1.3.2. ಪೀಠಿಕೆ

1.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.3.3.1. ಲಿಂಗತ್ವ ಅನನ್ಯತೆಯ ಪರಿಕಲ್ಪನೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1.3.3.2. ಭಾರತದ ವಿವಿಧ ಕುಟುಂಬಗಳಲ್ಲಿ ಸಾಮಾಜೀಕರಣ ಅಭ್ಯಾಸಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

1.3.4. ಸಾರಾಂಶಿಸೋಣ

1.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

1.3.6. ಘಟಕಾಂತ್ಯ ಅಭ್ಯಾಸಗಳು

1.3.7. ಪರಾಮರ್ಶನ ಸೂಚಿ


### 1.3.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಲಿಂಗತ್ವ ಅನನ್ಯತೆಯ ಪರಿಕಲ್ಪನೆಯನ್ನು ವಿವರಿಸುವರು;
- ಲಿಂಗತ್ವ ಅನನ್ಯತೆ ಮೂಡುವ ರೀತಿಯನ್ನು ವಿಶ್ಲೇಷಿಸುವರು ಹಾಗೂ ವಿವರಿಸುವರು;
- ಲಿಂಗತ್ವ ಅನನ್ಯತೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಮತ್ತು ಲಿಂಗ ಅನನ್ಯತೆಯ ವಿಧಗಳನ್ನು ಸ್ಪಷ್ಟಪಡಿಸುವರು; ಮತ್ತು
- ಭಾರತದ ವಿವಿಧ ಕುಟುಂಬಗಳಲ್ಲಿನ ಸಾಮಾಜೀಕರಣ ಅಭ್ಯಾಸಗಳನ್ನು ವಿವರಿಸುವರು.

### 1.3.2. ಪೀಠಿಕೆ

ನಾವೆಲ್ಲರೂ ನಮ್ಮದೇ ಆದ ಅನನ್ಯತೆಯನ್ನು ಪಡೆದಿದ್ದೇವೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ನಮ್ಮ ಆಸೆ ಆಮಿಷಗಳು, ಒಲವು ಧೋರಣೆಗಳು ಭಿನ್ನವೇ. ಈ ಅನನ್ಯತೆ ಎಂಬುದು ನಮ್ಮ ಬದುಕಿನ ಭೌತಿಕ ಮತ್ತು ಮನೋವೈಜ್ಞಾನಿಕ ಅಂಶಗಳಿಂದ ರೂಪಿತವಾಗುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಲಿಂಗತ್ವವನ್ನು ಆಯ್ಕೆ

ಮಾಡಿಕೊಳ್ಳುವಲ್ಲೂ ಅನನ್ಯತೆಯನ್ನು ತೋರುವುದುಂಟು. ನಮ್ಮ ಸುತ್ತಮುತ್ತಣ ಸಮಾಜವನ್ನು ವೀಕ್ಷಿಸಿದಾಗ ಈ ಅಂಶ ನಮ್ಮ ಗಮನಕ್ಕೆ ಬರುತ್ತದೆ. ಹುಟ್ಟುವಾಗಲೇ ಲೈಂಗಿಕ ಅಂಶದ ಆಧಾರದ ಮೇಲೆ ಲಿಂಗತ್ವವನ್ನು ಗುರುತಿಸಲಾಗುತ್ತದೆ. ಆದರೆ ವ್ಯಕ್ತಿಗಳು ಬೆಳೆಯುತ್ತಿರುವಂತೆ, ಅವರವರ ಒಲವು, ಲೈಂಗಿಕತೆಗೆ ಸಂಬಂಧಿಸಿದ ಅಗತ್ಯಗಳಿಗೆ ಅನುಗುಣವಾಗಿ ಲಿಂಗತ್ವವನ್ನು ಆಯ್ಕೆಮಾಡಿಕೊಳ್ಳುವ ಹಕ್ಕು ಇರುತ್ತದೆ. ನಾವು ಈಗಾಗಲೇ ತಿಳಿದಿರುವಂತೆ ವರ್ಣತಂತುಗಳು ಮತ್ತು ಹಾರ್ಮೋನುಗಳು ಮುಂತಾದ ಜೀವಶಾಸ್ತ್ರೀಯ ಅಂಶಗಳು ವ್ಯಕ್ತಿಯ ಲಿಂಗವನ್ನು ರೂಪಿಸುವಲ್ಲಿ ಪ್ರಭಾವಬೀರುತ್ತವೆ. ಈ ಜೀವಶಾಸ್ತ್ರೀಯ ಅಂಶಗಳ ಜೊತೆಗೆ ಸಮಾಜಶಾಸ್ತ್ರೀಯ ಅಂಶಗಳು ವ್ಯಕ್ತಿಯ ಲಿಂಗತ್ವದ ಆಯ್ಕೆಯಲ್ಲಿ ಪ್ರಭಾವಬೀರುತ್ತವೆ. ಹೀಗೆ ರೂಪುಗೊಳ್ಳುವ ವ್ಯಕ್ತಿಯ 'ಲಿಂಗತ್ವ ಅನನ್ಯತೆ' ಎಂದರೇನು, ಅದು ಹೇಗೆ ರೂಪುಗೊಳ್ಳುತ್ತದೆ, ಅದರಲ್ಲಿ ಕುಟುಂಬದ ಪಾತ್ರವೇನು ಎಂಬುದನ್ನು ಈ ಘಟಕದಲ್ಲಿ ತಿಳಿಯೋಣ. ಇಂಗ್ಲಿಷಿನ 'gender identity' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಲಿಂಗತ್ವ ಅಸ್ಮಿತೆ' ಅಥವಾ 'ಲಿಂಗತ್ವ ಅನನ್ಯತೆ' ಎಂಬ ರೂಪಗಳನ್ನು ಬಳಸಲಾಗುತ್ತದೆ. ನಾವು 'ಲಿಂಗತ್ವ ಅನನ್ಯತೆ' ಎಂಬ ಪದದ ಬಳಕೆಯಿಂದಲೇ ಮುಂದುವರಿಯೋಣ.

## 1.3.3.1. ಲಿಂಗತ್ವ ಅನನ್ಯತೆಯ ಪರಿಕಲ್ಪನೆ

### ಅಭ್ಯಾಸ I

ನಿಮ್ಮ ಬಾಲ್ಯವನ್ನು ನೆನಪಿಸಿಕೊಳ್ಳಿ. ನೀವು ಹುಡುಗಿಯಾಗಿ/ ಹುಡುಗನಾಗಿ ಮಾಡಲು ಇಷ್ಟಪಟ್ಟ ಕೆಲವು ಚಟುವಟಿಕೆಗಳನ್ನು ಪಟ್ಟಿಮಾಡಿ. ನೀವು ಅದೇ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಕಾರಣವೇನು ಎಂಬುದನ್ನು ಆಲೋಚಿಸಿ. ಆ ಆಯ್ಕೆಗಳು ನಿಮ್ಮದೇ ಆಗಿದ್ದುವೋ ಅಥವಾ ನಿಮ್ಮ ಹಿರಿಯರು ಮಾಡಿದುದನ್ನು ಅನುಕರಿಸುವ ಪ್ರಯತ್ನವಾಗಿತ್ತೋ ಎಂಬುದನ್ನು ಗುರುತಿಸಿಕೊಳ್ಳಿ. ಕೆಳಗಿನ ಉದಾಹರಣೆಯನ್ನು ಗಮನಿಸಿ.

| ಚಟುವಟಿಕೆಗಳು | ಕಾರಣಗಳು | ಸ್ವಂತ ಆಯ್ಕೆ/ ಹಿರಿಯರ ಅನುಕರಣೆ |
|---|---|---|
| ಉದಾಹರಣೆ 1 : ನಾನು ಉದ್ದದ ಬಟ್ಟೆ ಸಿಕ್ಕರೆ ಅದನ್ನೇ ಸೀರೆಯಂತೆ ಸುತ್ತಿಕೊಳ್ಳುತ್ತಿದ್ದೆ. | ನನಗೆ ಸೀರೆ ಉಟ್ಟುಕೊಳ್ಳಲು ಇಷ್ಟವಿತ್ತು. | ಅದು ಮನಸಾರೆ ಬಂದ ಬಯಕೆ. |
| ಉದಾಹರಣೆ 2 : ನಾನು ಉದ್ದದ ಬಟ್ಟೆ ಸಿಕ್ಕರೆ ಅದನ್ನೇ ಸೀರೆಯಂತೆ ಸುತ್ತಿಕೊಳ್ಳುತ್ತಿದ್ದೆ. | ನನ್ನ ಅಮ್ಮನಂತೆ ಕಾಣಲು ಡ್ರೆಸ್ ಮಾಡಿಕೊಳ್ಳಲು ನನಗೆ ಇಷ್ಟವಿತ್ತು. | ಹಿರಿಯರ ನಕಲು |

ಆ ಎಲ್ಲ ಚಟುವಟಿಕೆಗಳು ನಿಮ್ಮ ಇಂದಿನ ಲಿಂಗತ್ವಕ್ಕೆ ಅನುಗುಣವಾಗಿದೆಯೇ? ನೀವು ಮೇಲಿನ ಅಭ್ಯಾಸವನ್ನು ಅಥವಾ ಚಟುವಟಿಕೆಯನ್ನು ಮಾಡುವಾಗ, ನೀವು ಗಂಡಸರೇ ಇರಲಿ, ಹೆಂಗಸರೇ ಇರಲಿ, ನಿಮ್ಮ ಲಿಂಗತ್ವಕ್ಕೆ ಅನುಗುಣವಾದ ಅನೇಕ ಚಟುವಟಿಕೆಗಳನ್ನು ಮಾಡಿರುವುದು ಗಮನಕ್ಕೆ ಬಂದಿರಬಹುದು. ಬಹಳಷ್ಟು ಹೆಂಗಸರು, ಹುಡುಗಿಯರು ಮಾಡುವ ಚಟುವಟಿಕೆಗಳನ್ನು ಮಾಡಲು ಇಷ್ಟಪಟ್ಟಿರಬಹುದು, ಮತ್ತೆ ಕೆಲವರು ಹುಡುಗರು ಮಾಡುವ ಚಟುವಟಿಕೆಗಳನ್ನೂ ಇಷ್ಟಪಟ್ಟಿರಬಹುದು. ಗಂಡಸರಿಗೆ ಸಂಬಂಧಿಸಿದಂತೆಯೂ ಈ ಮಾತು ಸತ್ಯ. ಇವುಗಳ ಕಾರಣಗಳನ್ನು ವಿಶ್ಲೇಷಿಸಿದಾಗ, ಇದಕ್ಕೆ ಕೆಲವು ಆಂತರಿಕ ಕಾರಣಗಳಿರಬಹುದು, ಅಂದರೆ ನಿಮ್ಮ ಮನಸ್ಸಿಗೆ ಹಾಗೆ ಮಾಡಬೇಕು ಎಂದೆನ್ನಿಸಿರಬೇಕು, ಮತ್ತೆ ಕೆಲವಕ್ಕೆ ಬಾಹ್ಯ ಕಾರಣಗಳಿರಬಹುದು. ಈ ಕಾರಣಗಳನ್ನು ಕುರಿತು ಮುಂದೆ ವಿಚಾರಮಾಡೋಣ.

## ಲಿಂಗತ್ವ ಅನನ್ಯತೆ

ವ್ಯಕ್ತಿಯ ಲಿಂಗತ್ವವನ್ನು ಕುರಿತ ವೈಯಕ್ತಿಕವಾದ ಭಾವವೇ ಲಿಂಗತ್ವ ಅನನ್ಯತೆ. ಹುಟ್ಟಿದಾಗ ಗುರುತಿಸಿದ ಲಿಂಗತ್ವ ಮತ್ತು ಬೆಳೆದ ಮೇಲೆ ಗುರುತಿಸಿಕೊಂಡಿರುವ ಲಿಂಗತ್ವ ಒಂದೇ ಆಗಿರಬಹುದು, ಇಲ್ಲವೇ ಬೇರೆಯಾಗಿರಬಹುದು. ಎಲ್ಲ ಸಮಾಜವೂ ಒಂದು ಗುಂಪಿನ ಲಿಂಗತ್ವ ವರ್ಗಗಳನ್ನು ಅಥವಾ ವಿಧಗಳನ್ನು ಗುರುತಿಸಿಕೊಂಡಿರುತ್ತದೆ. ಇದು ಆ ಸಮಾಜದ ಇತರ ಸದಸ್ಯರಿಗೆ ಸಂಬಂಧಿಸಿದಂತೆ ವ್ಯಕ್ತಿ ತನ್ನ ಸಾಮಾಜಿಕ ಅನನ್ಯತೆಯನ್ನು ರೂಪಿಸಿಕೊಳ್ಳಲು ಆಧಾರವಾಗುತ್ತದೆ.

ಲಿಂಗತ್ವ ಅನನ್ಯತೆ ಎಂಬುದು ವ್ಯಕ್ತಿಯ ಖಾಸಗಿಯಾದ ಭಾವನೆ. ಜೊತೆಗೆ ತನ್ನ ಲಿಂಗತ್ವದ ಕುರಿತಾದ ವ್ಯಕ್ತಿನಿಷ್ಠವಾದ ಅನುಭವ. ಒಬ್ಬ ವ್ಯಕ್ತಿಗೆ ತಾನು ಗಂಡಸು ಅಥವಾ ಹೆಂಗಸು ಎಂಬುದಾಗಿ ಆಗುವ ಅನುಭವ. ಇದು ಮೂಲಭೂತವಾಗಿ ಪುರುಷ ಅಥವಾ ಸ್ತ್ರೀ ಎಂಬುದಾಗಿ ಗುರುತಿಸಲಾಗಿರುವ ವರ್ಗದ ಮೇಲೆ ಅವಲಂಬಿಸಿರುವಂತಹುದು. ಈ ಪರಿಕಲ್ಪನೆಯು ಲಿಂಗತ್ವ ಪಾತ್ರಕ್ಕೆ ನಿಕಟ ಸಂಬಂಧವನ್ನುಳ್ಳದು. ಲಿಂಗತ್ವ ಅನನ್ಯತೆಯನ್ನು ಬಿಂಬಿಸುವ ವ್ಯಕ್ತಿತ್ವದ ಬಾಹ್ಯ ಅಭಿವ್ಯಕ್ತಿಯೇ 'ಲಿಂಗತ್ವ ಪಾತ್ರ'. ಲಿಂಗತ್ವ ಅನನ್ಯತೆಯು ಸಾಮಾನ್ಯವಾಗಿ ಎಲ್ಲ ಸನ್ನಿವೇಶಗಳಲ್ಲಿಯೂ ವ್ಯಕ್ತಿ ಸ್ವಂತವಾಗಿ ಗುರುತಿಸಿಕೊಂಡಿರುವುದು. ಅಭಿಜಾತ ಮತ್ತು ಬಾಹ್ಯ ಅಥವಾ ಪರಿಸರದ ಅಂಶಗಳ ಒಟ್ಟು ಪರಿಣಾಮವಾಗಿ ಈ ರೀತಿಯ ಗುರುತಿಸಿಕೊಳ್ಳುವಿಕೆ ಸಾಧ್ಯವಾಗುತ್ತದೆ. ಲಿಂಗತ್ವ ಪಾತ್ರವು ವ್ಯಕ್ತಿಯ ವರ್ತನೆಗಳ ಮೂಲಕ ಸಮಾಜದಲ್ಲಿ ಅಭಿವ್ಯಕ್ತಿಗೊಳ್ಳುವಂತಹುದು. ಒಬ್ಬ ವ್ಯಕ್ತಿ ತನ್ನನ್ನು ತಾನು ಗಂಡಸು ಎಂದು ಪರಿಗಣಿಸದ್ದರೆ, ಮತ್ತು ಹಾಗೆ ಪರಿಗಣಿಸುವುದು ಅವನಿಗೆ ತೃಪ್ತಿಕರವಾಗಿದ್ದರೆ, ಆ ವ್ಯಕ್ತಿಯ ವರ್ತನೆಗಳು, ಉಡುಪು ಮತ್ತು ನಡೆವಳಿಕೆಗಳು ಪುರುಷರಿಗೆ ಅನುಗುಣವಾಗಿದ್ದರೆ ಆ ವ್ಯಕ್ತಿಯ ಲಿಂಗತ್ವ ಅನನ್ಯತೆ 'ಪುರುಷ' ಅಥವಾ 'ಗಂಡಸು' ಎಂದಾಗುತ್ತದೆ.

### ಲಿಂಗತ್ವ ಅನನ್ಯತೆ ರೂಪುಗೊಳ್ಳುವಿಕೆ

ಲಿಂಗತ್ವ ಅನನ್ಯತೆ ರೂಪುಗೊಳ್ಳುವ ಸಮಯದಲ್ಲಿ ಮಕ್ಕಳಿಗೆ ಮಾತು ಬಾರದಿರುವುದರಿಂದ ನಿರ್ದಿಷ್ಟವಾಗಿ ಈ ಪ್ರಕ್ರಿಯೆ ಯಾವಾಗ ಪ್ರಾರಂಭವಾಗುತ್ತದೆ ಎಂದು ತಿಳಿಯುವುದು ಕಷ್ಟ. ಈ ಕುರಿತು ಸಂಶೋಧಕರೇ ಸೂಕ್ತವಾದ ಊಹೆಗಳನ್ನು ಮಾಡಬೇಕಾಗುತ್ತದೆ. ಈ ಕುರಿತಂತೆ ಅನೇಕ ಸಿದ್ಧಾಂತಗಳನ್ನು ತಜ್ಞರು ಮುಂದಿಟ್ಟಿದ್ದಾರೆ. ಜಾನ್ ಮನಿ ಎಂಬಾತ ಮಕ್ಕಳಿಗೆ 18 ತಿಂಗಳಿಂದ 2 ವರ್ಷ ವಯಸ್ಸಿನೊಳಗೆ  ಲಿಂಗತ್ವ ಅನನ್ಯತೆಯ ಅರಿವು ಇರಬಹುದು ಎಂದು ಹೇಳುತ್ತಾನೆ. ಲಾರೆನ್ಸ್ ಕೋಲ್ ಬರ್ಗ್‌ನ ಪ್ರಕಾರ ಲಿಂಗತ್ವ ಅನನ್ಯತೆ ಮೂರು ವರ್ಷಗಳವರೆಗೆ ಮೂಡುವುದೇ ಇಲ್ಲ. ನಿರ್ದಿಷ್ಟವಾದ ಲಿಂಗತ್ವ ಅನನ್ಯತೆ ಮೂರು ವರ್ಷಗಳ ವೇಳೆಗೆ ಮೂಡಿರುತ್ತದೆ ಎಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಈ ಹೊತ್ತಿಗೆ ಮಕ್ಕಳು ಅವರ ಲಿಂಗತ್ವವನ್ನು ಕುರಿತಂತೆ ಸ್ಪಷ್ಟವಾದ ಮಾತುಗಳನ್ನಾಡುವುದು ಮಾತ್ರವಲ್ಲದೆ ಅದಕ್ಕನುಗುಣವಾದ ಚಟುವಟಿಕೆಗಳನ್ನು ಮತ್ತು ಆಟಿಕೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಕಂಡುಬರುವಂತೆ ಹೆಣ್ಣುಮಕ್ಕಳು ಗೊಂಬೆಗಳನ್ನೂ ಗಂಡುಮಕ್ಕಳು ಆಟಿಕೆಯ ಕುದುರೆ ಕಾರುಗಳನ್ನು ಆಯ್ದುಕೊಳ್ಳುವುದುಂಟು. ಆದರೂ ಲಿಂಗತ್ವವನ್ನು ಕುರಿತ ಹೆಚ್ಚಿನ ಅರಿವು ಅವರಿಗಿರುವುದಿಲ್ಲ. ಮೂರು ವರ್ಷದ ನಂತರ ಈಗಾಗಲೇ ಗುರುತಿಸಿಕೊಂಡಿರುವ ಲಿಂಗತ್ವ ಅನನ್ಯತೆಯನ್ನು ಬದಲಾಯಿಸುವುದೂ ಕಷ್ಟ. ಒಂದು ವೇಳೆ ಹಾಗೆ ಮಾಡಿದರೆ, ಅದು 'ಲಿಂಗತ್ವ ಯಾತನೆ' ಅಥವಾ 'gender dysphoria'ಗೆ ಎಡೆಕೊಡಬಹುದು. ಹುಟ್ಟಿದಾಗ ಗುರುತಿಸಿದ ಲಿಂಗತ್ವ ಅನನ್ಯತೆ ಮತ್ತು ಪ್ರಸ್ತುತ ಲಿಂಗತ್ವ ಅನನ್ಯತೆಯ ನಡುವಣ ಅಪಹೊಂದಾಣಿಕೆಯೇ ಇದು. ಲಿಂಗತ್ವ ಅನನ್ಯತೆ 4ರಿಂದ 6 ವರ್ಷಗಳವರೆಗೆ ಹೆಚ್ಚು ನಾಜೂಕಾಗುತ್ತಾ ವಯಸ್ಕ ಹಂತಕ್ಕೆ ಮುಂದುವರಿಯುತ್ತದೆ.

ಮಾರ್ಟಿನ್ ಮತ್ತು ರೂಬ್ಲ್ ಎಂಬ ತಜ್ಞರು ಲಿಂಗತ್ವ ಅನನ್ಯತೆಯ ಬೆಳವಣಿಗೆಯ ಪ್ರಕ್ರಿಯೆಯನ್ನು ಮೂರು ಹಂತಗಳಲ್ಲಿ ಗಮನಿಸುತ್ತಾರೆ.

- ಎಳವೆಯ ಮಕ್ಕಳು ಅಥವಾ ಶಾಲಾ ಪೂರ್ವ ಹಂತದ ಮಕ್ಕಳು ಸಾಮಾಜೀಕರಣಗೊಂಡ ರೀತಿಯಲ್ಲಿ ಲಿಂಗತ್ವದ ಲಕ್ಷಣಗಳನ್ನು ಕಲಿಯುತ್ತಾರೆ. ಉದಾಹರಣೆಗೆ, ಒಂದು ಸಾಂಪ್ರದಾಯಿಕ ಸಮಾಜದಲ್ಲಿ ಮನೆಯೊಳಗೆ ಕೆಲಸ ಮಾಡುವವರು ಹೆಂಗಸರು, ಹೊರಗೆ ಹೋಗುವವರು ಗಂಡಸರು ಇತ್ಯಾದಿ.
- 5ರಿಂದ 7ನೇ ವಯಸ್ಸಿನೊಳಗೆ ಅನನ್ಯತೆ ಕ್ರೋಢೀಕರಣಗೊಂಡು ಗಟ್ಟಿಯಾಗುತ್ತದೆ.
- ಹೀಗೆ ಕ್ರೋಢೀಕರಣ ಗರಿಷ್ಟಮಟ್ಟಕ್ಕೆ ತಲುಪಿದ ಮೇಲೆ ಅದು ಪುನಃ ಸಡಿಲಗೊಂಡು ಸಾಮಾಜಿಕವಾಗಿ ನಿರ್ಧರಿಸಲಾದ ಲಿಂಗತ್ವ ಪಾತ್ರಗಳು ಸಡಿಲಗೊಳ್ಳುತ್ತಾ ಹೋಗುತ್ತವೆ.

ಬರ್ಬಾರಾ ನ್ಯೂಮನ್ ಎಂಬಾತ ಲಿಂಗತ್ವ ಅನನ್ಯತೆಯ ಬೆಳವಣಿಗೆಯ ಪ್ರಕ್ರಿಯೆಯನ್ನು ನಾಲ್ಕು ಹಂತಗಳಲ್ಲಿ ಗಮನಿಸಿದ್ದಾನೆ

1. ಲಿಂಗತ್ವದ ಪರಿಕಲ್ಪನೆಯನ್ನು ಅರಿಯುವಿಕೆ
2. ಲಿಂಗತ್ವ ಪಾತ್ರ ಮಾನಕಗಳು ಮತ್ತು ಪಡಿಯಚ್ಚುಗಳನ್ನು ಕಲಿಯುವಿಕೆ
3. ಹೆತ್ತವರೊಂದಿಗೆ ಗುರುತಿಸಿಕೊಳ್ಳುವಿಕೆ ಮತ್ತು
4. ಲಿಂಗತ್ವ ಆದ್ಯತೆಯನ್ನು ರೂಪಿಸಿಕೊಳ್ಳುವಿಕೆ

**ಮಕ್ಕಳಿಂದ ಲಿಂಗತ್ವ ಅನನ್ಯತೆಯ ಅಭಿವ್ಯಕ್ತಿ :**

ಮಕ್ಕಳು ತಮ್ಮ ಲಿಂಗತ್ವ ಅನನ್ಯತೆಯನ್ನು ಕೆಳಗಿನ ರೀತಿಯಲ್ಲಿ ಅಭಿವ್ಯಕ್ತಪಡಿಸುತ್ತಾರೆ:

- ಆಟಿಕೆ ಮತ್ತು ಆಟಗಳ ಆಯ್ಕೆ;
- ಉಡುಪು ಮತ್ತು ಕೇಶಾಲಂಕಾರ;
- ಆಯ್ಕೆಯ ಹೆಸರು ಅಥವಾ ಅಡ್ಡಹೆಸರು;
- ವಿವಿಧ ಮಟ್ಟದ ಕೋಪ, ಅಧಿಕಾರ, ಅವಲಂಬನೆ ಮತ್ತು ಸೌಮ್ಯತೆ ಇವುಗಳನ್ನು ಬಿಂಬಿಸುವ ಸಾಮಾಜಿಕ ವರ್ತನೆಗಳು;
- ಗಂಡಸರದು ಅಥವಾ ಹೆಂಗಸರದು ಎಂದು ಗುರುತಿಸಲಾಗಿರುವ ವರ್ತನೆಯ ರೀತಿ, ಶೈಲಿ, ದೈಹಿಕ ಭಂಗಿಗಳು ಮತ್ತು ಅಶಾಬ್ದಿಕ ಕ್ರಿಯೆಗಳು;
- ಗೆಳೆತನದ ಗುಂಪಿನವರ ಲಿಂಗತ್ವ ಹಾಗೂ ಅವರಿಗೆ ಅತ್ಯಂತ ಹತ್ತಿರವಾದವರನ್ನೂ ಒಳಗೊಂಡಂತೆ ಸಾಮಾಜಿಕ ಸಂಬಂಧಗಳು.

## ಲಿಂಗತ್ವ ಅನನ್ಯತೆಯ ರೂಪುಗೊಳ್ಳುವಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು:

ಈ ಅಂಶಗಳನ್ನು ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಗಮನಿಸಬಹುದು:

**ಜೀವಶಾಸ್ತ್ರೀಯ ಅಂಶಗಳು:**

ಮಕ್ಕಳ ದೈಹಿಕ ಬೆಳವಣಿಗೆಯಲ್ಲಿ ಜೀವಶಾಸ್ತ್ರೀಯ ಅಂಶಗಳು ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಉದಾಹರಣೆಗೆ, ಹುಡುಗ ಮತ್ತು ಹುಡುಗಿಯರು ಭಿನ್ನ ಲೈಂಗಿಕ ಅಂಗಗಳೊಂದಿಗೆ ಹುಟ್ಟುವರಲ್ಲದೆ ತಾರುಣ್ಯದಲ್ಲಿ ನಂತರದ ಲೈಂಗಿಕ ಲಕ್ಷಣಗಳು ಮೂಡುವಾಗ ಲಿಂಗಸಂಬಂಧಿಯಾಗಿ ಮತ್ತೂ ವ್ಯತ್ಯಾಸಗಳನ್ನು ತೋರುತ್ತಾರೆ. ಸ್ವಾಭಾವಿಕವಾಗಿಯೇ ಉತ್ಪನ್ನವಾಗುವ ರಾಸಾಯನಿಕ ಸಂದೇಶವಾಹಕ ಸಂಯುಕ್ತಗಳಾದ ಹಾರ್ಮೋನುಗಳು ಈ ದೈಹಿಕ ವ್ಯತ್ಯಾಸಗಳನ್ನು ಸಂಯೋಜಿಸುತ್ತವೆ.

ಗರ್ಭಾಶಯದಲ್ಲಿ ಲೈಂಗಿಕ ಅಂಗದ ವಿಭಿನ್ನತೆಯನ್ನು ಸಕ್ರಿಯಗೊಳಿಸುವ, ಮುಂದೆ ತಾರುಣ್ಯವನ್ನು ಪ್ರಚೋದಿಸುವ ಈ ಲೈಂಗಿಕ ಹಾರ್ಮೋನುಗಳು ಲಿಂಗತ್ವ ಅನನ್ಯತೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂದು ಕೆಲವು ಸಂಶೋಧನೆಗಳು ಸೂಚಿಸುತ್ತವೆ. ಹುಡುಗರು ಹುಡುಗಿಯರಿಗಿಂತ ಹೆಚ್ಚು 'ಆಂಡ್ರೋಜೆನ್' (ಪುರುಷ ಲೈಂಗಿಕ ಹಾರ್ಮೋನುಗಳು)ಗಳನ್ನು ಹೊಂದಿರುತ್ತಾರೆ. ಆದರೂ ಕೆಲವು ಹುಡುಗ ಹುಡುಗಿಯರು 'ಕಂಜೀನಿಯಲ್ ಆಡ್ರೆನಲ್ ಹೈಪರ್‌ಪ್ಲಾಸಿಯ' ಎಂಬ ಸ್ಥಿತಿಯಲ್ಲಿ ಜನ್ಮ ತಳೆದಿರುತ್ತಾರೆ. ಇದರಿಂದಾಗಿ ಅವರು ಅವರ ಜೊತೆಯವರಿಗಿಂತ ಹೆಚ್ಚು ಆಂಡ್ರೋಜೆನ್‌ಗಳನ್ನು ಹೊಂದಿರುತ್ತಾರೆ. ಇದು ಅವರ ವರ್ತನೆಯ ಮೇಲೆ ಏನಾದರೂ ಪರಿಣಾಮ ಬೀರುವುದೇ ಎಂಬುದನ್ನು ವಿಜ್ಞಾನಿಗಳು ಅಧ್ಯಯನ ಮಾಡಿದ್ದಾರೆ. ಹೆಚ್ಚಿನ ಆಂಡ್ರೋಜೆನ್‌ಗಳನ್ನು ಹೊಂದಿರುವ ಹುಡುಗರ ವರ್ತನೆಯಲ್ಲಿ ಅವರ ಜೊತೆಗಾರರಿಗಿಂತ ಹೆಚ್ಚಿನ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲ. ಆದರೆ ಹುಡುಗಿಯರು ಹೆಚ್ಚಾಗಿ ಪುರುಷ ಲಿಂಗ ಪಡಿಯಚ್ಚುಗಳನ್ನು ವ್ಯಕ್ತಪಡಿಸುತ್ತಾರೆ. ಇದಲ್ಲದೇ ಈ ರೀತಿಯ ಹುಡುಗಿಯರು ಹುಡುಗರ ಜನನಾಂಗದಂತೆ ಕಾಣುವ ಬಾಹ್ಯ ಜನನಾಂಗದೊಂದಿಗೆ ಜನಿಸಿರುತ್ತಾರೆ. ಈ ಹುಡುಗಿಯರು ಶಿಶ್ನಗಳೊಂದಿಗೆ ಜನಿಸಿರುವರಾದರೂ ಅವರು ಹೆಂಗಸರೇ.

ಹುಡುಗಿಯರ ನಿಜವಾದ ಲಿಂಗವನ್ನು ನಿರ್ಧರಿಸುವುದು ಅಂಗರಚನೆಗಿಂತ ಆನುವಂಶಿಕವಾಗಿಯೇ. ಹೆಂಗಸರು ಎರಡು "X" ವರ್ಣತಂತುಗಳನ್ನೂ ಗಂಡಸರು ಒಂದು "X" ವರ್ಣತಂತುವನ್ನೂ ಒಂದು "Y" ವರ್ಣತಂತುವನ್ನು ಹೊಂದಿರುತ್ತಾರೆ. 'ಕಂಜೀನಿಯಲ್ ಆಡ್ರೆನಲ್ ಹೈಪರ್‌ಪ್ಲಾಸಿಯ'ದ ಸನ್ನಿವೇಶದ ಹುಡುಗಿಯರು ಬಾಹ್ಯ ಜನನಾಂಗವನ್ನು ಶಸ್ತ್ರಚಿಕಿತ್ಸೆಯ ಮೂಲಕ ಹುಡುಗಿಯರಂತೆ ಸರಿಪಡಿಸಿಕೊಂಡ ನಂತರವೂ ಪುರುಷರ ವರ್ತನೆಗಳನ್ನೇ ತೋರುತ್ತಾರೆ.

**ಸಾಮಾಜಿಕ ಮತ್ತು ಪರಿಸರೀಯ ಅಂಶಗಳು**

ಮಕ್ಕಳನ್ನು ಬೆಳೆಸುವ ರೀತಿ ಮತ್ತು ಸಾಮಾಜಿಕ ಪರಿಸರವೂ ಲಿಂಗ ಅನನ್ಯತೆಯ ರೂಪುಗೊಳ್ಳುವಿಕೆಯ ಮೇಲೆ ಪ್ರಭಾವಬೀರುತ್ತವೆ ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ. ಮಕ್ಕಳ ಆಸಕ್ತಿಗಳು, ಆದ್ಯತೆಗಳು, ವರ್ತನೆಗಳು ಮತ್ತು ಒಟ್ಟು ಸ್ವ-ಪರಿಕಲ್ಪನೆ ಇವು ಲೈಂಗಿಕ ಪಡಿಯಚ್ಚುಗಳಿಗೆ ಸಂಬಂಧಿಸಿದಂತೆ ಹೆತ್ತವರ ಅಥವಾ ಅಧಿಕಾರದಲ್ಲಿರುವವರ ಬೋಧನೆ ಮತ್ತು ಪರಿಕಲ್ಪನೆಗಳಿಂದ ಪ್ರಭಾವಿಸಿದುದಾಗಿರುತ್ತದೆ. ಮಗು ಹುಡುಗ ಅಥವಾ ಹುಡುಗಿಯಾಗಿರುವುದರಿಂದ 'ಇದನ್ನು ಮಾಡಬಹುದು' ಮತ್ತು 'ಇದನ್ನು ಮಾಡಬಾರದು' ಎಂದು ಎಳವೆಯಲ್ಲಿ ಹೇಳಿಕೊಟ್ಟ ಅಂಶಗಳು ಮುಂದಿನ ವರ್ತನೆಗಳ ಮೇಲೆ ಪ್ರಭಾವ ಬೀರುತ್ತವೆ. ಉದಾಹರಣೆಗೆ, ಹುಡುಗರು ಹುಡುಗಿಯರಿಗಿಂತ ಗಣಿತದಲ್ಲಿ ಚುರುಕಾಗಿರುತ್ತಾರೆ ಎಂಬ ಅಂಶವನ್ನು ಹುಡುಗಿಯರ ಮನಸ್ಸಿಗೆ ತಂದರೆ, ಆ ಹುಡುಗಿಯರು ಗಣಿತದಲ್ಲಿ ಆಸಕ್ತಿ ಇಲ್ಲ ಎಂದೋ ಗಣಿತದಲ್ಲಿ ತನಗೆ ಕಡಿಮೆ ಅಂಕಗಳು ಬರುವುದು ಸಹಜವೇ ಎಂದೋ ಅಂದುಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ.

ಮಕ್ಕಳು ವೀಕ್ಷಣೆ ಮತ್ತು ಅನುಕರಣೆಯ ಮೂಲಕ ಹೆಚ್ಚು ಕಲಿಯುತ್ತಾರೆ. ಲಿಂಗ ಪಡಿಯಚ್ಚುಗಳನ್ನು ಹೆಚ್ಚು ಅನುಕರಿಸುವಂತಹ ಪೋಷಕರ ಪೋಷಣೆಯಲ್ಲಿ ಬೆಳೆದ ಮಗು ಲಿಂಗ ಪಡಿಯಚ್ಚುಗಳನ್ನೇ ಪ್ರತಿಬಿಂಬಿಸುವ ವರ್ತನೆಗಳನ್ನು ತೋರುತ್ತದೆ. ಹಾಗಲ್ಲದೆ ಲಿಂಗ ಪಡಿಯಚ್ಚಿನಿಂದ ಸ್ವತಂತ್ರವಾದ ವರ್ತನೆಗಳನ್ನು ಬಿಂಬಿಸಿದ ಪೋಷಕರೊಡನೆ ಬೆಳೆದ ಮಗು ಅಂತಹುದೇ ವರ್ತನೆಗಳನ್ನು ಅನುಕರಿಸುತ್ತದೆ. ಕೆಲವೊಮ್ಮೆ ಮಕ್ಕಳು ತಮ್ಮದೇ ನಿಗಮನಗಳನ್ನೂ ಮಾಡಿಕೊಂಡುಬಿಡುತ್ತಾರೆ. ಉದಾಹರಣೆಗೆ, ಪರಿಸರದಲ್ಲಿ ಹೆಂಗಸರು ಹೆಚ್ಚು ಮಾತನಾಡುತ್ತಿದ್ದು ಗಂಡಸರು ಕಡಿಮೆ ಮಾತನಾಡುತ್ತಿದ್ದರೆ, ಗಂಡಸರು ಜೋರಾಗಿದ್ದು ಹೆಂಗಸರು ಅತ್ಯಂತ ಮೃದುವಾಗಿದ್ದರೆ ಅದನ್ನೇ ಹೆಂಗಸರು-ಗಂಡಸರ ವರ್ತನೆಗಳು ಎಂಬ ನಿಗಮನಗಳು ಸಾಧ್ಯವಿದೆ. ಹಾಗಾಗಿ ಪಡಿಯಚ್ಚುಗಳನ್ನು ಮೀರಿದ ವರ್ತನೆಗಳನ್ನು ಮೈಗೂಡಿಸಿಕೊಳ್ಳಲು ಮಕ್ಕಳಿಗೆ ಮಾದರಿಯಾಗಬೇಕು.

**ಲಿಂಗತ್ವ ಅನನ್ಯತೆಯ ವಿಧಗಳು**

ವ್ಯಕ್ತಿಗೆ ತನ್ನ ಕುರಿತು ಏನನ್ನಿಸುತ್ತದೆ ಎಂಬುದು ಮತ್ತು ಲಿಂಗತ್ವಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳು ತಮ್ಮನ್ನು ತಾವು ಯಾರೆಂದು ಗುರುತಿಸಿಕೊಳ್ಳುತ್ತಾರೆ ಎಂಬುದೇ ಲಿಂಗತ್ವ ಅನನ್ಯತೆ. ಸಾಮಾನ್ಯವಾಗಿ ಸಮಾಜಗಳಲ್ಲಿ ಎರಡು ರೀತಿಯ ಲಿಂಗತ್ವಗಳನ್ನು–ಲಿಂಗದ್ವಯ– ಗುರುತಿಸುವುದಾದರೂ ಇದರಲ್ಲಿ ಹೆಚ್ಚಿನ ಭೇದಗಳಿವೆ. ಇದು ಸಾಮಾನ್ಯವಾಗಿ ವ್ಯಕ್ತಿಯ ಅಂಗರಚನೆಯ (ಹುಟ್ಟುವಾಗಿನ ಜನನಾಂಗ) ಆಧಾರದ ಮೇಲೆ ಗುರುತಿಸುವಂತಹುದು.ಇದನ್ನೇ ಲಿಂಗತ್ವ ನಿಷ್ಕರ್ಷೆ ಎನ್ನಲಾಗುತ್ತದೆ. ವ್ಯಕ್ತಿಯ ಜನನಾಂಗ ಮತ್ತು ಲಿಂಗತ್ವದ ನಡುವೆ ಸಂಬಂಧವಿದೆ ಎಂಬುದೇ ಇದರ ಊಹೆ. ಏನೇ ಆದರೂ, ಲಿಂಗತ್ವ ಎಂಬುದು ವ್ಯಕ್ತಿಗಳ ಅಂಗರಚನೆಯ ಮೇಲಲ್ಲದೆ ಆ ವ್ಯಕ್ತಿಗಳು ತಾವೇನು– ಗಂಡಸು, ಹೆಂಗಸು– ಎಂದು ಭಾವಿಸುವರೋ ಅದನ್ನು ಅವಲಂಬಿಸಿರುವಂತಹುದು. ಲಿಂಗತ್ವ ಅನನ್ಯತೆಯಲ್ಲಿ ಹಲವು ವಿಧಗಳಿವೆ.

**ಲಿಂಗ ಯುಗಳ ಅಥವಾ ಲಿಂಗ ಬೈನರಿ (Binary Gendered) :** ಇದು ಸಮಾಜ ಅಥವಾ ಸಾಂಸ್ಕೃತಿಕ ವ್ಯವಸ್ಥೆಯು ತನ್ನ ಸದಸ್ಯರನ್ನು ಎರಡು ಗುಂಪಿನ ಲಿಂಗ ಪಾತ್ರಗಳು ಅಥವಾ ಲಿಂಗಗಳಾಗಿ ಗುರುತಿಸುವ ರೀತಿ. ಜನನಾಂಗದ ಪ್ರಕಾರ ಲಿಂಗವ್ಯವಸ್ಥೆಯನ್ನು ಗುರುತಿಸುವ ವ್ಯವಸ್ಥೆ ಇದು. 'ಟ್ರಾನ್ಸ್ ಜೆಂಡರ್' ವ್ಯಕ್ತಿಗಳೂ ಇದರಲ್ಲಿ ಸೇರುತ್ತಾರೆ.

**ಸಿಸ್ ಜಂಡರ್ (Cis-gendered) :** ವ್ಯಕ್ತಿಗಳು ತಾವು ಹುಟ್ಟಿದಾಗಿನ ಲಿಂಗದ ಜೊತೆಗೇ ಸಮೀಕರಿಸಿಕೊಳ್ಳುವುದು.

**ಜಂಡರ್ ಫ್ಲೂಯಿಡ್ (Gender Fluid ) :** ಲಿಂಗವನ್ನು ಕುರಿತ ವ್ಯಕ್ತಿಯ ವೈಯಕ್ತಿಕ ಅನುಭವ, ಹೊರಕ್ಕೆ ಕಾಣುವಂತಹುದಿರಬಹುದು; ಇಲ್ಲದಿರಬಹುದು. ವ್ಯಕ್ತಿ ಒಮ್ಮೆ ಸಮಾಜ ಲಿಂಗ ಬೈನರಿ ವ್ಯವಸ್ಥೆಯಲ್ಲಿ ಗುರುತಿಸುವ ರೀತಿಯ ಲಿಂಗದ ಅನುಭವವನ್ನೂ ಮತ್ತೊಮ್ಮೆ ಇತರ ಲಿಂಗದ ರೀತಿಯ ಅನುಭವವನ್ನೂ ಪಡೆಯುವಂತಹುದು.

**ದ್ವೈವಿಧ್ಯ ಹೀನ (Gender queer) :** ವ್ಯಕ್ತಿ ಸಾಂಪ್ರದಾಯಿಕವಾಗಿ ಗುರುತಿಸಲಾದ ಲಿಂಗವನ್ನು ಒಪ್ಪಿಕೊಳ್ಳದೆ, ಅವೆರಡರಲ್ಲಿ ಯಾವ ಗುಂಪಿನೊಂದಿಗೂ ಗುರುತಿಸಿಕೊಳ್ಳದೆ ಅಥವಾ ಎರಡೂ ಗುಂಪಿನೊಂದಿಗೆ ಗುರುತಿಸಿಕೊಳ್ಳುವ ಅನನ್ಯತೆಯ ರೀತಿ ಇದು.

**ಅಂತರ್ ಲಿಂಗಿಗಳು(Intersex):** ಈ ವ್ಯಕ್ತಿಗಳ ಲೈಂಗಿಕ ಲಕ್ಷಣಗಳಲ್ಲಿ ವ್ಯತ್ಯಾಸಗಳಿದ್ದು ಅವು ವಿಶಿಷ್ಟವಾಗಿ ಯಾವುದೇ ಲಿಂಗದ –ಗಂಡಸರ ಅಥವಾ ಹೆಂಗಸರ– ದೇಹಕ್ಕೆ ಹೊಂದಿಕೆಯಾಗದಂತಹುದು.

**ಬೈನರಿ ಜಂಡರ್ ಅಲ್ಲದವರು (Non-Binary Gendered):** ಇವರು ತಮ್ಮ ಅನನ್ಯತೆಯನ್ನು ಗಂಡಸು ಎಂದಾಗಲೀ ಹೆಂಗಸು ಎಂದಾಗಲೀ ಗುರುತಿಸಿಕೊಳ್ಳದವರು. ಉದಾಹರಣೆಗೆ ಜಂಡರ್ ಕ್ವಿಯರ್ ಆಗಿ ಗುರುತಿಸಿಕೊಳ್ಳುವವರು.

**ಲಿಂಗತ್ವ ಅನನ್ವಯಿ (Transgender):** ಜನನ ಸಮಯದಲ್ಲಿ ಗುರುತಿಸಲಾದ ಲಿಂಗಕ್ಕಿಂತ ಭಿನ್ನವಾಗಿ ತಮ್ಮ ಲಿಂಗ ಅನನ್ಯತೆಯನ್ನು ಗುರುತಿಸಿಕೊಳ್ಳುವವರು.

**ಇತರರು (`X' / Other):** ಸಾಂಪ್ರದಾಯಿಕವಾಗಿ ಲಿಂಗವನ್ನು ಗುರುತಿಸಿಕೊಳ್ಳುವುದಕ್ಕಿಂತ ಭಿನ್ನವಾಗಿ ಲಿಂಗ ಅನನ್ಯತೆಯನ್ನು ಗುರುತಿಸಿಕೊಳ್ಳಬಯಸುವವರಿಗೆ ಒಂದು ಆಯ್ಕೆಯಾಗಿ ಇದನ್ನು ಬಳಸಲಾಗುತ್ತದೆ. ಕೆಲವೊಮ್ಮೆ ಇದು ಅಂತರ್ ಲಿಂಗಿಗಳಿಗೆ ಅಥವಾ ಮತ್ತೆ ಕೆಲವು ಸನ್ನಿವೇಶಗಳಲ್ಲಿ ಟ್ರಾನ್ಸ್ ಜಂಡರ್ ವ್ಯಕ್ತಿಗಳಿಗೆ ಅನ್ವಯವಾಗುತ್ತದೆ.

(ಇಂತಹ ಪರಿಕಲ್ಪನೆಗಳನ್ನು ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಪರಿಗಣಿಸದಿರುವುದರಿಂದ ಅದಕ್ಕೆ ಅನುಗುಣವಾದ ಪದಗಳು ಹುಟ್ಟಿಕೊಂಡಿಲ್ಲ. ಹಾಗಾಗಿ ಇಂಗ್ಲಿಷ್ ಪದಗಳನ್ನೇ ಬಳಸಿಕೊಳ್ಳಲಾಗಿದೆ. ಅಂದಮಾತ್ರಕ್ಕೆ ಈ ಸನ್ನಿವೇಶಗಳೇ ಇಲ್ಲ ಎಂದಲ್ಲ. ಅದನ್ನು ಸಮಾಜ ಸಾರ್ವತ್ರಿಕವಾಗಿ ಸಮಾನ ಗೌರವದಿಂದ ಒಪ್ಪಿಕೊಂಡಿಲ್ಲ).

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1. ಲಿಂಗತ್ವ ಅನನ್ಯತೆ ಎಂದರೇನು?
2. ಲಿಂಗತ್ವ ಅನನ್ಯತೆ ರೂಪುಗೊಳ್ಳುವಿಕೆಯ ಮೇಲೆ ಪರಿಣಾಮಬೀರುವ ಅಂಶಗಳಾವುವು?
3. ಲಿಂಗತ್ವ ಅನನ್ಯತೆಯ ವಿಧಗಳನ್ನು ವಿವರಿಸಿ.

## 1.3.3.1. ಭಾರತೀಯ ಕುಟುಂಬಗಳಲ್ಲಿ ಸಾಮಾಜೀಕರಣದ ಅಭ್ಯಾಸಗಳು

**ಅಭ್ಯಾಸ : II**

ನಿಮ್ಮ ಸುತ್ತಮುತ್ತಲಿನ ಐದು ಕುಟುಂಬಗಳನ್ನು ವೀಕ್ಷಿಸಿ, ಕೆಳಗಿನ ವಿಷಯಗಳನ್ನು ಭರ್ತಿಮಾಡಿ :

| ಕುಟುಂಬದ ಸಂಖ್ಯೆ | ಕುಟುಂಬದ ಸದಸ್ಯರ ಸಂಖ್ಯೆ | ಕುಟುಂಬದ ಯಜಮಾನ | ಕುಟುಂಬದ ಯಜಮಾನನೊಂದಿಗೆ ಸದಸ್ಯರ ಸಂಬಂಧ |
|---|---|---|---|
| | | | |
| | | | |
| | | | |
| | | | |
| | | | |

ಸದಸ್ಯರ ಸಂಖ್ಯೆ ಮತ್ತು ಯಜಮಾನನೊಂದಿಗಿನ ಸಂಬಂಧಗಳನ್ನು ಕುರಿತು ವಿವೇಚಿಸಿ.

| |
|---|
| |

ಈ ವಿಶ್ಲೇಷಣೆಯಿಂದ, ಸಮಾಜದಲ್ಲಿ ಕುಟುಂಬಗಳ ವಿನ್ಯಾಸ ಭಿನ್ನ ರೀತಿಯಲ್ಲಿರುತ್ತದೆ ಎಂಬುದು ನಿಮ್ಮ ಅರಿವಿಗೆ ಬಂದಿರಬಹುದು. ಈ ಹಿನ್ನೆಲೆಯಲ್ಲಿ ಕುಟುಂಬಗಳನ್ನು ವರ್ಗೀಕರಿಸಬಹುದು. ಸಾಮಾಜಿಕ ಕಾಳಜಿಯ ಆಧಾರದ ಮೇಲೆ ಭಾರತದಲ್ಲಿ ಕುಟುಂಬಗಳನ್ನು ಹೇಗೆ ವರ್ಗೀಕರಿಸಲಾಗಿದೆ ಎಂಬುದನ್ನು ನೋಡೋಣ.

**ಭಾರತದಲ್ಲಿ ಕುಟುಂಬಗಳ ವಿಧಗಳು**

ಸಮಾಜದಲ್ಲಿ ಕುಟುಂಬವು ಪ್ರಮುಖವಾದ ಪ್ರಾಥಮಿಕ ಸಮೂಹ. ಇದು ಸಮಾಜದ ಅತಿ ಸರಳವಾದ ಮತ್ತು ಮೂಲಭೂತವಾದ ರೂಪ. ಒಂದು ಸಂಸ್ಥೆಯಾಗಿ ಕುಟುಂಬದ ಅಸ್ತಿತ್ವ ಸಾರ್ವತ್ರಿಕವಾದುದು. ಇದು ಇತರ ಎಲ್ಲ ಸಾಮಾಜಿಕ ಸಂಸ್ಥೆಗಳಿಗಿಂತ ಅತಿ ಹೆಚ್ಚು ಶಾಶ್ವತವೂ ಮತ್ತು ವ್ಯಾಪಕವೂ ಆದುದು. ಪಾಶ್ಚಿಮಾತ್ಯ ದೇಶಗಳಲ್ಲಿ ಕುಟುಂಬವನ್ನು ಒಂದು ಆರ್ಥಿಕ ಮತ್ತು ಸಾಮಾಜಿಕ ಘಟಕವಾಗಿ ಅರ್ಥೈಸಲಾಗುತ್ತದೆ. ಭಾರತ, ಜಪಾನ್ ಮತ್ತು ಚೀನಾ ದೇಶಗಳಲ್ಲಿ ಕುಟುಂಬ ಎಂಬುದೊಂದು ಸಾಂಸ್ಕೃತಿಕವೂ ಧಾರ್ಮಿಕವೂ ಆದ ಘಟಕ. ಕುಟುಂಬಗಳನ್ನು ಕೆಳಗಿನ ರೀತಿಯಲ್ಲಿ ವರ್ಗೀಕರಿಸಲಾಗಿದೆ:

**ಗಾತ್ರ ಅಥವಾ ರಚನೆಯ ಆಧಾರದ ಮೇಲೆ:**

**ವಿಭಕ್ತ ಕುಟುಂಬ (Nuclear family) :** ಸಾಮಾನ್ಯವಾಗಿ ದಂಪತಿಗಳನ್ನೊಳಗೊಂಡ ಘಟಕವಿದು. ಇದರಲ್ಲಿ ಗಂಡ ತಂದೆಯ ಪಾತ್ರವನ್ನೂ ಹೆಂಡತಿ ತಾಯಿಯ ಪಾತ್ರವನ್ನೂ ವಹಿಸುವರು. ಇವರಿಗೆ ಹುಟ್ಟಿದ ಅಥವಾ ಇವರು ದತ್ತು ತೆಗೆದುಕೊಂಡ ಅಥವಾ ಸಾಕಿದ ಮದುವೆಯಾಗಿರದ ಮಕ್ಕಳು ಈ ಕುಟುಂಬದ ಸದಸ್ಯರಾಗಿರುವರು.

**ಅವಿಭಕ್ತ ಕುಟುಂಬ :** ದಂಪತಿಗಳ ಕುಟುಂಬ ಇತರ ರಕ್ತಸಂಬಂಧಿ ಸದಸ್ಯರೊಂದಿಗೆ, ಉದಾಹರಣೆಗೆ, ಚಿಕ್ಕಪ್ಪ, ಚಿಕ್ಕಮ್ಮ, ಅಕ್ಕ ತಂಗಿಯರ ಮಕ್ಕಳು ಅವರ ಗಂಡ ಹೆಂಡಂದಿರು ಇತ್ಯಾದಿ ವ್ಯಕ್ತಿಗಳನ್ನೊಳಗೊಂಡಂತೆ ವಿಸ್ತಾರವಾದರೆ, ಅದನ್ನು ಅವಿಭಕ್ತ ಅಥವಾ ವಿಸ್ತೃತ ಕುಟುಂಬ ಎಂದು ಹೇಳಲಾಗುವುದು.

**ವಿವಾಹದ ಆಧಾರದ ಮೇಲೆ :**

**ಏಕಪತ್ನೀ ಕುಟುಂಬ (Monogamous family) :** ವಿವಾಹಿತರಾದ ಒಬ್ಬ ಗಂಡ ಮತ್ತು ಹೆಂಡತಿ ವಾಸಿಸುವ ಕುಟುಂಬ. ಈ ಕುಟುಂಬದಲ್ಲಿ ಗಂಡ ಅಥವಾ ಹೆಂಡತಿ ಒಬ್ಬರಿಗಿಂತ ಹೆಚ್ಚು ಬಾಳಸಂಗಾತಿಯನ್ನು ಹೊಂದಿರುವಂತಿಲ್ಲ. ಅಂತೆಯೇ ವಿವಾಹದಿಂದಾಚೆಗಿನ ಸಂಬಂಧಗಳಿಗೂ ಇಲ್ಲಿ ಅವಕಾಶವಿಲ್ಲ.

**ಬಹುಪತ್ನಿತ್ವ ಕುಟುಂಬ (Polygynous family) :** ಒಬ್ಬ ವ್ಯಕ್ತಿ ಒಬ್ಬಳಿಗಿಂತ ಹೆಚ್ಚು ಹೆಂಡಂದಿರೊಂದಿಗೆ ಮತ್ತು ಅವರ ಮಕ್ಕಳೊಂದಿಗೆ ವಾಸಿಸುವ ಕುಟುಂಬ ಇದಾಗಿರುತ್ತದೆ. ಇದು ಸಾಮಾನ್ಯವಾಗಿ ಅಮೆರಿಕಾ, ಆಫ್ರಿಕ, ಏಷ್ಯಾದ ಮುಸ್ಲಿಂ  ಜನಾಂಗದಲ್ಲಿ ಕಾಣಬರುತ್ತದೆ.

**ಬಹುಪತಿತ್ವ ಕುಟುಂಬ:** ಒಬ್ಬಳು ಹೆಂಗಸು ಒಬ್ಬರಿಗಿಂತ ಹೆಚ್ಚು ಗಂಡಸರನ್ನು ಮದುವೆಯಾಗಿ ಕುಟುಂಬ ಕಟ್ಟುವುದನ್ನು ಒಪ್ಪಿಕೊಂಡ ಕುಟುಂಬವಿದು. ಈ ಹೆಂಗಸು ತನ್ನ ಎಲ್ಲ ಗಂಡಂದಿರೊಡನೆ ಕುಟುಂಬದಲ್ಲಿ ವಾಸಿಸುತ್ತಾಳೆ. ಇದು ಸಾಮಾನ್ಯವಾಗಿ ಟಿಬೆಟ್, ಉತ್ತರ ಭಾರತದ ಕೆಲವು ಬುಡಕಟ್ಟುಗಳು, ಮುಂಡ ಬುಡಕಟ್ಟು ಹೀಗೆ ಕೆಲವು ಸಾಮಾಜಿಕ ಗುಂಪುಗಳಲ್ಲಿ ಕಾಣಬರುತ್ತದೆ.

**ಉತ್ತರಾಧಿಕಾರಿಗಳ ಆಧಾರದ ಮೇಲೆ**

**ಪಿತೃಪ್ರಧಾನ ಕುಟುಂಬ (Patriarchal):** ಇದು ಪಿತೃಕೇಂದ್ರಿತ ಕುಟುಂಬ ಅಥವಾ ತಂದೆ ಅಧಿಕಾರ ವಹಿಸುವ ಕುಟುಂಬ. ಇಲ್ಲಿ ತಂದೆಯೇ ಕುಟುಂಬದ ಯಜಮಾನ. ಅಧಿಕಾರ ನಡೆಸುವವನೂ ಅವನೇ. ಅವನೇ ಕುಟುಂಬದ ಆಸ್ತಿಯ ನಿರ್ವಾಹಕ. ವಂಶ, ಉತ್ತರಾಧಿಕಾರಿ ಎಲ್ಲವೂ ತಂದೆಯ ಸಂತತಿಯಿಂದಲೇ ಗುರುತಿಸುವಂತಹುದು. ಈ ಕುಟುಂಬಗಳು ಪಿತೃ ವಂಶಾವಳಿ ಕುಟುಂಬಗಳೂ ಹೌದು. ಏಕೆಂದರೆ ವಂಶ ಅಥವಾ ಕುಲವನ್ನು ಪುರುಷವಂಶದಿಂದಲೇ ಗುರುತಿಸಲಾಗುತ್ತದೆ. ಈ ಕುಟುಂಬಗಳಲ್ಲಿ ಗಂಡುಮಕ್ಕಳಿಗೆ ಮಾತ್ರ ಆಸ್ತಿಯ ಹಕ್ಕು ಇರುತ್ತದೆ. ಗಂಡುಮಕ್ಕಳು ಮದುವೆಯ ನಂತರವೂ ತಂದೆಯ ಮನೆಯಲ್ಲೇ ಹೆಂಡತಿಯೊಂದಿಗೆ ವಾಸಿಸುತ್ತಾರೆ. ಇಲ್ಲಿ ಮಹಿಳೆಯರಿಗೆ ಎರಡನೆಯ ಸ್ಥಾನ. ಮಕ್ಕಳು ತಂದೆಯ ಮನೆಯಲ್ಲಿ ಬೆಳೆಯುತ್ತಾರೆ.

**ಮಾತೃಪ್ರಧಾನ (Matriarchal) ಕುಟುಂಬ** : ಇದು ಮಾತೃಕೇಂದ್ರಿತ ಕುಟುಂಬ. ಇಲ್ಲಿ ಮನೆಯ ಯಜಮಾನಿಕೆಯನ್ನು ತಾಯಿಯೇ ವಹಿಸುತ್ತಾಳೆ. ಆಕೆಯೇ ಕುಟುಂಬದ ಯಜಮಾನಿ. ಅವಳೇ ಅಧಿಕಾರ ವಹಿಸುತ್ತಾಳೆ, ಆಸ್ತಿಯ ಹೊಣೆಗಾರಿಕೆಯನ್ನೂ ಹೊರುತ್ತಾಳೆ. ಈ ಕುಟುಂಬಗಳು ಮಾತೃ ವಂಶಾವಳಿ ಕುಟುಂಬಗಳೂ ಹೌದು. ಏಕೆಂದರೆ ವಂಶ ಅಥವಾ ಕುಲವನ್ನು ಸ್ತ್ರೀಯರ ಅಥವಾ ತಾಯಿಯ ವಂಶದಿಂದಲೇ ಗುರುತಿಸಲಾಗುತ್ತದೆ. ಮಗಳು ತಾಯಿಯ ಆಸ್ತಿಗೆ ಭಾಗೀದಾರಳಾಗುತ್ತಾಳೆ. ಮಕ್ಕಳ ಅಂತಸನ್ನು ತಾಯಿಯ ಸ್ಥಾನಮಾನದ ಮೇಲೆ ಗುರುತಿಸಲಾಗುತ್ತದೆ. ಮದುವೆಯ ನಂತರ ಮಗಳು ಕುಟುಂಬದಲ್ಲೇ ವಾಸಿಸುತ್ತಾಳೆ. ಗಂಡ ಆಗಾಗ್ಗೆ ಹೆಂಡತಿಯ ಮನೆಗೆ ಬಂದು ಹೋಗುತ್ತಾನೆ.

**ಭಾರತದ ಕುಟುಂಬಗಳಲ್ಲಿ ಸಾಮಾಜೀಕರಣ**

ಭಾರತದ ಕುಟುಂಬಗಳಲ್ಲಿ ಲಿಂಗತ್ವ ಪಾತ್ರಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಇವು ಜನನಕಾಲದಿಂದಲೇ ಸಾಮಾಜೀಕರಣವನ್ನು ಪ್ರಭಾವಿಸುತ್ತವೆ. ಇಲ್ಲಿ ಮಕ್ಕಳು ಜೀವನದ ಮೊದಲ ಹಂತದಿಂದಲೇ ಇತರರೊಂದಿಗಿನ ತಮ್ಮ ಸಂಬಂಧಗಳು, ಕುಟುಂಬದ ಸಂಪನ್ಮೂಲಗಳ ಹಂಚಿಕೆ, ಪೌಷ್ಟಿಕತೆ, ಆರೋಗ್ಯ ಮತ್ತು ಶಿಕ್ಷಣ ಇವುಗಳಿಗೆ ಬಾಧ್ಯತೆ ಈ ಮುಂತಾದ ವಿಷಯಗಳಲ್ಲಿ ಲಿಂಗ ಭೇದವನ್ನು ಅನುಭವಿಸುತ್ತಲೇ ಬೆಳೆಯುತ್ತಾರೆ. ಗಂಡುಮಕ್ಕಳಿಗೆ ಇರುವ ಹೆಚ್ಚಿನ ಪ್ರಾಮುಖ್ಯತೆ ಇಬ್ಬರಿಗೂ ತಿಳಿದೇ ಇರುತ್ತದೆ. ಗಂಡುಮಕ್ಕಳಿಗೆ ಸಂಬಂಧಿಸಿದ ವಿಶೇಷ ಮಾತುಗಳು, ಕೌಟುಂಬಿಕ ಸಂಪ್ರದಾಯಗಳು, ಆಚರಣೆಗಳು ಎಲ್ಲವೂ ಗಂಡು ಮತ್ತು ಹೆಣ್ಣುಮಕ್ಕಳ ನಡುವಿನ ಲಿಂಗತ್ವ ಆಧಾರಿತ ವಿಭಿನ್ನತೆಯನ್ನು ಸೂಚಿಸುತ್ತವೆ. ಲಿಂಗತ್ವ ಭಿನ್ನತೆಗೆ ಸಂಬಂಧಿಸಿದ ಆಚರಣೆಗಳನ್ನು ಕೆಳಕಂಡ ವಿಷಯಗಳಲ್ಲಿ ಕಾಣಬಹುದು:

ಎ) **ಗಂಡು ಹೆಣ್ಣು ಎಂಬ ತಾರತಮ್ಯ:** ಈ ತಾರತಮ್ಯ ಕುಟುಂಬಗಳಲ್ಲೇ ಪ್ರಾರಂಭವಾಗುತ್ತದೆ. ಬಹಳಷ್ಟು ಕುಟುಂಬಗಳು ಹೆಣ್ಣು ಮಗುವನ್ನು ಸ್ವಾಗತಿಸುವುದಿಲ್ಲ. ಹುಟ್ಟುವ ಮೊದಲೇ ಇಲ್ಲವಾಗಿಸಿಬಿಡುವುದೂ ಉಂಟು. ಪೌಷ್ಟಿಕತೆ, ಆರೋಗ್ಯಕ್ಕೆ ಗಮನ, ಶಿಕ್ಷಣ ಈ ಎಲ್ಲ ಅಂಶಗಳಲ್ಲೂ ತಾರತಮ್ಯ ಎದ್ದು ಕಾಣುತ್ತದೆ. ಹೆಣ್ಣಿಗೆ ಪ್ರಾಧಾನ್ಯತೆ ಇಲ್ಲದ ಕುಟುಂಬಗಳಲ್ಲಿ ಸಂಪನ್ಮೂಲಗಳ ಹಂಚಿಕೆಯೂ ಲಿಂಗದ ಆಧಾರದ ಮೇಲೆಯೇ ಆಗುತ್ತದೆ.

ಬಿ) **ಪಾತ್ರ ಹಂಚಿಕೆ:** ಭಾರತದ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಅಧಿಕಾರಾತ್ಮಕವಾದ ಮತ್ತು ನಿಯಂತ್ರಿಸುವ ಸಾಮಾಜಿಕ ಕಾರ್ಯಗಳನ್ನು ಗಂಡಸರಿಗೆ ಮತ್ತು ಬೆಂಬಲಿಸುವ ಕಾರ್ಯಗಳನ್ನು ಹೆಂಗಸರಿಗೆ ಹಂಚಿಕೊಡಲಾಗಿದೆ. ಹೀಗಾಗಿ, ಹುಟ್ಟಿನಿಂದಲೇ ಗಂಡಸರು ಸಂಪನ್ಮೂಲಗಳ ಬೇಹುಗಾರರಾಗಿ, ಸಂಪಾದನೆಯ ಕಾರ್ಯಗಳನ್ನು ಮಾಡುತ್ತಾರೆ. ಹೆಂಗಸರು ಕುಟುಂಬ ಪೋಷಣೆಯ ಕಾರ್ಯಗಳಲ್ಲಿ, ಅಂದರೆ ಮಕ್ಕಳನ್ನು ಹಿರಿಯರನ್ನು ನೋಡಿಕೊಳ್ಳುವುದು, ಮನೆವಾರ್ತೆ ನಡೆಸುವುದು ಇತ್ಯಾದಿ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಾರೆ. ಹೆಂಗಸರು ವಿಧೇಯ ಮಕ್ಕಳಾಗಿ, ನಂಬಿಕೆಯ ಹೆಂಡಂದಿರಾಗಿ, ಪೋಷಿಸುವ ಅಮ್ಮನಾಗಿ, ಅಧಿಕಾರಯುಕ್ತ ಅತ್ತೆಯರಾಗಿ, ಪರೋಪಕಾರಿ ಅಜ್ಜಿಯರಾಗಿ ಬೆಳೆಯಬೇಕೆಂಬುದು ಕುಟುಂಬದ ಅಪೇಕ್ಷೆಯಾಗಿರುತ್ತದೆ.

ಸಿ) **ಲಿಂಗತ್ವ ಆಧಾರಿತ ಶ್ರೇಣೀಕೃತ ಸ್ಥಾನ:** ಪಾತ್ರ ಹಂಚಿಕೆಯ ಜೊತೆಜೊತೆಗೇ ಕೆಲವು ಮಾನಕಗಳು, ಮೌಲ್ಯಗಳು, ಸಂಪ್ರದಾಯಗಳು, ನಂಬಿಕೆಗಳು ಗಂಡ–ಹೆಂಡರಿಗೆ ಕುಟುಂಬದಲ್ಲಿ ಭಿನ್ನ ಶ್ರೇಣಿಯ ಸ್ಥಾನವನ್ನು ಮೂಡಿಸುತ್ತವೆ. ವಿಧುರರಿಗಿಂತ ವಿಧವೆಯರ ಸಂಖ್ಯೆ ಸಾಮಾನ್ಯವಾಗಿ ಭಾರತೀಯ ಸಾಂಪ್ರದಾಯಿಕ ಕುಟುಂಬಗಳಲ್ಲಿ ಹೆಚ್ಚಾಗಿ ಕಾಣುತ್ತದೆ. ಏಕೆಂದರೆ ಗಂಡಂದಿರಿಗಿಂತ ಹೆಂಗಸರು ಗಮನಾರ್ಹವಾಗಿ ಕಡಿಮೆ ವಯಸ್ಸಿನವರಾಗಿರುತ್ತಾರೆ. ಲಿಂಗ ಮತ್ತು ವಯಸ್ಸು ಹೇಗೆ ಹೆಂಗಸರನ್ನು ತೊಂದರೆಗೀಡುಮಾಡುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಸಮಾಜದಲ್ಲಿ ಮಹಿಳೆಯ ಪಾತ್ರ, ಅವಳ ಸೀಮಿತ ಹಕ್ಕುಗಳು, ಗಮನಾರ್ಹ ಕರ್ತವ್ಯಗಳು, ಅಸಮರ್ಪಕ ಗೌರವ, ಇವುಗಳು ಅವರನ್ನು ಸಮಾಜದ ಅಂಚಿಗೆ ತಳ್ಳಿವೆ. ಹೆಣ್ಣು ಅಥವಾ ಮಹಿಳೆ ಎಂದರೆ ಒಂದು ಬೇಡದ ಹೊಣೆಗಾರಿಕೆ, ಜವಾಬ್ದಾರಿ, ಹೊರೆ ಎಂಬ ರೀತಿಯ ಭಾವನೆಗಳೇ ಇದಕ್ಕೆ ಮೂಲ ಕಾರಣ.

ಡಿ) **ಲಿಂಗತ್ವ ಆಧಾರಿತ ಮನೋಭಾವದ ಬೆಳವಣಿಗೆ:** ಸಾಂಪ್ರದಾಯಿಕ ಕುಟುಂಬದೊಳಗೆ ಮೊದಲಿನಿಂದಲೂ ಗಂಡುಮಕ್ಕಳಿಗೆ ಕೊಡುವ ವಿಶೇಷ ಪ್ರಾಶಸ್ತ್ಯದಿಂದಲೇ ಲಿಂಗತ್ವ ಸಂಬಂಧಗಳು ಮಕ್ಕಳ ಗಮನಕ್ಕೆ ಬರುತ್ತದೆ. ಹೆಣ್ಣು ಮಕ್ಕಳಿಗೆ ಮೊದಲಿನಿಂದಲೂ 'ನಿನಗೆ ಹೆಚ್ಚಿನ ಸಂತಾನ ಪ್ರಾಪ್ತಿಯಾಗಲಿ' ಎಂದು ಹರಸಿ, ತಂದೆಯ ಮನೆಯಲ್ಲಿ ಅವಳು ಹೆಚ್ಚು ದಿನಗಳಿರುವುದಿಲ್ಲವೆಂದೂ ವಿವಾಹವೇ ಅವಳ ಪರಮ ಗುರಿ ಎಂದೂ ಅರಿವು ಮೂಡಿಸುತ್ತಾರೆ. ಮನೆಯ ಒಳಗಿನ ಹೆಚ್ಚಿನ ಕೆಲಸಗಳನ್ನು ಹೆಣ್ಣುಮಕ್ಕಳೇ ಮಾಡಬೇಕು ಹುಡುಗರು ಹೊರಗಿನ ಕೆಲಸಗಳನ್ನು ಮಾಡಬೇಕು ಎಂಬ ರೀತಿಯ ಬೋಧನೆಯ ಮಾತುಗಳು ಮಕ್ಕಳು

ಚಿಕ್ಕವರಿರುವಾಗಲಿಂದಲೂ ಕಿವಿಯ ಮೇಲೆ ಬೀಳುತ್ತಿರುತ್ತದೆ. ಅವರು ಹಾಗೆಯೇ ಬೆಳೆಯಬೇಕೆಂದುಕೊಳ್ಳುವುದೂ ಈ ರೀತಿಯ ಕೌಟುಂಬಿಕ ಹಿನ್ನೆಲೆಯಿಂದಲೇ.

ಹೀಗೆ ಕುಟುಂಬಗಳ ಸಾಮಾಜೀಕರಣ ವ್ಯವಸ್ಥೆಯು ಅತ್ಯಂತ ಸಹಜವೆಂಬಂತೆ ಲಿಂಗಭೇದವನ್ನು ಹುಟ್ಟುಹಾಕಿ ಮುನ್ನಡೆಸುತ್ತದೆ.

**ಪ್ರಸ್ತುತ ಸ್ಥಿತಿ :** ಭಾರತದ ಕುಟುಂಬಗಳ ಪರಿಸ್ಥಿತಿ ಈಚೆಗೆ ನಿಧಾನವಾಗಿ ಬದಲಾಗುತ್ತಿದೆ. ಶಿಕ್ಷಣ ಮತ್ತು ಸಾಮಾಜಿಕ ಸನ್ನಿವೇಶಗಳಿಗೆ ತೆರೆದುಕೊಳ್ಳುವಿಕೆ, ಸ್ವಲ್ಪಮಟ್ಟಿಗೆ ಧನಾತ್ಮಕವಾಗಿ ಬದಲಾದ ಮಹಿಳೆಯ ಸ್ಥಾನ ಇವುಗಳಿಂದಾಗಿ ಸಾಮಾಜೀಕರಣ ಪ್ರಕ್ರಿಯೆಯೂ ಬದಲಾಗುತ್ತಿದೆ. ಆದರೆ ಇದು ಕೇವಲ ಹುಡುಗಿಯರಿಗೆ ಶಿಕ್ಷಣಕ್ಕೆ ಅವಕಾಶವಿರುವ ನಗರ ಪ್ರದೇಶಗಳಲ್ಲಿ ಮಾತ್ರ. ಶಿಕ್ಷಣವೇ, ಶಿಕ್ಷಣದಿಂದಲೇ ಈ ಪರಿಸ್ಥಿತಿಯನ್ನು ಸುಧಾರಿಸಬೇಕಾಗಿದೆ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

1. ಭಾರತದ ಕುಟುಂಬಗಳ ವೈವಿಧ್ಯತೆಯನ್ನು ವಿವರಿಸಿ
2. ಭಾರತದ ಕುಟುಂಬಗಳಲ್ಲಿನ ಸಾಮಾಜೀಕರಣ ವ್ಯವಸ್ಥೆಯು ಲಿಂಗಭೇದವನ್ನು ಮೂಡಿಸುವ ರೀತಿಯನ್ನೂ ಪರಿಹಾರಮಾರ್ಗಗಳನ್ನೂ ಸೂಚಿಸಿ.

## 1.3.4. ಸಾರಾಂಶಿಸೋಣ

- ವ್ಯಕ್ತಿಯ ಲಿಂಗತ್ವವನ್ನು ಕುರಿತ ವೈಯಕ್ತಿಕವಾದ ಭಾವವೇ ಲಿಂಗತ್ವ ಅನನ್ಯತೆ. ಹುಟ್ಟಿದಾಗ ಗುರುತಿಸಿದ ಲಿಂಗತ್ವ ಮತ್ತು ಬೆಳೆದ ಮೇಲೆ ಗುರುತಿಸಿಕೊಂಡಿರುವ ಲಿಂಗತ್ವ ಒಂದೇ ಆಗಿರಬಹುದು, ಇಲ್ಲವೇ ಬೇರೆಯಾಗಿರಬಹುದು. ಎಲ್ಲ ಸಮಾಜವೂ ಒಂದು ಗುಂಪಿನ ಲಿಂಗತ್ವ ವರ್ಗಗಳನ್ನು ಅಥವಾ ವಿಧಗಳನ್ನು ಗುರುತಿಸಿಕೊಂಡಿರುತ್ತದೆ. ಇದು ಆ ಸಮಾಜದ ಇತರ ಸದಸ್ಯರಿಗೆ ಸಂಬಂಧಿಸಿದಂತೆ ವ್ಯಕ್ತಿ ತನ್ನ ಸಾಮಾಜಿಕ ಅನನ್ಯತೆಯನ್ನು ರೂಪಿಸಿಕೊಳ್ಳಲು ಆಧಾರವಾಗುತ್ತದೆ.
- ಲಿಂಗ ಅನನ್ಯತೆ ಎಂಬುದು ವ್ಯಕ್ತಿಯ ಖಾಸಗಿಯಾದ ಭಾವನೆ. ಜೊತೆಗೆ ತನ್ನ ಲಿಂಗತ್ವದ ಕುರಿತಾದ ವ್ಯಕ್ತಿನಿಷ್ಠವಾದದ ಅನುಭವ. ಒಬ್ಬ ವ್ಯಕ್ತಿಗೆ ತಾನು ಗಂಡಸು ಅಥವಾ ಹೆಂಗಸು ಎಂಬುದಾಗಿ ಆಗುವ ಅನುಭವ. ಇದು ಮೂಲಭೂತವಾಗಿ ಪುರುಷ ಅಥವಾ ಸ್ತ್ರೀ ಎಂಬುದಾಗಿ ಗುರುತಿಸಲಾಗಿರುವ ವರ್ಗದ ಮೇಲೆ ಅವಲಂಬಿಸಿರುವಂತಹುದು.
- ಲಿಂಗತ್ವ ಅನನ್ಯತೆ ರೂಪುಗೊಳ್ಳುವ ಸಮಯದಲ್ಲಿ ಮಕ್ಕಳಿಗೆ ಮಾತು ಬಾರದಿರುವುದರಿಂದ ನಿರ್ದಿಷ್ಟವಾಗಿ ಈ ಪ್ರಕ್ರಿಯೆ ಯಾವಾಗ ಪ್ರಾರಂಭವಾಗುತ್ತದೆ ಎಂದು ತಿಳಿಯುವುದು ಕಷ್ಟ. ಈ ಕುರಿತು ಸಂಶೋಧಕರು ಅಂದಾಜುಗಳನ್ನು ಮಾಡಿ ಫಲಿತಾಂಶಗಳನ್ನು ನೀಡಿದ್ದಾರೆ.
- ಲಿಂಗತ್ವ ಅನನ್ಯತೆಯ ರೂಪುಗೊಳ್ಳುವಿಕೆಯ ಮೇಲೆ ಜೀವಶಾಸ್ತ್ರೀಯ ಅಂಶಗಳು, ಸಾಮಾಜಿಕ ಮತ್ತು ಪರಿಸರೀಯ ಅಂಶಗಳು ಪ್ರಭಾವಬೀರುತ್ತವೆ.
- ಲಿಂಗತ್ವ ಅನನ್ಯತೆಯಲ್ಲಿ ಹಲವು ವಿಧಗಳಿವೆ. ಅವುಗಳೆಂದರೆ, ಲಿಂಗ ಯುಗಳ ಅಥವಾ ಲಿಂಗ ಬೈನರಿ, ಸಿಸ್ ಜಂಡರ್, ಜಂಡರ್ ಫ್ಲೂಯಿಡ್, ಜಂಡರ್ ಕ್ವಿಯರ್, ಅಂತರ್ ಲಿಂಗಿಗಳು, ಬೈನರಿ ಜಂಡರ್ ಅಲ್ಲದವರು, ಟ್ರಾನ್ಸ ಜಂಡರ್ ಮತ್ತು ಇತರರು.
- ಭಾರತದ ಕುಟುಂಬಗಳನ್ನು ಕುಟುಂಬದ ರಚನೆ, ವಿವಾಹ ಮತ್ತು ಉತ್ತರಾಧಿಕಾರಿಗಳ ಆಧಾರದ ಮೇಲೆ ವಿವಿಧ ಗುಂಪುಗಳಾಗಿ ವರ್ಗೀಕರಿಸಲಾಗಿದೆ.
- ಭಾರತದ ಕುಟುಂಬಗಳು ಪ್ರಾಥಮಿಕವಾಗಿ ಸಾಮಾಜೀಕರಣ ಪ್ರಕ್ರಿಯೆಯಲ್ಲೇ ಲಿಂಗ ಭೇದವನ್ನು ಹುಟ್ಟುಹಾಕುತ್ತವೆ. ಇದನ್ನು ಸರಿಪಡಿಸುವುದು ಶಿಕ್ಷಣದಿಂದ ಮಾತ್ರ ಸಾಧ್ಯ.

## 1.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1**

ಸ್ವಕಲಿಕಾ ಸಾಮಗ್ರಿಯ ಭಾಗ 1.3.3.1 ಗಮನಿಸಿ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

ಸ್ವಕಲಿಕಾ ಸಾಮಗ್ರಿಯ ಭಾಗ 1.3.3.2 ಗಮನಿಸಿ.

## 1.3.6. ಘಟಕಾಂತ್ಯ ಅಭ್ಯಾಸಗಳು

ಲಿಂಗತ್ವ ಅನನ್ಯತೆ ಎಂದರೇನು? ಅದು ರೂಪುಗೊಳ್ಳಲು ಕಾರಣವಾಗುವ ಅಂಶಗಳು ಯಾವುವು? ಭಾರತೀಯ ಸಮಾಜದಲ್ಲಿನ ಸಾಮಾಜೀಕರಣ ಪ್ರಕ್ರಿಯೆಯು ಲಿಂಗತ್ವ ಭೇದಗಳನ್ನು ಸೃಷ್ಟಿಸುವ ರೀತಿ ಮತ್ತು ಅವುಗಳನ್ನು ಸರಿಪಡಿಸುವ ಕ್ರಮಗಳನ್ನು ವಿವರಿಸಿ.

## 1.3.7. ಪರಾಮರ್ಶನ ಸೂಚಿ


1. Dr. Mahabaleshwar Rao, Gender, School Education (2017), Vismaya Prakashana.
2. Dr. N. B. Kongavada et al., Gender School and Society (2018), Vidyanidhi Prakashana.

   https://www.mentalhelp.net/sexuality/gender-identity
3. http://teentalk.ca/learn-about/gender-identity
4. https://www.ucu.org.uk/media/8600/Guide-to-Gender-Identity-May-17/pdf
5. www.wikipedia.com
6. International Journal of Multidisciplinary Management Studies, ISSN 2249-8834, EIJMMS, Vol.3 (7), July (2013), Online available at zenithresearch.org.in


***********

# ಬ್ಲಾಕ್– 1 : ಭಾರತದಲ್ಲಿ ಲಿಂಗತ್ವ ವಿಚಾರಗಳು ಮತ್ತು ಭಾರತದಲ್ಲಿ ಸಾಮಾಜೀಕರಣ ಪ್ರಕ್ರಿಯೆ

## ಘಟಕ – 4 : ಶಾಲಾ ಪ್ರವೇಶಾತಿ, ದಾಖಲಾತಿ, ಉಳಿಕೆ, ಭಾಗವಹಿಕೆ ಮತ್ತು ಒಟ್ಟು ಸಾಧನೆ ಇವುಗಳಿಗೆ ಸಂಬಂಧಿಸಿದ ಲಿಂಗತ್ವ ಕಾಳಜಿಗಳು

### ಘಟಕದ ರಚನೆ


1.4.1. ಕಲಿಕೆಯ ಉದ್ದೇಶಗಳು

1.4.2. ಪೀಠಿಕೆ

1.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.4.3.1. ಪ್ರವೇಶಾತಿ, ದಾಖಲಾತಿ, ಉಳಿಕೆ, ಭಾಗವಹಿಕೆ ಮತ್ತು ಒಟ್ಟು ಸಾಧನೆ ಇವುಗಳಿಗೆ ಸಂಬಂಧಿಸಿದ ಲಿಂಗತ್ವ ಕಾಳಜಿಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1.4.3.2. ಶಾಲೆಯು ಪರಿಹರಿಸಬೇಕಾದ ಲಿಂಗತ್ವ ಸಂಬಂಧಿ ವಿಚಾರಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

1.4.4. ಸಾರಾಂಶಿಸೋಣ

1.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

1.4.6. ಘಟಕಾಂತ್ಯ ಅಭ್ಯಾಸಗಳು

1.4.7. ಪರಾಮರ್ಶನ ಸೂಚಿ


### 1.4.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಪ್ರವೇಶಾತಿ ಮತ್ತು ದಾಖಲಾತಿಗೆ ಸಂಬಂಧಿಸಿದ ಲಿಂಗತ್ವ ವಿಚಾರಗಳನ್ನು ವಿವರಿಸುವರು;
- ಉಳಿಕೆಗೆ ಸಂಬಂಧಿಸಿದ ಲಿಂಗತ್ವ ವಿಚಾರಗಳನ್ನು ವಿವರಿಸುವರು;
- ಭಾಗವಹಿಕೆಗೆ ಸಂಬಂಧಿಸಿದ ಲಿಂಗತ್ವ ವಿಚಾರಗಳನ್ನು ಸ್ಪಷ್ಟಪಡಿಸುವರು;
- ಸಾಧನೆಗೆ ಸಂಬಂಧಿಸಿದ ಲಿಂಗತ್ವ ವಿಚಾರಗಳನ್ನು ಸ್ಪಷ್ಟಪಡಿಸುವರು;
- ಹೆಣ್ಣುಮಕ್ಕಳ ಸುರಕ್ಷತೆಯನ್ನು ಬಲಪಡಿಸುವಲ್ಲಿ ಶಾಲೆಯ ಪಾತ್ರವನ್ನು ವಿವರಿಸುವರು; ಮತ್ತು
- ಲಿಂಗತ್ವ ಸಮಾನತೆಯನ್ನು ಬಲಪಡಿಸುವಲ್ಲಿ ಶಾಲೆಯ ಪಾತ್ರವನ್ನು ವಿವರಿಸುವರು.

## 1.4.2. ಪೀಠಿಕೆ

ಲಿಂಗತ್ವ ವಿಚಾರಗಳನ್ನು ಮತ್ತು ಲಿಂಗತ್ವ ಸಮಾನತೆಯ ವಿಚಾರಗಳನ್ನು ಗಮನಿಸಿ ಪರಿಹರಿಸಬಹುದಾದ ಸಂಸ್ಥೆಗಳಲ್ಲಿ ಮೊದಲ ಹಾಗೂ ಪ್ರಮುಖ ಸಂಸ್ಥೆ ಎಂದರೆ ಶಾಲೆಯೇ. ಹುಡುಗ ಹುಡುಗಿಯರಿಬ್ಬರ ಮನೋಭಾವದಲ್ಲೂ ಶಾಲೆಯು ಈ ಗುರಿಯನ್ನು ಸಾಧಿಸಲು ಅಗತ್ಯವಾದ ಬದಲಾವಣೆಗಳನ್ನು ತರಲು ಸಾಧ್ಯವಿದೆ. ಲಿಂಗತ್ವಕ್ಕೆ ಸಂಬಂಧಿಸಿದ ಈ ವಿಚಾರಗಳು ಮಾನವಜನಾಂಗದ ಬೆಳವಣಿಗೆಗೆ ಅತಿ ಅವಶ್ಯಕ. ಶಾಲೆಗಳು ಸಮಾಜದ ವಿಸ್ತರಣ ಸಂಸ್ಥೆಗಳಾದ್ದರಿಂದ ಲಿಂಗತ್ವ ಸಮಾನತೆಗೆ ಸಂಬಂಧಿಸಿದ ವಿಚಾರಗಳು ಇಲ್ಲಿ ಗಮನಾರ್ಹವಾಗುತ್ತವೆ. ಈ ಕುರಿತು ವಿವಿಧ ಮಟ್ಟಗಳಲ್ಲಿ ಚರ್ಚೆಗಳು, ಪ್ರಯತ್ನಗಳಾಗಿದ್ದರೂ ಉಳಿಕೆ, ಭಾಗವಹಿಕೆ ಮತ್ತು ಒಟ್ಟು ಸಾಧನೆ ಇವುಗಳಿಗೆ ಸಂಬಂಧಿಸಿದ ಲಿಂಗತ್ವ ವಿಚಾರಗಳಲ್ಲಿ ಸಮಾನತೆಯನ್ನು ಸಾಧಿಸಲು ಇದುವರೆಗೆ ಸಾಧ್ಯವಾಗಿಲ್ಲ. ಇವುಗಳಿಗೆ ಕಾರಣವಾದ ಅಂಶಗಳನ್ನು ಕಂಡುಕೊಂಡು ಈ ಕುರಿತ ಪ್ರಯತ್ನಗಳನ್ನು ಬಲಪಡಿಸುವುದು ಇಂದಿನ ಅನಿವಾರ್ಯತೆಯಾಗಿದೆ. ಹಾಗಾಗಿ ಈ ವಿಷಯಗಳಿಗೆ ಸಂಬಂಧಿಸದಂತೆ ಲಿಂಗತ್ವ ಸಮಾನತೆಯ ಸಾಧನೆಗೆ ಅಡ್ಡಿಯಾಗಿರುವ ಅಂಶಗಳನ್ನು ಅದನ್ನು ನಿವಾರಿಸಬಹುದಾದ ಕ್ರಮಗಳನ್ನೂ ಈ ಘಟಕದಲ್ಲಿ ವಿಚಾರಮಾಡೋಣ.

## 1.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.4.3.1. ಪ್ರವೇಶಾತಿ, ದಾಖಲಾತಿ, ಉಳಿಕೆ, ಭಾಗವಹಿಕೆ ಮತ್ತು ಒಟ್ಟು ಸಾಧನೆ ಇವುಗಳಿಗೆ ಸಂಬಂಧಿಸಿದ ಲಿಂಗತ್ವ ಕಾಳಜಿಗಳು

**ಅಭ್ಯಾಸ I**

ನಿಮ್ಮ ಅನುಭವದಲ್ಲಿ, ನಿಮ್ಮ ಶಾಲೆಯಿಂದ ಅನೇಕ ಹೆಣ್ಣುಮಕ್ಕಳು ಮಧ್ಯದಲ್ಲೇ ಶಾಲೆಯನ್ನು ಬಿಟ್ಟಿರುವುದು ನಿಮ್ಮ ಗಮನಕ್ಕೆ ಬಂದಿದೆ. ಆ ಸನ್ನಿವೇಶಗಳನ್ನು ನೆನಪಿಸಿಕೊಂಡು ಅವರು ಶಾಲೆ ಬಿಡಲು ಕಾರಣವಾದ ಅಂಶಗಳನ್ನು ಪಟ್ಟಿಮಾಡಿ.

ನೀವು ಗಮನಿಸಿರುವಂತೆ ಅನೇಕ ಹೆಣ್ಣುಮಕ್ಕಳು ಅರ್ಧದಲ್ಲೇ ಶಾಲೆಯನ್ನು ಬಿಟ್ಟಿರಬಹುದು. ಇದಕ್ಕೆ ಅವರ ಸುರಕ್ಷತೆ, ಆರ್ಥಿಕ ಪರಿಸ್ಥಿತಿ ಇತ್ಯಾದಿಗಳು ಕಾರಣವಾಗಿರಬಹುದು. ಈ ರೀತಿ ಹುಡುಗಿಯರ ಶಾಲಾ ಪ್ರವೇಶಾತಿ, ದಾಖಲಾತಿ ಇತ್ಯಾದಿಗಳಿಗೆ ಅಡ್ಡಿಬರುವ ಕಾರಣಗಳನ್ನು ಗಮನಿಸೋಣ.

### ಎ) ಪ್ರವೇಶಾತಿ ಮತ್ತು ದಾಖಲಾತಿಗೆ ಸಂಬಂಧಿಸಿದ ಲಿಂಗತ್ವ ವಿಚಾರಗಳು

ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ಕಾರಣಗಳಿಂದಾಗಿ ಹುಡುಗಿಯರು ಶಿಕ್ಷಣದಿಂದ, ಶಾಲೆಗೆ ದಾಖಲಾಗಿ ಶಿಕ್ಷಣ ಮುಂದುವರಿಸುವ ಅವಕಾಶದಿಂದ ವಂಚಿತರಾಗಿದ್ದಾರೆ ಎಂಬುದು ವ್ಯಾಪಕವಾಗಿ ಗಮನಕ್ಕೆ ಬಂದಿರುವ ವಿಚಾರ. ಹಾಗಾಗಿ ಹುಡುಗರಿಗೆ ಹೋಲಿಸಿದರೆ ಹುಡುಗಿಯರ ಸಾಕ್ಷರತೆ ಕೆಳಮಟ್ಟದಲ್ಲಿದೆ. ಅವರಿಗೂ ಶಿಕ್ಷಣಕ್ಕೆ ಸಮಾನವಾದ ವಿಪುಲವಾದ ಅವಕಾಶಗಳು ದೊರೆಯುವಂತಾಗಲು, ಅವರ ಈ ಪರಿಸ್ಥಿತಿಗೆ ಕಾರಣವಾದ ಕೆಳಗಿನ ಅಂಶಗಳನ್ನು ಗಮನಿಸಿ, ಪರಿಹಾರೋಪಾಯಗಳನ್ನು ತೆಗೆದುಕೊಳ್ಳಬೇಕಾಗಿದೆ.

**ಬಡತನ:** ಸಮಾಜದಲ್ಲಿ ಯಾತನೆ, ನೋವಿಗೆ ಕಾರಣವಾದ ಅಂಶ ಎಂದರೆ ಬಡತನ. ಮೂಲಭೂತ ಆವಶ್ಯಕತೆಗಳು ಪೂರೈಕೆಯಾದಾಗ ಮಾತ್ರ ವ್ಯಕ್ತಿ ಉಳಿದ ಸಾಧನೆಗಳ ಕುರಿತು ಆಲೋಚನೆ ಮಾಡಬಲ್ಲ. ಬಡತನದ ಅನೇಕ ಕುಟುಂಬಗಳು ಬಡತನದ ರೇಖೆಗಿಂತಲೂ ಕೆಳಗೆ (ಭಾರತವು ಆರ್ಥಿಕ ಅನಾನುಕೂಲತೆಯನ್ನು ಸೂಚಿಸಲು

ಮತ್ತು ಸರ್ಕಾರದ ನೆರವು ಅಥವಾ ಸಹಾಯದ ಅಗತ್ಯವಿರುವ ವ್ಯಕ್ತಿಗಳು ಮತ್ತು ಮನೆಗಳನ್ನು ಗುರುತಿಸಲು ಬಳಸುವ ಮಾನದಂಡ) ಇದ್ದು, ತಮ್ಮ ಜೀವನಾಧಾರವನ್ನು ಸಂಪಾದಿಸಿಕೊಳ್ಳುವ ಸನ್ನಿವೇಶ ತೀವ್ರವಾಗಿದೆ. ಅಲ್ಲದೆ, ಹುಡುಗ ಮತ್ತು ಹುಡುಗಿಗೆ, ಶಾಲೆ ಮತ್ತು ಕೆಲಸಗಳಿಗೆ ಕಳಿಸುವ ಆಯ್ಕೆಗಳಿದ್ದರೆ ಹುಡುಗನನ್ನು ಶಾಲೆಗೂ ಹುಡುಗಿಯನ್ನು ಕೆಲಸಕ್ಕೂ ಕಳಿಸುವ ಆಯ್ಕೆಗಳಿವೆ. ಹೆಣ್ಣುಮಕ್ಕಳನ್ನು ಸಂಪಾದನೆಯ ಸಾಧನವಾಗಿ ಇತರರ ಮನೆಯಲ್ಲಿ ಕೆಲಸಕ್ಕೆ ಅಥವಾ ಮಕ್ಕಳನ್ನು ನೋಡಿಕೊಳ್ಳುವ ಕೆಲಸಕ್ಕೆ ಕಳುಹಿಸುವ ಸಂದರ್ಭಗಳು ಹೆಚ್ಚಾಗಿವೆ.

**ಮನೆಯ ಜವಾಬ್ದಾರಿ ಹೆಣ್ಣುಮಕ್ಕಳಿಗೆ:** ಪೋಷಕರು ಜೀವನಾಧಾರಕ್ಕಾಗಿ ವರಮಾನ ತರಲು ಹೊರಗಿನ ಕೆಲಸದಲ್ಲಿ ನಿರತರಾಗಿದ್ದರೆ ಹೆಣ್ಣುಮಕ್ಕಳನ್ನು ಮನೆಯ ಕೆಲಸಗಳಿಗೆ ಇರಿಸಲಾಗುತ್ತದೆ. ಬೇಸಾಯ ಆಧಾರಿತ ಕುಟುಂಬಗಳಲ್ಲಿ ಹೆಣ್ಣುಮಕ್ಕಳು ದುಡಿಯುವ ರೈತರಿಗೆ ಅಡುಗೆ ಮಾಡಬೇಕಾಗುತ್ತದೆ. ಮತ್ತೆ ಕೆಲವು ಸನ್ನಿವೇಶಗಳಲ್ಲಿ ಕುಟುಂಬದ ವೃದ್ಧರನ್ನು ಚಿಕ್ಕಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಣ್ಣುಮಕ್ಕಳದ್ದಾಗಿರುತ್ತದೆ.

**ಸುರಕ್ಷತೆಯ ಕೊರತೆ:** ಇಂದಿನ ದಿನಗಳಲ್ಲಿ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಅತಿ ಹೆಚ್ಚಿನ ಪ್ರಮಾಣದಲ್ಲಿ ಕಾಣಬರುತ್ತಿದೆ. ಹಾಗಾಗಿ, ಸಹಜವಾಗಿಯೇ ಪೋಷಕರು ತಮ್ಮ ಹೆಣ್ಣುಮಕ್ಕಳ ಸುರಕ್ಷತೆಯನ್ನು ಕುರಿತು ಆಲೋಚಿಸುತ್ತಾರೆ. ಈ ಕಾರಣಕ್ಕಾಗಿಯೂ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗುವ ಸನ್ನಿವೇಶಗಳಿವೆ. ಶಾಲೆಗೆ ತಲುಪುವ ಮಾರ್ಗಗಳಲ್ಲಿ ಅಡ್ಡಿಯುಂಟಾದರೆ, ಇತರ ಮಾರ್ಗದಲ್ಲಿ ಹೋಗುವುದು ಅಪಾಯಕಾರಿಯಾದರೆ ಪೋಷಕರು ಶಿಕ್ಷಣಕ್ಕಿಂತ ಮಕ್ಕಳ ಸುರಕ್ಷತೆಯನ್ನೇ ಆಯ್ಕೆ ಮಾಡುತ್ತಾರೆ.

**ಅಭದ್ರತೆ:** ಶಾಲಾ ಪರಿಸರವೂ ಮಕ್ಕಳಿಗೆ ಭದ್ರತೆಯನ್ನೊದಗಿಸುವಂತಿರಬೇಕು. ಅಸಮರ್ಪಕ ಮತ್ತು ಅನುಚಿತವಾದ ಶೌಚ ಸೌಲಭ್ಯಗಳು ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸದಿರುವ ಸನ್ನಿವೇಶಗಳನ್ನು ಹುಟ್ಟುಹಾಕುತ್ತವೆ. ಸಮಾಜದ ಮನೋಭಾವ ಮತ್ತು ಭದ್ರತೆಯ ಮಟ್ಟ ಇವೂ ಹೆಣ್ಣುಮಕ್ಕಳ ಶಿಕ್ಷಣವನ್ನು ಪ್ರಭಾವಿಸುತ್ತವೆ. ಅಭದ್ರ ಪರಿಸರವು ಶೀಘ್ರವಿವಾಹ ಮತ್ತು ಗರ್ಭಧಾರಣೆಯನ್ನು ಪೋಷಿಸುತ್ತದೆ. ಇವು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಹಾನಿಯನ್ನುಂಟುಮಾಡುತ್ತವೆ.

**ಶಿಕ್ಷಣದ ಕಣ್ಣಿಗೆ ಕಾಣದ ವೆಚ್ಚಗಳು:** ಸರ್ಕಾರವು ಉಚಿತ ಶಿಕ್ಷಣವನ್ನು ನೀಡುವುದು ಸತ್ಯಸಂಗತಿಯೇ. ಆದರೂ ಶಿಕ್ಷಣವನ್ನು ಮುಂದುವರಿಸಲು ಸನ್ನಿವೇಶಾತ್ಮಕವಾದ ಅನೇಕ ರೀತಿಯ ಖರ್ಚುಗಳಿರುತ್ತವೆ. ಅದನ್ನು ಭರಿಸುವುದು ಅನೇಕ ಕುಟುಂಬಗಳಿಗೆ ಕಷ್ಟವೇ. ಅಲ್ಲದೆ ಹುಡುಗಿಯರ ಶಿಕ್ಷಣದ ಮೇಲಿನ ಹೂಡಿಕೆ ಅಗತ್ಯವಿಲ್ಲ ಎಂಬ ಭಾವನೆಯೂ ಇಲ್ಲದಿಲ್ಲ. ಹಾಗಾಗಿ ಖರ್ಚಿನ ವಿಷಯ ಬಂದಾಗ ಹುಡುಗ ಮತ್ತು ಹುಡುಗಿಯರ ನಡುವೆ ವಂಚಿತರಾಗುವವರೆಂದರೆ ಮೊದಲು ಹುಡುಗಿಯರೇ.

**ಸಾಮಾಜಿಕ ಹೊರಗಿಡುವಿಕೆ ಮತ್ತು ಪಕ್ಷಪಾತದ ಮಾನಕಗಳು:** ಸೌಲಭ್ಯವಂಚಿತ ಮಹಿಳೆಯರು ಮತ್ತು ಮಕ್ಕಳು ಸಾಮಾಜಿಕ ಹೊರಗಿಡುವಿಕೆ ಮತ್ತು ಪಕ್ಷಪಾತದಿಂದ ಕೂಡಿದ ಮಾನಕಗಳಿಗೆ ಗುರಿಯಾಗುತ್ತಾರೆ. ಅನೇಕ ಸಮುದಾಯಗಳಲ್ಲಿನ ಜಾತಿಪದ್ಧತಿ ಮತ್ತು ಅವೈಜ್ಞಾನಿಕ ಸಂಪ್ರದಾಯಗಳು, ರೂಢಿಗಳು ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗುವಂತೆ ಮಾಡುತ್ತವೆ.

**ಯುದ್ಧಪೀಡಿತ ಪ್ರದೇಶಗಳು:** ಸೈನ್ಯ ತರಬೇತಿ, ಅಪಹರಣ, ದಾಖಲಾತಿ, ಸೈನಿಕರ ವಾಸ, ನೇರ ದಾಳಿ, ಇತ್ಯಾದಿ ಉದ್ದೇಶಗಳಿಗೆ ಶಾಲೆಯನ್ನು ಬಳಸಿಕೊಳ್ಳುವ ಸನ್ನಿವೇಶಗಳಿವೆ. ಮಕ್ಕಳು ಇದರ ಪ್ರಭಾವಕ್ಕೆ ಅತ್ಯಂತ ತೀವ್ರವಾಗಿ ಒಳಗಾಗುತ್ತಾರೆ. ಇದರಿಂದಲೂ ಹೆಣ್ಣುಮಕ್ಕಳ ಹಾಜರಾತಿ ಪ್ರಭಾವಗೊಳ್ಳುತ್ತದೆ.

## ಬಿ) ಉಳಿಕೆಗೆ ಸಂಬಂಧಿಸಿದ ಲಿಂಗತ್ವ ಕಾಳಜಿಗಳು

ಸರ್ಕಾರದ ಮತ್ತು ಶಿಕ್ಷಣ ಇಲಾಖೆಯ ಸತತ ಪ್ರಯತ್ನಗಳಿಂದಾಗಿ ಹೆಣ್ಣುಮಕ್ಕಳು ಈಚೆಗೆ ಹೆಚ್ಚು ಸಂಖ್ಯೆಯಲ್ಲಿ ಶಾಲೆಗೆ ದಾಖಲಾಗುತ್ತಿದ್ದಾರೆ. ಆದರೆ ಶಾಲೆಯಲ್ಲಿ ಉಳಿದು ಒಂದು ಹಂತದ ಶಿಕ್ಷಣವನ್ನು ಪೂರ್ಣಗೊಳಿಸುವವರ

ಸಂಖ್ಯೆ ಕಡಿಮೆ. ಶಾಲೆಯಲ್ಲಿ ಹೆಣ್ಣುಮಕ್ಕಳ ಉಳಿಕೆ ಇಂದಿನ ಬಹು ದೊಡ್ಡ ಸವಾಲು. ಹೀಗೆ ಶಾಲೆ ಬಿಟ್ಟುಬಿಡಲು ಕಾರಣಗಳನ್ನೂ ಪರಿಹಾರೋಪಾಯಗಳನ್ನೂ ಗಮನಿಸೋಣ.

**ಸುರಕ್ಷತೆಯ ಕೊರತೆ:** ಶಾಲಾ ಪರಿಸರದಲ್ಲಿ ಅಥವಾ ಶಾಲೆಗೆ ಹೋಗುವ ಮಾರ್ಗದಲ್ಲಿ ಸುರಕ್ಷತೆಯ ಕೊರೆತೆಯೇ ಹೆಣ್ಣುಮಕ್ಕಳನ್ನು ಶಾಲೆ ಬಿಟ್ಟುಬಿಡುವಂತೆ ಮಾಡುತ್ತವೆ. ಹೆಣ್ಣುಮಕ್ಕಳನ್ನು ಪೀಡಿಸುವುದು, ಗೇಲಿ ಮಾಡುವುದು, ಲೈಂಗಿಕ ಕಿರುಕುಳ ಇತ್ಯಾದಿಗಳ ಭಯಗಳಿಂದ ಹೆಣ್ಣುಮಕ್ಕಳು ಶಾಲೆಗೆ ಬಾರದಿರುವುದೇ ಸರಿ ಎಂದುಕೊಳ್ಳುವ ಸನ್ನಿವೇಶಗಳಿವೆ.

**ನೈರ್ಮಲ್ಯಕ್ಕೆ ಸಂಬಂಧಿಸಿದ ಸೌಲಭ್ಯಗಳ ಕೊರತೆ:** ಶಾಲೆಗಳಲ್ಲಿ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಹೆಣ್ಣುಮಕ್ಕಳಿಗೆ ಪ್ರತ್ಯೇಕವಾದ ವ್ಯವಸ್ಥೆ ಇಲ್ಲದಿದ್ದರೆ ಅವರಿಗೆ ಇರಿಸುಮುರಿಸಾಗಬಹುದು. ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳಿಬ್ಬರಿಗೂ ಒಂದೇ ಶೌಚಾಲಯವಿದ್ದರೆ ಮತ್ತೂ ಹಿಂಸೆಯಾಗಬಹುದು. ಇದೂ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಕಾರಣವಾಗುತ್ತದೆ.

**ಪಕ್ಷಪಾತದ ಮಾನಕಗಳು:** ಜಾತಿ ಅಥವಾ ಲಿಂಗತ್ವ ಸಂಬಂಧಿಯಾದ ಮಾನಕಗಳು ಪಕ್ಷಪಾತದಿಂದೊಡಗೂಡಿದ್ದರೆ ಆಗಲೂ ಹೆಣ್ಣುಮಕ್ಕಳು ಶಾಲೆಗೆ ಬರಲು ಬಯಸುವುದಿಲ್ಲ. ಕೆಲವು ಹಳ್ಳಿಗಳಲ್ಲಿ ಮುಟ್ಟಾದ ಹೆಣ್ಣುಮಕ್ಕಳು ದೇವಸ್ಥಾನದ ಮಾರ್ಗದಲ್ಲಿ ಬರುವಂತಿಲ್ಲ. ಬಳಸಿಕೊಂಡು ಬರಬೇಕಾಗುತ್ತದೆ. ಇದು ಅವರ ಸುಭದ್ರತೆಯ ಪ್ರಶ್ನೆಯೂ ಆಗಿರುತ್ತದೆ. ಹಾಗಾಗಿ ಅಂತಹ ಮಕ್ಕಳು ಶಾಲೆಯನ್ನೇ ಬಿಟ್ಟುಬಿಡುತ್ತಾರೆ.

**ಶಾಲಾ ಸಂಬಂಧಿ ಲಿಂಗತ್ವ ಆಧಾರಿತ ಹಿಂಸೆ:** ಸುಭದ್ರತೆ ಮತ್ತು ಕಲಿಕೆ ಇವುಗಳಲ್ಲಿ ಹೆಚ್ಚಿನ ಪಾಲು ಸುಭದ್ರತೆಯ ಆಯ್ಕೆಯೇ ಗೆಲ್ಲುತ್ತದೆ. ಯಾವ ಶಾಲೆಗಳಲ್ಲಿ ಲಿಂಗತ್ವ ಆಧಾರಿತ ಹಿಂಸೆ ಇದೆಯೋ ಅಲ್ಲಿಗೆ ಹೆಣ್ಣುಮಕ್ಕಳು ಕಾಲಿಡುವುದಿಲ್ಲ. ಮನೆಯವರು ಕಳುಹಿಸುವುದೂ ಇಲ್ಲ. ಹೀಗಾಗಿ ಶಾಲೆಗಳು ಇದರಿಂದ ಮುಕ್ತವಾಗಿರುವಂತೆ ಅತೀವ ಗಮನ ವಹಿಸಬೇಕಾಗುತ್ತದೆ.

**ಅಸಮರ್ಪಕ ಶಾಲಾ ವ್ಯವಸ್ಥೆ:** ಶಾಲೆಯಲ್ಲಿನ ಕಟ್ಟಡ, ಕಲಿಕೋಪಕರಣಗಳ ಕೊರತೆ, ತರಬೇತಿ ಇಲ್ಲದ ಶಿಕ್ಷಕರು, ಅನಾಕರ್ಷಕ ಮಾತ್ರವಲ್ಲ, ಬೇಸರ ತರಿಸುವ ಕಟ್ಟಡ ವ್ಯವಸ್ಥೆ, ಪ್ರೀತಿ ಆದರಗಳ ಕೊರತೆ, ಪರಿಣಾಮಕಾರಿ ಬೋಧನೆ ಇಲ್ಲದಿರುವುದು, ಈ ಪ್ರತಿ ಅಂಶವೂ ಮಕ್ಕಳನ್ನು ಶಾಲೆಯಿಂದ ದೂರವಿಡುತ್ತದೆ.

**ಲಿಂಗತ್ವ ಸಂವೇದನೆಗೆ ತೆರೆದುಕೊಳ್ಳದ ಅಧ್ಯಾಪಕರು ಮತ್ತು ಲಿಂಗಪಡಿಯಚ್ಚುಗಳ ಮುಂದುವರಿಕೆ:** ಶಾಲೆಯಲ್ಲಿ ಸೂಕ್ತ ಸಂಖ್ಯೆಯ ಅಧ್ಯಾಪಕರಿರುವುದೇ ಅಪರೂಪ. ಇದ್ದರೂ ಲಿಂಗತ್ವ ಸಂವೇದನೆಗೆ ಸಂಬಂಧಿಸಿದ ತರಬೇತಿ ಪಡೆದವರು, ಅದರ ಅರಿವಿರುವವರು ಮತ್ತೂ ಕಡಿಮೆ. ಇಂತಹ ಅಧ್ಯಾಪಕರಿಗೆ ಲಿಂಗತ್ವ ಸಂವೇದನೆ ಎಂಬೊಂದು ಅಂಶವನ್ನು ನಾವು ಮೈಗೂಡಿಸಿಕೊಳ್ಳಬೇಕು ಎಂಬ ಅರಿವೂ ಇರುವುದಿಲ್ಲ. ಸಾಂಪ್ರದಾಯಿಕ ಸಮಾಜದ ಲಿಂಗ ಪಡಿಯಚ್ಚುಗಳನ್ನೇ ಇವರು ಅನುಮೋದಿಸುತ್ತಿರುತ್ತಾರೆ. ಇವು ಹೆಣ್ಣುಮಕ್ಕಳಿಗೆ ಹಿಡಿಸದಿರಬಹುದು. ಇಂತಹ ಸಂದರ್ಭಗಳಲ್ಲಿ ಘರ್ಷಣೆಗಳಾಗುವ ಸಾಧ್ಯತೆಗಳಿವೆ. ಇದೂ ಶಾಲೆಯನ್ನು ಬಿಡಲು ಕಾರಣವಾಗುತ್ತದೆ.

**ವಲಸೆ:** ಸಮಾಜದ ಅಂಚಿನಲ್ಲಿರುವ ಮತ್ತು ಗ್ರಾಮೀಣ ಹೆಣ್ಣುಮಕ್ಕಳಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆ ಹೆಚ್ಚು. ವಲಸೆ ಹೋಗುವ, ಬಡತನದ, ಕೆಲಸಕ್ಕೆ ಹೋಗುವವರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಗಂಡುಮಕ್ಕಳ ಸಂಖ್ಯೆಗಿಂತ ದುಪ್ಪಟ್ಟಿರುತ್ತದೆ.

**ಅಸಮರ್ಪಕ, ಪರಿಣಾಮಕಾರಿಯಲ್ಲದ ತರಗತಿ ಪರಿಸರ :** ಇದು ಉಳಿಕೆಗೆ ಅಡ್ಡಿಯಾಗುವ ಕಾರಣಗಳಲ್ಲಿ ಅತ್ಯಂತ ಪ್ರಮುಖ ಕಾರಣವಾಗುತ್ತದೆ. ಅಧ್ಯಾಪಕರ ಬೋಧನೆ, ತರಗತಿಯ ಕೆಲಸಗಳು ಮಕ್ಕಳು ತಮ್ಮ ಜೊತೆಗೆ ಸಮೀಕರಿಸಿಕೊಳ್ಳುವಂತಿರುವುದಿಲ್ಲ. ಕಲಿಯಬೇಕೆಂದು ಹೇಳುವ ವಿಷಯಗಳನ್ನು ಏಕೆ ಕಲಿಯಬೇಕು, ಹೇಗೆ ಕಲಿಯಬೇಕು ಎಂಬುದರ ಕುರಿತು ಮಕ್ಕಳಿಗೆ ಅರಿವಿರುವುದಿಲ್ಲ. ಅದನ್ನು ಅರ್ಥಪೂರ್ಣವಾಗಿ, ಪ್ರೀತಿಯಿಂದ,

ಮಕ್ಕಳ ವೇಗದಲ್ಲಿ ಹೇಳಿಕೊಡುವ ಸನ್ನಿವೇಶ ತರಗತಿಗಳಲ್ಲಿರುವುದಿಲ್ಲ. ಹಾಗಾಗಿ ತರಗತಿಯಲ್ಲಿ ನಾಲ್ಕು ಗೋಡೆಗಳ ಮಧ್ಯೆ ಕುಳಿತಿರುವುದಕ್ಕಿಂತ ಹೊರಗೆ ದುಡಿಯುವುದೇ ಹೆಚ್ಚು ಆಕರ್ಷಕವಾಗಿ ಕಂಡರೆ ಆಶ್ಚರ್ಯವೇನಿಲ್ಲ. ಮನೋವೈಜ್ಞಾನಿಕ ಅಂಶಗಳಿಗನುಗುಣವಾದ ಬೋಧನೆ, ಮಕ್ಕಳು ಶಾಲೆಗೆ ಬರಲು ಹಾತೊರೆಯುವಂತೆ ಮಾಡುವ ತರಗತಿಗಳ ಸೃಷ್ಟಿ ಈ ವಿಷಯಗಳಿಗೆ ಸಂಬಂಧಿಸಿದಂತೆ ಭಾರತದ ಶಾಲೆಗಳು ಇನ್ನೂ ಅತಿ ಹೆಚ್ಚು ಸಾಧಿಸಬೇಕಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಶೇ 75ರಷ್ಟು ಹೆಣ್ಣು ಮಕ್ಕಳು ಈ ಕಾರಣಕ್ಕಾಗಿಯೇ ಶಾಲೆ ಬಿಡುವ ಅಂಶವನ್ನು ಸಂಶೋಧನೆಗಳು ತೋರಿಸಿಕೊಟ್ಟಿವೆ.

**ಗೃಹಕೃತ್ಯದ ಜವಾಬ್ದಾರಿಗಳು:** ಸಾಂಪ್ರದಾಯಿಕ ಕುಟುಂಬಗಳ ಪಡಿಯಚ್ಚುಗಳು ಮನೆಯೊಳಗಿನ ಹೆಚ್ಚಿನ ಜವಾಬ್ದಾರಿಯನ್ನು ಹೆಣ್ಣುಮಕ್ಕಳಿಗೇ ವಹಿಸಿಕೊಟ್ಟಿವೆ. ಮುಂದೆ ಮನೆಯ ಕೆಲಸಗಳನ್ನು ಮಾಡುವ ತರಬೇತಿ ವೇದಿಕೆಯಾಗಿ ಗೃಹಕೃತ್ಯಗಳನ್ನು ಕಲಿಸಲಾಗುತ್ತದೆ. ಇದು ಶಿಕ್ಷಣಕ್ಕಿಂತ ಹೆಚ್ಚು ಪ್ರಮುಖವಾದ ತರಬೇತಿ ಎಂದುಕೊಳ್ಳುವವರೂ ಇಲ್ಲದಿಲ್ಲ. ಇದೂ ಉಳಿಕೆಗೆ ಅಡ್ಡಿಯೊಡ್ಡುತ್ತದೆ.

**ಬಾಲ್ಯ ವಿವಾಹ:** ಇದು ಅಪರಾಧ ಎಂದು ತಿಳಿದಿದ್ದರೂ ಪೋಷಕರು ತಮ್ಮ ಜವಾಬ್ದಾರಿಯನ್ನು ಬೇಗನೆ ಕಳೆದುಕೊಳ್ಳುವ ಸಲುವಾಗ ಹೆಣ್ಣುಮಕ್ಕಳಿಗೆ ಚಿಕ್ಕವಯಸ್ಸಿಗೇ ಮದುವೆ ಮಾಡಿಕೊಡುತ್ತಾರೆ. ಮದುವೆ, ನಂತರ ಗರ್ಭಧಾರಣೆ ಇತ್ಯಾದಿ ಅಂಶಗಳೂ ಉಳಿಕೆಗೆ ಅಡ್ಡಿಬರುತ್ತವೆ.

### ಸಿ) ಭಾಗವಹಿಕೆಗೆ ಸಂಬಂಧಿಸಿದ ಲಿಂಗತ್ವ ಕಾಳಜಿಗಳು:

ಶಾಲೆ/ತರಗತಿಗಳಲ್ಲಿ ಹೆಣ್ಣುಮಕ್ಕಳ ಭಾಗವಹಿಕೆ ಕುಂಠಿತವಾಗಲು ಕೆಳಕಂಡ ಕಾರಣಗಳಿರಬಹುದು.

- ಹೆಣ್ಣುಮಕ್ಕಳು ನಾಚಿಕೆಯ ಸ್ವಭಾವದವರೂ ಸ್ವಪ್ರಜ್ಞೆಯುಳ್ಳವರೂ ಆಗಿರುವುದು;
- ಹುಡುಗರ ಎದುರು ಪ್ರಶ್ನೆಕೇಳಲು ಇಷ್ಟಪಡದಿರುವುದು;
- ಹುಡುಗರ ಚಡಪಡಿಕೆ, ತುಂಟಾಟ ಇವು ಸಹಜವಾಗಿಯೇ ಹುಡುಗಿಯರಿಗಿಂತ ಹೆಚ್ಚು ಗಮನಸೆಳೆಯುವುದು; ಇದರಿಂದಾಗಿ ಹುಡುಗಿಯರ ಕಡೆ ಗಮನ ಕಡಿಮೆಯಾಗುವುದು;
- ಹುಡುಗರು ಹೆಚ್ಚು ಅಭಿವ್ಯಕ್ತಪಡಿಸುವ ಸ್ವಭಾವದವರಾಗಿದ್ದು ಅವರೆದುರು ಹೆಣ್ಣುಮಕ್ಕಳು ಎದ್ದು ಕಾಣದಿರುವುದು;
- ಹೆಣ್ಣುಮಕ್ಕಳಿಗೆ ಸಹಜವಾಗಿಯೇ ಧ್ವನಿ ಮೆತ್ತಗಿರುವುದರಿಂದಲೂ ಸಾಮಾಜಿಕವಾಗಿಯೂ ಅವರ ಅಭಿಪ್ರಾಯಗಳು ಅವಗಣನೆಗೆ ಒಳಗಾಗುವುದು;
- ಹುಡುಗರು ಹೆಚ್ಚು ಮಾತನಾಡುವುದರಿಂದ, ಗಮನ ಸೆಳೆಯುವ ವರ್ತನೆಗಳನ್ನು ತೋರುವುದರಿಂದ ಹುಡುಗಿಯರ ಕುರಿತಾಗಿ ಅಧ್ಯಾಪಕರ ಪಕ್ಷಪಾತದ ಧೋರಣೆ. ಅವರ ಕಡೆಗೆ ಗಮನ ಅಗತ್ಯವಿಲ್ಲ ಎಂಬ ಮನೋಭಾವ;
- ಹುಡುಗಿಯರಿಗೆ ವೈಯಕ್ತಿಕ ಮಾತುಗಳು ಸಾರ್ವಜನಿಕ ಮಾತುಗಳಿಗಿಂತಲೂ ಪ್ರಿಯವಾದುದು. ಹಾಗಾಗಿ ಅವರು ಭಾಗವಹಿಸದಿರುವುದು;
- ಹುಡುಗರು ಸಣ್ಣದಾದ ಒಳ್ಳೆಯ ಕೆಲಸ ಮಾಡಿದರೂ ಹಿರಿದಾದ ಪ್ರಶಂಸೆ, ಹುಡುಗಿಯರು ಸಣ್ಣ ತಪ್ಪು ಮಾಡಿದರೂ ಹೆಚ್ಚಿನ ಬೈಗುಳ– ಈ ರೀತಿಯ ಸನ್ನಿವೇಶಗಳು ಭಾಗವಹಿಕೆಯನ್ನು ಕುಂಠಿತಗೊಳಿಸುತ್ತವೆ.

## ಡಿ) ಸಾಧನೆಗೆ ಸಂಬಂಧಿಸಿದ ಲಿಂಗತ್ವ ಕಾಳಜಿಗಳು

ವಿವಿಧ ಹಂತಗಳಲ್ಲಿ ಹುಡುಗಿಯರ ಫಲಿತಾಂಶಗಳನ್ನು ಗಮನಿಸಿದಾಗ ಅವರ ಸಾಧನೆಯು ಹುಡುಗರ ಸಾಧನೆಯ ಮಟ್ಟಕ್ಕೆ ಸಮನಾಗಿರುವುದು ಕಂಡುಬರುವುದಾದರೂ ರಾಷ್ಟ್ರೀಯ ಹಂತದ ಸಮೀಕ್ಷೆಗಳು ಗಮನಾರ್ಹವಾದ ಫಲಿತಾಂಶಗಳನ್ನು ಹೊರಗೆಡಹಿವೆ. ಶಾಲೆಗೆ ದಾಖಲಾದ 10 ಹೆಣ್ಣುಮಕ್ಕಳಲ್ಲಿ 9 ಮಕ್ಕಳು ಶಾಲೆಯನ್ನು ಪೂರ್ಣಗೊಳಿಸುವುದಿಲ್ಲ. 1 ನೇ ತರಗತಿಗೆ ದಾಖಲಾದ ಪ್ರತಿ 100 ಮಕ್ಕಳಲ್ಲಿ ಗ್ರಾಮೀಣ ಸನ್ನಿವೇಶದಲ್ಲಿ ಕೇವಲ 1 ಮಗು ಮತ್ತು ನಗರ ಸನ್ನಿವೇಶದಲ್ಲಿ ಕೇವಲ 14 ಮಕ್ಕಳು 12ನೇ ತರಗತಿಯನ್ನು ಪ್ರವೇಶಿಸುತ್ತಾರೆ. ಮೇಲೆ ತಿಳಿಸಿದ ದಾಖಲಾತಿ ಮತ್ತು ಉಳಿಕೆಗೆ ಅಡ್ಡಿಬರುವ ಅಂಶಗಳೇ ಸಾಧನೆಯನ್ನು ಕುರಿತಂತೆಯೂ ಅಡ್ಡಿಯಾಗುತ್ತವೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1. ಹೆಣ್ಣುಮಕ್ಕಳ ಶಾಲಾ ದಾಖಲಾತಿಗೆ ಅಡ್ಡಿಯಾಗುವ ಅಂಶಗಳನ್ನು ವಿವರಿಸಿ
2. ಹೆಣ್ಣುಮಕ್ಕಳು ಶಾಲೆಯಲ್ಲಿ ಉಳಿಯಲು ಅಡ್ಡಿಯಾಗುವ ಅಂಶಗಳನ್ನು ಸ್ಪಷ್ಟಪಡಿಸಿ.

## 1.4.3.2. ಶಾಲೆಯು ಗಮನಿಸಿ ಪರಿಹರಿಸಬೇಕಾದ ಲಿಂಗತ್ವ ಸಂಬಂಧಿ ವಿಚಾರಗಳು

ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೆಣ್ಣುಮಕ್ಕಳು ಎದುರಿಸುವ ದೊಡ್ಡ ಸವಾಲು ಎಂದರೆ ಶಾಲಾ ಅಸುರಕ್ಷತೆ. ಇದರ ಜೊತೆಗೆ ಲಿಂಗಪಕ್ಷಪಾತ ಹೆಣ್ಣುಮಕ್ಕಳನ್ನು ಶಾಲೆಯಿಂದ ದೂರವಿಡುತ್ತದೆ. ಹಾಗಾಗಿ ಶಾಲೆಯು ಹೆಣ್ಣುಮಕ್ಕಳಿಗೆ ಸುರಕ್ಷತೆಯ ಅಭಯವನ್ನು ಕೊಡುವುದರ ಜೊತೆಗೆ ಲಿಂಗಪಕ್ಷಪಾತದಿಂದ ಮುಕ್ತವಾದ ಅನುಕೂಲಿಸುವ ಪರಿಸರವನ್ನು ಒದಗಿಸಬೇಕು. ಇವುಗಳನ್ನು ಸಾಧಿಸಲು ಕೆಳಗಿನ ಕ್ರಮಗಳು ಸಹಾಯವಾಗಬಹುದು:

ಶಾಲಾ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು: ಮಕ್ಕಳು ತಮ್ಮನ್ನು ತಾವು ಹೇಗೆ ಸುರಕ್ಷಿತವಾಗಿರಿಸಿಕೊಳ್ಳಬಹುದು ಎಂಬುದನ್ನು ಪೋಷಕರ ಜೊತೆಗೆ ಅತ್ಯಂತ ಪರಿಣಾಮಕಾರಿಯಾಗಿ ಮನಗಾಣಿಸಬಹುದಾದರೆ ಅದು ಶಾಲೆಯೇ. ಏಕೆಂದರೆ ಮಗು 'ಎಚ್ಚರವಾಗಿರುವ' ಕಾಲದಲ್ಲಿ ಹೆಚ್ಚಿನ ಪ್ರಮಾಣದ ಕಾಲವನ್ನು ಶಾಲೆಯಲ್ಲಿಯೇ ಕಳೆಯುತ್ತದೆ. ಜೊತೆಗೆ ಅಧ್ಯಾಪಕರಿಗೆ ಆಯಾ ಸ್ಥಳದ ಪರಿಸ್ಥಿತಿ, ಸನ್ನಿವೇಶಗಳು ಜೊತೆಗೆ ರಕ್ಷಣಾ ತಂತ್ರಗಳ ಪರಿಚಯ ಇತರೆಲ್ಲರಿಗಿಂತ ಹೆಚ್ಚಾಗಿ ತಿಳಿದಿರುವುದರಿಂದ ಅವರು ಮಕ್ಕಳಿಗೆ ಸೂಕ್ತ ಕಾಲದಲ್ಲಿ ಅವಶ್ಯಕವಾದ ಮಾಹಿತಿ ಮತ್ತು ಕೌಶಲಗಳನ್ನು ಕಲಿಸಿ, ಬೆಳೆಸಿ ಸನ್ನಿವೇಶಗಳನ್ನು ಧೈರ್ಯದಿಂದ ಎದುರಿಸಲು ತರಬೇತಿ ಕೊಟ್ಟು ತಯಾರುಮಾಡಬಹುದು. ಅಲ್ಲದೆ ಮಕ್ಕಳು, ಪೋಷಕರು ಮತ್ತು ಸಮುದಾಯದೊಂದಿಗೆ ಅವರಿಗೆ ಸಮೀಪದ ಸಂಬಂಧವಿರುವುದರಿಂದ ಈ ಕೆಲಸ ಅವರಿಗೆ ಸಾಧ್ಯವೂ ಸುಲಭವೂ ಆಗುತ್ತದೆ.

ಶಾಲೆಯು ಶಿಶುನಿಂದೆಯನ್ನು ಕೆಳಕಂಡ ರೀತಿಗಳಲ್ಲಿ ತಡೆಗಟ್ಟಬಹುದು:

- ಶಿಶುನಿಂದೆ ಮಾಡಬಾರದು ಎಂಬ ವಿಚಾರವನ್ನು ಕುರಿತಂತೆ ಅಧ್ಯಾಪಕರು, ಸ್ವಯಂ ಸೇವಕರು, ಮತ್ತು ಮಕ್ಕಳಿಗೆ ಸಂಬಂಧಪಟ್ಟವರೆಲ್ಲರನ್ನೂ ಗುರುತಿಸಿ ಸೂಕ್ತ ಮಾಹಿತಿ ಮತ್ತು ತರಬೇತಿ ಕೊಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ಹೆಣ್ಣುಮಕ್ಕಳು ಲೈಂಗಿಕ ಕಿರುಕುಳವನ್ನು ವರದಿ ಮಾಡುವ ಮತ್ತು ಮಕ್ಕಳಿಂದ ಅಂತಹ ವಿಷಯಗಳ ಮಾಹಿತ ಪಡೆಯುವ 'ಮಕ್ಕಳ ಸ್ನೇಹಿ' ವಾತಾವರಣವನ್ನೂ ಅದಕ್ಕೆ ಅನುಗುಣವಾದ ನಿಯಮಗಳನ್ನೂ ಜಾರಿಗೆ ತನ್ನಿ.
- ಮಕ್ಕಳ ಕಂಪ್ಯೂಟರ್ ಬಳಕೆಯ ಮೇಲೆ ನಿಗಾ ಇಡಿ. ಕಂಪ್ಯೂಟರನ್ನು ಹೇಗೆ ಮತ್ತು ಯಾವ ಕಾರಣಕ್ಕಾಗಿ ಮಾತ್ರ ಬಳಸಬಹುದು ಎಂಬುದರ ಕುರಿತಾದ ಮಾಹಿತಿ ಮತ್ತು ತರಬೇತಿ ಕೊಡಿ.
- ಶಾಲಾ ಪರಿಸರದ ಪ್ರತಿ ರಚನಾತ್ಮಕ ಅಂಶವೂ ಮಕ್ಕಳಿಗೆ ಸುರಕ್ಷಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

- ಶಾಲಾ ಸಂಕೀರ್ಣ ಸುರಕ್ಷಿತವಾಗಿದೆ ಎಂಬುದನ್ನು ಗಮನಿಸಿಕೊಳ್ಳಲು ಶಾಲೆಗೆ ಬರುವ ಎಲ್ಲರನ್ನೂ ಗಮನಿಸಿಕೊಂಡು, ಅಪರಿಚಿತರು ಕಂಡುಬಂದಾಗ ಮಾಹಿತಿ ಪಡೆದು ಪರೀಕ್ಷಿಸಿ.
- ಮಕ್ಕಳ ಸುರಕ್ಷತೆಯನ್ನು ಕಾಪಾಡುವಲ್ಲಿ ಪೋಷಕರ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳಿ. ಅವರಿಗೆ ಅಗತ್ಯ ಮಾಹಿತಿ ಮತ್ತು ತರಬೇತಿಗಳನ್ನು ಒದಗಿಸಿ, ಈ ವಿಚಾರದಲ್ಲಿ ಅವರ ಪಾತ್ರವೇನು ಎಂಬುದನ್ನು ಸ್ಪಷ್ಟಪಡಿಸಿ.
- ಮಕ್ಕಳ ಸುರಕ್ಷಾ ಕಾರ್ಯಕ್ರಮಗಳನ್ನು ಶಾಲೆಯಲ್ಲಿ ಏರ್ಪಡಿಸಿ. ಇವು ಸ್ವೀಕೃತವಾಗಿರುವ ಶೈಕ್ಷಣಿಕ ಸಿದ್ಧಾಂತಗಳಿಗನುಗುಣವಾಗಿರಲಿ. ಮಕ್ಕಳ ವಯೋಮಾನ ಮತ್ತು ಶಿಕ್ಷಣದ ಹಾಗೂ ಅವರ ಬೆಳವಣಿಗೆಯ ಹಂತಗಳಿಗನುಗುಣವಾಗಿರಲಿ. ಈ ಕಾರ್ಯಕ್ರಮಗಳು ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವಂತಿರಲಿ. ಈ ಆತ್ಮವಿಶ್ವಾಸವು ಅವರಿಗೆ ಸುರಕ್ಷತೆಯನ್ನು ಕಾಪಾಡಿಕೊಳ್ಳುವಲ್ಲಿ ಸಹಾಯಮಾಡುತ್ತದೆ. ಇದಕ್ಕೆ ಬಹುಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ. ಇವು ಶಾರೀರಿಕವಾಗಿ, ಮಾನಸಿಕವಾಗಿ ಅವರನ್ನು ಬಲಪಡಿಸುವ ಕಾರ್ಯಕ್ರಮಗಳಾಗಿರಲಿ.
- ಹೆಂಗಸರಿಗೆ ಮತ್ತು ಹೆಣ್ಣುಮಕ್ಕಳಿಗೆ ಸುಕ್ಷೇಮಕರವಾದ ಯೋಜನೆ ಮತ್ತು ವಿನ್ಯಾಸಗಳು ಅತ್ಯಂತ ಪ್ರಮುಖವಾಗುತ್ತವೆ. ಇವು ಆರೋಗ್ಯ, ಸುರಕ್ಷೆ ಮತ್ತು ಸಂತೋಷದಾಯಕವಾದ ಬದುಕು ಬದುಕಲು ಅವರಿಗೆ ಸಾರ್ವಜನಿಕವಾದ ಸಮಾನತೆಯ ಆಧಾರದ ಅವಕಾಶಗಳನ್ನೊದಗಿಸಿಕೊಡುತ್ತದೆ.
- ಜಗತ್ತಿನಾದ್ಯಂತ ತಮ್ಮ ಹಕ್ಕುಗಳನ್ನು ಅನುಭವಿಸುವಲ್ಲಿ ಹೆಣ್ಣುಮಕ್ಕಳಿಗೆ ಅಪಾಯವಿರಬಹುದು. ಅವರು ಶಾಲೆ, ತರಗತಿ ಎಲ್ಲೆಡೆಗಳಲ್ಲಿ ಹಿಂಸೆಗೆ ಸುಲಭವಾಗಿ ಸಿಲುಕಿಕೊಳ್ಳುವ ಸನ್ನಿವೇಶಗಳಿವೆ. ಇದರ ಕುರಿತ ಜಾಗೃತಿ ಮತ್ತು ಅದನ್ನು ಮೀರುವ ಧೈರ್ಯ ಮತ್ತು ತಂತ್ರಗಳನ್ನು ಅವರಲ್ಲಿ ಮೈಗೂಡಿಸಬೇಕಾದ ಅಗತ್ಯವಿದೆ.

## ಲಿಂಗತ್ವ ಸಮಾನತೆಯನ್ನು ಪೋಷಿಸುವಲ್ಲಿ ಶಾಲೆಯ ಪಾತ್ರ

ಇದನ್ನು ನಾವು ಈಗಾಗಲೇ ಕೋರ್ಸ್ 2ರ 4.6 ನೇ ಘಟಕದಲ್ಲಿ ಚರ್ಚಿಸಿದ್ದೇವೆ. ಅದನ್ನು ಈ ಹಿನ್ನೆಲೆಯಲ್ಲಿ ಓದಿಕೊಳ್ಳಿ.

ಮುಂದುವರಿಸಿ ಇಲ್ಲಿ ಕೆಲವು ವಿಚಾರಗಳನ್ನು ಗಮನಿಸಬಹುದು. ಸಮಾಜದ ಅಸಮಾನತೆಯ ಅಂಶಗಳು ಸುಲಭವಾಗಿಯೇ ಶಾಲೆಯನ್ನೂ ಪ್ರವೇಶಿಸುತ್ತವೆ. ಬೋಧನೆ, ಅಧ್ಯಾಪಕ–ವಿದ್ಯಾರ್ಥಿ ಅಂತರ್ ಕ್ರಿಯೆ, ಶಾಲಾ ನಿರ್ವಹಣೆ, ಭೌತಿಕ ಸೌಲಭ್ಯಗಳ ಯೋಜನೆ ಮತ್ತು ವಿನ್ಯಾಸ ಇತ್ಯಾದಿಗಳು ಅಸಮಾನತೆಯನ್ನು ಬಿಂಬಿಸಲು ಅನುವು ಮಾಡಿಕೊಡುವ ವೇದಿಕೆಗಳಾಗಿವೆ. ಬೋಧನಾ ಕಲಿಕಾ ಉಪಕರಣಗಳಲ್ಲೂ ಇದಕ್ಕೆ ಅವಕಾಶವಿದೆ. ಇವುಗಳೂ ಲಿಂಗ ಪಡಿಯಚ್ಚುಗಳನ್ನು ಬಿಂಬಿಸಬಹುದು. ಅಧ್ಯಾಪಕರು ಯಾವಾಗಲೂ ಲಿಂಗ ನಿರ್ದಿಷ್ಟವಾದ ಅಗತ್ಯಗಳನ್ನು ಅರಿತೇ ಇರುತ್ತಾರೆ ಎಂದೇನೂ ಇಲ್ಲ. ಶಾಲಾ ನಿರ್ವಹಣಾ ವ್ಯವಸ್ಥೆಗಳು ಲಿಂಗ ಸಮಾನತೆಯ ಕೊರತೆಗಳಿಗೆ ಉದಾಹರಣೆಗೆ, ಲೈಂಗಿಕ ಕಿರುಕುಳ, ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಸೂಕ್ಷ್ಮವಾಗಿ ಸಂವೇದಿಸದೆ ಇರಬಹುದು. ಇದರಿಂದಾಗಿ, ಶಾಲೆಗಳೂ ಪರಿಣಾಮಕಾರಿ ಬೋಧನೆಗೆ ಲಿಂಗ ಸಂವೇದನಾತ್ಮಕ ಪರಿಸರವನ್ನು ಒದಗಿಸದೇ ಇರಬಹುದು. ಇದಕ್ಕಾಗಿ ಒಂದು ಸರ್ವಾಂಗೀಣ ಉಪಕ್ರಮ ಅಥವಾ ಪೂರ್ಣ ಉಪಕ್ರಮದ ಮಧ್ಯವರ್ತನ ಬೇಕಾಗುತ್ತದೆ. ಈ ಉಪಕ್ರಮವು ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕಾಗುತ್ತದೆ.

- ಪೋಷಕರು, ಸಮುದಾಯ ನಾಯಕರು, ಸದಸ್ಯರು, ಅಧ್ಯಾಪಕರು, ಹುಡುಗ ಮತ್ತು ಹುಡುಗಿಯರಿಗೆ ಲಿಂಗ ಸಂವೇದನಾ ಕಾರ್ಯಕ್ರಮಗಳ ಆಯೋಜನೆ. ಇದು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬೆಂಬಲಿಸಬೇಕಾದ ಅಗತ್ಯವನ್ನು ಮನವರಿಕೆ ಮಾಡಿಕೊಡುತ್ತದೆ;

- ಹುಡುಗಿಯರು ಮತ್ತು ಹುಡುಗರ ಅಗತ್ಯಗಳಿಗೆ ಬೋಧನೆಯನ್ನೂ ಒಳಗೊಂಡಂತೆ ಶಾಲಾ ಕಾರ್ಯಕ್ರಮಗಳನ್ನು ಯೋಜಿಸಲು ಅಧ್ಯಾಪಕರಿಗೆ ತರಬೇತಿ;
- ಆತ್ಮವಿಶ್ವಾಸ, ದೃಢತೆ, ಅಭಿವ್ಯಕ್ತಿ, ನಿರ್ಧಾರ ತೆಗೆದುಕೊಳ್ಳುವಿಕೆ, ಚರ್ಚೆ ಇತ್ಯಾದಿಗಳನ್ನು ಕುರಿತ ಕೌಶಲಗಳನ್ನು ಬೆಳೆಸುವುದರ ಮೂಲಕ ಹೆಣ್ಣುಮಕ್ಕಳ ಸಬಲೀಕರಣ;
- ಹುಡುಗರಿಗೆ ಇತರ ಲಿಂಗವನ್ನು ಕುರಿತ ನೇತ್ಯಾತ್ಮಕ ಮನೋಭಾವದಿಂದ ಮುಕ್ತಗೊಳಿಸುವ ಅನುಭವಗಳನ್ನು ಕೊಟ್ಟು ಲಿಂಗ ಸಮಾನತೆಯನ್ನು ಧನಾತ್ಮಕವಾಗಿ ಸ್ವೀಕರಿಸಲು ಸಬಲೀಕರಿಸುವುದು;
- ಹುಡುಗಿಯರ ಮತ್ತು ಹುಡುಗರ ಲೈಂಗಿಕ ಪಕ್ವತೆಯ ವಿಚಾರವನ್ನು ಅತಿ ಸೂಕ್ಷ್ಮವಾಗಿ ಜವಾಬ್ದಾರಿಯುತವಾಗಿ ನಿರ್ವಹಿಸಲು ಶಾಲಾ ಸಮುದಾಯಕ್ಕೆ ತರಬೇತಿ;
- ಅಧ್ಯಾಪಕರಿಗೆ ಮಾರ್ಗದರ್ಶನ ಮತ್ತು ಸಮಾಲೋಚನಾ ಕೌಶಲಗಳಲ್ಲಿ ತರಬೇತಿ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2**

ಹೆಣ್ಣುಮಕ್ಕಳಿಗೆ ಸುರಕ್ಷತೆಯನ್ನು ಒದಗಿಸಲು ಶಾಲೆಗಳು ಕೈಗೊಳ್ಳಬೇಕಾದ ಕ್ರಮಗಳನ್ನು ಪಟ್ಟಿಮಾಡಿ.

## 1.4.4. ಸಾರಾಂಶಿಸೋಣ

- ಬಡತನ, ಮನೆಯ ಜವಾಬ್ದಾರಿ, ಸುರಕ್ಷತೆಯ ಕೊರತೆ, ಅಭದ್ರತೆ, ಶಿಕ್ಷಣದ ಕಣ್ಣಿಗೆ ಕಾಣದ ವೆಚ್ಚಗಳು, ಸಾಮಾಜಿಕ ಹೊರಗಿಡುವಿಕೆ ಮತ್ತು ಪಕ್ಷಪಾತದ ಮಾನಕಗಳು, ಯುದ್ಧಪೀಡಿತ ಪ್ರದೇಶಗಳು ಇತ್ಯಾದಿ ಅಂಶಗಳು ಪ್ರವೇಶಾತಿ ಮತ್ತು ದಾಖಲಾತಿಗೆ ಸಂಬಂಧಿಸಿದ ಲಿಂಗತ್ವ ವಿಚಾರಗಳಾಗಿವೆ.
- ಹೆಣ್ಣುಮಕ್ಕಳು ನಾಚಿಕೆಯ ಸ್ವಭಾವ, ಅತಿಯಾದ ಸ್ವಪ್ರಜ್ಞೆ, ಹುಡುಗರ ಎದುರು ಪ್ರಶ್ನೆಕೇಳಲು ಇಷ್ಟಪಡದಿರುವುದು, ಅವರ ಅಭಿಪ್ರಾಯಗಳು ನಗಣ್ಯವಾಗುವುದು, ವೈಯಕ್ತಿಕ ಮಾತುಗಳ ಕುರಿತ ಆಸಕ್ತಿಯಿಂದಾಗಿ ಸಾರ್ವಜನಿಕ ಅಂಶಗಳಲ್ಲಿ ಆಸಕ್ತಿ ಇಲ್ಲದಿರುವುದು ಇತ್ಯಾದಿ ಅಂಶಗಳು ಭಾಗವಹಿಕೆಗೆ ಅಡ್ಡಿಯಾಗುತ್ತವೆ.
- ದಾಖಲಾತಿ, ಭಾಗವಹಿಕೆಗೆ ಅಡ್ಡಿಯಾಗುವ ಅಂಶಗಳೇ ಸಾಧನೆಗೆ ಸಂಬಂಧಿಸಿದಂತೆಯೂ ಅಡ್ಡಿಯಾಗುತ್ತವೆ.
- ಹೆಣ್ಣುಮಕ್ಕಳ ಅಗತ್ಯಗಳನ್ನು ಗಮನಿಸಿಕೊಂಡು 'ಮಕ್ಕಳ ಸ್ನೇಹಿ'ಯಾದ ಪರಿಸರವನ್ನು ನಿರ್ಮಿಸುವುದರಿಂದ ಹುಡುಗಿಯರನ್ನು ಶಾಲೆಗೆ ಆಕರ್ಷಿಸಬಹುದು.

## 1.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1**

ಸ್ವಕಲಿಕಾ ಸಾಮಗ್ರಿ ಭಾಗ 1.4.3.1 ಗಮನಿಸಿಕೊಳ್ಳಿ

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2**

ಸ್ವಕಲಿಕಾ ಸಾಮಗ್ರಿ ಭಾಗ 1.4.3.2 ಗಮನಿಸಿಕೊಳ್ಳಿ

## 1.4.6. ಘಟಕಾಂತ್ಯ ಅಭ್ಯಾಸಗಳು

ಪ್ರವೇಶಾತಿ, ದಾಖಲಾತಿ, ಉಳಿಕೆ, ಭಾಗವಹಿಕೆ ಮತ್ತು ಒಟ್ಟು ಸಾಧನೆ ಇವುಗಳಿಗೆ ಸಂಬಂಧಿಸಿದ ಲಿಂಗತ್ವ ಕಾಳಜಿಗಳನ್ನೂ ಶಾಲೆ ಅವುಗಳನ್ನು ನಿಭಾಯಿಸಬಹುದಾದ ರೀತಿಗಳನ್ನೂ ವಿವರಿಸಿ.

## 1.4.7. ಪರಾಮರ್ಶನ ಸೂಚಿ


1. Dr. N.B. Kongawad and Dr. N. P. Shahapur, "Gender, School and Society", Vidyanidhi Prakashana.
2. Dr. Mahabaleshwar Rao, Gender, School Education (2017), Vismaya Prakashana.
3. Vinoti Ohja Trivedi, "Gender School and Society", Agarwal Publication.


************

# ಬ್ಲಾಕ್–1 : ಭಾರತದಲ್ಲಿ ಲಿಂಗತ್ವ ವಿಚಾರಗಳು ಮತ್ತು ಸಾಮಾಜೀಕರಣ ಪ್ರಕ್ರಿಯೆ

## ಘಟಕ–5 : ಪಠ್ಯಕ್ರಮದಲ್ಲಿ ಲಿಂಗತ್ವ ವಿಚಾರಗಳು

**ಘಟಕದ ರಚನೆ**


1.5.1. ಕಲಿಕೆಯ ಉದ್ದೇಶಗಳು

1.5.2. ಪೀಠಿಕೆ

1.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.5.3.1. ಪಠ್ಯಕ್ರಮ ಮತ್ತು ಲಿಂಗತ್ವ ವಿಚಾರಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1.5.3.2. ಲಿಂಗತ್ವ ಸಮಾನತೆಯೊಡಗೂಡಿದ ಶಾಲಾ ಪಠ್ಯಕ್ರಮ ರಚನೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

1.5.4. ಸಾರಾಂಶಿಸೋಣ

1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

1.5.6. ಘಟಕಾಂತ್ಯ ಅಭ್ಯಾಸಗಳು

1.5.7. ಪರಾಮರ್ಶನ ಸೂಚಿ


### 1.4.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಪಠ್ಯಕ್ರಮದ ಅರ್ಥವನ್ನು ವಿವರಿಸುವರು;
- ಪಠ್ಯಕ್ರಮದ ವಿವಿಧ ಅಂಶಗಳಲ್ಲಿ ಲಿಂಗತ್ವ ವಿಚಾರಗಳನ್ನು ವಿವರಿಸುವರು;
- ಲಿಂಗತ್ವಕ್ಕೆ ಸಂಬಂಧಿಸಿದಂತೆ ಶಿಕ್ಷಣದ ಇತಿಹಾಸವನ್ನು ಸಂಗ್ರಹವಾಗಿ ಗುರುತಿಸುವರು;
- ಲಿಂಗತ್ವ ಸಮಾನ ಪಠ್ಯಕ್ರಮವನ್ನೂ ಅದನ್ನು ಸಾಧಿಸುವ ರೀತಿಯನ್ನೂ ಗುರುತಿಸುವರು.

### 1.4.2 ಪೀಠಿಕೆ

ಈಗಾಗಲೇ ನಾವು ಲಿಂಗತ್ವ ಎಂದರೇನು, ಈ ದಿಶೆಯಲ್ಲಿ ಸಮಾಜ ಬೀರುವ ಪ್ರಭಾವಗಳೇನು ಎಂಬುದನ್ನು ತಿಳಿದಿದ್ದೇವೆ. ಇದರ ಜೊತೆಜೊತೆಗೇ, ಈ ಲಿಂಗತ್ವವು ತರಗತಿಯಲ್ಲಿ ಹೇಗೆ ಪ್ರಭಾವಬೀರುತ್ತದೆ ಎಂಬುದು ಅಧ್ಯಾಪಕರಾದ ನಮಗೆ ಅತ್ಯಂತ ಪ್ರಮುಖವಾದ ವಿಷಯ. ನಾವೆಲ್ಲರೂ ಶಿಕ್ಷಣ ರಂಗದ ಸದಸ್ಯರಾಗಿದ್ದು, ಶಿಕ್ಷಣ ವ್ಯವಸ್ಥೆಯ ಎಲ್ಲ ಅಂಶಗಳೂ ನಮಗೆ ತಿಳಿದಿದೆ. ವಿಷಯ, ಬೋಧನಾ ವಿಧಾನ, ಅಧ್ಯಾಪಕ, ಬೋಧನಾ ಕಲಿಕಾ ಸಾಮಗ್ರಿ ಈ ಎಲ್ಲವೂ ಶೈಕ್ಷಣಿಕ ಪ್ರಕ್ರಿಯೆಯ ಭಾಗಗಳೇ ಆಗಿವೆ. ಇವೆಲ್ಲವೂ ಒಟ್ಟಾಗಿ ಪಠ್ಯಕ್ರಮವೆನಿಸಿಕೊಳ್ಳುತ್ತದೆ. ಹೆಚ್ಚು ನಿರ್ದಿಷ್ಟವಾಗಿ ಹೇಳುವುದಾದರೆ, ಒಟ್ಟು ಶಿಕ್ಷಣದ ಗುರಿಗಳ ಆಧಾರದ ಮೇಲೆ, ಶಾಲಾ ಗುರಿಗಳನ್ನು

ಸಾಧಿಸಲು ಶಾಲೆಯ ಒಳಗೆ ಮತ್ತು ಹೊರಗೆ ಕೊಡುವ ಕಲಿಕಾ ಅನುಭವಗಳ ಸಮಷ್ಟಿಯೇ ಪಠ್ಯಕ್ರಮ. ಇದರ ಪ್ರತಿ ಅಂಶವೂ ಬದುಕಿನ ಸನ್ನಿವೇಶಗಳಿಗೆ ಸಂಬಂಧಸಿದಂತೆ ಸಮತೋಲನದಲ್ಲಿರಬೇಕು.

ಲಿಂಗತ್ವವು ನಮ್ಮ ಬದುಕಿನ ಬಹು ಪ್ರಮುಖ ಅಂಶವಾಗಿದ್ದು ಬಹಳ ಸನ್ನಿವೇಶಗಳಲ್ಲಿ, ವಿವಿಧ ಲಿಂಗದ ಜನರ ನಡುವೆ ಒಂದು ರೀತಿಯ ಸಮತೋಲನವನ್ನು ಕಾಪಾಡುವಲ್ಲಿ ನಮ್ಮ ಶಿಕ್ಷಣದ ಪಠ್ಯಕ್ರಮ ಸೋತಿರುವುದು ಗಮನಕ್ಕೆ ಬರುತ್ತದೆ. ಒಂದು ಆರೋಗ್ಯಕರ ಸಮಾಜವನ್ನು ಕಟ್ಟುವಲ್ಲಿ, ಎರಡೂ ಲಿಂಗದ ಜನರಿಗೆ ಸಮನಾದ, ಸಲ್ಲಬೇಕಾದ ಪ್ರಾಮುಖ್ಯತೆಯನ್ನು ನೀಡುವುದು ಅವಶ್ಯಕ. ಹಾಗಾಗಿ, ಜನರ ಮನದಲ್ಲಿ ಪ್ರಗತಿಪರವಾದ ಬದಲಾವಣೆಗಳನ್ನು ತಂದು ಆ ಮೂಲಕ ಸಮಾಜದ ಪ್ರಗತಿಗೆ ಕಾರಣವಾಗುವಂತೆ, ಪಠ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ಆದರೆ, ಇದಕ್ಕೆ ವಿರುದ್ಧವಾಗಿ ಪಠ್ಯಕ್ರಮವೇ ಈ ಭೇದವನ್ನು ಸೃಷ್ಟಿಸುವ ಸಂದರ್ಭಗಳು ಇವೆ. ಈ ಕುರಿತು ಸಾಕಷ್ಟು ಆಲೋಚನೆಗಳು ಪ್ರಯತ್ನಗಳು ಆಗಿರುವುದಾದರೂ ಗುರಿ ಮುಟ್ಟಲಾಗಿಲ್ಲ. ಹೀಗಾಗಿ ಆಗಬೇಕಾದುದು ಇನ್ನೂ ಇದೆ. ಈ ಕುರಿತು ಈ ಘಟಕದಲ್ಲಿ ವಿಚಾರಮಾಡೋಣ.

## 1.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.5.3.1. ಪಠ್ಯಕ್ರಮ ಮತ್ತು ಲಿಂಗತ್ವ ವಿಚಾರಗಳು

**ಅಭ್ಯಾಸ – I**

ಐಸಿಎಸ್‌ಸಿ ಪಠ್ಯವಸ್ತುವಿನ 8ನೇ ತರಗತಿಯ ಭೂಗೋಳ ಪುಸ್ತಕದಿಂದ ಆಯ್ದ ಒಂದು ವಾಕ್ಯವೃಂದವನ್ನು ಕೆಳಗೆ ಕೊಡಲಾಗಿದೆ. ಇದನ್ನು ಓದಿ ನಂತರ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಒತ್ತಡ ನಗರ ಜೀವನದ ಲಕ್ಷಣ. ಇದು ಕೌಟುಂಬಿಕ ಸಂಬಂಧಗಳ ಮೇಲೆ ಪ್ರಭಾವ ಬೀರುತ್ತದೆ. ನಗರಗಳಲ್ಲಿ ಬಹಳಷ್ಟು ಮಹಿಳೆಯರು ಏರುತ್ತಿರುವ ಜೀವನವೆಚ್ಚವನ್ನು ಸರಿದೂಗಿಸಲು ಉದ್ಯೋಗವನ್ನು ಕೈಗೊಂಡಿದ್ದಾರೆ. ಕುಟುಂಬದಲ್ಲಿ ಮಹಿಳೆಯ ಬದಲಾದ ಪಾತ್ರ ಕುಟುಂಬದಲ್ಲಿ ಒತ್ತಡವನ್ನು ಸೃಷ್ಟಿಸುತ್ತಿದೆ. ಇದು ಕೌಟುಂಬಿಕ ಸಂಬಂಧಗಳನ್ನು ಹದಗೆಡಿಸಬಹುದು.

ಈ ವಾಕ್ಯವೃಂದದಲ್ಲಿ ಸೂಚಿಸಿರುವಂತೆ ಒತ್ತಡಕ್ಕೆ ಕಾರಣವೇನು?

ಈ ವಾಕ್ಯವೃಂದವು ಯಾವ ಸಂದೇಶವನ್ನು ಕೊಡುತ್ತದೆ?

ಇದನ್ನು ಓದುತ್ತಿರುವಂತೆ, ಈ ಲೇಖಕರ ಪ್ರಕಾರ ಮಹಿಳೆಯು ಉದ್ಯೋಗ ಮಾಡಬಾರದು ಎಂಬ ಸಂದೇಶವನ್ನು ನೀಡುತ್ತಿರುವಂತೆ ಅನ್ನಿಸುವುದಿಲ್ಲವೇ? ಒಮ್ಮೆ ಹಾಗೆ ಹೋದರೆ, ಅದು ಕುಟುಂಬದಲ್ಲಿ ಒತ್ತಡವನ್ನು ಸೃಷ್ಟಿಮಾಡುತ್ತದೆ. ಈ ರೀತಿ ಪಠ್ಯಪುಸ್ತಕಗಳು ಅನೇಕ ಸಂದೇಶಗಳನ್ನು ಕೊಡುತ್ತವೆ. ಇವು ಲಿಂಗ ಪಕ್ಷಪಾತವನ್ನು ಸೃಷ್ಟಿಸುತ್ತವೆ. ಇವು ಮಹಿಳೆಯರನ್ನು ಸೂಕ್ತ ಅವಕಾಶಗಳು ಸ್ಥಾನಮಾನಗಳಿಂದ ವಂಚಿಸುವ ಅಪಾಯಕಾರಿ ಮಾತುಗಳಾಗುತ್ತವೆ. ಈ ರೀತಿಯ ಅಂಶಗಳನ್ನು ಗಮನಿಸಿ ಎದುರಿಸುವ ಕುರಿತು ನಾವು ಮುಂದೆ ಚರ್ಚಿಸೋಣ.

ಪಠ್ಯಕ್ರಮ ಎಂದರೇನು?

ಶಿಕ್ಷಣದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳ ಅನುಭವಗಳ ಸಮಷ್ಟಿಯೇ ಪಠ್ಯಕ್ರಮ ಎಂದು ಹೇಳಲಾಗುತ್ತದೆ. ಶಾಲೆಯ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವ ಯೋಜಿತ ಅನುಭವಗಳೇ ಪಠ್ಯಕ್ರಮ ಎಂದು ಡಿ ಕೆ ವ್ಹೀಲರ್ ಎಂಬಾತ ಹೇಳುತ್ತಾನೆ. ಶಾಲೆ ಗುಂಪಿನಲ್ಲಿ ಅಥವಾ ಪ್ರತ್ಯೇಕವಾಗಿ ಯೋಜಿಸಿದ ಮತ್ತು ಮಾರ್ಗದರ್ಶಿಸಿದ ಕಲಿಕೆಯ ಸಮಷ್ಟಿಯೇ ಪಠ್ಯಕ್ರಮ ಎಂಬುದು ಕರ್ ಎಂಬ ತಜ್ಞನ ಅಭಿಮತ. ಓಲೌಚ್ ಎಂಬ ತಜ್ಞನ ಪ್ರಕಾರ ಅಪೇಕ್ಷಿತ ಜ್ಞಾನ, ಕೌಶಲಗಳು ಮತ್ತು ಮನೋಭಾವಗಳನ್ನು ಬೆಳೆಸಲು ಶಾಲೆ ಯೋಜಿಸಿದ ಎಲ್ಲವೂ ಒಟ್ಟಾಗಿ ಪಠ್ಯಕ್ರಮ ಎನಿಸಿಕೊಳ್ಳುತ್ತದೆ.

ಮೇಲಿನ ವ್ಯಾಖ್ಯೆಗಳಿಂದ, ಪಠ್ಯಕ್ರಮ ಎಂಬುದು ಕಲಿಕಾರ್ಥಿಗಳಲ್ಲಿ ಉದ್ದೇಶಿತ ಜ್ಞಾನ, ಕೌಶಲ ಮತ್ತು ಮನೋಭಾವಗಳನ್ನು ಬೆಳೆಸಲು ಶಿಕ್ಷಣ ಸಂಸ್ಥೆಗಳು ಗುರುತಿಸಿಕೊಂಡ ಯೋಜಿತ ಅನುಭವಗಳು ಎಂದು ಹೇಳಬಹುದು. ಇದು ಸರ್ಕಾರ ಸಿದ್ಧಪಡಿಸಿದ ಕಛೇರಿ ದಾಖಲೆಗಳಿಗಿಂತಲೂ ಹೆಚ್ಚು ಆಳವೂ ವಿಸ್ತೃತವೂ ಆದುದು. ಇದು ತರಗತಿಯಲ್ಲಿ ಬೋಧನೆ, ಜೊತೆಗೆ ಹುಟ್ಟಿಕೊಳ್ಳುವ ವ್ಯಾಖ್ಯಾನಗಳು, ನಂಬಿಕೆಗಳು, ಊಹೆಗಳು, ಅಧ್ಯಾಪಕರ ಆದರ್ಶಗಳು ಇತ್ಯಾದಿ ಎಲ್ಲವನ್ನೂ ಒಳಗೊಂಡು 'ಬೋಧಿಸಿದ ನಮೂನೆಯ' ಪಠ್ಯಕ್ರಮವಾಗಿ ಮಾರ್ಪಡುತ್ತದೆ. ತರಗತಿಯಲ್ಲಿರುವ ಮಕ್ಕಳ ನಂಬಿಕೆಗಳು, ಮೌಲ್ಯಗಳ ಅರಿವಿನ ಹಿನ್ನೆಲೆಯಲ್ಲಿ ಅಪೇಕ್ಷಿತ ಉದ್ದೇಶಗಳನ್ನು ಸಾಧಿಸುವುದು ಹೇಗೆ ಎಂಬುದು ಹೆಚ್ಚು ಮುಖ್ಯವಾಗುತ್ತದೆ. ಇಷ್ಟೇ ಅಲ್ಲದೆ, ಈ ಪಠ್ಯಕ್ರಮವನ್ನು ಹೇಗೆ ಪರೀಕ್ಷಿಸಲಾಗುತ್ತದೆ ಅಥವಾ ಮೌಲ್ಯಮಾಪನ ಮಾಡಲಾಗುತ್ತದೆ ಎಂಬುದೂ ಗಮನಿಸಬೇಕಾದ ಅಂಶ.

## ಪಠ್ಯಕ್ರಮದಲ್ಲಿ ಲಿಂಗತ್ವ ವಿಚಾರಗಳು

### ಭಾಷೆ ಮತ್ತು ಲಿಂಗತ್ವ

ಕೆಲವು ಪಠ್ಯವಸ್ತು ವಿಷಯಗಳು ಅದರಲ್ಲಿ ಬಳಸಿರುವ ಭಾಷೆ ಲಿಂಗಪಕ್ಷಪಾತವನ್ನು ತೋರಿಸುತ್ತದೆ. ಭಾಷೆಯು ಪುರುಷ ಅಥವಾ ಮಹಿಳಾ ಪ್ರಾಧಾನ್ಯ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಜೊತೆಗೆ ಸ್ಥಿತಿಯನ್ನೂ ಗುರುತಿಸಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ 'ಅವನು' ಎಂಬುದನ್ನು ಸಾರ್ವತ್ರಿಕ ಸರ್ವನಾಮವಾಗಿ ಬಳಸಲಾಗುತ್ತದೆ. ಉದಾಹರಣೆಗೆ ಈ ವಾಕ್ಯವನ್ನು ನೋಡಿ 'ಶಾಲೆಯಲ್ಲಿ ಪ್ರತಿ ವಿದ್ಯಾರ್ಥಿಯ ಸಾಧನೆಯನ್ನು ಪ್ರತ್ಯೇಕವಾಗಿ ಗುರುತಿಸಬೇಕು. ಅವನ ಮನೆಗೆಲಸವನ್ನು ಪರೀಕ್ಷಿಸಿ ಅವನಿಗೆ ಸೂಕ್ತ ಹಿಮ್ಮಾಹಿತಿ ಕೊಡಬೇಕು.' ಅತಿ ಸಹಜವೆಂಬಂತೆ ಈ ರೀತಿಯ ಅಭಿವ್ಯಕ್ತಿಗಳು ನಮ್ಮ ಭಾಷೆಗಳಲ್ಲಿ ಸೇರಿಕೊಂಡುಬಿಟ್ಟಿವೆ. ಉಳಿದ ಕೆಲವು ಪದಗಳನ್ನು ಗಮನಿಸಿ. ಅಧ್ಯಕ್ಷರು, ಕವಿಗಳು, ಅಭಿಯಂತರ, ಪೋಲೀಸ, ಭ್ರಾತೃತ್ವ, ಸಹೋದರ ಭಾವ, ಆರಕ್ಷಕ, ಇತ್ಯಾದಿ. ಇಂತಹ ಇನ್ನೂ ಹಲವಾರು ಪದಗಳನ್ನು ಗಮನಿಸಬಹುದು. ಇಂತಹ ಪದಗಳಿಗೆ ಲಿಂಗಸೂಚಕವಲ್ಲದ ಪದಗಳನ್ನು ಬಳಸಬಹುದು.

### ಪಠ್ಯಕ್ರಮ ರಚನೆ ಮತ್ತು ಲಿಂಗತ್ವ

ಲಿಂಗತ್ವದ ವಿಷಯಕ್ಕೆ ಬಂದಾಗ, ಪಠ್ಯಕ್ರಮವು ಸಂಸ್ಕೃತಿಯ ನಂಬಿಕೆಗಳ ಅಭಿವ್ಯಕ್ತಿಯಾಗಿ ವಿನ್ಯಾಸಗೊಂಡಿರುತ್ತದೆ. ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು ಆಯಾ ಸಮುದಾಯದ ಗ್ರಹಿಕೆಗೆ ಅನುಗುಣವಾಗಿ ರೂಪಿತವಾಗಿರುತ್ತವೆ. ಹುಡುಗಿಯರು ಹೆಚ್ಚು ಸಂವೇದನಾ ಶೀಲರೂ ಸೌಂದರ್ಯಪ್ರಜ್ಞೆಯುಳ್ಳವರೂ ಹುಡುಗರು ಶಕ್ತಿ ಸಾಮರ್ಥ್ಯವುಳ್ಳವರಾಗಿಯೂ ಇರುವರೆಂದು ನಂಬಲಾಗುತ್ತದೆ. ಹಾಗಾಗಿ ಹಾಡು, ನೃತ್ಯ ಇವುಗಳನ್ನು ಹುಡುಗಿಯರಿಗೂ ಆಟ ಕ್ರೀಡೆಗಳನ್ನು ಹುಡುಗರಿಗೂ ಯೋಜಿಸಿರಲಾಗುತ್ತದೆ. ಕೆಲವು ರೀತಿಯ ಲಲಿತಕಲೆಗಳು ಹೆಂಗಸರಿಗೆ ಕೆಲವು ರೀತಿಯ ಆಟಗಳು ಹುಡುಗರಿಗೆ ಎಂದು ಭಾವಿಸಲಾಗುತ್ತದೆ. ಅಧ್ಯಯನ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವ್ಯತ್ಯಾಸಗಳಿಲ್ಲದಿದ್ದರೂ ಅವುಗಳ ಕಲಿಕೆಯಲ್ಲಿ ವ್ಯತ್ಯಾಸಗಳನ್ನು ಗುರುತಿಸಲಾಗಿದೆ.

### ತರಗತಿ ಮತ್ತು ಲಿಂಗತ್ವ

ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಗ್ರಹಿಕೆಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ. ಹೆಣ್ಣುಮಕ್ಕಳು ಹೆಚ್ಚು ಜವಾಬ್ದಾರಿಯುತರು, ಕಷ್ಟಪಟ್ಟು ಕೆಲಸಮಾಡುವವರು, ಗಂಡುಮಕ್ಕಳು ಹೆಚ್ಚು ತುಂಟರು ಬೇಜವಾಬ್ದಾರಿಗಳು ಎಂದು ಪರಿಗಣಿತರಾಗಿದ್ದಾರೆ. ಇದಕ್ಕನುಗುಣವಾಗಿಯೇ ತರಗತಿಯ ಚಟುವಟಿಕೆಗಳು ಯೋಜಿತವಾಗುತ್ತವೆ. ಹುಡುಗರು ಕ್ಲಾಸ್ ಲೀಡರ್‌ಗಳಾಗಿ ಹುಡುಗಿಯರು ಕೋಣೆಯ ಸ್ವಚ್ಛತೆ ಕಾಪಾಡುವವರಾಗಿ ಪಾತ್ರ ವಹಿಸುತ್ತಾರೆ. ಹುಡುಗರು ಎಲ್ಲ ವಿಷಯಗಳಲ್ಲೂ ಹೆಚ್ಚು ಭಾಗಿಗಳಾಗುತ್ತಾರೆ. ಹುಡುಗರಿಗೆ ಧನಾತ್ಮಕವಾದ ಮತ್ತು ಋಣಾತ್ಮಕವಾದ ಸನ್ನಿವೇಶಗಳೆರಡನ್ನೂ ಸೃಷ್ಟಿಸಲಾಗುತ್ತದೆ. ಇದಕ್ಕೆ ಅವರಿಗೆ ಪೋಷಣೆಯೂ ಸಿಗುತ್ತದೆ. ಉದಾಹರಣೆಗೆ, ಒಂದು ಹುಡುಗ ಒಂದು 'ಜೋಕ್' ಮಾಡಿದರೆ, ಅಧ್ಯಾಪಕರೂ ಸೇರಿದಂತೆ ಎಲ್ಲರೂ

ನಗುತ್ತಾರೆ. ಅದೇ ಒಂದು ಹುಡುಗಿ 'ಜೋಕ್' ಮಾಡಿದರೆ ಎಲ್ಲರೂ ಗಂಭೀರವಾಗಿ ಅವಳ ಕಡೆ ನೋಡುತ್ತಾರೆ. ತರಗತಿಯಲ್ಲಿ ಹುಡುಗರ ಭಾಗವಹಿಕೆಯ ಹೆಚ್ಚಿನ ಪ್ರಮಾಣವನ್ನೇ ಸಂಶೋಧನೆಗಳೂ ತೋರಿಸುತ್ತವೆ. ಇದರಿಂದಾಗಿ ತರಗತಿಯಲ್ಲಿ ಅವರದೇ ಕೈ ಮೇಲಾಗಿರುತ್ತದೆ.

## ಬೋಧನಾ ಸಾಮಗ್ರಿ ಮತ್ತು ಲಿಂಗತ್ವ

ಭಾರತೀಯ ಸನ್ನಿವೇಶದಲ್ಲಿ ಪಠ್ಯಪುಸ್ತಕಗಳು ಜ್ಞಾನದ ಗಣಿಗಳು ಎಂಬ ಭಾವನೆ ಬೇರೂರಿದೆ. ಪಠ್ಯಪುಸ್ತಕಗಳು ಒಂದು ಸ್ಥಳದ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವುದರಿಂದ ಸಮಾಜದಲ್ಲಿರುವ ಲಿಂಗ ಅಸಮಾನತೆಯೂ ಒಳಗೆ ತೂರುವ ಸಾಧ್ಯತೆಗಳಿವೆ. ಪಠ್ಯಗಳಲ್ಲಿ ಮಹಿಳೆಯರನ್ನು ಚಿತ್ರಿಸುವಾಗ ಪುರುಷರಿಗಿಂತ ಕೆಳಗಿನ ಸ್ಥಾನಮಾನದಲ್ಲಿ ಗುರುತಿಸಲಾಗುತ್ತದೆ. ಇಡೀ ಪಠ್ಯಪುಸ್ತಕದಲ್ಲಿ ಮಹಿಳೆಯರಿಗಿಂತ ಪುರುಷರು  ಕಾಣಿಸಿಕೊಳ್ಳುವುದೇ ಹೆಚ್ಚು. ಪಠ್ಯಪುಸ್ತಕ ಸಿದ್ಧಪಡಿಸುವ ಸಮಿತಿಯಲ್ಲೂ  ನೀವು ಇದನ್ನು ಗಮನಿಸಬಹುದು. ಪಠ್ಯಪುಸ್ತಕದ ಚಿತ್ರಗಳು ಮತ್ತು ಅಭ್ಯಾಸಗಳೂ ಲಿಂಗ ಪಡಿಯಚ್ಚುಗಳನ್ನು ಬಿಂಬಿಸುತ್ತವೆ. ಮಹಿಳೆ ಹಾಗೂ ಪುರುಷರನ್ನು ಸಾಂಪ್ರದಾಯಿಕ ಗುಣಲಕ್ಷಣಗಳೊಂದಿಗೇ ಗುರುತಿಸಲಾಗುತ್ತದೆ. ಪುರುಷರನ್ನು ಧೈರ್ಯವಂತರು, ಶಕ್ತಿಶಾಲಿಗಳು, ಪ್ರಾಮಾಣಿಕರು ಎಂದೂ ಹೆಂಗಸರನ್ನು ಸೇವೆ ಮಾಡುವವರು, ತ್ಯಾಗಿಗಳು, ಕರುಣಾವಾತ್ಸಲ್ಯಮಯಿಗಳು ಎಂದೂ  ಚಿತ್ರಿಸಲಾಗುತ್ತದೆ. ಈಚೆಗೆ ಲಿಂಗ ಸಮಾನತೆಯನ್ನು ತರುವ ಹಿನ್ನೆಲೆಯಲ್ಲಿ ಓಅಇಖಖ ಮತ್ತು ಇತರ ರಾಜ್ಯಮಟ್ಟದ ಪಠ್ಯಗಳಲ್ಲಿ ಕೆಲವು ಬದಲಾವಣೆಗಳು ಕಂಡುಬಂದಿವೆ.

ಪಠ್ಯಕ್ರಮಗಳು ಲಿಂಗಗಳ ಸಾಂಪ್ರದಾಯಿಕ ಅಭಿಪ್ರಾಯಗಳನ್ನೇ ಬಿಂಬಿಸುತ್ತವೆ ಎಂಬುದನ್ನು ಹಲವಾರು ಸಂಶೋಧನೆಗಳು ಪುಷ್ಟೀಕರಿಸಿವೆ.ಉದಾಹರಣೆಗೆ, ತಾಯಿಯರನ್ನು ಮನೆವಾರ್ತೆಯಲ್ಲಿ ತಂದೆಯರನ್ನು ವರಮಾನತರುವವರಾಗಿ ಬಿಂಬಿಸುವುದು ಹೊಸವಿಷಯವೇನಲ್ಲ. 'ಕಮಲಳು ತಾಯಿಗೆ ಮನೆಕೆಲಸದಲ್ಲಿ ಸಹಾಯಮಾಡಿದಳು, ಬಸವನು ತಂದೆಗೆ ತೋಟದಲ್ಲಿ ಸಹಾಯಮಾಡಿದನು' ಎಂಬುದರ ಜೊತೆಗೇ ನಮ್ಮ ಪಠ್ಯಗಳು ಹುಟ್ಟಿದುದು. ಈಗ ಸನ್ನಿವೇಶ ಸ್ವಲ್ಪ ಬದಲಾಗಿದೆ. ಕಮಲ ತೋಟಕ್ಕೆ ಹೋಗುವ, ನೌಕರಿ ಮಾಡುವ ಸನ್ನಿವೇಶಗಳಿದ್ದರೂ ಬಸವ ಅಡಿಗೆ ಮನೆಯಲ್ಲಿ ಸಹಾಯಮಾಡಲು ಬಂದಿಲ್ಲ. ತಂದೆಯ ಚಿತ್ರ ತೋರಿಸುವಾಗ 'ಹಜಾರದಲ್ಲಿ ಕುರ್ಚಿಯ ಮೇಲೆ ಆರಾಮಕುರ್ಚಿಯಲ್ಲಿ ಪೇಪರ್ ಓದುವ ಅಪ್ಪ'ನ ಚಿತ್ರ ನೀವು ನೋಡಿರಬಹುದು. ತಾಯಿ ಬಡಿಸುವ ಚಿತ್ರ, ಹುಡುಗಿ ತಲೆ ಬಾಚಿಕೊಳ್ಳುವ ಚಿತ್ರ, ಹುಡುಗ ಚೆಂಡಾಡ ಆಡುವ ಚಿತ್ರ ಇವೆಲ್ಲವೂ ಲಿಂಗ ಪಕ್ಷಪಾತಕ್ಕೆ ಉದಾಹರಣೆಗಳು. ಕೆಲವೊಮ್ಮೆ ಅಧ್ಯಾಪಕರ, ಮಕ್ಕಳ ಮಾತೂ ಲಿಂಗ ಪಕ್ಷಪಾತವನ್ನು ತೋರಿಸುತ್ತವೆ. 'ಏನು ಗಂಡುಬೀರಿ ಥರಾ ಆಡುತ್ತೀಯ', 'ಹುಡುಗರಂತೆ ಬಾರೀ ಜೋರು', 'ಹುಡುಗಿಯರಂತೆ ನಾಚುತ್ತಾನೆ', 'ಹುಡುಗಿಯರ ಹಾಗೆ ಕಣ್ಣಲ್ಲೇ ನೀರು' ಇತ್ಯಾದಿ ಮಾತುಗಳು ನಮಗೆ ಅಪರೂಪವೇನಲ್ಲ. ಕೆಲವೊಮ್ಮೆ ಹುಡುಗಿಯರನ್ನು ಒಳ್ಳೆಯ ಗುಣಗಳಲ್ಲಿ ಹುಡುಗರನ್ನು ಇತರ ಗುಣಗಳಲ್ಲಿ ಗುರುತಿಸಲಾಗುತ್ತದೆ. ಅದೂ ಸಲ್ಲದು. ಒಟ್ಟಿನಲ್ಲಿ ತರಗತಿಯ ಅಂತರ್ ಕ್ರಿಯೆಗಳು ಆರೋಗ್ಯವಂತ ಸಮಾಜವನ್ನು ರೂಪಿಸಬೇಕು ಎಂಬುದಷ್ಟೇ ಮುಖ್ಯ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ನಿಮ್ಮ ತರಗತಿಯಲ್ಲಿ ಒಂದು ಚಟುವಟಿಕೆಯನ್ನು ಕೈಗೊಳ್ಳಿ. ಅವರಿಗೆ ಲಿಂಗ ಸಮಾನತೆ, ಅದಕ್ಕೆ ಅಡ್ಡಿಯಾಗುವ ಅಂಶಗಳನ್ನು ಪರಿಚಯಿಸಿ. ಕೆಳಗಿನಂತೆ ಒಂದು ಚಾರ್ಟ್ ಮಾಡಿ ತೂಗುಹಾಕಿ. ಲಿಂಗ ಸಮಾನತೆಗೆ ಅಡ್ಡಿಬರುವ ಅಂಶ ಗಮನಕ್ಕೆ ಬಂದ ಕೂಡಲೆ ಅದನ್ನು ಚರ್ಚಿಸಲು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೇ ನಾಯಕತ್ವ ಕೊಡಿ. ಅದು ಅಧ್ಯಾಪಕರ, ವಿದ್ಯಾರ್ಥಿಗಳ/ವಿದ್ಯಾರ್ಥಿನಿಯರ ಮಾತು, ಪಠ್ಯದ ಅಂಶಗಳು, ಅವರು ಗಮನಿಸಿದ ಕೆಲಸದ ಹಂಚಿಕೆ ಇದಾವುದೇ ಆಗಿರಬಹುದು. ಅದನ್ನು ತೂಗುಹಾಕಿದ ಚಾರ್ಟ್‌ನಲ್ಲಿ ಗುರುತಿಸಿ. ಅಂತಹ ಸನ್ನಿವೇಶಗಳು ಒಂದು ತಿಂಗಳಿಗೆ ಎಷ್ಟು ಎಂದು ಗಮನಿಸಿ. ಅದು ಕಡಿಮೆಯಾಗುತ್ತಿರುವಂತೆ ಸಂಭ್ರಮಿಸಿ.

| ಕ್ರಮ ಸಂಖ್ಯೆ | ಘಟನೆ/ ಸನ್ನಿವೇಶ | ಸನ್ನಿವೇಶದ ವಿವರಣೆ | ತೀರ್ಮಾನ |
|---|---|---|---|
| 1 | ಶಾಲಾ ವಾರ್ಷಿಕೋತ್ಸವ: ಕೆಲಸದ ಹಂಚಿಕೆ | ಹುಡುಗಿಯರು ತರಗತಿ ಸ್ವಚ್ಛಗೊಳಿಸುವುದು/ ಹುಡುಗರು ಬಂಟಿಂಗ್ ಕಟ್ಟಿ ಶಾಲೆಯನ್ನು ಅಲಂಕರಿಸುವುದು | ಇಬ್ಬರೂ ಎರಡೂ ಕೆಲಸಗಳನ್ನು ಮಾಡುವುದು |
| | | | |
| | | | |
| | | | |

## 1.5.3.2. ಲಿಂಗತ್ವ ಸಮಾನತೆಯೊಡಗೂಡಿದ ಶಾಲಾ ಪಠ್ಯಕ್ರಮ ರಚನೆ

ಈವರೆಗಿನ ಪಠ್ಯಕ್ರಮದಲ್ಲಿ ಲಿಂಗ ಅಸಮಾನತೆ ಇದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಅದನ್ನು ನಾವು ಈಗಾಗಲೇ ಚರ್ಚಿಸಿದ್ದೇವೆ ಕೂಡ. ಈ ಸನ್ನಿವೇಶದಲ್ಲಿ ಲಿಂಗ ಸಮಾನತೆಯನ್ನು ಬಿಂಬಿಸುವ 'ಲಿಂಗ ಸಮಾನ ಪಠ್ಯಕ್ರಮ'ವನ್ನು ರೂಪಿಸಬೇಕು. ಹೀಗೆ ರೂಪಿಸುವ ಮೊದಲು ಲಿಂಗ ಸಮಾನತೆಯನ್ನು ಖಚಿತಪಡಿಸುವ ಶಿಕ್ಷಣದ ಅಂಶಗಳಿಗೆ ಗಮನಕೊಡಬೇಕು. ಅದನ್ನು ಸಾಕಾರಗೊಳಿಸುವ ಮಾರ್ಗೋಪಾಯಗಳನ್ನು ಗುರುತಿಸಿಕೊಳ್ಳಬೇಕು. ಇದಕ್ಕೆ ಮೊದಲು ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ಭಾರತದ ಶಾಲಾ ಪಠ್ಯಕ್ರಮವನ್ನು ಕುರಿತ ಅನೇಕ ಅಭಿಪ್ರಾಯಗಳನ್ನು ಶಿಕ್ಷಣ ತಜ್ಞರು ಶಿಕ್ಷಣಕ್ಕೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳಲ್ಲಿ ಈಗಾಗಲೇ ಗುರುತಿಸಿದ್ದಾರೆ. ಅದರ ಕಡೆಗೆ ಗಮನಹರಿಸೋಣ. ಇದು ಲಿಂಗ ಸಮಾನ ಪಠ್ಯಕ್ರಮವನ್ನು ರೂಪಿಸಲು ಪೂರಕವಾಗುತ್ತದೆ.

### ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ

ಭಾರತ ಸ್ವತಂತ್ರವಾದ ತತ್‌ಕ್ಷಣದಲ್ಲಿ, ಸ್ವತಂತ್ರಪಡೆದ ಹಿನ್ನೆಲೆಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಪುನರ್ ಸಂಘಟಿಸಲು ಕೈಗೊಂಡ ಸರ್ಕಾರಿ ಪ್ರಯತ್ನ ಎಂದರೆ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗದ ಆಯೋಜನೆ. ಪ್ರೊ ಎಸ್ ರಾಧಾಕೃಷ್ಣನ್ ಅವರು ಇದರ ಅಧ್ಯಕ್ಷರಾಗಿದ್ದರು.

ಈ ಆಯೋಗವು ದೇಶದ ಅಗತ್ಯಕ್ಕನುಗುಣವಾದ ಪ್ರಗತಿಪರ ಮತ್ತು ವಿಸ್ತರಣಾ ಆಲೋಚನೆಗಳನ್ನು ಮುಂದಿಟ್ಟಿತು. ಮಹಿಳಾ ಶಿಕ್ಷಣವನ್ನು ಕುರಿತಂತೆ ಈ ವರದಿ ಗಮನಿಸಿದ ಅಂಶಗಳು ಹೀಗಿವೆ:

"ಮಹಿಳೆಯರ ಇಂದಿನ ಶಿಕ್ಷಣ ಅವರ ಜೀವನಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಅಸಮರ್ಪಕ. ಇದು ನಿಷ್ಪ್ರಯೋಜಕ ಮಾತ್ರವಲ್ಲ; ಅದೊಂದು ರೀತಿಯ ಅಸಾಮರ್ಥ್ಯ."

"ಈ ಶಿಕ್ಷಣ ಪುರುಷರ ಅಗತ್ಯಗಳಿಗನುಗುಣವಾಗಿರುವುದರಿಂದ ಬದುಕಿನ ಸಮಸ್ಯೆಗಳನ್ನು ಎದುರಿಸಲು ಮಹಿಳೆಯರನ್ನು ಯಾವುದೇ ರೀತಿಯಲ್ಲೂ ಸಮರ್ಥರಾಗಿಸುವುದಿಲ್ಲ."

ಆಧುನಿಕ ಶಿಕ್ಷಿತ ಮಹಿಳೆಗೆ ಸಂತೋಷವೂ ಇಲ್ಲ, ತೃಪ್ತಿಯೂ ಇಲ್ಲ ಅಥವಾ ಅವಳು ಪಡೆದ ಶಿಕ್ಷಣ ಸಾಮಾಜಿಕವಾಗಿ ಉಪಯುಕ್ತವೂ ಅಲ್ಲ. ಅವಳು ಬದುಕಿಗೆ ಹೊಂದಿಕೊಳ್ಳಲಾರಳು. ಅವಳನ್ನು ಅತೀವವಾಗಿ ಅಡಗಿಸಿಡಲಾಗಿದೆ. ಅವಳಿಗೆ ಸ್ವ-ಅಭಿವ್ಯಕ್ತಿಗೆ ಅವಕಾಶಗಳ ಅಗತ್ಯವಿದೆ. ಹೊಸ ಶಿಕ್ಷಣ ಅವಳಿಗೆ ಈ ಅವಕಾಶಗಳನ್ನು ಒದಗಿಸಬೇಕು."

**ಮಹಿಳಾ ಶಿಕ್ಷಣದ ರಾಷ್ಟ್ರೀಯ ಸಮಿತಿ (National Committee for women's education)**

ಸ್ವಾತಂತ್ರ್ಯಾನಂತರದ ಕಾಲದಲ್ಲಿ ಮಹಿಳಾ ಶಿಕ್ಷಣ ಕ್ಷೇತ್ರದ ಒಂದು ಮಹತ್ತರ ತಿರುವು ಎಂದರೆ ಭಾರತ ಸರ್ಕಾರದಿಂದ ಮಹಿಳಾ ಶಿಕ್ಷಣದ ರಾಷ್ಟ್ರೀಯ ಸಮಿತಿಯ ನೇಮಕಾತಿ. ದುರ್ಗಾಬಾಯಿ ದೇಶಮುಖ್ ಇದರ ಅಧ್ಯಕ್ಷರು. ಇದು ನೇಮಕವಾದುದು 1959ರಲ್ಲಿ. ಈ ಸಮಿತಿಯು ಮಹಿಳಾ ಶಿಕ್ಷಣದ ಸಮಸ್ಯೆಗಳನ್ನು ಸಮಗ್ರವಾಗಿ ಮತ್ತು ಕೂಲಂಕಷವಾಗಿ ಪರಿಶೀಲಿಸಿ ಶಿಫಾರಸುಗಳನ್ನು ನೀಡಿತು. ಈ ಶಿಫಾರಸಿಗೆ ಅನುಗುಣವಾಗಿ ಮಹಿಳಾ ಶಿಕ್ಷಣದ ರಾಷ್ಟ್ರೀಯ ಕೌನ್ಸಿಲ್ ಜಾರಿಗೆ ಬಂದಿತು. ದುರ್ಗಾಬಾಯಿ ದೇಶಮುಖ್ ಇದರ ಪ್ರಥಮ ಅಧ್ಯಕ್ಷರಾದರು.

**ಹನ್ಸಾ ಮೆಹ್ತಾ ಸಮಿತಿ**

ಮಹಿಳಾ ಶಿಕ್ಷಣದಲ್ಲಿ ಪ್ರಗತಿಯ ಮತ್ತೊಂದು ಹೆಜ್ಜೆ ಎಂದರೆ 1961ರಲ್ಲಿ ಹನ್ಸಾ ಮೆಹ್ತಾ ಸಮಿತಿಯನ್ನು ರೂಪಿಸಿದುದು. ಈ ಸಮಿತಿಯು ಆ ಕಾಲದ ಶಾಲಾ ಶಿಕ್ಷಣದ ಪಠ್ಯಕ್ರಮವನ್ನು ಸವಿವರವಾಗಿ ಪರೀಕ್ಷಿಸಿ, ದೇಶದ ಸಮಕಾಲೀನ ಸ್ಥಿತಿಯಲ್ಲಿ ಮಹಿಳೆಯರ ವೈಯಕ್ತಿಕ ಹಾಗೂ ಸಾಮಾಜಿಕ ಅಗತ್ಯಗಳಿಗೆ ಅವುಗಳ ಸಮರ್ಪಕತೆಯನ್ನು ಕುರಿತು ಪರಿಶೀಲಿಸಿತು. ಈ ಸಮಿತಿಯು ಮಹಿಳೆಯು ತಾಯಿಯಾಗಿ ಅಥವಾ ಮನೆಯೊಡತಿಯಾಗಿ ತನ್ನ ಪಾತ್ರವನ್ನು ಯಾವುದೇ ರೀತಿಯಲ್ಲಿ ಕದಲಿಸದೆ, ತನ್ನ ಆಯ್ಕೆಯ ವೃತ್ತಿಯಲ್ಲಿ ತೊಡಗಿಕೊಳ್ಳಲು ಸಾಧ್ಯ ಎಂಬ ಅತಿ ಮಹತ್ವದ ಅಂಶವನ್ನು ತೆರೆದಿಟ್ಟಿತು. "ನಾವು, ಆದುದರಿಂದ, ಮಗುವಿನ ಪೋಷಣೆ ಮತ್ತು ಗೃಹಕೃತ್ಯಗಳ ಜವಾಬ್ದಾರಿಗಳನ್ನು ಕಡೆಗಣಿಸದ ರೀತಿಯಲ್ಲಿ ತನ್ನ ಆಯ್ಕೆಯ ವೃತ್ತಿಯನ್ನು ಕೈಗೊಳ್ಳಲು ಸಮರ್ಥಳಾಗುವಂತೆ ಮಹಿಳಾ ಶಿಕ್ಷಣವನ್ನು ಯೋಜಿಸಬೇಕು ಎಂದು ಶಿಫಾರಸುಮಾಡುತ್ತೇವೆ" ಎಂದು ಘೋಷಿಸಿತು. ಅಲ್ಲದೆ ಪ್ರಜಾಪ್ರಭುತ್ವ ಸಮಾಜದ ನಮ್ಮ ದೇಶದಲ್ಲಿ ವೈಯಕ್ತಿಕ ಸಾಮರ್ಥ್ಯಗಳು, ಮನೋಭಾವಗಳು ಮತ್ತು ಆಸಕ್ತಿಗಳಿಗಳಿಗನುಗುಣವಾಗಿ ಶಿಕ್ಷಣವನ್ನು ಸಂಯೋಜಿಸಿರಬೇಕು ಎಂಬ ವಿಚಾರವನ್ನೂ ಸಮಿತಿ ಮುಂದಿಟ್ಟಿತು.

ಈ ಸಮಿತಿಯ ಪ್ರಮುಖ ಶಿಫಾರಸುಗಳು ಹೀಗಿವೆ.

- ಹುಡುಗರ ಮತ್ತು ಹುಡುಗಿಯರ ಪಠ್ಯಕ್ರಮದಲ್ಲಿ ಯಾವುದೇ ವ್ಯತ್ಯಾಸ ಮಾಡಬಾರದು;
- ಎಳೆಯ ಮನಸ್ಸುಗಳಲ್ಲಿ ಯಾವುದೇ ರೀತಿಯ ಲಿಂಗತ್ವ ಪಡಿಯಚ್ಚುಗಳು ಮೂಡದಂತೆ ಸರಳವಾದ ಕೈಕೆಲಸ, ಅಡುಗೆ, ಸಂಗೀತ ಮತ್ತು ನೃತ್ಯ ಇವುಗಳನ್ನು ಹುಡುಗರು ಮತ್ತು ಹುಡುಗಿಯರಿಬ್ಬರಿಗೂ ಪ್ರಾಥಮಿಕ ಶಾಲೆಗಳಲ್ಲಿ ಪರಿಚಯಿಸಬೇಕು;
- ಪಠ್ಯಕ್ರಮದ ಸಾಮಾನ್ಯ ಪ್ರಮುಖ ವಿಷಯಗಳ ಜೊತೆಗೆ ಗೃಹ ವಿಜ್ಞಾನವನ್ನು ಹುಡುಗರು ಮತ್ತು ಹುಡುಗಿಯರಿಬ್ಬರಿಗೂ ಮಾಧ್ಯಮಿಕ ಶಾಲೆಗಳಲ್ಲಿ ಪರಿಚಯಿಸಬೇಕು;
- ಮಾಧ್ಯಮಿಕ ಹಂತದ ನಂತರ ಜೀವನದ ವಿವಿಧ ವೃತ್ತಿಗಳಿಗೆ ಸಿದ್ಧಪಡಿಸಲು ಹುಡುಗರು ಮತ್ತು ಹುಡುಗಿಯರಿಗೆ ಬೋಧಿಸುವ ವಿಷಯಗಳು ಭಿನ್ನವಾಗಿರಬೇಕು;
- ಸೆಕೆಂಡರಿ ಹಂತದ ಕೊನೆಯ ವೇಳೆಗೆ ವಿವಿಧ ವಿಭಾಗಗಳಲ್ಲಿ ವಿಷಯಗಳು ಭಿನ್ನವಾಗಬೇಕು:
- ಹುಡುಗಿಯರು ಮತ್ತು ಮಹಿಳೆಯರಿಗೆ ಸೂಕ್ತವಾದ ವಿವಿಧ ಕೋರ್ಸುಗಳನ್ನು ತೆರೆಯುವ ಸಾಧ್ಯತೆಗಳನ್ನು ವಿಶ್ವವಿದ್ಯಾನಿಲಯಗಳು ಅನ್ವೇಷಿಸಬೇಕು.

ಹನ್ಸಾ ಮೆಹ್ತಾ ಸಮಿತಿಯ ಶಿಫಾರಸುಗಳು ಆ ಕಾಲಕ್ಕೆ ಅತ್ಯಂತ ಸಮರ್ಪಕವಾಗಿ ಕಂಡುಬಂದಿದ್ದವು. ಆದರೆ, ಸಾಂಪ್ರದಾಯಿಕವಾಗಿ ಮಹಿಳೆಯನ್ನು ತಾಯಿಯಾಗಿ ಮತ್ತು ಗೃಹಕೃತ್ಯಗಳನ್ನು ನಿಭಾಯಿಸುವ ಪಾತ್ರದಲ್ಲಿ ಮಾತ್ರ ನೋಡಿದ ಕೊರತೆಯಿಂದಾಗಿ, ಅದು ಕೆಲವು ವಿಷಯಗಳನ್ನು 'ಮಹಿಳೆಯರಿಗಾಗಿ' ಎಂದು ನಿರ್ಧರಿಸುವ ಮತ್ತೊಂದು ಕೊರತೆಯನ್ನೂ ಒಡಮೂಡಿಸಿಕೊಂಡಿತ್ತು.

## ಕೊಠಾರಿ ಶಿಕ್ಷಣ ಆಯೋಗ (1964–66)

ಲಿಂಗ ಸಮಾನತೆಯನ್ನು ಸಾಕಾರಗೊಳಿಸುವ ಪ್ರಯತ್ನಗಳ ಹಾದಿಯಲ್ಲಿ ಮತ್ತೊಂದು ಪ್ರಗತಿಯ ಹೆಜ್ಜೆ ಎಂದರೆ ಕೊಠಾರಿ ಶಿಕ್ಷಣ ಆಯೋಗ ಮುಂದಿಟ್ಟ ಶಿಫಾರಸುಗಳು. ಇದು ಮಹಿಳಾ ಶಿಕ್ಷಣದ ರಾಷ್ಟ್ರೀಯ ಕೌನ್ಸಿಲ್ ಮತ್ತು ಹನ್ಸಾ ಮೆಹ್ತಾ ಸಮಿತಿ ಮುಂದಿಟ್ಟ – ಹುಡುಗಿಯರ ಶಿಕ್ಷಣಕ್ಕೆ ವಿರುದ್ಧವಾಗಿದ್ದ ಸಾಂಪ್ರದಾಯಿಕ ಪೂರ್ವಾಗ್ರಹಗಳನ್ನು ಸರಿಪಡಿಸಲು ಸಾರ್ವಜನಿಕರಿಗೆ ಶಿಕ್ಷಣ ನೀಡುವುದು, ಪ್ರಾಥಮಿಕ ಹಂತದಲ್ಲಿ ಸಹಶಿಕ್ಷಣವನ್ನು ಪ್ರಚುರಪಡಿಸುವುದು, ಉನ್ನತ ಪ್ರಾಥಮಿಕ ಹಂತದಲ್ಲಿ ಸಾಧ್ಯವಾದ ಕಡೆಗಳಲ್ಲಿ ಹುಡುಗಿಯರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯುವುದು ಇತ್ಯಾದಿ– ಎಲ್ಲ ಶಿಫಾರಸುಗಳನ್ನು ಅಂಗೀಕರಿಸಿತು. ಈ ಸಮಿತಿಯು ಹುಡುಗಿಯರ ಪಠ್ಯಕ್ರಮವನ್ನು ಕುರಿತಂತೆ ಮುಂದುವರಿದ ಕೆಲವು ಶಿಫಾರಸುಗಳನ್ನು ಮುಂದಿಟ್ಟಿತು:

ಸೆಕೆಂಡರಿ ಹಂತದಲ್ಲಿ ಗೃಹವಿಜ್ಞಾನ, ಸಂಗೀತ ಮತ್ತು ಲಲಿತಕಲೆ – ಈ ವಿಷಯಗಳನ್ನು ಹೇಳಿಕೊಡುವುದಾದರೂ ಇವುಗಳನ್ನು ಹುಡುಗಿಯರಿಗೆ ಕಡ್ಡಾಯ ಮಾಡಬಾರದು. ಅದಕ್ಕೆ ಬದಲಾಗಿ, ವ್ಯಾಪಕವಾಗಿ, ಹುಡುಗಿಯರು ಗಣಿತ ಅಥವಾ ವಿಜ್ಞಾನವನ್ನು ಓದಲು ಪ್ರೋತ್ಸಾಹಿಸುವ ವಿಶೇಷ ಪ್ರಯತ್ನಗಳನ್ನು ಮಾಡಬೇಕು. ಈ ಹಂತದಲ್ಲಿ ಹುಡುಗಿಯರಿಗೆ ಕಲೆ, ಮಾನವಿಕ ವಿಷಯಗಳು, ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಉಚಿತ ಅವಕಾಶಗಳಿರಬೇಕು. ಹುಡುಗಿಯರು ತಾಂತ್ರಿಕ ಮತ್ತು ಔದ್ಯೋಗಿಕ ಕೋರ್ಸುಗಳ ಕಡೆಗೆ ಗಮನಹರಿಸುವಂತೆ ಮಾಡಬೇಕು.

ಇಷ್ಟಾದರೂ ಶಿಕ್ಷಣದಲ್ಲಿ ಲಿಂಗಭಿನ್ನತೆ ಮುಂದುವರೆಯುತ್ತಲೇ ಇತ್ತು. ಕೆಲವು ವಿಷಯಗಳನ್ನು ಇಂದಿಗೂ 'ಹುಡುಗಿಯರಿಗೆ' ಮತ್ತು 'ಹುಡುಗರಿಗೆ' ಎಂದು ಗುರುತಿಸಲಾಗುತ್ತದೆ. ಬಹಳಷ್ಟು ಕಾಲ ಹುಡುಗಿಯರು ಗೃಹವಿಜ್ಞಾನ, ಮತ್ತು ಲಲಿತಕಲೆಗಳಲ್ಲೇ ತೃಪ್ತಿಹೊಂದಿದ್ದರು. ಹುಡುಗರು ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿಭಾಗಗಳಲ್ಲಿ ಮುಂದುವರಿದಿದ್ದರು.

## ಭಾರತದಲ್ಲಿ ಮಹಿಳೆಯರ ಸ್ಥಾನಮಾನವನ್ನು ಕುರಿತ ಸಮಿತಿ (1971)

ಪಠ್ಯಕ್ರಮದಲ್ಲಿ ಲಿಂಗಸಮಾನತೆಯನ್ನು ತರುವಲ್ಲಿನ ಪ್ರಯತ್ನಗಳಲ್ಲಿ ಮತ್ತೊಂದು ದೈತ್ಯ ಹೆಜ್ಜೆ ಎಂದರೆ 1971ರ ಭಾರತದಲ್ಲಿ ಮಹಿಳೆಯರ ಸ್ಥಾನಮಾನವನ್ನು ಕುರಿತ ಸಮಿತಿಯ ಪ್ರಮುಖ ಶಿಫಾರಸುಗಳು. ಈ ಸಮಿತಿಯು 1974ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ಸಮಿತಿಯ ಪ್ರಮುಖ ಶಿಫಾರಸುಗಳು ಹೀಗಿವೆ:

- ಹತ್ತನೇ ತರಗತಿಯವರೆಗೆ ಹುಡುಗ ಹುಡುಗಿಯರಿಬ್ಬರಿಗೂ ಎಲ್ಲ ಆಯ್ಕೆಗಳೊಂದಿಗೆ ಸಾಮಾನ್ಯ ಶಿಕ್ಷಣವಿರಬೇಕು;
- ಸರಳ ಕೈಕೆಲಸ, ಸಂಗೀತ ಮತ್ತು ನೃತ್ಯ ಇವುಗಳನ್ನು ಎಲ್ಲ ಮಕ್ಕಳಿಗೂ ಪ್ರಾಥಮಿಕ ಹಂತದಲ್ಲಿ ಬೋಧಿಸಬೇಕು;
- ಮಾಧ್ಯಮಿಕ ಹಂತದಿಂದ ಕಾರ್ಯಾನುಭವದ ಅಡಿಯಲ್ಲಿ ವಿವಿಧ ವಿಷಯಗಳನ್ನು ಹೇಳಿಕೊಡಬಹುದು. ಆದರೆ ಹುಡುಗರಿಗಾಗಲೀ ಹುಡುಗಿಯರಿಗಾಗಲೀ ಯಾವುದೂ ಕಡ್ಡಾಯವಲ್ಲ;
- ಹುಡುಗಿಯರಿಗೆ ಹನ್ನೊಂದು ಮತ್ತು ಹನ್ನೆರಡನೇ ತರಗತಿಗಳಲ್ಲಿ ಔದ್ಯೋಗಿಕ ಮತ್ತು ತಾಂತ್ರಿಕ ಕೋರ್ಸುಗಳನ್ನು ತೆರೆದಿಡಬೇಕು;
- ವಿಶ್ವವಿದ್ಯಾನಿಲಯ ಹಂತದಲ್ಲಿ ಹೆಚ್ಚು ಸಮರ್ಪಕವಾದ ಕೋರ್ಸುಗಳನ್ನು ಎಲ್ಲರಿಗೂ ನೀಡಬೇಕು.

ಜನರ ಮನದಲ್ಲಿ ಆಳವಾಗಿ ಬೇರೂರಿರುವ ಲಿಂಗತ್ವ ಪಕ್ಷಪಾತದ ಮನೋಭಾವವನ್ನು ಹೋಗಲಾಡಿಸುವ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳದ್ದಾಗಿರುತ್ತದೆ. ಸಾಂಪ್ರದಾಯಿಕವಾದ ಲಿಂಗ ಪಕ್ಷಪಾತದ ಮನೋಭಾವಗಳ ಬದಲಿಗೆ ಎರಡೂ ವರ್ಗಗಳನ್ನು ಸಮಾನವಾಗಿ ಕಾಣುವ ಮೌಲ್ಯಗಳನ್ನು ಬೆಳೆಸಲು ಶಿಕ್ಷಣ ಸಂಸ್ಥೆಗಳು ಉದ್ದೇಶಪೂರ್ವಕವಾದ, ಯೋಜಿತವಾದ ಮತ್ತು ಸುಸ್ಥಿರವಾದ ಪ್ರಯತ್ನಗಳನ್ನು ಮಾಡಬೇಕು.

ಈ ಹಂತದಲ್ಲೂ ಲಿಂಗ ಸಮಾನತೆಯನ್ನು ಕುರಿತಂತೆ ಶಿಕ್ಷಣದಲ್ಲಿ ಮಹತ್ತರವಾದ ಬದಲಾವಣೆಗಳೇನೂ ಆಗಲಿಲ್ಲ.

1975ನೇ ವರ್ಷ ಮಹಿಳೆಗೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ಜಾಗತಿಕವಾಗಿ ಒಂದು ಎಚ್ಚರವನ್ನು ಕಂಡಿತು. ಸಂಯುಕ್ತ ರಾಷ್ಟ್ರಗಳು ಈ ವರ್ಷವನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷವಾಗಿ ಘೋಷಿಸಿತು. ಇದರಿಂದಾಗಿ ಮಹಿಳೆಯ ಅಭಿವೃದ್ಧಿಯ ಕಡೆಗೆ ಇಡೀ ಜಗತ್ತೇ ಗಮನಹರಿಸುವಂತಾಯಿತು. ಈ ವರ್ಷವು ಎಲ್ಲ ರಾಷ್ಟ್ರಗಳಿಗೆ ಅವರವರ ದೇಶದಲ್ಲಿನ ಮಹಿಳೆಯರ ಸ್ಥಾನಮಾನದ ಕಡೆಗೆ ಸಿಂಹಾವಲೋಕನ ಮಾಡುವಂತೆ ಮಾಡಿತು. ಇದರೊಂದಿಗಿನ ವಿಪುಲವಾದ ವಿಶೇಷವಾದ ಪ್ರಯತ್ನಗಳಿಂದಾಗಿ ಮಹಿಳೆಯನ್ನು ಕುರಿತ ಮನೋಭಾವದಲ್ಲಿ ಧನಾತ್ಮಕವಾಗಿ ಪರಿವರ್ತನೆಯಾಗಲು ಮೊದಲಾಯಿತು. ಮಹಿಳೆಯರ ಅಸಮಾನತೆಯ ವಿರುದ್ಧ ಒಂದು ದೊಡ್ಡ ಸಮರವೇ ಸಾಗಿ ಕೇವಲ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ ಒಟ್ಟು ಮಹಿಳೆಯರ ಅವಕಾಶಗಳ ಕುರಿತಾಗಿ ಅನೇಕ ಬದಲಾವಣೆಗಳಾದವು. ಹೆಣ್ಣುಮಕ್ಕಳ ಶಿಕ್ಷಣವನ್ನು ಕುರಿತ ಪುನಾರಚನೆಯ ಅಗತ್ಯ ಮನದಟ್ಟಾಯಿತು. ಇದು ಸಾಕಾರವಾದುದು ಮತ್ತೊಂದು ಆಯೋಗದ ಶಿಫಾರಸುಗಳ ಫಲಶ್ರುತಿಯ ರೂಪದಲ್ಲಿ. ಅದೇ ರಾಷ್ಟ್ರೀಯ ಶಿಕ್ಷಣ ನೀತಿ

## ರಾಷ್ಟ್ರೀಯ ಶಿಕ್ಷಣ ನೀತಿ :

ಮಹಿಳಾ ಶಿಕ್ಷಣ, ಆ ಮೂಲಕ ಸಬಲೀಕರಣದಲ್ಲಿ ಧನಾತ್ಮಕವಾದ ಮಧ್ಯವರ್ತನದ ಪಾತ್ರವನ್ನು ಮನಗಾಣಿಸಿದುದೇ ಈ ನೀತಿಯ ಗಮನಾರ್ಹ ಅಂಶ. ಈ ನೀತಿಯು ರಾಷ್ಟ್ರೀಯ ಪ್ರಮುಖ ಪಠ್ಯಕ್ರಮದ ಗುರಿಯಾಗಿ ಗುರುತಿಸಿದ ಹತ್ತು ಅಂಶಗಳಲ್ಲಿ 'ಲಿಂಗ ಸಮಾನತೆ'ಯೂ ಒಂದು. ಶಿಕ್ಷಣದಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸಲು ಪಠ್ಯಕ್ರಮವನ್ನು ಪುನಾರಚಿಸಲು ಗಂಭೀರ ಪ್ರಯತ್ನಗಳಾಗಬೇಕು ಎಂಬುದನ್ನೂ ಈ ನೀತಿಯು ಶಿಫಾರಸುಮಾಡಿತು. ಈ ಸಮಿತಿಯು ಮಹಿಳಾ ಸಮಾನತೆಯ ಯಾವ ಅಂಶಗಳು ಪಠ್ಯಕ್ರಮದ ಭಾಗವಾಗಬೇಕು ಎಂಬುದನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಎನ್ ಸಿ ಇ ಆರ್ ಟಿ ಯ 'ವಿಮೆನ್ ಸೆಲ್' ವಿಭಾಗಕ್ಕೆ ವಹಿಸಿತು. ಲಿಂಗ ಪಡಿಯಚ್ಚುಗಳನ್ನು ಪಠ್ಯಕ್ರಮದಿಂದ ದೂರವಿಡಬೇಕು ಎಂಬ ಅಂಶದ ಕುರಿತ ಎಚ್ಚರಿಕೆಯನ್ನೂ ನೀಡಿತು. ಹುಡುಗ ಹುಡುಗಿಯರಿಗೆ ಯಾವುದೇ ವ್ಯತ್ಯಾಸವಿಲ್ಲದ ಪಠ್ಯಕ್ರಮವನ್ನು ಒತ್ತಿ ಹೇಳಿದುದರ ಜೊತೆಗೆ ಮಹಿಳೆಯರಿಗಾಗಿ ಹೆಚ್ಚು ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಶಿಫಾರಸು ಮಾಡಿತು.

ಇದರಿಂದಾಗಿ ಹೆಣ್ಣುಮಕ್ಕಳು ವಿಸ್ತಾರವಾದ ವ್ಯಾಪಕವಾದ ಅವಕಾಶಗಳಿಗೆ ತೆರೆದುಕೊಂಡರು. ಇಂದು ಹುಡುಗ ಹುಡುಗಿಯರಿಗೆ ಭಿನ್ನ ಪಠ್ಯಕ್ರಮ ಎಂಬುದೆಲ್ಲಾ ದೂರದ ಮಾತಾಗಿದೆ. ಹುಡುಗಿಯರು ತಲುಪದ ವಿಷಯಗಳಿಲ್ಲವಾಗಿದೆ. ಎಲ್ಲ ಕ್ಷೇತ್ರಗಳಲ್ಲೂ ಹುಡುಗಿಯರು ತಮ್ಮ ಸಾಧನೆಯನ್ನು ತೋರಿಸಿದ್ದಾರೆ. ಇದು ಪಠ್ಯಕ್ರಮದಲ್ಲಿ ಸಾಗಿಬಂದ ದೀರ್ಘವಾದ ಪ್ರಯತ್ನಗಳ ಫಲ ಎಂಬುದು ಇದರಿಂದ ನಮಗೆ ಅರಿವಾಗಬೇಕು.

## ಲಿಂಗ ಸಮಾನತೆಯೊಡಗೂಡಿದ ಶಾಲಾ ಪಠ್ಯಕ್ರಮ ರಚನೆ

ಶಾಲೆಯ ವಿವಿಧ ಅಂಶಗಳಾದ ಬೋಧನೆ, ಕಲಿಕೆ, ತರಗತಿಯಲ್ಲಿನ ಅಂತರ್ ಕ್ರಿಯೆ, ಇತ್ಯಾದಿ ಅಂಶಗಳಿಂದ ಮುಕ್ತವಾಗಿ ಲಿಂಗ ಸಮಾನತೆಯುಳ್ಳ ಪಠ್ಯಕ್ರಮವನ್ನು ರೂಪಿಸಲು ಸಾಧ್ಯವಾಗುವುದಿಲ್ಲ. ಹುಡುಗಿಯರ ಅಭಿಪ್ರಾಯಗಳಿಗೆ ಮುಕ್ತವಾದ ಅವಕಾಶ ನೀಡದಿದ್ದರೆ, ಹುಡುಗರು ಅತಿಕ್ರಮಿಸಿದ ಪಾತ್ರ ವಹಿಸಿದರೆ, ಭೌತಿಕ ವಾತಾವರಣ ಅಸಮರ್ಪಕವಾಗಿದ್ದರೆ, ಹೀಗೆ ಯಾವ ಸನ್ನಿವೇಶದಲ್ಲಿಯೂ ಸಮತೆ ಮತ್ತು ಸಮಾನತೆಗಳನ್ನು ಸಾಧಿಸಲಾಗದು.

ಪಠ್ಯಕ್ರಮದ ವಿವಿಧ ಅಂಶಗಳ ಮೂಲಕ ಲಿಂಗ ಸಮಾನತೆಯನ್ನು ಮೂಡಿಸುವುದು

## ಎ) ಬೋಧನಾ ಸಾಮಗ್ರಿ

ಪಠ್ಯಸಾಮಗ್ರಿಗಳು ಜ್ಞಾನದ ಪ್ರಮುಖ ಆಕರವಾಗಿರುವುದರಿಂದ, ಸಮಾಜದ ಹುಡುಗ–ಹುಡುಗಿಯರಿಬ್ಬರೂ

ಅದನ್ನು ಬಳಸುವುದರಿಂದ ಅವು ಸಮತೆ ಮತ್ತು ಸಮಾನತೆಯ ಗುರಿಗಳನ್ನು ಸಾಧಿಸಬೇಕು. ಪಠ್ಯದಲ್ಲಿ ಆಯ್ದುಕೊಳ್ಳುವ ವಿಷಯಗಳು, ಅದಕ್ಕನುಗುಣವಾದ ಪಾಠಗಳು, ಅದನ್ನು ಪ್ರಸ್ತುತಪಡಿಸುವ ಭಾಷೆ, ಬಳಸುವ ದೃಶ್ಯಗಳು, ಕೊಡುವ ಉದಾಹರಣೆ, ದೃಷ್ಟಾಂತಗಳು, ವಿವರಿಸುವ ರೀತಿ, ಎಲ್ಲದರಲ್ಲೂ ಸಮಾನತೆಗೆ ಅಡ್ಡಿಬಾರದಂತೆ ಜಾಗರೂಕತೆ ವಹಿಸಬೇಕು. ಭಾರತದಲ್ಲಿ ಮಾತ್ರವಲ್ಲ, ಜಾಗತಿಕವಾಗಿ ಪಠ್ಯಪುಸ್ತಕಗಳು ಲಿಂಗ ಅಸಮಾನತೆಯ ಅಂಶಗಳನ್ನು ಬಿಂಬಿಸುತ್ತವೆ. ಈ ನಿಟ್ಟಿನಲ್ಲಿ ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳಬೇಕು:

ಎಲ್ಲ ಜ್ಞಾನಶಿಸ್ತುಗಳ ಅಥವಾ ವಿಷಯಗಳ ಪಠ್ಯಗಳು ಮಹಿಳೆಯರು ಹಾಗೂ ಪುರುಷರ ಕೊಡುಗೆಗಳನ್ನು ಸಂತುಲಿತ ರೀತಿಯಲ್ಲಿ ವಿವರಿಸಬೇಕು;

- ಲಿಂಗತ್ವಕ್ಕೆ ಸಂಬಂಧಿಸಿದಂತೆ ಸಮಾಜದ ಎಲ್ಲ ವರ್ಗಗಳನ್ನು ಬೆಸೆಯಬೇಕು;
- ಲಿಂಗತ್ವಕ್ಕೆ ಸಂಬಂಧಿಸಿದಂತೆ ಕಲಿಕಾರ್ಥಿಗಳಲ್ಲಿ ಧನಾತ್ಮಕ ಮನೋಭಾವವನ್ನು ಬೆಳೆಸಬೇಕು; ಅಪೇಕ್ಷಣೀಯವಾಗಿಲ್ಲದಿದ್ದರೆ ಬದಲಿಸಬೇಕು;
- ಲಿಂಗತ್ವಕ್ಕೆ ಸಂಬಂಧಿಸಿದ ವಿವಿಧ ಘರ್ಷಣೆಗಳನ್ನು ಸಮರ್ಪಕವಾಗಿ ಪರಿಹರಿಸಬೇಕು;
- ಲಿಂಗತ್ವ ಪಡಿಯಚ್ಚುಗಳನ್ನು, ಭ್ರಮೆಗಳನ್ನು, ಅಪಕಲ್ಪನೆಗಳನ್ನು ಮತ್ತು ಅರ್ಥವಿಲ್ಲದ ಆಚರಣೆಗಳನ್ನು ಪ್ರಶ್ನಿಸುವ ವಿಮರ್ಶಾತ್ಮಕ ಮನೋಭಾವವನ್ನು ಬೆಳೆಸಬೇಕು.

**ಬಿ) ಅಧ್ಯಾಪಕರ ಪಾತ್ರ :**

ಅಧ್ಯಾಪಕರು ಸಮಾನತೆಯನ್ನು ಬಿಂಬಿಸುವ ಪರಿಸರವನ್ನು ಸೃಷ್ಟಿಸಬೇಕು. ತಿಳಿದೋ ತಿಳಿಯದೆಯೋ ಲಿಂಗ ಅಸಮಾನತೆಯನ್ನು ಬಿಂಬಿಸುವ ಮಾತುಗಳು, ವರ್ತನೆಗಳು ಶಾಲಾ ಸನ್ನಿವೇಶದಲ್ಲಿ ನುಸುಳಿಬಿಡಬಹುದು. ಉದ್ದೇಶಪೂರ್ವಕವಾಗಿ ಈ ಕುರಿತು ಎಚ್ಚರಿಕೆ ತೆಗೆದುಕೊಳ್ಳಬೇಕು;

- ಎಲ್ಲ ಮಕ್ಕಳಿಂದಲೂ ಸಮಾನವಾದ ಸಾಧನಾ ಮಟ್ಟವನ್ನು ನಿರೀಕ್ಷಿಸಬೇಕು;
- ಸಮಾನವಾದ ವರ್ತನೆಗಳನ್ನು ನಿರೀಕ್ಷಿಸಬೇಕು;
- ಎಲ್ಲರನ್ನೂ ಸಮನಾಗಿ ಕಾಣಬೇಕು, ಗೌರವಿಸಬೇಕು;
- ಎಲ್ಲರಿಗೂ ಭಾಗವಹಿಸಲು ಸಮಾನ ಅವಕಾಶಗಳನ್ನು ನೀಡಬೇಕು;
- ಲಿಂಗತಟಸ್ಥವಾದ ಭಾಷೆಯನ್ನು ಬಳಸಬೇಕು;
- ಯಾವುದೇ ರೀತಿಯ ಪಕ್ಷಪಾತವನ್ನು ಸೂಚಿಸದ ಅಂಗಭಾಷೆಯನ್ನು ಬಳಸಬೇಕು;
- ಲಿಂಗ ಆಧಾರಿತವಾಗಿ ಯಾವುದೇ ಮಗುವಿಗೆ ನೋವಾಗದಂತೆ ಶಿಸ್ತು ಕಾಪಾಡಬೇಕು;
- ಶಾಲೆಯ ಎಲ್ಲ ಚಟುವಟಿಕೆಗಳು ಎಲ್ಲರಿಗೂ ಮುಕ್ತವಾಗಿ ತೆರೆದಿರಬೇಕು;
- ತರಗತಿಯ ಚಟುವಟಿಕೆಗಳ ಸಂಘಟನೆಗೆ ಎಲ್ಲರಿಗೂ ಅವಕಾಶವಿರಬೇಕು.

**ಸಿ) ತರಗತಿ ಸಂಘಟನೆ ಮತ್ತು ನಿರ್ವಹಣೆ**

ಲಿಂಗ ಸ್ನೇಹಿ ತರಗತಿ ಪರಿಸರ ಮತ್ತು ಒಟ್ಟು ಧನಾತ್ಮಕವಾದ ನಿರ್ವಹಣೆ ಹುಡುಗ ಹುಡುಗಿಯರಿಲ್ಲಿ ಉತ್ತಮ ಬಾಂಧವ್ಯವನ್ನು ಬೆಳೆಸುವುದು. ಇದಕ್ಕಾಗಿ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುವುದು:

- ಅನುಕೂಲಕಾರಕರಾಗಿ ಅಧ್ಯಾಪಕರು ತರಗತಿ ಪರಿಸರವು ಎಲ್ಲರಲ್ಲೂ ಆರೋಗ್ಯಕರವಾದ ಸಂಬಂಧಗಳನ್ನು ಬೆಳೆಸಲು ಸಹಾಯಕವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಆಸನವ್ಯವಸ್ಥೆ,

ಸರತಿಯ ಸಾಲು, ಚಟುವಟಿಕೆಗಳ ಹಂಚಿಕೆ ಇವೆಲ್ಲವೂ ಹುಡುಗ–ಹುಡುಗಿಯರು ಒಟ್ಟಾಗಿರುವಂತೆ ನೋಡಿಕೊಳ್ಳಬೇಕು.

- ಹುಡುಗರಿಗೆ ಶಕ್ತಿಶಾಲಿ, ಧೈರ್ಯವಂತ, ಇತ್ಯಾದಿ ಹುಡುಗಿಯರಿಗೆ ವಿಧೇಯಳು, ಸುಂದರಿ ಇತ್ಯಾದಿ ವಿಶೇಷಣಗಳನ್ನು ಬಳಸಬಾರದು;
- ಗುಡ್, ಭೇಷ್ ಇತ್ಯಾದಿ ಮೆಚ್ಚುಗೆಯ ಮಾತುಗಳನ್ನು ಎಲ್ಲರಿಗೂ ಬಳಸಬೇಕು;
- ತರಗತಿಯ ಶುಚಿತ್ವ, ಅಲಂಕಾರ, ದೈನಂದಿನ ಚಟುವಟಿಕೆಗಳಲ್ಲಿ ಎಲ್ಲರಿಗೂ ಭಾಗವಹಿಸಬೇಕು;
- ಬಳಸುವ ದೃಶ್ಯಗಳು, ಚಿತ್ರಗಳು ಇವುಗಳಲ್ಲಿ ಸಮಾಜದ ಪಡಿಯಚ್ಚುಗಳಂತೆ ಗಂಡು ಮತ್ತು ಹೆಣ್ಣನ್ನು ಪ್ರತಿನಿಧಿಸಿರಬಾರದು;
- ವಿವಿಧ ವಿಷಯಗಳನ್ನು ಬೋಧಿಸುವಾಗ ಹುಡುಗ–ಹುಡುಗಿಯರು, ಮಹಿಳೆ–ಪುರುಷರಿಬ್ಬರನ್ನೂ ಒಳಗೊಂಡಂತೆ ವಿವಿಧ ರಂಗಗಳಿಂದ ಉದಾಹರಣೆಗಳನ್ನು ನೀಡಬೇಕು;
- ತರಗತಿ ಅಂತರ್ ಕ್ರಿಯೆಗಳಲ್ಲಿ ಹುಡುಗ–ಹುಡುಗಿಯರು ಒಬ್ಬರಿಗೊಬ್ಬರು ಗೌರವ ಸೂಚಿಸುವಂತೆ ಅವರ ವರ್ತನೆಗಳನ್ನು ರೂಪಿಸಬೇಕು;
- ಸಂದರ್ಭ ಒದಗಿಬಂದಾಗಲೆಲ್ಲಾ ಹುಡುಗ–ಹುಡುಗಿಯರೆಲ್ಲರ ಸಾಮರ್ಥ್ಯಗಳನ್ನು ಉದಾಹರಿಸಿ ಲಿಂಗಸಮಾನತೆಯನ್ನು ಪೋಷಿಸಬೇಕು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಯಾವುದಾದರೊಂದು ತರಗತಿಯ ಪಠ್ಯಪುಸ್ತಕವನ್ನು ಆಯ್ಕೆ ಮಾಡಿಕೊಳ್ಳಿ. ಅದನ್ನು ಲಿಂಗ ಸಮಾನತೆಯ ಹಿನ್ನೆಲೆಯಲ್ಲಿ ಕೆಳಕಂಡ ವಿಷಯಗಳಿಗನುಗುಣವಾಗಿ ವಿಶ್ಲೇಷಿಸಿ. ಕೆಳಗಿನ ಸಾಧನವನ್ನು ಬಳಸಿಕೊಳ್ಳಿ.

| | | |
|---|---|---|
| ಪಠ್ಯಪುಸ್ತಕ:<br>ತರಗತಿ:<br>ಪಠ್ಯಪುಸ್ತಕದ ವಿವರ: ರಾಜ್ಯ/ ಎನ್.ಸಿ.ಇ.ಆರ್.ಟಿ/ ಇತ್ಯಾದಿ | | ವಿಷಯ: |
| ಕ್ರಮ ಸಂಖ್ಯೆ | | ಲಿಂಗ ಸಮಾನತೆಗೆ ಬಾಧಕವಾಗುವ ಅಂಶಗಳು |
| 1 | ವಿಷಯ | |
| 2 | ಭಾಷೆ | |
| 3 | ಪ್ರಸ್ತುತಿ | |
| 4 | ಚಿತ್ರಗಳು | |
| 5 | ಚಟುವಟಿಕೆಗಳು | |
| 6 | ಲಿಂಗ ಆಧಾರಿತ ಕೊಡುಗೆಗಳ ಪ್ರಸ್ತಾಪ | |
| 7 | ಇತರೆ | |

## 1.5.4. ಸಾರಾಂಶಿಸೋಣ

- ಶಿಕ್ಷಣದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳ ಅನುಭವಗಳ ಸಮಷ್ಟಿಯೇ ಪಠ್ಯಕ್ರಮ ಎಂದು ಹೇಳಲಾಗುತ್ತದೆ. ಶಾಲೆಯ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವ ಯೋಜಿತ ಅನುಭವಗಳೇ ಪಠ್ಯಕ್ರಮ
- ಪಠ್ಯಕ್ರಮದಲ್ಲಿನ ಅನೇಕ ಅಂಶಗಳು–ಭಾಷೆ, ಅದರ ರಚನೆ, ತರಗತಿ ಪರಿಸರ, ಬೋಧನಾ ಸಾಮಗ್ರಿ– ಇವುಗಳು ಲಿಂಗ ಅಸಮಾನತೆಯನ್ನು ಮೂಡಿಸುವ ಸನ್ನಿವೇಶಗಳಿವೆ.
- ಶಾಲಾ ಪಠ್ಯಕ್ರಮ ವಿವಿಧ ರೀತಿಯಲ್ಲಿ ಲಿಂಗ ಅಸಮಾನತೆಯನ್ನು ಬಿಂಬಿಸುತ್ತದೆ. ಹಾಗಾಗಿ ಲಿಂಗ ಸಮಾನತೆಯನ್ನು ಪೋಷಿಸುವ ಪಠ್ಯಕ್ರಮ ರೂಪುಗೊಳ್ಳಬೇಕು
- ಲಿಂಗ ಸಮಾನತೆಯನ್ನು ಪೋಷಿಸುವ ಪಠ್ಯಕ್ರಮ ರೂಪಿಸಲು ಈಗಾಗಲೇ ಅನೇಕ ಆಯೋಗಗಳು ಸಮಿತಿಗಳು ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದು ಕಾಲಕಾಲಕ್ಕೆ ಅವುಗಳಿಂದಾಗಿ ಲಿಂಗ ಸಮಾನತೆಯ ಅಂಶಗಳು ಒಡಮೂಡಿವೆ.
- ಲಿಂಗ ಸಮಾನತೆಯೊಡಗೂಡಿದ ಶಾಲಾ ಪಠ್ಯಕ್ರಮ ಮೂಡಿಬರಬೇಕಾದರೆ ಬೋಧನಾ ಸಾಮಗ್ರಿ, ಅಧ್ಯಾಪಕರ ಪಾತ್ರ, ತರಗತಿ ನಿರ್ವಹಣೆ ಇತ್ಯಾದಿಯಾಗಿ ಎಲ್ಲ ಅಂಶಗಳಲ್ಲೂ ಧನಾತ್ಮಕವಾದ ನಿರ್ದಿಷ್ಟ ಬದಲಾವಣೆಗಳಾಗಬೇಕು. ಹಾಗಾದಾಗ ಮಾತ್ರ ಉತ್ತಮಮಟ್ಟದ ಲಿಂಗ ಸಮಾನತೆಯನ್ನು ಮೈಗೂಡಿಸಿಕೊಂಡ ಪಠ್ಯಕ್ರಮಗಳು ಮೂಡಿಬರುತ್ತವೆ.

## 1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ನಿಮ್ಮ ಅನುಭವಗಳನ್ನು ಇತರ ಶಾಲೆಯ ಶಿಕ್ಷಕರೊಂದಿಗೆ ಹಂಚಿಕೊಳ್ಳಿ/ ಈ ಯೋಜನೆಯ ವಿವರವನ್ನು ಶಾಲಾ ವಾರ್ಷಿಕಾಂಕಕ್ಕೆ ಒಂದು ಪ್ರಬಂಧವಾಗಿ ಪರಿವರ್ತಿಸಿ

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ನಿಮ್ಮ ವಿಶ್ಲೇಷಣೆಯನ್ನು ಆಧರಿಸಿ ಒಂದು ಸಂಶೋಧನಾ ಪ್ರಬಂಧವನ್ನು ರಚಿಸಿ ಅಧ್ಯಾಪಕರ ಸಭೆಯಲ್ಲಿ ಪ್ರಸ್ತುತಪಡಿಸಿ

## 1.5.6. ಘಟಕಾಂತ್ಯ ಅಭ್ಯಾಸಗಳು

1. ಲಿಂಗ ಸಮಾನತೆಯುಳ್ಳ ಪಠ್ಯಕ್ರಮವನ್ನು ರೂಪಿಸಲು ಗಮನಿಸಿಕೊಳ್ಳಬೇಕಾದ ಅಂಶಗಳನ್ನು ವಿವರಿಸಿ
2. ಭಾರತದಲ್ಲಿ ಲಿಂಗ ಸಮಾನತೆಯ ಪಠ್ಯಕ್ರಮವನ್ನು ಕುರಿತಂತೆ ವಿವಿಧ ಆಯೋಗಗಳು ಮತ್ತು ಸಮಿತಿಗಳ ಶಿಫಾರಸುಗಳನ್ನು ವಿವರಿಸಿ.

## 1.5.7. ಪರಾಮರ್ಶನ ಸೂಚಿ


1. Dr. Pushpita Rajawat , 'Curriculum Studies Unit III-Types of Curriculum https://www.cukashmir.ac.in/departmentdocs_16/study%20material%20curriculum%20studies.pdf
2. Dr. N.B. Kongawad and Dr. N. P. Shahapur, “Gender, School and Society”, Vidyanidhi Prakashana.

3. Dr. Mahabaleshwar Rao, Gender, School Education(2017), Vismaya Prakashana.
4. Mubeena Shabeer, https://www.slideshare.net/MubeenaShabeer/gender-issues-and-curriculum
5. Gouri Srivastava, Gender Concerns in Education, http://www.ncert.nic.in/departments/nie/dse/activities/advisory_board/PDF/Genderconcerns.pdf

   http://el.doccentre.info/eldoc/n00_/01jul96SOA2.pdf
6. SOCIAL ACTION VOL. 46 JULY-SEPT. 1996, Curriculum and Gender Question: The Indian Experience Saroj Pandey

***************

# ಬ್ಲಾಕ್– 1 : ಭಾರತದಲ್ಲಿ ಲಿಂಗತ್ವ ವಿಚಾರಗಳು ಮತ್ತು ಸಾಮಾಜೀಕರಣ ಪ್ರಕ್ರಿಯೆ

## ಘಟಕ– 6 : ಲಿಂಗತ್ವ ನ್ಯಾಯಶಾಸ್ತ್ರ (ನ್ಯಾಯವಿಧಿಗಳು)

**ಘಟಕದ ರಚನೆ**


1.6.1. ಕಲಿಕೆಯ ಉದ್ದೇಶಗಳು

1.6.2. ಪೀಠಿಕೆ

1.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.6.3.1. ಮಹಿಳೆಯರ ರಕ್ಷಣೆ ಮತ್ತು ಉತ್ತಮ ಬದುಕಿಗೆ ಕಾನೂನುಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1.6.3.2. ಮಹಿಳೆಯರಿಗೆ ಸಂಬಂಧಿಸಿದ ಇತರ ನ್ಯಾಯಸಂಹಿತೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

1.6.4. ಸಾರಾಂಶಿಸೋಣ

1.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

1.6.6. ಘಟಕಾಂತ್ಯ ಅಭ್ಯಾಸಗಳು

1.6.7. ಪರಾಮರ್ಶನ ಸೂಚಿ


### 1.6.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳನ್ನು (ಅತ್ಯಾಚಾರ, ವರದಕ್ಷಿಣೆ, ವಿಧವಾವಿವಾಹ, ವಿಚ್ಛೇದನ ಇತ್ಯಾದಿ) ವಿವರಿಸುವರು;
- ಮಹಿಳಾ ಮೀಸಲಾತಿ ಕಾಯಿದೆಯನ್ನು ವಿವರಿಸುವರು;
- ಮಾನವ ಹಕ್ಕುಗಳು ಮತ್ತು ಮಹಿಳೆಯರ ಹಕ್ಕುಗಳನ್ನು ವಿಶ್ಲೇಷಿಸುವರು;
- ಮಹಿಳೆಯರಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಪ್ರಾವಧಾನಗಳನ್ನು ಗುರುತಿಸುವರು;
- ಮಹಿಳೆಯರಿಗೆ ಸಂಬಂಧಿಸಿದಂತೆ ನ್ಯಾಯ ವಿಚಾರಗಳನ್ನು ವಿಶ್ಲೇಷಿಸುವರು.

### 1.6.2. ಪೀಠಿಕೆ

ಬಾಲಕಿಯರು ಮತ್ತು ಮಹಿಳೆಯರು ಸಮಾಜದಲ್ಲಿ ಶೋಷಣೆಗೊಳಗಾಗಿರುವುದು ಮತ್ತು ಸೌಲಭ್ಯಗಳಿಂದ ವಂಚಿತರಾಗಿರುವುದರ ಕುರಿತು ನಾವು ಈಗಾಗಲೇ ಚರ್ಚಿಸಿದ್ದೇವೆ. ಪ್ರಮುಖವಾಗಿ ಪಿತೃಪ್ರಧಾನ ಸಮಾಜವಾಗಿರುವ ಭಾರತದಲ್ಲಿ ಮಹಿಳೆ ಹಿಂದಿನಿಂದಲೂ ಎರಡನೆಯ ಸ್ಥಾನದಲ್ಲೇ ಹಿಂಸೆ ಮತ್ತು ಪಕ್ಷಪಾತವನ್ನು ಅನುಭವಿಸುತ್ತಾ

ಬಂದಿದ್ದಾಳೆ. ಮನೆಯ ನಾಲ್ಕು ಗೋಡೆಗಳ ಮಧ್ಯೆ ಅತ್ಯಂತ ಸಂಕೀರ್ಣವಾದ ಬದುಕಿನೊಳಗೆ ಮನೆಯ ಕೆಲಸಗಳಿಗೇ ತನ್ನನ್ನು ಅರ್ಪಿಸಿಕೊಂಡು ಬೆಳೆಯಲಾರದಾಗಿದ್ದಾಳೆ. ಮಹಿಳೆಯ ಸಬಲೀಕರಣಕ್ಕಾಗಿ ಜಗತ್ತಿನಾದ್ಯಂತ ಈಚಿನ ದಶಕಗಳಲ್ಲಿ ಆಗಿರುವ ಪ್ರಯತ್ನಗಳ ಫಲವಾಗಿ ಇತ್ತೀಚೆಗಷ್ಟೇ ಹೊರಪ್ರಪಂಚಕ್ಕೆ ಕಾಲಿಟ್ಟು ತನ್ನ ಅನನ್ಯತೆಯನ್ನು ಪ್ರದರ್ಶಿಸುವ, ಆ ಮೂಲಕ ಸಮಾಜಕ್ಕೆ ಕೊಡುಗೆ ನೀಡುವ ಸ್ಥಿತಿಯನ್ನು ತಲುಪುತ್ತಿದ್ದಾಳೆ. ಮಹಿಳೆಯ ಪ್ರಗತಿಗೆ ನ್ಯಾಯಕ್ಷೇತ್ರದ ಅನೇಕ ನಿಯಮಗಳು, ಕಾನೂನುಗಳು ಕಾರಣವಾಗಿವೆ. ಅಲ್ಲದೆ ನಮ್ಮ ಸಂವಿಧಾನ ತೆರೆದಿಟ್ಟಿರುವ ಅನೇಕ ಅವಕಾಶಗಳೂ ಮಹಿಳೆಯ ಪ್ರಗತಿಯನ್ನು ಸಾಕಾರಗೊಳಿಸುವಲ್ಲಿ ಕೊಡುಗೆಯಾಗಿವೆ. ಮಹಿಳೆಗೆ ಸಂಬಂಧಿಸಿದ ಈ ನ್ಯಾಯಕಟ್ಟಳೆಗಳನ್ನೂ ಸಾಂವಿಧಾನಿಕ ಪ್ರಾವಧಾನಗಳನ್ನೂ ಈ ಘಟಕದಲ್ಲಿ ವಿಚಾರಮಾಡೋಣ.

## 1.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.6.3.1. ಮಹಿಳೆಯರ ರಕ್ಷಣೆ ಮತ್ತು ಉತ್ತಮ ಬದುಕಿಗೆ ಕಾನೂನುಗಳು

ಭಾರತದಲ್ಲಿ ಮಹಿಳೆಯರನ್ನು ತಾರತಮ್ಯ ಮತ್ತು ಹಿಂಸೆಯ ವಿರುದ್ಧ ರಕ್ಷಿಸುವ ಕಾನೂನುಗಳನ್ನು ಕುರಿತು ಗಮನಿಸೋಣ.

**ಅತ್ಯಾಚಾರ:**

ಭಾರತೀಯ ದಂಡಸಂಹಿತೆ ಸೆಕ್ಷನ್ 375ರ ಪ್ರಕಾರ, ನ್ಯಾಯಸಮ್ಮತವಲ್ಲದ, ವ್ಯಕ್ತಿಯ ಒಪ್ಪಿಗೆ ಇಲ್ಲದೆ ವ್ಯಕ್ತಿಯ ವಿರುದ್ಧ ನಡೆಸುವ ಲೈಂಗಿಕ ಸಂಭೋಗವನ್ನು 'ಅತ್ಯಾಚಾರ' ಎಂದು ಅರ್ಥೈಸಲಾಗುತ್ತದೆ.

ಭಾರತೀಯ ದಂಡಸಂಹಿತೆ ಸೆಕ್ಷನ್ 375ರ ಪ್ರಕಾರ, ಕೆಳಗಿನ ಆರು ಸನ್ನಿವೇಶಗಳಲ್ಲಿನ ವರ್ತನೆಯನ್ನು ಅತ್ಯಾಚಾರ ಎಂದು ಪರಿಗಣಿಸಲಾಗುತ್ತದೆ.

- ವ್ಯಕ್ತಿಯ ಇಚ್ಛೆಗೆ ವಿದುದ್ಧವಾಗಿ ಲೈಂಗಿಕ ಸಂಭೋಗ,
- ವ್ಯಕ್ತಿಯ ಒಪ್ಪಿಗೆ ಇಲ್ಲದೆ ಲೈಂಗಿಕ ಸಂಭೋಗ,
- ವ್ಯಕ್ತಿಯ ಒಪ್ಪಿಗೆಯೊಂದಿಗೆ, ಅವಳನ್ನು ಅಥವಾ ಅವಳು ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯನ್ನು ಸಾಯಿಸುವ ಅಥವಾ ನೋಯಿಸುವ ಭಯ ಹುಟ್ಟಿಸಿ ಒಪ್ಪಿಗೆ ಪಡೆದಾಗ,
- ಅವಳ ಒಪ್ಪಿಗೆಯೊಂದಿಗೆ, ಅವನು ತನ್ನ ಗಂಡನಲ್ಲ ಎಂದು ತಿಳಿಯದಾಗ,
- ಅವಳ ಒಪ್ಪಿಗೆಯೊಂದಿಗೆ, ಅಂತಹ ಒಪ್ಪಿಗೆಯನ್ನು ನೀಡುವ ಸಮಯದಲ್ಲಿ ಮನಸ್ಸಿನ ಅಸ್ವಸ್ಥತೆ, ಮಾದಕತೆ ಅಥವಾ ಆಕೆಗೆ ತನ್ನ ಪರಿಸ್ಥಿಯನ್ನು ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲವಾಗಿ ಒಪ್ಪಿಗೆ ನೀಡಿದಾಗ, ಅವಳು ಹದಿನಾರು ವರ್ಷಕ್ಕಿಂತ ಕಡಿಮೆ ವಯಸ್ಸಿನವಳಾಗಿ ಅವಳ ಒಪ್ಪಿಗೆ ಇರುವಾಗ, ಇಲ್ಲದಿರುವಾಗ.

ಅತ್ಯಾಚಾರಕ್ಕೆ ಸಂಬಂಧಿಸಿದ ಕಾನೂನುಗಳಲ್ಲಿ ಅನೇಕ ತಿದ್ದುಪಡಿಗಳಾಗಿವೆ. 2013ರಲ್ಲಿ ಅಪರಾಧ ಕಾನೂನು ತಿದ್ದುಪಡಿ ಕಾಯ್ದೆ 2013 ರ ಪ್ರಕಾರ ಚಿಕ್ಕವರ ಕಾನೂನು ವಯಸ್ಸನ್ನು ಹದಿನೆಂಟಕ್ಕೆ ಏರಿಸಲಾಗಿದೆ. 1983ರಲ್ಲಿ S. 376(2) ಅತ್ಯಾಚಾರವೆಂದು ಪರಿಗಣಿಸದ ಲೈಂಗಿಕ ಸಂಭೋಗವನ್ನು ಸೇರಿಸಲಾಗಿದೆ.

U/S 228A ಪ್ರಕಾರ ಅತ್ಯಾಚಾರಕ್ಕೆ ಒಳಗಾದ ವ್ಯಕ್ತಿಯ ಹೆಸರನ್ನು ಪ್ರಕಟಪಡಿಸುವಂತಿಲ್ಲ. ಹಾಗೆ ಮಾಡಿದರೆ ಶಿಕ್ಷೆಗೆ ಗುರಿಯಾಗುತ್ತಾರೆ. ಇವುಗಳಲ್ಲದೆ ಮತ್ತೂ ಹಲವು ತಿದ್ದುಪಡಿಗಳಾಗಿವೆ.

## ವರದಕ್ಷಿಣೆಯ ವಿರುದ್ಧ ಕಾಯಿದೆ

ಮದುವೆಯ ಸಮಯದಲ್ಲಿ ವಧುವಿನ ಕಡೆಯವರು ವರನ ಕಡೆಯವರಿಗೆ ಉಡುಗೊರೆ ರೂಪದಲ್ಲಿ ನೀಡುವ ಹಣ, ಒಡವೆ, ವಾಹನ ಇತ್ಯಾದಿ ವಸ್ತುಗಳು ವರದಕ್ಷಿಣೆ ಎನಿಸಿಕೊಳ್ಳುತ್ತದೆ.

ವರದಕ್ಷಿಣೆಯ ಪಿಡುಗನ್ನು ಶಾಸನಾತ್ಮಕವಾಗಿ ನಿವಾರಣೆ ಮಾಡಲು ಭಾರತ ಸರ್ಕಾರ 1961ರಲ್ಲಿ 'ವರದಕ್ಷಿಣೆ ನಿಷೇಧ ಕಾಯಿದೆ'ಯನ್ನು ಜಾರಿಗೊಳಿಸಿತು. ಇದನ್ನು ಉಲ್ಲಂಘಿಸಿದರೆ ರೂ 5000 ದಂಡ ಇಲ್ಲವೇ 6 ತಿಂಗಳ ಸೆರೆವಾಸ ಇಲ್ಲವೇ ಎರಡನ್ನೂ ಒಟ್ಟಿಗೆ ವಿಧಿಸಬಹುದಾಗಿದೆ. ಈ ಕಾಯಿದೆಯನ್ನು 1986ರಲ್ಲಿ ತಿದ್ದುಪಡಿ ಮಾಡಿ ಮತ್ತಷ್ಟು ಕಠಿಣಗೊಳಿಸಲಾಗಿದೆ. ಈ ತಿದ್ದುಪಡಿ ಕಾಯಿದೆಯ ಪ್ರಕಾರ ವರದಕ್ಷಿಣೆ ಕೊಡುವ ಮತ್ತು ತೆಗೆದುಕೊಳ್ಳುವ ಹಾಗೂ ಕೊಡುವಂತೆ ಒತ್ತಾಯಿಸುವ ವ್ಯಕ್ತಿಗಳಿಗೆ 5 ವರ್ಷಗಳಿಗೆ ಕಡಿಮೆ ಇಲ್ಲದ ಜೈಲು ಶಿಕ್ಷ ಮತ್ತು 15,000 ರೂಗಳಿಗೆ ಕಡಿಮೆ ಇರದ ದಂಡವನ್ನು  ವಿಧಿಸಬಹುದು. ವರದಕ್ಷಿಣೆ ಸಾವಿನ ಪ್ರಕರಣವನ್ನು ಭಾರತ ಅಪರಾಧ ವಿಚಾರಣಾ ಸಂಹಿತೆ ಅಥವಾ 'CRIMINAL PROCEDURE CODE' ಗೆ ಸೇರಿಸಲಾಗಿದೆ.

## ಪುನರ್ವಿವಾಹ ಅಥವಾ ವಿಧವಾ ವಿವಾಹ ಕಾಯಿದೆ.

ಹಿಂದೂ ವಿಧವೆಯರ ಪುನರ್ವಿವಾಹ ಕಾಯಿದೆ 1856, ಆಕ್ಟ್ XV, ಜುಲೈ 26, 1856 ರಂದು ಜಾರಿಗೆ ಬಂದಿತು. ಈಸ್ಟ ಇಂಡಿಯಾ ಕಂಪೆನ ಆಡಳಿತದಡಿಯಲ್ಲಿ ಭಾರತದ ನ್ಯಾಯವ್ಯಾಪ್ತಿಯಲ್ಲಿ ಹಿಂದೂ ವಿಧವೆಯರ ಮರುಮದುವೆಯನ್ನು ಕಾನೂನುಬದ್ಧಗೊಳಿಸಲಾಯಿತು. ವಿಧವಾ ವಿವಾಹ ಪದ್ಧತಿಯು ಮುಖ್ಯವಾಗಿ ಶ್ರೀಮಂತ ಹಿಂದೂ ಕುಟುಂಬಗಳಲ್ಲಿ ಜಾರಿಯಲ್ಲಿತ್ತು. ವಿಧವೆಯರನ್ನು ಮದುವೆಯಾದ ಪುರುಷರಿಗೆ ಕಾನೂನು ಸುರಕ್ಷತೆ ಮತ್ತು ರಕ್ಷಣೆಯನ್ನು ಈ ಕಾಯಿದೆ ಒದಗಿಸಿದೆ.

1856ರ ಪುನರ್ವಿವಾಹ ಕಾಯಿದೆಯಲ್ಲಿ ಒದಗಿಸಿರುವ ಅವಕಾಶಗಳು ಕೆಳಕಂಡಂತಿವೆ:

ಪುನರ್ವಿವಾಹವನ್ನೂ ಪುನರ್ವಿವಾಹವಾದ ನಂತರ ಹುಟ್ಟಿದ ಮಕ್ಕಳನ್ನು ಮಾನ್ಯವೆಂದು ಪರಿಗಣಿಸಲಾಗುತ್ತದೆ;

ಪುನರ್ವಿವಾಹವಾದ ನಂತರ ವಿಧವೆಯು ತೀರಿಕೊಂಡ ಗಂಡನ ಆಸ್ತಿಯ ಹಕ್ಕನ್ನು ಕಳೆದುಕೊಳ್ಳುತ್ತಾಳೆ;

ಈ ಆಸ್ತಿಯ ಹಕ್ಕನ್ನು ಕುರಿತಂತೆ ವಿವಿಧ ವ್ಯಾಖ್ಯಾನಗಳಿವೆ. ಇದಲ್ಲದೆ ಹಿಂದೂ ಉತ್ತರಾಧಿಕಾರಿ ಕಾಯಿದೆ 1956, ಮತ್ತು ಹಿಂದೂ ವಿವಾಹ ಕಾಯಿದೆ 1955 ಇವೂ ವಿಧವಾ ವಿವಾಹಕ್ಕೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿವೆ.

## ವಿಚ್ಛೇದನ

ಇದನ್ನು ವಿವಾಹ ವಿಸರ್ಜನೆ ಎಂದೂ ಕರೆಯಲಾಗುತ್ತದೆ. ಮದುವೆ ಅಥವಾ ವೈವಾಹಿಕ ಒಕ್ಕೂಟವನ್ನು ಕೊನೆಗೊಳಿಸುವ ಪ್ರಕ್ರಿಯೆ ಇದು. ಇದು ವಿವಾಹದ ಕಾನೂನು ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ರದ್ದುಗೊಳಿಸುವುದು ಅಥವಾ ಪುನರ್ ಸಂಘಟಿಸುವುದು. ಹೀಗಾಗಿ ನಿರ್ದಿಷ್ಟ ದೇಶ ಅಥವಾ ರಾಜ್ಯದ ಕಾನೂನಿನ ನಿಯಮದಡಿಯಲ್ಲಿ ವಿವಾಹಿತ ದಂಪತಿಗಳ ನಡುವಿನ ವೈವಾಹಿಕ ಸಂಬಂಧಗಳನ್ನು ರದ್ದುಮಾಡುತ್ತದೆ. ವಿವಾಹಿತರೂ ತಮ್ಮ ವಿವಾಹಸಂಬಂಧಗಳನ್ನು ಕೊನೆಗೊಳಿಸಲು ಇದು ಕಾನೂನು ಕ್ರಮವಾಗಿದೆ. ಭಾರತೀಯ ವಿಚ್ಛೇದನ ಕಾಯಿದೆಯನ್ನು 1869ರಲ್ಲಿ ಭಾರತೀಯ ಕಾನೂನು ವ್ಯವಸ್ಥೆಯಲ್ಲಿ ರಚಿಸಲಾಯಿತು. ಈ ಕಾನೂನುಗಳು ದಂಪತಿಗಳ ಸಮುದಾಯಕ್ಕೆ ಅನುಗುಣವಾಗಿ ಬದಲಾಗುತ್ತದೆ. ವಿಚ್ಛೇದನಕ್ಕೆ ದಂಪತಿಗಳು ಒಪ್ಪಿಕೊಂಡಾಗ, ನ್ಯಾಯಾಲಯಗಳು ವಿಚ್ಛೇದನವನ್ನು ಪರಸ್ಪರ ಒಪ್ಪಿಗೆಯೊಂದಿಗೆ ಪರಿಗಣಿಸುತ್ತವೆ. ಭಾರತೀಯ ವಿಚ್ಛೇದನ ಕಾಯಿದೆ 1869 ಸೆಕ್ಷನ್ 10 ಎ ದಂಪತಿಯನ್ನು ಕನಿಷ್ಟ ಎರಡು ವರ್ಷಗಳ ಕಾಲ ಬೇರೆ ಇರುವ ಕ್ರಮವನ್ನು ಸೂಚಿಸಿತ್ತು. ಈಗ ಈ ಕಾನೂನು ಬದಲಾಗಿದೆ. ದಂಪತಿಗಳು ಈ ನಿಟ್ಟಿನಲ್ಲಿ ಒಮ್ಮತವನ್ನು ತಲುಪಬೇಕಾದ ಮೂರು ಅಂಶಗಳಿವೆ. ಒಂದು ಜೀವನಾಂಶ ಮತ್ತು ನಿರ್ವಹಣೆಯ ಸಮಸ್ಯೆಗಳು, ವಿಚ್ಛೇದನದ ಕಾನೂನಿನ ಪ್ರಕಾರ ಬೆಂಬಲದ ಕನಿಷ್ಟ ಮತ್ತು ಗರಿಷ್ಟ ಮಿತಿ

ಇರುವುದಿಲ್ಲ. ಎರಡನೆಯದು ಮಗುವಿನ ಕಸ್ಟಡಿ ಅಥವಾ ಮಗುವಿನ ಪಾಲನೆ. ಪರಸ್ಪರ ಒಪ್ಪಿಗೆಯ ವಿಚ್ಛೇದನದಲ್ಲಿ ಮಕ್ಕಳ ಪಾಲನೆಯನ್ನು ಸಂಗಾತಿಗಳ ಆಶಯವನ್ನವಲಂಬಿಸಿ ನಿರ್ಧರಿಸಿಕೊಳ್ಳಬಹುದು. ಮೂರನೆಯದು ಆಸ್ತಿ. ಆಸ್ತಿಯ ಯಾವ ಭಾಗವನ್ನು ಯಾರು ಪಡೆಯುತ್ತಾರೆ ಎಂಬುದನ್ನು ದಂಪತಿಗಳು ನಿರ್ಧರಿಸಬೇಕು. ದೈಹಿಕ ಅಥವಾ ಮಾನಸಿಕ ಕ್ರೌರ್ಯ, ವ್ಯಭಿಚಾರ, ತೊರೆದು ಹೋಗುವುದು, ಮತಾಂತರ, ಮಾನಸಿಕ ಅಸ್ವಸ್ಥತೆ, ಸಾಂಕ್ರಾಮಿಕ ರೋಗ, ಸನ್ಯಾಸ ಇತ್ಯಾದಿ ಕಾರಣಗಳ ಆಧಾರದ ಮೇಲೆ ವಿಚ್ಛೇದನ ಪಡೆಯಬಹುದು.

## ಭಾರತೀಯ ಉತ್ತರಾಧಿಕಾರ ಕಾಯಿದೆ

ಆನುವಂಶಿಕತೆ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದ ಸಾಮಾನ್ಯವಾದ ಕಾಯಿದೆಯನ್ನು 'ಭಾರತೀಯ ಉತ್ತರಾಧಿಕಾರಿ ಕಾಯಿದೆ' ಎಂದು ಗುರುತಿಸಬಹುದು. ಇದು 1925ರಲ್ಲಿ ಮೊದಲಿಗೆ ಜಾರಿಗೆ ಬಂದಿತು. ಈ ಕಾಯಿದೆಯ ಅಡಿಯಲ್ಲಿ, ವ್ಯಕ್ತಿಯ ಮರಣಾನಾಂತರ ಹಕ್ಕುದಾರರಾದ ಎಲ್ಲರಿಗೂ ಆಸ್ತಿಯನ್ನು ಹಂಚಿಕೊಳ್ಳುವ ಹಕ್ಕು ಇದೆ. ಭಾರತದಲ್ಲಿ ಮಹಿಳೆ ಕುಟುಂಬದ ಆಸ್ತಿಪಡೆಯಲು ಇರುವ ಅವಕಾಶ ಮತ್ತು ಹಕ್ಕು, 'ವಿಲ್' ಇಲ್ಲದಿದ್ದಾಗ ಆಯಾ ಧರ್ಮಸಂಹಿತೆಗೆ ಅನುಗುಣವಾಗಿರುತ್ತದೆ. ಹಿಂದೂಗಳ ಕಾನೂನಿನಲ್ಲಿ 1937ಕ್ಕೆ ಮೊದಲು, ಮಹಿಳೆಗೆ ಕುಟುಂಬದ ಆಸ್ತಿಯಲ್ಲಿ, ವಿವಾಹ ಸಮಯದಲ್ಲಿ ಪಡೆದದ್ದು ಉಳಿದಂತೆ, ಯಾವುದೇ ಹಕ್ಕೂ ಇರಲಿಲ್ಲ. 1956ರ 'ಉತ್ತರಾಧಿಕಾರಿ ಕಾಯಿದೆ' ಈ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆ. ಇದರ ಪ್ರಕಾರ ಮಕ್ಕಳಂತೆ ಮಹಿಳೆಗೂ ಗಂಡನ ಆಸ್ತಿಯಲ್ಲಿ ಸಮನಾದ ಹಕ್ಕು ಇದೆ. ಆದರೂ ಪುರಷ ಪಕ್ಷಪಾತ ಮುಂದುವರೆಯುತ್ತಿದೆ. ಇದಕ್ಕೆ 2005ರಲ್ಲಿ ಒಂದು ತಿದ್ದುಪಡಿಯಾಗಿರುವುದು ಸಮಾಜದ ಪ್ರಗತಿಯ ದ್ಯೋತಕವಾಗಿದೆ. ಇದರ ಪ್ರಕಾರ ಮಹಿಳೆಗೆ ತನ್ನ ಹುಟ್ಟಿದ ಮನೆಯ ಆಸ್ತಿಯಲ್ಲೂ ಸಮಪಾಲು ದೊರೆಯುತ್ತದೆ

## ಮಹಿಳೆ ಮತ್ತು ಹೆಣ್ಣುಮಕ್ಕಳ ಕಳ್ಳಸಾಗಣೆ

ಮಹಿಳೆಯರು ಮತ್ತು ಮಕ್ಕಳಲ್ಲಿ ಕಳ್ಳಸಾಗಣೆ ಎಂಬುದು ಮಾನವರ ದುರುಪಯೋಗ ಮತ್ತು ಶೋಷಣೆಯ ಗಂಭೀರ ರೂಪದ ಅಪರಾಧವಾಗಿದೆ. ಸಾವಿರಾರು ಭಾರತೀಯರನ್ನು ಪ್ರತಿದಿನ ಯಾವುದಾದರೂ ಗಮ್ಯಸ್ಥಾನಕ್ಕೆ ಸಾಗಿಸಿ, ಗುಲಾಮಗಿರಿಯ ಜೀವನ ನಡೆಸಲು ಒತ್ತಾಯಿಸಲಾಗುತ್ತದೆ. ಅವರು, ವೇಶ್ಯಾಗೃಹಗಳು, ಕಾರ್ಖಾನೆಗಳು, ಗೆಸ್ಟ ಹೌಸ್‌ಗಳು, ಡ್ಯಾನ್ಸ್‌ಬಾರ್‌ಗಳು, ಹೊಲಗಳು ಮತ್ತು ಸುಸ್ಥಿತಿಯಲ್ಲಿರುವ ಭಾರತೀಯರ ಮನೆಗಳಲ್ಲಿ ತಮ್ಮ ದೇಹ ಮತ್ತು ಜೀವನದ ಮೇಲೆ ಯಾವುದೇ ನಿಯಂತ್ರಣವಿಲ್ಲದೆ ಹೀನಾಯವಾದ ಬದುಕು ಸಾಗಿಸುತ್ತಿದ್ದಾರೆ. ಇದು ವೈಯಕ್ತಿಕ ಬದುಕು, ನ್ಯಾಯ, ನ್ಯಾಯದ ಅವಕಾಶ, ಮೂಲಭೂತ ಹಕ್ಕುಗಳು ಮತ್ತು ಗೌರವದ ನಿರಾಕರಣೆಯ ಮೂಲಕ ಅವರು ವಂಚಿತರಾಗುತ್ತಿರುವುದನ್ನು ಎತ್ತಿ ತೋರಿಸುತ್ತದೆ. ಇದಕ್ಕೆ ವಿರುದ್ಧವಾದ ಕಾನೂನುಗಳು ಸಂವಿಧಾನಾತ್ಮಕ ಪ್ರಾವಧಾನಗಳು ಇರುವುದಾದರೂ ಈ ಶೋಷಣೆಯನ್ನು ನಿವಾರಿಸುವಲ್ಲಿ ಅತಿ ಗಂಭೀರವಾದ ಪ್ರಯತ್ನಗಳು ತ್ವರಿತಗತಿಯಲ್ಲಿ ಆಗಬೇಕಾಗಿದೆ. ಇದೂ ಹೆಣ್ಣುಮಕ್ಕಳು ಜೀವನದ ಮೂಲ ಆವಶ್ಯಕತೆಗಳಿಂದ, ಶಿಕ್ಷಣದಿಂದ ವಂಚಿತರಾಗಲು ಒಂದು ಕಾರಣವಾಗಿದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಅತ್ಯಾಚಾರ, ವರದಕ್ಷಿಣೆ , ಪುನರ್ವಿವಾಹ, ವಿಚ್ಛೇದನ, ಉತ್ತರಾಧಿಕಾರಿತ್ವ – ಈ ವಿಷಯಗಳನ್ನು ಕುರಿತ ರಕ್ಷಣಾ ನಿಯಮಗಳ, ಕಾನೂನುಗಳ ಕುರಿತು ಹೆಚ್ಚಿನ ವಿಷಯಗಳನ್ನು ಮತ್ತು ಇತ್ತೀಚಿನ ಬೆಳವಣಿಗೆಗಳನ್ನು ಸಂಗ್ರಹಿಸಿ.

## 1.6.3.2.ಮಹಿಳೆಯರಿಗೆ ಸಂಬಂಧಿಸಿದ ನ್ಯಾಯಸಂಹಿತೆಗಳು

**ಮಹಿಳೆಯರಿಗೆ ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಅವಕಾಶಗಳು**

ಭಾರತದಲ್ಲಿ ಮಹಿಳೆಯರಿಗೆ ಮಾನ್ಯವಾಗಿರುವ ಹಕ್ಕುಗಳನ್ನು ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಅವಕಾಶಗಳು ಎಂದು ವಿಂಗಡಿಸಬಹುದು. ಭಾರತದ ಸಂವಿಧಾನವು ಮಹಿಳೆಯರನ್ನು ಪುರುಷರಿಗೆ ಸಮಾನವಾಗಿ ಕಾಣುವುದು ಮಾತ್ರವಲ್ಲ; ಅವರ ಬೆಳವಣಿಗೆಗೆ, ಭಾಗವಹಿಕೆಗೆ ಪೂರಕವಾಗುವ ವಿಶೇಷ ಅವಕಾಶಗಳನ್ನು ಕಲ್ಪಿಸಿದೆ. ಭಾರತದ ಸಂವಿಧಾನದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ವಿಶೇಷ ಅವಕಾಶಗಳು ಹೀಗಿವೆ:

**ಮಹಿಳಾ ಮೀಸಲಾತಿ ಮಸೂದೆ**

1993ರಲ್ಲಿ ಭಾರತದಲ್ಲಿ ಸಾಂವಿಧಾನಿಕ ತಿದ್ದುಪಡಿಯನ್ನು ಅಂಗೀಕರಿಸಲಾಗಿದ್ದು, ಅದು ಮೂರನೇ ಒಂದು ಭಾಗದಷ್ಟು ಗ್ರಾಮಪರಿಷತ್ ನಾಯಕ, ಅಥವಾ ಸರ್ಪಂಚ್, ಗ್ರಾಮಪಂಚಾಯಿತಿಗಳಲ್ಲಿನ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡಬೇಕೆಂದು ಕರೆ ನೀಡಿತು. ರಾಜ್ಯಸಭೆಯು 9ನೇ ಮಾರ್ಚ್, 2010ರಂದು ಮಸೂದೆಯನ್ನು ಅಂಗೀಕರಿಸಿತು. ಆದಾಗ್ಯೂ ಇದು ಲೋಕಸಭೆಯಲ್ಲಿ ಅಂಗೀಕೃತವಾಗುವ ಸ್ಥಿತಿ ತಲುಪದೆ ತ್ರಿಶಂಕು ಸ್ಥಿತಿಯಲ್ಲೇ ನಿಂತಿದೆ.

**ಮಹಿಳೆಯರಿಗೆ ಸಂಬಂಧಿಸಿದ ಸಂವಿಧಾನಾತ್ಮಕ ಅವಕಾಶಗಳು**

ವಿಧಿಗಳು 14, ವಿಧಿ 15(i), ವಿಧಿ15 (3), 16, 39(a) 39(d), 39(d), 42, 46, 47, 51(A) (e), 243 D(3), Article 243 D (4), 243 T (3).

ಮಹಿಳೆಯರ ರಕ್ಷಣೆಯ ಹಿನ್ನಲೆಯಲ್ಲಿ ಭಾರತೀಯ ದಂಡ ಸಂಹಿತೆ ಅಪರಾಧ ಎಂದು ಪರಿಗಣಿಸುವ ವರ್ತನೆಗಳು;

- ಅತ್ಯಾಚಾರ (Sec. 376 IPC)
- ಅಪಹರಣ (Sec. 363-373)
- ವರದಕ್ಷಿಣೆಯ ಕಾರಣದಿಂದಾಗಿ ನರಹತ್ಯೆ (Sec. 302/304-B IPC)
- ಮಾನಸಿಕ ಮತ್ತು ದೈಹಿಕ ಹಿಂಸೆ (Sec. 498-A IPC)
- ಪೀಡಿಸುವುದು (Sec. 354 IPC)
- ಲೈಂಗಿಕ ಶೋಷಣೆ (Sec. 509 IPC)
- ಹುಡುಗಿಯರನ್ನು ಆಮದು ಮಾಡಿಕೊಳ್ಳುವುದು (up to 21 years of age).

**ಮಹಿಳೆಯರಿಗೆ ಸಂಬಂಧಿಸಿದ ಕಾನೂನಾತ್ಮಕ ವಿಷಯಗಳು**

- ಸಮಾನ ವೇತನದ ಹಕ್ಕು
- ಕಾರ್ಯಕ್ಷೇತ್ರದಲ್ಲಿ ಶೋಷಣೆಯ ವಿರುದ್ಧ ಹಕ್ಕು
- ಅನಾಮಧೇಯತೆಯ ಹಕ್ಕು
- ಗೃಹಕೃತ್ಯ ಸಂಬಂಧ ಶೋಷಣೆಯ ವಿರುದ್ಧ ಹಕ್ಕು
- ಮಾತೃತ್ವ ಸಂಬಂಧ ಸೌಲಭ್ಯಗಳ ಹಕ್ಕು
- ಭ್ರೂಣಹತ್ಯೆಯ ವಿರುದ್ಧ ಹಕ್ಕು

- ಕಾನೂನು ಸಹಾಯ ಪಡೆಯುವ ಹಕ್ಕು
- ಘನತೆ ಮತ್ತು ಗೌರವಗಳ ಹಕ್ಕು
- ಆಸ್ತಿಯ ಹಕ್ಕು
- ರಾತ್ರಿಯ ವೇಳೆ ಬಂಧನಕ್ಕೊಳಪಡಿಸದ ಹಕ್ಕು

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

ಮಹಿಳೆಯರಿಗೆ ಸಂಬಂಧಿಸಿದ ಸಂವಿಧಾನಾತ್ಮಕ ಅವಕಾಶಗಳು ಮತ್ತು ಮಹಿಳೆಯರಿಗೆ ಸಂಬಂಧಿಸಿದ ಕಾನೂನಾತ್ಮಕ ವಿಷಯಗಳಿಗೆ ಸಂಬಂಧಿಸಿದ ವಿಧಿಗಳನ್ನು ಮತ್ತು ಹಕ್ಕುಗಳನ್ನು ಮೇಲೆ ವಿವರಿಸಲಾಗಿದೆ. ಪ್ರತಿಯೊಂದನ್ನು ಕುರಿತಂತೆ ಮಾಹಿತಿ ಪಡೆದು ಅವುಗಳು ನಿಮ್ಮ ಪರಿಸರದಲ್ಲಿ ಎಷ್ಟರಮಟ್ಟಿಗೆ ಅನ್ವಯವಾಗುತ್ತಿವೆ ಎಂಬುದನ್ನು ಗಮನಿಸಿ, ಒಂದು ಟಿಪ್ಪಣಿ ತಯಾರಿಸಿ

## 1.6.4. ಸಾರಾಂಶಿಸೋಣ

- ಮಹಿಳೆಯರನ್ನು ಅಪಾಯಗಳಿಂದ ರಕ್ಷಿಸಲು, ಅವರಿಗೆ ಉತ್ತಮವಾದ ಬದುಕನ್ನು ಕಟ್ಟಿಕೊಡಲು, ಭಾರತೀಯ ದಂಡ ಸಂಹಿತೆಯಲ್ಲಿ ಅತ್ಯಾಚಾರ, ವರದಕ್ಷಿಣೆ, ವಿಚ್ಛೇದನ, ಉತ್ತರಾಧಿಕಾರ, ಹೆಣ್ಣುಮಕ್ಕಳ ಕಳ್ಳಸಾಗಣೆ ಇತ್ಯಾದಿಗಳ ಕುರಿತು ಕಾನೂನುಗಳನ್ನು ರೂಪಿಸಲಾಗಿದೆ. ಈ ಸಂಬಂಧದ ಅಪರಾಧಗಳಿಗೆ ಶಿಕ್ಷೆಗಳನ್ನು ನಿಗದಿಪಡಿಸಲಾಗಿದೆ.
- ಮಹಿಳೆಯರಿಗೆ ಸಂವಿಧಾನಾತ್ಮಕವಾದ ಮತ್ತು ಕಾನೂನಾತ್ಮಕವಾದ ವಿಶೇಷ ಸೌಲಭ್ಯಗಳು, ಅವಕಾಶಗಳು ಇವೆ.
- ಸಮಾಜದಲ್ಲಿ ಈ ಹಕ್ಕುಗಳು, ಸೌಲಭ್ಯಗಳು, ಕಾನೂನುಗಳು ಅನ್ವಯವಾಗುವಲ್ಲಿ ಅಗತ್ಯವಾದ ಅರಿವು ಮತ್ತು ಜವಾಬ್ದಾರಿಯನ್ನು ಶಿಕ್ಷಣ ಮೂಡಿಸಬೇಕು.

## 1.6.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1**

ನೀವು ಸಂಗ್ರಹಿಸಿದ ವಿಷಯಗಳನ್ನು ಕೊನೆಯ ಪಕ್ಷ 10 ಮಹಿಳೆಯರೊಂದಿಗೆ ಒಂದು ಗುಂಪಿನಲ್ಲಿ ಚರ್ಚಿಸಿ, ಆ ವಿಷಯಕವಾದ ಜಾಗೃತಿ ಬೆಳೆಸಿ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

ನೀವು ತಯಾರಿಸಿದ ಟಿಪ್ಪಣಿಯನ್ನು ನಿಮ್ಮ ವಿದ್ಯಾರ್ಥಿ/ವಿದ್ಯಾರ್ಥಿನಿಯರೊಡನೆ ಹಂಚಿಕೊಂಡು ಅವರಲ್ಲಿ ಲಿಂಗಸಮಾನತೆ ಬೆಳೆಸುವ ಪ್ರಯತ್ನ ಮಾಡಿರಿ. ಈ ಕುರಿತ ಒಂದು ಲೇಖನ ತಯಾರಿಸಿ ವೃತ್ತಪತ್ರಿಕೆಯಲ್ಲಿ ಪ್ರಕಟಿಸಿ, ಇಲ್ಲವೇ ಶಾಲಾ ಪತ್ರಿಕೆಯಲ್ಲಿ ಪ್ರಕಟಿಸಿ.

## 1.6.6. ಘಟಕಾಂತ್ಯ ಅಭ್ಯಾಸಗಳು

1. ಭಾರತದ ಸನ್ನಿವೇಶದಲ್ಲಿ ಅತ್ಯಾಚಾರ, ವರದಕ್ಷಿಣೆ, ಅಪಹರಣ, ಮಹಿಳೆಗೆ ಆಸ್ತಿಯ ಉತ್ತರಾಧಿಕಾರ, ಪುನರ್ವಿವಾಹ ಇವುಗಳ ಕುರಿತ ನಿಯಮ/ ಕಾನೂನುಗಳನ್ನು ವಿವರಿಸಿ.
2. ಮಹಿಳೆಯ ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಹಕ್ಕುಗಳನ್ನು ವಿವರಿಸಿ.

## 1.6.7. ಪರಾಮರ್ಶನ ಸೂಚಿ

1. Dr. N.B. Kongawad and Dr. N. P. Shahapur, “Gender, School and Society”, Vidyanidhi Prakashana

2. Dr. Mahabaleshwar Rao, Gender, School Education (2017), Vismaya Prakashana.

3. Jeffy Johnson*, Lipi Parashar** & Cicily Martin, “Gender Jurispurdence in India” An Open Access Journal from The Law Brigade (Publishing) Group

**********

# ಬ್ಲಾಕ್–2 : ಲಿಂಗತ್ವ ಮತ್ತು ಶಿಕ್ಷಣ

## ಘಟಕ–1 : ಧನಾತ್ಮಕ ಸ್ವ–ಪರಿಕಲ್ಪನೆ ಮತ್ತು ಸ್ವ–ಗೌರವವನ್ನು ಬೆಳೆಸುವುದು

### ಘಟಕದ ರಚನೆ


2.1.1. ಕಲಿಕೆಯ ಉದ್ದೇಶಗಳು

2.1.2. ಪೀಠಿಕೆ

2.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.1.3.1. ವಿದ್ಯಾರ್ಥಿನಿ/ವಿದ್ಯಾರ್ಥಿಗಳಲ್ಲಿ ಧನಾತ್ಮಕ ಸ್ವ–ಪರಿಕಲ್ಪನೆಯನ್ನು ಬೆಳೆಸುವುದು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

2.1.3.2. ವಿದ್ಯಾರ್ಥಿನಿ/ವಿದ್ಯಾರ್ಥಿಗಳಲ್ಲಿ ಆತ್ಮಗೌರವವನ್ನು ಬೆಳೆಸುವುದು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

2.1.4. ಸಾರಾಂಶಿಸೋಣ

2.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

2.1.6. ಘಟಕಾಂತ್ಯ ಅಭ್ಯಾಸಗಳು

2.1.7. ಪರಾಮರ್ಶನ ಸೂಚಿ


### 2.1.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ವಿದ್ಯಾರ್ಥಿ/ವಿದ್ಯಾರ್ಥಿನಿಯರಲ್ಲಿ ಧನಾತ್ಮಕ ಸ್ವಪರಿಕಲ್ಪನೆಯ ಅರ್ಥ, ಪ್ರಾಮುಖ್ಯತೆಯನ್ನು ಮತ್ತು ಅದನ್ನು ಬೆಳೆಸುವ ರೀತಿಯನ್ನು ವಿವರಿಸುವರು; ಮತ್ತು
- ವಿದ್ಯಾರ್ಥಿ/ವಿದ್ಯಾರ್ಥಿನಿಯರಲ್ಲಿ ಸ್ವಗೌರವದ ಅರ್ಥ, ಪ್ರಾಮುಖ್ಯತೆಯನ್ನು ಮತ್ತು ಅದನ್ನು ಬೆಳೆಸುವ ರೀತಿಯನ್ನು ವಿವರಿಸುವರು;

### 2.1.1. ಪೀಠಿಕೆ

ಲಿಂಗತ್ವ ಎಂದರೇನು, ಸಮಾಜದಲ್ಲಿ ಸಮಾನತೆಯನ್ನು ಬೆಳೆಸುವಲ್ಲಿ ಅದು ಹೇಗೆ ಪ್ರಭಾವಬೀರುತ್ತದೆ ಎಂಬುದನ್ನು ನಾವು ತಿಳಿದಿದ್ದೇವೆ. ಲಿಂಗತ್ವಕ್ಕೆ ಸಂಬಂಧಿಸಿದ ವರ್ತನೆಗಳು ವ್ಯಕ್ತಿಯ ವ್ಯಕ್ತಿತ್ವದ ಮೇಲೂ ಪರಿಣಾಮಬೀರಬಲ್ಲುದು. ವ್ಯಕ್ತಿ ಧನಾತ್ಮಕ ಸ್ವಪರಿಕಲ್ಪನೆಯನ್ನು ಮತ್ತು ಸ್ವಗೌರವವನ್ನು ಬೆಳೆಸಿಕೊಳ್ಳುವಲ್ಲಿ ಲಿಂಗತ್ವದ ಅಂಶಗಳು ಅಡ್ಡಿಯಾಗುತ್ತವೆ. ಸಮಾಜದಲ್ಲಿ ವ್ಯಕ್ತಿಯ ಇರುವಿಕೆಯಲ್ಲಿ ವ್ಯಕ್ತಿಯ ಸ್ವಪರಿಕಲ್ಪನೆ ಮತ್ತು ಸ್ವಗೌರವಗಳು ಹೆಚ್ಚಿನ ಪಾತ್ರವನ್ನು ವಹಿಸುತ್ತವೆ. ಸಮಾಜದ ಸದಸ್ಯರಲ್ಲಿ ಧನಾತ್ಮಕ ಸ್ವಪರಿಕಲ್ಪನೆ ಇದ್ದರೆ ಅದು ಸಮಾಜದ ಬೆಳವಣಿಗೆಗೆ ಕಾರಣವಾಗುತ್ತದೆ. ಅದು ಋಣಾತ್ಮಕವಾದರೆ ಸಂಬಂಧಪಟ್ಟ ವರ್ತನೆಗಳು ಸಮಾಜದ ಏಳಿಗೆಗೆ ಅಡ್ಡಿಯಾಗುತ್ತವೆ. ಈಗಾಗಲೇ ಲಿಂಗ ತಾರತಮ್ಯ ನಮ್ಮ ಸಮಾಜದಲ್ಲಿ ದಟ್ಟವಾಗಿದ್ದು ಅದು ವ್ಯಕ್ತಿಯ ವ್ಯಕ್ತಿತ್ವವನ್ನು ಘಾಸಿಗೊಳಿಸುತ್ತಿದೆ. ಹಾಗಾಗಿ ಅಧ್ಯಾಪಕರಾದ ನಾವು ಮಕ್ಕಳಲ್ಲಿ ಎಳವೆಯಿಂದಲೇ ಧನಾತ್ಮಕ ಸ್ವಪರಿಕಲ್ಪನೆ ಮತ್ತು

ಸ್ವಗೌರವವನ್ನು ಬೆಳೆಸಲು ಪ್ರಯತ್ನಿಸಬೇಕು. ಅವುಗಳಿಗೆ ಯಾವುದೇ ಅಂಶಗಳೂ ಅಡ್ಡಿಯಾಗದಂತೆ ಎಚ್ಚರವಹಿಸಬೇಕು. ಈ ದಿಶೆಯಲ್ಲಿ ಧನಾತ್ಮಕ ಸ್ವಪರಿಕಲ್ಪನೆ ಮತ್ತು ಸ್ವಗೌರವ ಎಂದರೇನು? ಅವುಗಳನ್ನು ಬೆಳೆಸುವುದು ಹೇಗೆ ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

## 2.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.1.3.1. ವಿದ್ಯಾರ್ಥಿನಿ/ವಿದ್ಯಾರ್ಥಿಗಳಲ್ಲಿ ಧನಾತ್ಮಕ ಸ್ವ-ಪರಿಕಲ್ಪನೆಯನ್ನು ಬೆಳೆಸುವುದು

**ಅಭ್ಯಾಸ I**

ಕೆಳಗಿನ ವಾಕ್ಯವೃಂದವನ್ನು ಓದಿ ಅದರ ನಂತರ ಕೊಟ್ಟಿರುವ ಪ್ರಶ್ನೆಗಳನ್ನು ಉತ್ತರಿಸಿ

ಸೋಫಿಯಾ ಚುರುಕು ಹುಡುಗಿ. ಪುಟಿಯುವ ಉತ್ಸಾಹ. ಜಾಣೆ ಕೂಡ. ಖುಶಿಖುಶಿಯಾಗಿಯೇ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದಳು. ನಂತರ ಅವರ ಮನೆಯಿಂದ ಸ್ವಲ್ಪ ದೂರದಲ್ಲಿದ್ದ ನಗರದ ಹೈಸ್ಕೂಲ್‌ಗೆ ಸೇರಿದಳು. ಈ ಶಾಲೆಗೆ ಸೇರಿದ ಕೆಲವೇ ದಿನಗಳಲ್ಲಿ ಸೋಫಿಯಾಳ ವರ್ತನೆಯೇ ಬಹಳಷ್ಟು ಬದಲಾಗಿಬಿಟ್ಟಿತು. ಮೊದಲಿನ ಉತ್ಸಾಹವಿಲ್ಲ, ಯಾವುದರಲ್ಲೂ ಆಸಕ್ತಿ ಇಲ್ಲ, ಯಾರ ಜೊತೆಯೂ ಸೇರುವ ಮನಸ್ಸಿಲ್ಲ. ಪಾದರಸದಂತೆ ಪುಟಿಯುತ್ತಿದ್ದ ಈ ಹುಡುಗಿ ಮೊದಲಿನಂತಲ್ಲದೆ ಮೂಲೆ ಹಿಡಿಯಲು ಪ್ರಾರಂಭಿಸಿದಳು. ಮಾರ್ಕುಗಳೂ ಕಡಿಮೆಯಾಗತೊಡಗಿದವು. ಇದನ್ನು ಗಮನಿಸಿದ ಅವಳ ಮೊದಲ ಗೆಳತಿಯರು, ಅಧ್ಯಾಪಕರ ಗಮನಕ್ಕೆ ತಂದರು. ಹೆತ್ತವರನ್ನು ಕರೆದು ವಿಚಾರಸಲಾಗಿ, ಅವರು ಮನೆಯಲ್ಲಿ ಅಂತಹುದೇನೂ ನಡೆದಿಲ್ಲ ಎಂದರು. ಅಧ್ಯಾಪಕರೇ ನಿಧಾನವಾಗಿ ವಿಚಾರಿಸಿದಾಗ ಸೋಫಿಯಾ ವಿಷಯ ಬಿಚ್ಚಿಟ್ಟಳು 'ನನಗೆ ಶಾಲೆಯೇ ಇಷ್ಟವಿಲ್ಲ ಮಿಸ್, ನಾನು ದಪ್ಪಗಿರುವುದರಿಂದ ಎಲ್ಲರೂ ನನ್ನನ್ನೇ ನೋಡುತ್ತಿದ್ದಾರೆ ಎಂದು ನನಗೆ ಅನ್ನಿಸುತ್ತಲೇ ಇರುತ್ತದೆ, ನಾನು ಅವರಷ್ಟು ಚೆನ್ನಾಗಿ ಡ್ರೆಸ್ ಮಾಡುವುದಿಲ್ಲ, ಅದಕ್ಕೇ ಅವರಿಗೆಲ್ಲ ನನ್ನನ್ನು ಕಂಡರೆ ಇಷ್ಟವಿಲ್ಲವೇನೋ ಎಂದು ಭಯವಾಗುತ್ತದೆ, ಆದುದರಿಂದಲೇ ನಾನು ನನ್ನ ಪಾಡಿಗೆ ಇರಲು ಇಷ್ಟಪಡುತ್ತೇನೆ'. ಇದು ಅವಳೇ ಸೃಷ್ಟಿಸಿಕೊಂಡ, ಕಲ್ಪಿಸಿಕೊಂಡ ಸನ್ನಿವೇಶ.

ಸೋಫಿಯಾ ಅವಳ ಬಗ್ಗೆ ಏನೆಂದುಕೊಂಡಿದ್ದಳು?

ಅವಳನ್ನು ಕುರಿತ ಅವಳದೇ ಗ್ರಹಿಕೆ ಎಂತಹುದು? ಧನಾತ್ಮಕವೋ? ಋಣಾತ್ಮಕವೋ?

ಅವಳ ಮನಸ್ಸು ಮತ್ತು ವರ್ತನೆಗಳನ್ನು ಬದಲಿಸಲು ಅಧ್ಯಾಪಕ/ಕಿಯಾಗಿ ನೀವು ಹೇಗೆ ಪ್ರಯತ್ನಿಸಬಹುದು ಎಂದು ನಿಮಗನ್ನಿಸುತ್ತದೆ?

ಈ ಪ್ರಶ್ನೆಗಳನ್ನು ಉತ್ತರಿಸುತ್ತಿದ್ದಂತೆ, ಸೋಫಿಯಾ ತಾನೇ ಕಲ್ಪಿಸಿಕೊಂಡ ಕಾರಣಗಳಿಂದಾಗಿ ಋಣಾತ್ಮಕವಾದ ಸ್ವಪರಿಕಲ್ಪನೆಯನ್ನು ಬೆಳೆಸಿಕೊಂಡಿದ್ದಾಳೆ, ಇದಕ್ಕೆ ಯಾರೂ ಕಾರಣರಲ್ಲ ಎಂಬುದನ್ನು ನೀವು ಗಮನಿಸಿರುವಿರಿ. ಅದು ಸರಿ. ಋಣಾತ್ಮಕವಾದ ಸ್ವಪರಿಕಲ್ಪನೆಗೆ ಕಾರಣಗಳೇನೇ ಇರಲಿ, ಅದು ವ್ಯಕ್ತಿ ಮತ್ತು ವ್ಯಕ್ತಿಯ ಪರಿಸರದ ಮೇಲೆ ಅತಿ ಹೆಚ್ಚಿನ ಅನಪೇಕ್ಷಣೀಯ ಪರಿಣಾಮವನ್ನು ಬೀರಬಲ್ಲುದು. ಹಾಗಾಗಿ ಅದನ್ನು ಹೋಗಲಾಡಿಸಿ ಧನಾತ್ಮಕ ಸ್ವಪರಿಕಲ್ಪನೆಯನ್ನು ಬೆಳೆಸಬೇಕಾದುದು ನಮ್ಮ ಕರ್ತವ್ಯ. ಹಾಗಾಗಿ ಸ್ವಪರಿಕಲ್ಪನೆ ಎಂದರೇನು, ಅದನ್ನು ಬೆಳೆಸುವುದು ಹೇಗೆ ಎಂದು ತಿಳಿಯೋಣ.

**ಸ್ವ-ಪರಿಕಲ್ಪನೆಯ ಅರ್ಥ**

ಇದನ್ನು ಇಂಗ್ಲಿಷಿನಲ್ಲಿ self-concept, self-construction, self-identity, and self-perspective or self-structure ಇತ್ಯಾದಿ ಪದಗಳಿಂದ ವರ್ಣಿಸುತ್ತಾರೆ. ಕನ್ನಡದಲ್ಲಿ ಇದನ್ನು ಸ್ವರೂಪಣ, ಸ್ವ ಅನನ್ಯತೆ, ಸ್ವ ಗ್ರಹಿಕೆ ಅಥವಾ ಸ್ವ ರಚನೆ ಎಂದು ಹೇಳಬಹುದು. ಸಾಮಾನ್ಯವಾಗಿ "ನಾನು ಯಾರು" ಎಂಬ ಪ್ರಶ್ನೆಗೆ ನಮ್ಮ ಉತ್ತರವೇ ಸ್ವಪರಿಕಲ್ಪನೆಯಾಗಿರುತ್ತದೆ.

ಸ್ವ ಪರಿಕಲ್ಪನೆ ಎಂಬುದು ಸ್ವ–ಅರಿವಿಗಿಂತ ಸ್ವಲ್ಪ ಭಿನ್ನವಾದುದು. ಇದು ವ್ಯಕ್ತಿ/ವ್ಯಕ್ತಿಗಳಿಗೆ ಅವರ ಕುರಿತಾದ ಅರಿವನ್ನು ಎಷ್ಟರಮಟ್ಟಿಗೆ ಪರಿಭಾಷಿಸಲಾಗುತ್ತದೆ, ಅದು ಎಷ್ಟು ಸ್ಥಿರವಾಗಿದೆ, ಹಾಗೂ ಸದ್ಯದ ಮನೋಭಾವ ಮತ್ತು ಸ್ಥಿತಿಗೆ ಎಷ್ಟರಮಟ್ಟಿಗೆ ಅನ್ವಯವಾಗುತ್ತದೆ ಎಂಬುದಕ್ಕೆ ಸಂಬಂಧಪಟ್ಟುದು.

ಸ್ವ–ಪರಿಕಲ್ಪನೆ ಎಂಬುದು ಸ್ವಗೌರವಕ್ಕಿಂತ ಭಿನ್ನವಾದುದು. ಸ್ವ–ಪರಿಕಲ್ಪನೆ ಎಂಬುದು ಸಂಜ್ಞಾನಾತ್ಮಕವಾದುದು ಅಥವಾ ವ್ಯಕ್ತಿಯ 'ಅಹಂ'ನ ವರ್ಣಿಸಬಹುದಾದ ಅಂಶ(ನಾನು ಒಳ್ಳೆಯ ಮಾತುಗಾರ), ಆದರೆ ಸ್ವ ಗೌರವ ಎಂಬುದು ಮಾಪನಾತ್ಮಕವಾದುದು ಮತ್ತು ಅಭಿಪ್ರಾಯಾಧಾರಿತವಾದುದು(ಉದಾ: ನಾನು ಒಳ್ಳೆಯ ಮಾತುಗಾರ ಎಂಬುದರ ಬಗ್ಗೆ ನನಗೆ ಹೆಮ್ಮೆ ಇದೆ).

ಸ್ವ–ಪರಿಕಲ್ಪನೆ ಎಂಬುದು ವ್ಯಕ್ತಿಯ 'ಸ್ಕೀಮಾ'ಗಳಿಂದ ರೂಪಿತವಾದುದು. ಸ್ವಗೌರವ, ಸ್ವ ಅರಿವು, ಮತ್ತು ಸಾಮಾಜಿಕ 'ಅಹಂ' ಇವುಗಳೊಂದಿಗಿನ 'ಸ್ಕೀಮಾ'ಗಳ ಅಂತರ್ ಕ್ರಿಯೆಯಿಂದಾಗಿ ಸಮಷ್ಟಿಯಾದ ಅಹಂ ರೂಪಿತವಾಗುತ್ತದೆ. ಇದು ವ್ಯಕ್ತಿ ಕಂಡಂತೆ ವ್ಯಕ್ತಿಯ ಭೂತ, ವರ್ತಮಾನ ಮತ್ತು ಭವಿಷ್ಯತ್‌ಗಳನ್ನು ಒಳಗೊಳ್ಳುತ್ತದೆ. ಭವಿಷ್ಯತ್ ಅಹಂ ಎಂಬುದು (ಅಥವಾ ಮುಂದೆ ಸಾಧ್ಯವಾಗಬಹುದಾದ ಅಹಂ) ಮುಂದೇನಾಗಬಹುದು ಎಂಬುದನ್ನು ಕುರಿತಂತೆ, ಏನಾಗಬೇಕು ಎಂಬುದರ ಕುರಿತಂತೆ, ಅಥವಾ ಏನಾಗಬಹುದು ಎಂಬ ಭಯವನ್ನು ಕುರಿತಂತೆ ವ್ಯಕ್ತಿಯ ಕಲ್ಪನೆಗಳನ್ನು ಪ್ರತಿನಿಧಿಸುತ್ತದೆ. ಕೆಲವು ವರ್ತನೆಗಳಿಗೆ ಭವಿಷ್ಯತ್ ಅಹಂ ಎಂಬುದು ಪ್ರೋತ್ಸಾಹಕಗಳಾಗಿ ಕೆಲಸಮಾಡುತ್ತವೆ.

ವ್ಯಕ್ತಿಗಳಿಗೆ ಅವರ ಹಿಂದಿನ ಮತ್ತು ಮುಂದಿನ ಅಹಂ ಕುರಿತಂತೆ ಇರುವ ಗ್ರಹಿಕೆ ಅವರ ವರ್ತಮಾನದ ಅಹಂ ಕುರಿತ ಗ್ರಹಿಕೆಗೆ ಸಂಬಂಧಪಟ್ಟಿರುತ್ತವೆ.

ವ್ಯಕ್ತಿಗಳು ತಮ್ಮನ್ನು ತಾವೇ ಋಣಾತ್ಮಕ ಸ್ವ–ಕಲ್ಪನೆಯಿಂದ ದೂರವಿಟ್ಟು ಒಂದು ಧನಾತ್ಮಕ ಸ್ವ–ಮಾಪನವನ್ನು ಸುಧಾರಿಸಿಕೊಂಡಿರುವ ಹಾಗೂ ಈ ಧನಾತ್ಮಕ ಮಾಪನದ ಮೇಲೆಯೇ ಹೆಚ್ಚು ಗಮನವಿಡುವ ಪ್ರವೃತ್ತಿ ಕಂಡುಬರುತ್ತದೆ ಎಂದು ಕೆಲವು ಸಿದ್ಧಾಂತಗಳು ಹೇಳುತ್ತವೆ. ಜೊತೆಗೆ, ಹಿಂದಿನ 'ಅಹಂ' ಅನ್ನು ಇಂದಿನ 'ಅಹಂ'ಗಿಂತ ಕೆಳಮಟ್ಟದಲ್ಲಿ ಗುರುತಿಸಿಕೊಳ್ಳುವುದೂ ಉಂಟು (ಉದಾ: ನಾನು ಮೊದಲಿಗಿಂತ ಈಗ ಎಷ್ಟೋ ವಾಸಿ). ಹಾಗೆಯೇ ಭವಿಷ್ಯದ 'ಅಹಂ' ಅನ್ನು ವರ್ತಮಾನದ 'ಅಹಂ'ಗಿಂತಲೂ ಉತ್ತಮವಾಗಿ ಕಲ್ಪಿಸಿಕೊಳ್ಳುವುದೂ ಉಂಟು (ಉದಾ: ಮುಂದೆ ನಾನು ಈಗಿಗಿಂತಲೂ ಉತ್ತಮವಾಗಿ ಓಡಬಲ್ಲೆ).

**ಸ್ವ ಪರಿಕಲ್ಪನೆಯನ್ನು ಬೆಳೆಸುವುದು**

ಸ್ವ–ಪರಿಕಲ್ಪನೆ ಯಾವಾಗ ಮೊದಲಾಗುತ್ತದೆ ಎಂಬುದರ ಕುರಿತು ಸಂಶೋಧಕರು ಸಾಕಷ್ಟು ಚರ್ಚಿಸಿದ್ದಾರೆ. ಸುಮಾರು 3ನೇ ವರ್ಷದ ವೇಳೆಗೆ ಪೋಷಕರಿಂದ ಪೋಷಿಸಲಾದ ಲಿಂಗತ್ವ ಪಡಿಯಚ್ಚುಗಳು ಮತ್ತು ಅಪೇಕ್ಷೆಗಳು ಮಕ್ಕಳ ಸ್ವ ಪರಿಕಲ್ಪನೆಯ ಮೇಲೆ ಪ್ರಭಾವ ಬೀರುತ್ತವೆ ಎಂಬುದು ಕೆಲವರ ಸ್ಪಷ್ಟ ಮತ. ಏನೇ ಆದರೂ, ವಿಕಾಸದ ಈ ಹಂತದಲ್ಲಿ, ಮಕ್ಕಳಿಗೆ ಅತ್ಯಂತ ವಿಶಾಲವಾದ ಸ್ವ ಅರಿವು ಇರುತ್ತದೆ; ಅವರು ವಿಶೇಷವಾಗಿ 'ನಾನು ದೊಡ್ಡವನು, ನಾನು ಚಂದ, ನಾನು ಜಾಣೆ, ನಾನು ಶಕ್ತಿಮಾನ್' ಇತ್ಯಾದಿಯಾಗಿ ತಮ್ಮನ್ನು ತಾವೇ ವರ್ಣಿಸುತ್ತಾರೆ. ಇದು ಸ್ವ ಪರಿಕಲ್ಪನೆಯ ಮೊದಲ ಹಂತವನ್ನು ಪ್ರತಿನಿಧಿಸುವುದಾದರೂ ನಿಜವಾಗಿ ಸ್ವ ಪರಿಕಲ್ಪನೆ 7 ಅಥವಾ 8 ನೇ ವಯಸ್ಸಿನಲ್ಲಿ ರೂಪುಗೊಳ್ಳುತ್ತದೆ ಎಂಬುದು ಇತರರ ಮತ. ಈ ಹಂತದಲ್ಲಿ ಮಕ್ಕಳು ತಮ್ಮ ಭಾವನೆಗಳನ್ನು, ಸಾಮರ್ಥ್ಯಗಳನ್ನು ವ್ಯಾಖ್ಯಾನಿಸಲು ಸಮರ್ಥರಾಗಿರುತ್ತಾರೆ. ಅಲ್ಲದೆ ಸಹಪಾಠಿಗಳು, ಅಧ್ಯಾಪಕರು, ಮತ್ತು ಕುಟುಂಬದಿಂದ ಹಿಮ್ಮಾಹಿತಿಯನ್ನು ಸ್ವೀಕರಿಸಲು ಮತ್ತು ಅದನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿರುತ್ತಾರೆ. ಕಿಶೋರಾವಸ್ಥೆಯಲ್ಲಿ ಸ್ವ ಪರಿಕಲ್ಪನೆ ಗಮನಾರ್ಹವಾಗಿ ಮಾರ್ಪಾಡಾಗುತ್ತದೆ. ಸಾಮಾನ್ಯವಾಗಿ, ಪರಿಕಲ್ಪನೆಗಳು ಹೆಚ್ಚು ಪರಿಷ್ಕಾರವಾಗಿ ಗಟ್ಟಿಯಾಗುತ್ತಾ ಹೋದಂತೆ ಸ್ವ ಪರಿಕಲ್ಪನೆ ನಿಧಾನವಾಗಿ ಬದಲಾಗುತ್ತದೆ. ಕಿಶೋರಾವಸ್ಥೆಯಲ್ಲಿ ಸ್ವ ಪರಿಕಲ್ಪನೆಯ ಬೆಳವಣಿಗೆಯನ್ನು "U" ಆಕಾರದ ನಕ್ಷೆಯ ರೂಪದಲ್ಲಿ ಬದಲಾಗುತ್ತದೆ ಎಂದು ವರ್ಣಿಸಲಾಗುತ್ತದೆ.

### ಪೂರ್ವ ಕಿಶೋರಾವಸ್ಥೆಯಿಂದ ಅಂತಿಮ ಕಿಶೋರಾವಸ್ಥೆಯ ಕಡೆಗೆ



ಇದರ ಪ್ರಕಾರ, ಸಾಮಾನ್ಯ ಸ್ವ–ಪರಿಕಲ್ಪನೆ ಪೂರ್ವ ಕಿಶೋರಾವಸ್ಥೆಯಲ್ಲಿ ಕಡಿಮೆಯಾಗಿ ಅಂತಿಮ ಕಿಶೋರಾವಸ್ಥೆಯಲ್ಲಿ ಹೆಚ್ಚಾಗುತ್ತದೆ. ಜೊತೆಗೆ ಕಿಶೋರ ಕಿಶೋರಿಯರು ತಮ್ಮ ಸಾಮರ್ಥ್ಯಗಳನ್ನು ನಿರಂತರತೆಯಲ್ಲಿ ಮಾಪನಮಾಡಿಕೊಳ್ಳುತ್ತಾರೆ. ಮಕ್ಕಳಂತೆ 'ಹೌದು, ಇಲ್ಲ' ಎಂಬ ಮಾಪನದಲ್ಲಲ್ಲ. ಉದಾಹರಣೆಗೆ, ತಾವು 'ಚುರುಕು ಹೌದೇ' ಎಂದು ಗುರುತಿಸಿಕೊಳ್ಳಬೇಕಾದರೆ, 'ತುಂಬಾ ಚುರುಕಲ್ಲ, ಆದರೆ ತುಂಬಾ ಪೆದ್ದೂ ಅಲ್ಲ' ಎಂದು ಗುರುತಿಸಿಕೊಳ್ಳುತ್ತಾರೆ. ಇಲ್ಲವೇ 'ಇತರರಿಗೆ ಹೋಲಿಸಿದರೆ ನಾನು ತುಂಬಾ ಚುರುಕು' ಎಂದೋ 'ತುಂಬಾ ನಿಧಾನ' ಎಂದೋ ಗುರುತಿಸಿಕೊಳ್ಳುತಾರೆ. ನಾನು 'ಚುರುಕು, ಚುರುಕಲ್ಲ' ಎಂಬುದರಲ್ಲಿ ಸ್ವ–ಪರಿಕಲ್ಪನೆ ನಿಲ್ಲುವುದಿಲ್ಲ. ಸ್ವ–ಪರಿಕಲ್ಪನೆ ಯಾವಾಗ ಪ್ರಾರಂಭವಾಗುತ್ತದೆ ಎಂಬ ಚರ್ಚೆ ಇರುವುದಾದರೂ ಸ್ವ ಪರಿಕಲ್ಪನೆ ಪರಿಗಣಿಸಲೇಬೇಕಾದ ಅತಿ ಪ್ರಮುಖವಾದ ಅಂಶ ಎಂಬುದನ್ನೂ ಇದು ಸಂಜ್ಞಾನಾತ್ಮಕ ಫಲಗಳನ್ನೂ ಶೈಕ್ಷಣಿಕ ಸಾಧನೆಯನ್ನೂ ಸಂತೋಷ, ಆತಂಕ, ಸಾಮಾಜಿಕ ಸಮನ್ವಯ, ಸ್ವ ಗೌರವ ಮತ್ತು ಜೀವನ ಸಂತೃಪ್ತಿಯ ಮಟ್ಟವನ್ನೂ ಪ್ರಭಾವಿಸುತ್ತವೆ ಎಂಬ ಅಂಶವನ್ನೂ ಎಲ್ಲ ಸಂಶೋಧಕರೂ ಒಪ್ಪಿಕೊಳ್ಳುತ್ತಾರೆ.

### ಶೈಕ್ಷಣಿಕ ಮತ್ತು ದೈಹಿಕ ಸ್ವ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವಿಕೆ:

### ಶೈಕ್ಷಣಿಕ ಸ್ವ–ಪರಿಕಲ್ಪನೆ

ಶೈಕ್ಷಣಿಕ ಸ್ವ–ಪರಿಕಲ್ಪನೆಯು ವ್ಯಕ್ತಿ ಅಥವಾ ಮಗುವಿಗೆ ತನ್ನ ಶೈಕ್ಷಣಿಕ ಸಾಮರ್ಥ್ಯಗಳ ಅಥವಾ ಕೌಶಲಗಳ ಕುರಿತಾಗಿ ಇರುವ ವೈಯಕ್ತಿಕ ನಂಬಿಕೆಗಳಿಗೆ ಸಂಬಂಧಿಸಿದುದು. ಇದು ಪೋಷಕರು ಮತ್ತು ಶಿಕ್ಷಕರ ಕಾರಣದಿಂದಾಗಿ ಸುಮಾರು 3 ರಿಂದ 5 ನೇ ವರ್ಷದೊಳಗೆ ಬೆಳೆಯುತ್ತದೆ ಎಂದು ಕೆಲವು ಸಂಶೋಧನೆಗಳು ತೋರಿಸಿಕೊಟ್ಟಿವೆ. 10ರಿಂದ 11 ವರ್ಷದ ವೇಳೆಗೆ ಮಕ್ಕಳು ತಮ್ಮ ಸಾಧನೆಯನ್ನು ಇತರರ ಸಾಧನೆಯೊಂದಿಗೆ ಹೋಲಿಸುವುದರ ಮೂಲಕ ಶೈಕ್ಷಣಿಕ ಸ್ವ ಪರಿಕಲ್ಪನೆಯನ್ನು ರೂಪಿಸಿಕೊಳ್ಳುತ್ತಾರೆ. ಈ ಸಾಮಾಜಿಕ ಹೋಲಿಕೆಗಳನ್ನು ಸಾಮಾಜಿಕ ಅಂದಾಜುಗಳು (self-estimates) ಎಂದು ಹೇಳಲಾಗುತ್ತದೆ. ಗಣಿತ ಮುಂತಾದ ವಿಷಯಗಳ ಮಾಪನದಲ್ಲಿ ಸಂಜ್ಞಾನಾತ್ಮಕ ಸಾಮರ್ಥ್ಯಗಳ ಸ್ವ–ಅಂದಾಜುಗಳು ಹೆಚ್ಚು ನಿರ್ದಿಷ್ಟವಾಗಿರುತ್ತವೆ.

### ದೈಹಿಕ ಸ್ವ–ಪರಿಕಲ್ಪನೆ

ದೈಹಿಕ ಸಾಮರ್ಥ್ಯ ಮತ್ತು ದೈಹಿಕ ನೋಟ ಇವುಗಳ ಕುರಿತಾಗಿ ವ್ಯಕ್ತಿಯ ವೈಯಕ್ತಿಕ ಗ್ರಹಿಕೆಯೇ ದೈಹಿಕ ಸ್ವ–ಪರಿಕಲ್ಪನೆ. ದೈಹಿಕ ಸಾಮರ್ಥ್ಯವು ದೈಹಿಕ ಶಕ್ತಿ, ಸಹಿಸಿಕೊಳ್ಳುವಿಕೆ ಇತ್ಯಾದಿಗಳಿಗೆ ಸಂಬಂಧಿಸಿದರೆ, ದೈಹಿಕ ನೋಟ ವ್ಯಕ್ತಿ ಎಷ್ಟು ಆಕರ್ಷಕವಾಗಿದ್ದಾಳೆ/ದ್ದಾನೆ ಎಂಬುದಕ್ಕೆ ಸಂಬಂಧಿಸಿದುದು. ಕಿಶೋರಾವಸ್ಥೆ ಪ್ರಾರಂಭವಾಗುವಾಗಲೇ ಕಿಶೋರ ಕಿಶೋರಿಯರು ತಮ್ಮ ಸಾಮಾನ್ಯ ದೈಹಿಕ ಸ್ವ ಪರಿಕಲ್ಪನೆಯಲ್ಲಿ ಪ್ರಮುಖ ಬದಲಾವಣೆಗಳನ್ನು ಅನುಭವಿಸುತ್ತಾರೆ. ಇದು ಹುಡುಗಿಯರಲ್ಲಿ 11ನೇ ವಯಸ್ಸಿಗೂ ಹುಡುಗರಲ್ಲಿ 15ನೇ ವಯಸ್ಸಿಗೂ ಕಾಣಿಸಿಕೊಳ್ಳುತ್ತದೆ. ಕಿಶೋರಾವಸ್ಥೆಯ ದೈಹಿಕ ಬದಲಾವಣೆಗಳು, ಜೊತೆಗೆ ಅನೇಕ ಮಾನಸಿಕ ಬದಲಾವಣೆಗಳು ಕಿಶೋರಾವಸ್ಥೆಯಲ್ಲಿ ದೈಹಿಕ ಸ್ವ ಪರಿಕಲ್ಪನೆ ಕಿಶೋರ/ಕಿಶೋರಿಯರಿಗೆ ಹೆಚ್ಚು ಗಮನಾರ್ಹವಾಗುವಂತೆ ಮಾಡುತ್ತದೆ. ದೈಹಿಕ ಸ್ವ ಪರಿಕಲ್ಪನೆಯನ್ನು ಬೆಳೆಸುವಲ್ಲಿ ಪ್ರಮುಖವಾದ ಮಧ್ಯವರ್ತನವೆಂದರೆ ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು. ಸ್ಪರ್ಧಾತ್ಮಕ ಕ್ರೀಡೆಗಳಲ್ಲಿ ಭಾಗವಹಿಸುವಂತೆ ಮಾಡುವುದರಿಂದ ಕಿಶೋರ ಕಿಶೋರಿಯರ ದೈಹಿಕ ಸ್ವ ಪರಿಕಲ್ಪನೆ ಉತ್ತಮವಾಗುತ್ತದೆ ಎಂದು ಹೇಳಲಾಗುತ್ತದೆ.

**ಸ್ವ ಪರಿಕಲ್ಪನೆ ಮತ್ತು ಲಿಂಗತ್ವ ವ್ಯತ್ಯಾಸ – ಸಂಶೋಧನೆಗಳು ಏನು ಹೇಳುತ್ತವೆ?**

ಸ್ವಪರಿಕಲ್ಪನೆಯಲ್ಲಿ ಕಂಡುಬಂದ ಲಿಂಗತ್ವ ವ್ಯತ್ಯಾಸಗಳು ಕಳೆದ ಶತಮಾನದಲ್ಲಿ ಸಂಶೋಧಕರ ಗಮನ ಸೆಳೆದವು. ಈ ವಿಷಯವನ್ನು ಕೇಂದ್ರವಾಗಿಟ್ಟುಕೊಂಡ ಸಂಶೋಧನೆಗಳು ಕೆಳಗಿನ ಅಂಶಗಳನ್ನು ಗುರುತಿಸಿವೆ.

- ಪುರುಷರು ಮಹಿಳೆಯರಿಗಿಂತ ಹೆಚ್ಚು ಸ್ವಾವಲಂಬಿಗಳು ಅಥವಾ ಸ್ವತಂತ್ರರು, ಮಹಿಳೆಯರು ಪರಾಧೀನರು;
- ಪರಸ್ಪರಾವಲಂಬನೆ ಮತ್ತು ಪರಾಧೀನತೆಗೆ ಸಂಬಂಧಿಸಿದಂತೆ ಪುರುಷರು ಮತ್ತು ಮಹಿಳೆಯರಲ್ಲಿ ವ್ಯತ್ಯಾಸವಿಲ್ಲದಿದ್ದರೂ ಪರಾಧೀನತೆಯ ರೀತಿಯಲ್ಲಿ ಎರಡು ವರ್ಗಗಳಿಗೆ ವ್ಯತ್ಯಾಸವಿದೆ. ಮಹಿಳೆಯರು ಸಾಂಬಂಧಿಕ ಪರಸ್ಪರಾವಲಂಬನೆ(ಒಬ್ಬ ವ್ಯಕ್ತಿಯ ಜೊತೆ ಅಥವಾ ಸಣ್ಣ ಗುಂಪುಗಳ ಜೊತೆ ಪರಾವಲಂಬನೆ)ಯನ್ನು ವ್ಯಕ್ತಪಡಿಸಿದರೆ ಪುರುಷರು ಸಾಮೂಹಿಕ ಪರಸ್ಪರಾವಲಂಬನೆ( ದೊಡ್ಡ ಗುಂಪುಗಳ ಜೊತೆ ಪರಸ್ಪರಾವಲಂಬನೆ, ಉದಾಹರಣೆಗೆ, ರೈತರು, ಹಳ್ಳಿಗರು ಇತ್ಯಾದಿ)ಯನ್ನು ವ್ಯಕ್ತಪಡಿಸುತ್ತಾರೆ.
- ಸ್ವ–ಪರಿಕಲ್ಪನೆಗೆ ಸಂಬಂಧಿಸಿದ ಇತರ ಅಂಶಗಳಲ್ಲಿ ಪುರುಷರಿಗೆ ಮತ್ತು ಮಹಿಳೆಯರಿಗೆ ವ್ಯತ್ಯಾಸವಿದೆ. ಪುರುಷರು ಆರ್ಥಿಕವಾಗಿ ಮತ್ತು ಸಾಧನಾತ್ಮಕವಾಗಿ ತಮ್ಮ ಹೆಂಗಳೆಯರಿಗಿಂತ ಹೆಚ್ಚಿನ ಸ್ಥಾನದಲ್ಲಿ ಗುರುತಿಸಿಕೊಳ್ಳುತ್ತಾರೆ. ಮಹಿಳೆಯರು ಹೆಚ್ಚು ಸಾಮಾಜಿಕವಾಗಿ, ಅವಲಂಬಿಗಳಾಗಿ ಮತ್ತು ಕಡಿಮೆ ಮಟ್ಟದ ದೃಢತೆಯುಳ್ಳವರಾಗಿ ಗುರುತಿಸಿಕೊಳ್ಳುತ್ತಾರೆ. ಇವು ವ್ಯಕ್ತಿಗಳ ಯೋಗಕ್ಷೇಮದಲ್ಲಿ ವ್ಯಕ್ತಿನಿಷ್ಠತೆಯನ್ನು ಉಂಟುಮಾಡುತ್ತದೆ.
- ಪರಸ್ಪರಾವಲಂಬನ ಪರಿಸರಗಳಲ್ಲಿ ಲಿಂಗತ್ವ ವ್ಯತ್ಯಾಸಗಳು ಪೂರ್ವಬಾಲ್ಯಹಂತದಲ್ಲಿಯೇ ಕಾಣಿಸಿಕೊಳ್ಳುತ್ತದೆ. 3ನೇ ವಯಸ್ಸಿನ ವೇಳೆಗೆ ಹುಡುಗರು ಮತ್ತು ಹುಡುಗಿಯರು ಆಟವಾಡಲು ಅವರದೇ ಲಿಂಗದ ಮಕ್ಕಳನ್ನು ಅಂದರೆ ಹುಡುಗಿಯರು ಹುಡುಗಿಯರನ್ನೇ ಹುಡುಗರು ಹುಡುಗರನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಇದು ಅಂತಿಮ ಪ್ರಾಥಮಿಕ ಶಾಲಾ ಹಂತದವರೆಗೆ ಮುಂದುವರಿಯುತ್ತದೆ. ಹುಡುಗರು ಮತ್ತು ಹುಡುಗಿಯರಿಬ್ಬರೂ ವಿಭಿನ್ನ ಸಾಮಾಜಿಕ ಅಂತರ್ ಕ್ರಿಯೆಗಳಲ್ಲಿ ಮತ್ತು ಸಂಬಂಧಗಳಲ್ಲಿ ಭಾಗವಹಿಸುತ್ತಾರೆ. ಹುಡುಗಿಯರು ಏಕವ್ಯಕ್ತಿ ಅಂತರ್ ಕ್ರಿಯೆಯೆನ್ನೂ ಹೆಚ್ಚು ಗಟ್ಟಿಯಾದ ಸಂಬಂಧಗಳನ್ನೂ ಪ್ರಕಟಿಸಿದರೆ ಹುಡುಗರು ಗುಂಪು ಅಂತರ್ ಕ್ರಿಯೆಯನ್ನು ಆದ್ಯತೆಯಾಗಿಸಿಕೊಳ್ಳುತ್ತಾರೆ.
- ಪೂರ್ವ ಕಿಶೋರಾವಸ್ಥೆಯಲ್ಲಿ ಹುಡುಗರು ಹೆಚ್ಚಿನ ಮಟ್ಟದ ದೈಹಿಕ ಸ್ವ ಪರಿಕಲ್ಪನೆಯನ್ನು ಹೊಂದಿರುತ್ತಾರೆ. ಈ ವಿಕಾಸ ಹಂತದಲ್ಲಿ ಬೇಗನೆ ವಿಕಾಸಹೊಂದುವ ಹುಡುಗರು ಅದೇ ಹಂತದ ಬೇಗನೆ ವಿಕಾಸ ಹೊಂದುವ ಋಣಾತ್ಮಕ ಸ್ವ ಪರಿಕಲ್ಪನೆಯನ್ನು ಹೊಂದಿರುವ ಹುಡುಗಿಯರಿಗಿಂತ ಉತ್ತಮವಾದ ದೈಹಿಕ ಸ್ವ ಪರಿಕಲ್ಪನೆಯನ್ನು ಹೊಂದಿರುತ್ತಾರೆ.
- ಹುಡುಗರು ದೊಡ್ಡ ಗುಂಪುಗಳೊಂದಿಗೆ ಸಂಬಂಧ ಬೆಳೆಸಿಕೊಳ್ಳುತ್ತಾರೆ, ಇತರರ ಆಸಕ್ತಿಗಳನ್ನು ಹಂಚಿಕೊಳ್ಳುತ್ತಾರೆ. ತಮ್ಮ ಅಧಿಕಾರವನ್ನು ಚಲಾಯಿಸಲು ಪ್ರಯತ್ನಿಸುತ್ತಾರೆ.
- ಶೈಕ್ಷಣಿಕ ಸ್ವ–ಪರಿಕಲ್ಪನೆಯಲ್ಲಿ ಹುಡುಗ ಹುಡುಗಿಯರಿಗೆ ವ್ಯತ್ಯಾಸವಿದೆ. ಹುಡುಗರ ಶೈಕ್ಷಣಿಕ ಸ್ವ–ಪರಿಕಲ್ಪನೆ ಹುಡುಗಿಯರ ಶೈಕ್ಷಣಿಕ ಸ್ವ ಪರಿಕಲ್ಪನೆಗಿಂತ ಉತ್ತಮವಾಗಿರುತ್ತದೆ. ಹುಡುಗರಿಗೆ ಗಣಿತ, ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಉತ್ತಮ ಮಟ್ಟದ ಸ್ವ ಪರಿಕಲ್ಪನೆ ಇದ್ದರೆ ಹುಡುಗಿಯರಿಗೆ ಭಾಷಾ ಸಂಬಂಧಿಯಾದ ಸಾಮರ್ಥ್ಯಗಳಲ್ಲಿ ಉತ್ತಮ ಮಟ್ಟದ ಸ್ವ ಪರಿಕಲ್ಪನೆ ಇರುತ್ತದೆ.

**ಏನು ಮಾಡಬೇಕು?**

ಈ ಸಂಶೋಧನೆಗಳ ಫಲಿತಾಂಶಗಳು ಗಣ್ಯವಾದುದೇ ಸರಿ. ಆದರೆ ಈ ಸಂಶೋಧನೆಗಳು ಇಂದಿನದಲ್ಲ. ಇಂದು ಜಗತ್ತು, ಸಮಾಜ ಬಹಳಷ್ಟು ಬದಲಾಗಿದೆ. ಸ್ವ ಪರಿಕಲ್ಪನೆ ಎಂಬುದು ಜನ್ಮಜಾತವಾಗಿ ಬರುವಂತಹುದೂ ಅಲ್ಲ. ಅದು ಬಹಳಮಟ್ಟಿಗೆ ವಾತಾವರಣ ಸಂಬಂಧಿಯಾದುದು. ಸಮರ್ಪಕ ವಾತಾವರಣವನ್ನೊದಗಿಸಿದರೆ ಹುಡುಗ ಹುಡುಗಿಯರಿಬ್ಬರಲ್ಲೂ ಎಲ್ಲ ವಿಷಯಗಳಲ್ಲೂ ಉತ್ತಮ ಮಟ್ಟದ ಸಮಾನರೂಪಿಯಾದ ಸ್ವ ಪರಿಕಲ್ಪನೆಯನ್ನು ಬೆಳೆಸಲು ಸಾಧ್ಯವಿದೆ. ಈ ಕೆಲಸವನ್ನು ಶಾಲೆಗಳು ಮಾಡಬೇಕಾಗಿದೆ. ಈ ಹಿಂದಿನ ವ್ಯತ್ಯಾಸಗಳು ಪ್ರಮುಖವಾಗಿ ಸಂಸ್ಕೃತಿಯ ಕಾರಣದಿಂದಾಗಿ ಮೂಡಿಬಂದವು. ಇಂದಿನ ಸನ್ನಿವೇಶದಲ್ಲಿ ಈ ಕ್ಷೇತ್ರದಲ್ಲಿ ಸೂಕ್ತ ಸಂಶೋಧನೆಗಳಾಗಬೇಕಾಗಿದೆ. ಅದನ್ನು ಕೈಗೊಳ್ಳಬೇಕಾದುದೂ ಶಿಕ್ಷಕರಾದ ನಮ್ಮ ಕರ್ತವ್ಯ.

**ಉತ್ತಮಮಟ್ಟದ ಸ್ವ–ಪರಿಕಲ್ಪನೆಯನ್ನು ಮೂಡಿಸಬಹುದಾದ ಮಾರ್ಗಗಳು ಹಾಗೂ ಮಾರ್ಗೋಪಾಯಗಳು:**

- ಪ್ರತಿ ಮಗುವಿಗೆ ಗಮನಕೊಡಬೇಕು. ಪ್ರತಿ ವಿದ್ಯಾರ್ಥಿನಿ/ವಿದ್ಯಾರ್ಥಿಯನ್ನೂ ಗೌರವದಿಂದ ಕಾಣಬೇಕು;
- ಎಲ್ಲ ಮಗುವೂ 'ತಾನು ವಿಶಿಷ್ಟ' ಎಂಬ ಭಾವನೆ ಬರುವಂತೆ ನೋಡಿಕೊಳ್ಳಬೇಕು;
- ಮಕ್ಕಳ ಗುಣಗಳನ್ನು ಎತ್ತಿ ಹಿಡಿಯಬೇಕು;
- ಸ್ವ ಮೆಚ್ಚುಗೆಯನ್ನು ಪೋಷಿಸಬೇಕು;
- ಕಲಿಕೆಯನ್ನು ಪ್ರತಿಯೊಬ್ಬರೂ ಸಂಭ್ರಮಿಸುವಂತೆ ಮಾಡಬೇಕು;
- ಸಾಧಿಸಲು ಸಾಧ್ಯವಾಗುವ ಗುರಿಗಳನ್ನು ರೂಪಿಸಿಕೊಳ್ಳಲು ಮತ್ತು ಸಾಧ್ಯಮಾಡಲಾಗುವ ಅಪೇಕ್ಷೆಗಳನ್ನು ಇಟ್ಟುಕೊಳ್ಳಲು ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು;
- ಸ್ವ ಪರಿಕಲ್ಪನೆಯನ್ನು ಪೋಷಿಸುವ ಮಾತುಗಳನ್ನು ಗುರುತಿಸಬೇಕು;
- ಪ್ರೀತಿಸುವ ಮತ್ತು ಕ್ಷೇಮಕರವಾದ ಪರಿಸರವನ್ನು ಸೃಷ್ಟಿಸಬೇಕು;
- ಫಲವನ್ನು ಪ್ರಶಂಸಿಸುವುದಕ್ಕಿಂತ ಪ್ರಯತ್ನವನ್ನು ಪ್ರಶಂಸಿಸಬೇಕು;
- ನಿರ್ದಿಷ್ಟ ಸಾಮರ್ಥ್ಯಗಳನ್ನು ಮತ್ತು ಕೌಶಲಗಳನ್ನು ಕುರಿತಾದ ಹಿಮ್ಮಾಹಿತಿ ಕೊಡಬೇಕು;
- ಗುಂಪುಗಳಲ್ಲಿ ಕಲಿಕಾ ಅವಕಾಶಗಳನ್ನು ಕಲ್ಪಿಸಬೇಕು(ಸಮಾನ ಸಾಮರ್ಥ್ಯದವರನ್ನು ಮತ್ತು ಭಿನ್ನ ಸಾಮರ್ಥ್ಯದವರನ್ನು).

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಆಶಾ ಪಠ್ಯೇತರ ವಿಷಯಗಳಲ್ಲಿ ಅತಿ ಚುರುಕು. ಪಠ್ಯವಿಷಯಗಳಲ್ಲೂ ಅಷ್ಟೇನೂ ಹಿಂದಿರಲಿಲ್ಲ. ಈ ಬಾರಿ ಹಲವಾರು ಕಾರಣಗಳಿಂದಾಗಿ ಪರೀಕ್ಷೆಗೆ ತಯಾರಾಗಲು ಸಾಧ್ಯವಿಲ್ಲದೆ ಹಿಂದೆ ಬಿದ್ದಿದ್ದಾಳೆ. ಸಿಕ್ಕಿದ ಅವಕಾಶವನ್ನು ಬಳಸಿಕೊಂಡು ಅವಳ ಮೇಲೆ ದ್ವೇಷ ಸಾಧಿಸುವ ಸಹಪಾಠಿಗಳ ಗುಂಪೊಂದು ಅವಳನ್ನು ಅತಿ ಕೀಳಾಗಿ ಹೀಯಾಳಿಸಿ ನೋಯಿಸಿದೆ. ಆಶಾ ಸಮತೋಲನವನ್ನೇ ಕಳೆದುಕೊಂಡಂತಾಗಿದ್ದಾಳೆ. ಅಧ್ಯಾಪಕರ ಯಾವ ಮಾತುಗಳು ಅವಳ ಸ್ವ ಪರಿಕಲ್ಪನೆಯನ್ನು ಹೆಚ್ಚಿಸುವುದೆಂದು ಗುರುತಿಸಿ

1. ಕೆಲವರಿಗೆ ಕೆಲವೊಮ್ಮೆ ಹೀಗಾಗುತ್ತದೆ; ಏನು ಮಾಡುವುದು?
2. ಆಶಾ, ಇದೊಂದು ಬಾರಿ ಹೀಗಾಗಿರಬಹುದು; ನೀನು ಜಾಣೆ, ಧೈರ್ಯಗೆಡಬೇಡ.
3. ಏನು ಮಾಡಲಾಗುತ್ತದೆ, ನಿನಗೆ ಕಡಿಮೆ ಮಾರ್ಕು ಬಂದಿರುವುದು ನಿಜ ತಾನೇ?
4. ನಾನು ನಿನ್ನ ಜೊತೆಗಿದ್ದೇನೆ; ಏನು ಕಷ್ಟವಾದರೂ ನನ್ನಲ್ಲಿಗೆ ಬಾ

5. ನೀನು ಮ್ಯಾಚುಗಳಿಗೆ ಹೋಗಬೇಕಾದರೆ ನಿನಗೆ ಬಿಡುವಿನ ವೇಳೆಯಲ್ಲಿ ಪಾಠ ಹೇಳಿಕೊಡುತ್ತೇನೆ.

6. ನಿನ್ನಲ್ಲಿ ತುಂಬಾ ಶಕ್ತಿ ಇದೆ. ನಿನಗೆ ಒಳ್ಳೆಯ ಮಾರ್ಕು ತೆಗೆಯಲೂ ಸಾಮರ್ಥ್ಯವಿದೆ. ಆಟಗಳಲ್ಲಿ ಭಾಗವಹಿಸುವುದರಿಂದ ಹಾಗಾಗಿದೆ, ಧೈರ್ಯ ತಂದುಕೊ.

7. ನಿನ್ನಲ್ಲಿ ಆಟ ಪಾಠಗಳೆರಡರ ಸಾಮರ್ಥ್ಯವಿದೆ. ನಿನ್ನ ಅಗಾಧ ಸಾಮರ್ಥ್ಯವನ್ನು ಹೇಗೆ ಬಳಸಿಕೊಳ್ಳಬೇಕು ಎಂದು ನಾನು ಹೇಳಿಕೊಡುತ್ತೇನೆ.

8. ಆ ಹುಡುಗಿಯರು ಇರುವುದೇ ಹಾಗೆ. ನೀನೇನೂ ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಡ.

## 2.1.3.2. ವಿದ್ಯಾರ್ಥಿನಿ/ವಿದ್ಯಾರ್ಥಿಗಳಲ್ಲಿ ಆತ್ಮಗೌರವವನ್ನು ಬೆಳೆಸುವುದು

ಕೆಳಗೆ ರೋಸನ್‌ಬರ್ಗ್ ಅವರ ಆತ್ಮಗೌರವ ಮಾಪನಿಯನ್ನು ಕೊಡಲಾಗಿದೆ. ಅದನ್ನು ಕೂಲಂಕಷವಾಗಿ ಓದಿ, ನಿರ್ದೇಶಿಸಿರುವಂತೆ ಮಾಡಿರಿ.

ಸೂಚನೆ: ನಿಮ್ಮ ಕುರಿತ ನಿಮ್ಮ ಸಾಮಾನ್ಯ ಭಾವನೆಗಳನ್ನು ಸೂಚಿಸುವ ಕೆಲವು ಹೇಳಿಕೆಗಳನ್ನು ಕೆಳಗೆ ಕೊಡಲಾಗಿದೆ. ಈ ಹೇಳಿಕೆಗಳನ್ನು ನೀವು ಎಷ್ಟರಮಟ್ಟಿಗೆ ಒಪ್ಪುತ್ತೀರ ಎಂಬುದನ್ನು '✓' ಗುರುತಿನಿಂದ ಸೂಚಿಸಿ.

| ಕ್ರಮ ಸಂಖ್ಯೆ | ಹೇಳಿಕೆಗಳು | ಬಹಳಮಟ್ಟಿಗೆ ಒಪ್ಪುತ್ತೇನೆ | ಒಪ್ಪುತ್ತೇನೆ | ಒಪ್ಪುವುದಿಲ್ಲ | ಬಹಳಮಟ್ಟಿಗೆ ಒಪ್ಪುವುದಿಲ್ಲ |
|---|---|---|---|---|---|
| 1 | ಒಟ್ಟಾರೆ, ನನ್ನ ಕುರಿತು ನನಗೆ ತೃಪ್ತಿ ಇದೆ | | | | |
| 2 | ಕೆಲವೊಮ್ಮೆ ನನಗೆ ನಾನು ಏನಕ್ಕೂ ಪ್ರಯೋಜನವಿಲ್ಲ ಎನಿಸಿಬಿಡುತ್ತದೆ | | | | |
| 3 | ನನ್ನಲ್ಲಿ ಅನೇಕ ಒಳ್ಳೆಯ ಗುಣಗಳಿವೆ | | | | |
| 4 | ನನ್ನಲ್ಲಿ ಹೇಳಿಕೊಳ್ಳುವಂತಹ ದೊಡ್ಡ ವಿಷಯಗಳೇನೂ ಇಲ್ಲ | | | | |
| 5 | ಇತರರಂತೆ ನಾನೂ ಅನೇಕ ಕೆಲಸಗಳನ್ನು ಮಾಡಬಲ್ಲೆ | | | | |
| 6 | ಕೆಲವೊಮ್ಮೆ ನಾನು ನಿಜವಾಗಿಯೂ ನಿಷ್ಪ್ರಯೋಜಕ ವ್ಯಕ್ತಿ ಅನ್ನಿಸಿಬಿಡುತ್ತದೆ | | | | |
| 7 | ನಾನು ಇತರರಂತೆಯೇ ಉಪಯುಕ್ತ ವ್ಯಕ್ತಿ ಎನಿಸುತ್ತದೆ | | | | |
| 8 | ನನಗೆ ಈಗಿಗಿಂತ ಹೆಚ್ಚು ಗೌರವ ಸಿಕ್ಕಿದ್ದರೆ ಒಳ್ಳೆಯದಿತ್ತು | | | | |
| 9 | ಒಟ್ಟಾರೆ ನನಗೆ ನಾನು ಸೋತವ್ಯಕ್ತಿ ಎಂದುಕೊಳ್ಳುವದರ ಕಡೆಗೇ ಒಲವಿದೆ | | | | |
| 10 | ನಾನು ನನ್ನ ಕುರಿತು ಧನಾತ್ಮಕವಾಗಿ ಆಲೋಚಿಸುತ್ತೇನೆ | | | | |

## ನಿಮ್ಮ ಸ್ಕೋರುಗಳನ್ನು ಕೆಳಕಂಡಂತೆ ಗುರುತಿಸಿಕೊಳ್ಳಿ

1,2,3,4,5,6, ಬಹಳಮಟ್ಟಿಗೆ ಒಪ್ಪುತ್ತೇನೆ–1, ಒಪ್ಪುತ್ತೇನೆ–2, ಒಪ್ಪುವುದಿಲ್ಲ–3, ಬಹಳಮಟ್ಟಿಗೆ ಒಪ್ಪುವುದಿಲ್ಲ–4 ಉಳಿದ ಹೇಳಿಕೆಗಳಿಗೆ 4,3,2,1 ಅಂಕಗಳನ್ನು ನೀಡಿರಿ.

ಈ ಮಾಪನಿಯನ್ನು ಉತ್ತರಿಸುವಾಗ ಆತ್ಮಗೌರವಕ್ಕೆ ಸಂಬಂಧಿಸಿದಂತೆ ನಿಮ್ಮ ಸ್ಥಾನವನ್ನು ನೀವು ಗುರುತಿಸಿಕೊಂಡಿದ್ದೀರಿ. ನಿಮಗೆ ಹೆಚ್ಚು ಅಂಕಗಳು ಸಿಕ್ಕಿದ್ದರೆ ನಿಮಗೆ ಆತ್ಮಗೌರವ ಹೆಚ್ಚಾಗಿ ಇದೆ. ಕಡಿಮೆ ಸಿಕ್ಕಿದ್ದರೆ ಆತ್ಮಗೌರವ ಕಡಿಮೆ ಇದೆ ಎಂದರ್ಥ.

### ಆತ್ಮ ಗೌರವದ ಪರಿಕಲ್ಪನೆ

ಇದನ್ನು ಸ್ವ–ಗೌರವ ಎಂದೂ ಹೇಳಬಹುದು. ಒಟ್ಟಾರೆ, ತನ್ನ ಮೌಲ್ಯ/ಬೆಲೆ/ ಪ್ರಯೋಜನವನ್ನು ಕುರಿತಂತೆ ವ್ಯಕ್ತಿಯ ವ್ಯಕ್ತಿನಿಷ್ಠವಾದ ಭಾವನಾತ್ಮಕ ಮೌಲ್ಯಮಾಪನವನ್ನು ಇದು ಬಿಂಬಿಸುತ್ತದೆ. ತನ್ನ ಕುರಿತು ತನಗೆ ಯಾವ ಮನೋಭಾವವಿದೆ ಎಂಬುದಾಗಿ ವ್ಯಕ್ತಿಯೇ ಮಾಡಿದ ನಿರ್ಧಾರವಿದು. ಹಾಗಾಗಿ ಆತ್ಮ ಗೌರವವು ವ್ಯಕ್ತಿಯನ್ನು ಕುರಿತಂತೆ ಅವನಿಗೆ/ಅವಳಿಗೆ ಇರುವ ನಂಬಿಕೆಗಳನ್ನು, ಗೆಲುವು, ಹತಾಶೆ, ಹೆಮ್ಮೆ, ನಾಚಿಕೆ ಇತ್ಯಾದಿ ಭಾವನಾತ್ಮಕ ಸ್ಥಿತಿಯನ್ನು ಒಳಗೊಳ್ಳುತ್ತದೆ. ಉದಾಹರಣೆಗೆ, "ನಾನು ಬದುಕಿರುವುದು ಸಾರ್ಥಕ, ನಾನು ಸಮರ್ಥ/ಸಮರ್ಥಳು ಇತ್ಯಾದಿ. ಸ್ವ ಪರಿಕಲ್ಪನೆಯು ನಾವು ನಮ್ಮ ಕುರಿತು ಏನು ಆಲೋಚಿಸುತ್ತೇವೆಯೋ ಅದು; ಆತ್ಮ ಗೌರವ ಎಂಬುದು ನಮ್ಮನ್ನು ಕುರಿತಂತೆ ನಾವು ಮಾಡುವ ಧನಾತ್ಮಕ ಅಥವಾ ಋಣಾತ್ಮಕವಾದ ಮೌಲ್ಯಮಾಪನ. ಇದು ನಮ್ಮ ಕುರಿತು ನಾವು ಹೇಗೆ ಭಾವಿಸುತ್ತೇವೆ ಎಂಬುದು.

### ಉನ್ನತಮಟ್ಟದ ಆತ್ಮ ಗೌರವವಿರುವ ವ್ಯಕ್ತಿಗಳ ಗುಣಲಕ್ಷಣಗಳು

- ಕೆಲವು ಮೌಲ್ಯಗಳು ಮತ್ತು ತತ್ವಗಳಲ್ಲಿ ದೃಢವಾದ ನಂಬಿಕೆಯುಳ್ಳವರಾಗಿರುತ್ತಾರೆ. ಯಾರಾದರೂ ಎದುರು ವಾದಿಸಿದರೂ ತಮ್ಮನ್ನು ತಾವು ಸಮರ್ಥಿಸಿಕೊಳ್ಳುತ್ತಾರೆ. ಅನುಭವದ ಆಧಾರದ ಮೇಲೆ ನಂಬಿಕೆಗಳನ್ನು ಬದಲಿಸಿಕೊಳ್ಳುವಲ್ಲೂ ದೃಢವಾಗಿರುತ್ತಾರೆ;
- ತಮಗೆ ಸೂಕ್ತವೆನಿಸಿದಂತೆ ನಡೆದುಕೊಳ್ಳಲು ಸಮರ್ಥರಾಗಿರುತ್ತಾರೆ. ಅವರಿಗೆ ಅವರ ನಿರ್ಣಯಗಳಲ್ಲಿ ನಂಬಿಕೆ ಇರುತ್ತದೆ. ಇತರರು ಅವರ ಆಯ್ಕೆಗಳನ್ನು ಒಪ್ಪಿಕೊಳ್ಳದಿದ್ದರೂ ಅವರಿಗೇನೂ ತಾವು ತಪ್ಪಿತಸ್ಥರೆನಿಸುವುದಿಲ್ಲ.
- ಕಳೆದು ಹೋದುದರ ಕುರಿತು ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಮುಂದೇನಾಗಬಹುದು ಎಂಬುದರ ಕುರಿತು ಕನವರಿಸುವುದಿಲ್ಲ. ಹಿಂದಿನ ಅನುಭವಗಳಿಂದ ಕಲಿತು ಮುಂದಿನದನ್ನು ಯೋಜಿಸಿಕೊಳ್ಳುತ್ತಾರೆ. ವರ್ತಮಾನದಲ್ಲಿ ಸ್ವಸ್ಥವಾಗಿ ಬದುಕುತ್ತಾರೆ.
- ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದರಲ್ಲಿ ತಮ್ಮ ಸಾಮರ್ಥ್ಯದ ಕುರಿತು ಇವರಿಗೆ ಸಂಪೂರ್ಣ ಭರವಸೆ ಇರುತ್ತದೆ. ಇವರು ಸೋಲು ಅಥವಾ ಕಷ್ಟಗಳಿಗೆ ನಾಚುವುದಿಲ್ಲ. ಅಗತ್ಯವಿದ್ದಾಗ ಇತರರ ಸಹಾಯ ಕೇಳುತ್ತಾರೆ.
- ತಾವು ಇತರರಂತೆ ಘನತೆವೆತ್ತವರು ಎಂದು ತಿಳಿದಿರುತ್ತಾರೆ. ಇವರಿಗೆ ಕೀಳರಿಮೆಯಾಗಲೀ ಜಂಬವಾಗಲೀ ಇರುವುದಿಲ್ಲ. ಇತರರ ಪ್ರತಿಭೆ, ಸಾಮರ್ಥ್ಯಗಳನ್ನು ಬಿಚ್ಚುಮನಸ್ಸಿನಿಂದ ಪ್ರಶಂಸಿಸುತ್ತಾರೆ.
- ತಮಗೆ ಸಂಬಂಧಪಟ್ಟವರಿಗೆ ತಾವು ಏಕೆ ಮತ್ತು ಹೇಗೆ ಇಷ್ಟ ಎಂಬುದನ್ನು ವಿಶ್ಲೇಷಿಸಿಕೊಳ್ಳುತ್ತಾರೆ. ಅಂತಹ ವರ್ತನೆಗಳನ್ನು ಪುನರಾವರ್ತಿಸುತ್ತಾರೆ.
- ಉಪಾಯದಿಂದ ನುಣುಚಿಕೊಳ್ಳುವುದಿಲ್ಲ. ಸಮರ್ಪಕವೆಂದು ಕಂಡುಬಂದರೆ ಇತರರೊಡನೆ ಸಹಕರಿಸುತ್ತಾರೆ.

- ಆಂತರಿಕವಾದ ಅನೇಕ ಭಾವನೆಗಳನ್ನು ಅಗತ್ಯಗಳನ್ನು ಅವು ಧನಾತ್ಮಕವಾದರೂ ಋಣಾತ್ಮಕವಾದರೂ ಒಪ್ಪಿಕೊಳ್ಳುತ್ತಾರೆ
- ವೈವಿಧ್ಯಮಯವಾದ ಚಟುವಟಿಕೆಗಳನ್ನು ಮೆಚ್ಚುತ್ತಾರೆ
- ಇತರರ ಅಗತ್ಯಗಳಿಗೆ ಮತ್ತು ಭಾವನೆಗಳಿಗೆ ಸಂವೇದನಾಶೀಲರಾಗಿರುತ್ತಾರೆ.
- ಸಾಮಾಜಿಕವಾಗಿ ಒಪ್ಪಿತವಾದ ನಿಯಮಗಳನ್ನು ಗೌರವಿಸುತ್ತಾರೆ
- ಇತರರಿಗೆ ನಷ್ಟ ಉಂಟುಮಾಡಿ ತಾವು ದೊಡ್ಡವರಾಗಲು ಇಷ್ಟಪಡುವುದಿಲ್ಲ

## ಕಡಿಮೆ ಆತ್ಮ ಗೌರವವಿರುವ ವ್ಯಕ್ತಿಗಳ ಗುಣಲಕ್ಷಣಗಳು

ಕಡಿಮೆ ಆತ್ಮಗೌರವಕ್ಕೆ ಅನೇಕ ಕಾರಣಗಳಿರಬಹುದು. ಅನುವಂಶಿಕ, ದೈಹಿಕ ನೋಟ, ತೂಕ, ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ವಿಚಾರಗಳು, ಸಮಾಜೋ ಆರ್ಥಿಕ ಸ್ಥಾನಮಾನ, ಗಮನಾರ್ಹ ಭಾವನಾತ್ಮಕ ಅನುಭವಗಳು, ಸಹಪಾಠಿಗಳ ಒತ್ತಡ ಇತ್ಯಾದಿ.

ಕಡಿಮೆ ಆತ್ಮ ಗೌರವವಿರುವ ವ್ಯಕ್ತಿಗಳ ಗುಣಲಕ್ಷಣಗಳು ಕೆಳಕಂಡಂತಿರುತ್ತವೆ:

- ಸ್ವ ನಿಂದೆ ಮತ್ತು ಅತೃಪ್ತಿ
- ವಿಮರ್ಶೆಗೆ ಅತಿ ಸಂವೇದನೆ, ವಿಮರ್ಶೆ ಮಾಡಿದವರ ಕುರಿತು ಹೆಚ್ಚಿನ ಅಸಮಾಧಾನ, ತನ್ನ ಮೇಲೆ ಆಕ್ರಮಣ ಮಾಡುತ್ತಿದ್ದಾರೆ ಎಂಬ ಭಾವನೆ;
- ನಿರ್ಧಾರ ತೆಗೆದುಕೊಳ್ಳದಿರುವುದು ಮತ್ತು ತಪ್ಪಾಗಬಹುದೆಂಬ ಅತಿಯಾದ ಭಯ;
- ಕೇಳಿದವರಿಗೆ ಸಹಾಯಮಾಡುವಲ್ಲಿ ಅತಿಯಾದ ಆಸಕ್ತಿ, ಅವರಿಗೆ ಬೇಸರಮಾಡದಿರಲು ಪ್ರಯತ್ನಗಳು;
- ಅತಿಯಾದ ಪರಿಪೂರ್ಣತೆ, ಅದು ಸಾಧಿತವಾಗದಾಗ ಅತಿಯಾದ ಹತಾಶೆ;
- ಹಿಂದಿನ ತಪ್ಪುಗಳನ್ನು ಹಿಗ್ಗಿಸಿ ಹೇಳುತ್ತಿರುವುದು;
- ವಿನಾ ಕಾರಣ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವದು, ಹತ್ತಿರದ ಯಾವುದೇ ಕಾರಣವಿಲ್ಲದಿದ್ದರೂ ಕಿರಿಕಿರಿಯಾಗುವುದು;
- ನಿರಾಶಾವಾದ ಮತ್ತು ಸಾಮಾನ್ಯವಾದ ಋಣಾತ್ಮಕ ದೃಷ್ಟಿ;
- ಹೊಟ್ಟೆಕಿಚ್ಚು, ಕೋಪ ಹುಟ್ಟಿಸುವಿಕೆ ಅಥವಾ ಸಾಮಾನ್ಯವಾದ ಅಸಮಾಧಾನ;
- ತಾತ್ಕಾಲಿಕ ಹಿನ್ನೆಲೆಗಳನ್ನು ಶಾಶ್ವತವೆಂಬಂತೆ ಪರಿಗಣಿಸಿ ಗೋಳಾಡುವುದು;
- ಇನ್ನೊಬ್ಬರನ್ನು ಟೀಕಿಸುತ್ತಿರುವುದು.
- ಸ್ವ ಸಾಮರ್ಥ್ಯವನ್ನು ಗುರುತಿಸಿಕೊಳ್ಳುವಾಗ ಮತ್ತೊಬ್ಬರ ಒಪ್ಪಿಗೆಗೆ ಕಾಯುವುದು.
- ಯಶಸ್ವಿಯಾದಾಗ ಮಾತ್ರ ತಮ್ಮನ್ನು ಒಪ್ಪಿಕೊಳ್ಳುವುದು; ಇಲ್ಲದಿದ್ದರೆ ಇಲ್ಲ.
- ತಮ್ಮ ಸಾಮರ್ಥ್ಯವನ್ನು ಒಪ್ಪಿಕೊಳ್ಳಲು ಇತರರ ಒಪ್ಪಿಗೆಯನ್ನು ಬಯಸುವುದು.

ವಿದ್ಯಾರ್ಥಿ/ವಿದ್ಯಾರ್ಥಿನಿಯರಲ್ಲಿ ಆತ್ಮಗೌರವವನ್ನು ಬೆಳೆಸುವ ಮಾರ್ಗಗಳು ಮತ್ತು ಮಾರ್ಗೋಪಾಯಗಳು

- ಅವರಿರುವಂತೆ, ಅವರ ಸಾಮರ್ಥ್ಯ, ಸ್ವಭಾವ, ಆಸಕ್ತಿಗಳೊಂದಿಗೆ ಸ್ವೀಕರಿಸಿ
- ಜವಾಬ್ದಾರಿಯನ್ನು ಬೆಳಸಿಕೊಳ್ಳಲು ಸಹಕರಿಸಿ
- ಅವರ ಸ್ವಾಮ್ಯದ ಭಾವನೆಯನ್ನು ಹೆಚ್ಚಿಸಿಕೊಳ್ಳಲು ಪ್ರೋತ್ಸಾಹಿಸಿ
- ಸ್ವ ಶಿಸ್ತು ಬೆಳೆಸಿಕೊಳ್ಳಲು ಪ್ರೋತ್ಸಾಹಿಸಿ
- ಧನಾತ್ಮಕ ಹಿಮ್ಮಾಹಿತಿ ಮತ್ತು ಪ್ರೋತ್ಸಾಹ ನೀಡಿರಿ
- ತಪ್ಪುಗಳು ಸೋಲುಗಳನ್ನು ಸಹಿಸಿಕೊಳ್ಳಲು ಕಲಿಸಿ
- ಧನಾತ್ಮಕ ಅಂಶಗಳು ಎದ್ದು ಕಾಣುವಂತೆ ಮಾಡಿ
- ಟೀಕೆಗಳನ್ನು ಮಾಡಬೇಡಿ
- ಅಪೇಕ್ಷೆಗಳು ಸಹಜವಾಗಿಯೂ ಸಾಕಾರಗೊಳಿಸಲು ಸಾಧ್ಯವಾಗುವಂತಹುದೂ ಆಗಿರಲಿ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2**

ನಮಿತ ಪ್ರೌಢಶಾಲೆಯ ಅಧ್ಯಾಪಕಿ. ಬೋಧನೆಯ ವಿಷಯವನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಂಡವಳು. ಅದಕ್ಕಾಗಿ ಅವಳು ಬಹಳಷ್ಟು ತಯಾರಿ ಮಾಡಿಕೊಳ್ಳುತ್ತಾಳೆ. ಗಮನವಿಟ್ಟು ಬೋಧಿಸುತ್ತಾಳೆ. ವೈಯಕ್ತಿಕ ಗಮನ ಕೊಡುತ್ತಾಳೆ. ಶಾಲೆಯ ವೇಳೆಗೆ ಮೊದಲು ಮತ್ತು ನಂತರ ಶಾಲೆಯಲ್ಲಿದ್ದು ಪಾಠ ಹೇಳಿಕೊಡುತ್ತಾಳೆ. ಅವಳ ವಿದ್ಯಾರ್ಥಿನಿಯರು ಯಾವಾಗಲೂ ಹೆಚ್ಚು ಅಂಕಗಳನ್ನು ಪಡೆಯುತ್ತಾರೆ. ಆದರೆ ಈ ಬಾರಿ ಶೇ 70 ವಿದ್ಯಾರ್ಥಿನಿಯರು ಫೇಲಾಗಿದ್ದಾರೆ. ಅವಳ ಮಾತುಗಳಲ್ಲಿ ಆತ್ಮಗೌರವ ಹೆಚ್ಚಿಸುವ ಮಾತುಗಳಾವುವು ಗುರುತಿಸಿ.

1. ನೀವು ನನ್ನ ವಿದ್ಯಾರ್ಥಿನಿಯರಾದುದು ನನ್ನ ಹಣೆಬರಹ
2. ನನ್ನ ಶ್ರಮವೆಲ್ಲವೂ ವ್ಯರ್ಥವಾಯಿತು
3. ನೀವೇನು ತಾನೇ ಮಾಡುತ್ತೀರಿ, ನನ್ನದೇ ತಪ್ಪು
4. ನೀವು ಫೇಲಾದುದು ನನಗೆ ಅತ್ಯಂತ ಆಶ್ಚರ್ಯ ಉಂಟುಮಾಡಿತು
5. ಈ ಮಾರ್ಕುಗಳು ನಿಜವಾಗಿ ನಿಮ್ಮದೆಂದು ನಂಬಲಾಗದು
6. ಇಷ್ಟು ಕಷ್ಟಪಟ್ಟು ಕೆಲಸ ಮಾಡುವ ನಿಮಗೆ ಈ ಬಾರಿ ಏನು ತೊಂದರೆಯಾಯಿತು?
7. ನಿಮ್ಮ ಸಾಧನೆ ಈ ರೀತಿ ಎಂದು ಬೇರೆ ಯಾರಾದರೂ ಹೇಳಿದ್ದರೆ ನಾನು ನಂಬುತ್ತಲೇ ಇರಲಿಲ್ಲ.
8. ನಿಮಗೆ ನಿಜವಾಗಿಯೂ ಅತಿ ಹೆಚ್ಚು ಮಾರ್ಕು ತೆಗೆಯುವ ಸಾಮರ್ಥ್ಯವಿದೆ ಎಂಬುದನ್ನು ನೀವೇ ಹಿಂದೆ ತೋರಿಸಿಕೊಟ್ಟಿದ್ದೀರಿ.

## 2.1.4. ಸಾರಾಂಶಿಸೋಣ

- ಸ್ವ–ಪರಿಕಲ್ಪನೆ ಎಂಬುದು ಸ್ವ–ಅರಿವಿಗಿಂತ ಸ್ವಲ್ಪ ಭಿನ್ನವಾದುದು. ಇದು ವ್ಯಕ್ತಿ/ವ್ಯಕ್ತಿಗಳಿಗೆ ಅವರ ಕುರಿತಾದ ಅರಿವನ್ನು ಎಷ್ಟರಮಟ್ಟಿಗೆ ಪರಿಭಾಷಿಸಲಾಗುತ್ತದೆ, ಅದು ಎಷ್ಟು ಸ್ಥಿರವಾಗಿದೆ, ಹಾಗೂ ಸದ್ಯದ ಮನೋಭಾವ ಮತ್ತು ಸ್ಥಿತಿಗೆ ಎಷ್ಟರಮಟ್ಟಿಗೆ ಅನ್ವಯವಾಗುತ್ತದೆ ಎಂಬುದಕ್ಕೆ ಸಂಬಂಧಪಟ್ಟುದು.
- ಸ್ವ–ಪರಿಕಲ್ಪನೆ ಬೆಳೆಯುವುದು ಯಾವಾಗ ಮೊದಲಾಗುತ್ತದೆ ಎಂಬುದರ ಕುರಿತು ಸಂಶೋಧಕರು

ಸಾಕಷ್ಟು ಚರ್ಚಿಸಿದ್ದಾರೆ. ಇದು 7 ಅಥವಾ 8 ನೇ ವಯಸ್ಸಿನಲ್ಲಿ ರೂಪುಗೊಳ್ಳುತ್ತದೆ

- ಸಾಮಾನ್ಯ ಸ್ವ-ಪರಿಕಲ್ಪನಪೂರ್ವ ಕಿಶೋರಾವಸ್ಥೆಯಲ್ಲಿ ಕಡಿಮೆಯಾಗಿ ಅಂತಿಮ ಕಿಶೋರಾವಸ್ಥೆಯಲ್ಲಿ ಹೆಚ್ಚಾಗುತ್ತದೆ. ಜೊತೆಗೆ ಕಿಶೋರ ಕಿಶೋರಿಯರು ತಮ್ಮ ಸಾಮರ್ಥ್ಯಗಳನ್ನು ನಿರಂತರತೆಯಲ್ಲಿ ಮಾಪನಮಾಡಿಕೊಳ್ಳುತ್ತಾರೆ.
- ಶೈಕ್ಷಣಿಕ ಸ್ವ-ಪರಿಕಲ್ಪನೆಯು ವ್ಯಕ್ತಿ ಅಥವಾ ಮಗುವಿಗೆ ತನ್ನ ಶೈಕ್ಷಣಿಕ ಸಾಮರ್ಥ್ಯಗಳ ಅಥವಾ ಕೌಶಲಗಳ ಕುರಿತಾಗಿ ಇರುವ ವೈಯಕ್ತಿಕ ನಂಬಿಕೆಗಳಿಗೆ ಸಂಬಂಧಿಸಿದುದು.
- ದೈಹಿಕ ಸಾಮರ್ಥ್ಯ ಮತ್ತು ದೈಹಿಕ ನೋಟ ಇವುಗಳ ಕುರಿತಾಗಿ ವ್ಯಕ್ತಿಯ ವೈಯಕ್ತಿಕ ಗ್ರಹಿಕೆಯೇ ದೈಹಿಕ ಸ್ವ-ಪರಿಕಲ್ಪನೆ.
- ಸ್ವ ಪರಿಕಲ್ಪನೆ ಮತ್ತು ಲಿಂಗತ್ವ ವ್ಯತ್ಯಾಸವನ್ನು ಕುರಿತಂತೆ ಸಂಶೋಧನೆಗಳು ಅನೇಕ ವಿಷಯಗಳನ್ನು ಗುರುತಿಸಿವೆ.
- ಉತ್ತಮಮಟ್ಟದ ಸ್ವ ಪರಿಕಲ್ಪನೆಯನ್ನು ಮೂಡಿಸಬಹುದಾದ ಮಾರ್ಗಗಳು ಹಾಗೂ ಮಾರ್ಗೋಪಾಯಗಳು ನಿರ್ದಿಷ್ಟವಾಗಿ ಇವೆ. ಅವುಗಳನ್ನು ಅನುಸರಿಸುವುದರಿಂದ ಅಧ್ಯಾಪಕರು ಮಕ್ಕಳಲ್ಲಿ ಉತ್ತಮ ಸ್ವ ಪರಿಕಲ್ಪನೆಯನ್ನು ಮೂಡಿಸಬಹುದು.
- ತನ್ನ ಕುರಿತು ತನಗೆ ಯಾವ ಮನೋಭಾವವಿದೆ ಎಂಬುದಾಗಿ ವ್ಯಕ್ತಿಯೇ ಮಾಡಿದ ನಿರ್ಧಾರವನ್ನು ಸೂಚಿಸುವಂತಹುದು ಆತ್ಮಗೌರವ.
- ಆತ್ಮಗೌರವವನ್ನು ಮೂಡಿಸಬಹುದಾದ ಮಾರ್ಗಗಳು ಹಾಗೂ ಮಾರ್ಗೋಪಾಯಗಳು ನಿರ್ದಿಷ್ಟವಾಗಿ ಇವೆ. ಅವುಗಳನ್ನು ಅನುಸರಿಸುವುದರಿಂದ ಅಧ್ಯಾಪಕರು ಮಕ್ಕಳಲ್ಲಿ ಆತ್ಮಗೌರವವನ್ನು ಮೂಡಿಸಬಹುದು.

## 2.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1**

2,4,5,6,7,

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2**

4 ರಿಂದ 8

## 2.1.6. ಘಟಕಾಂತ್ಯ ಅಭ್ಯಾಸಗಳು

1. ಸ್ವ ಪರಿಕಲ್ಪನೆಯ ಸ್ವರೂಪ ಮತ್ತು ಇದನ್ನು ಬೆಳೆಸುವ ಮಾರ್ಗಗಳು ಮತ್ತು ಮಾರ್ಗೋಪಾಯಗಳನ್ನು ವಿವರಿಸಿ
2. ಆತ್ಮಗೌರವದ ಪರಿಕಲ್ಪನೆ, ಸ್ವರೂಪ ಮತ್ತು ಇದನ್ನು ಬೆಳೆಸುವ ಮಾರ್ಗಗಳು ಮತ್ತು ಮಾರ್ಗೋಪಾಯಗಳನ್ನು ವಿವರಿಸಿ

## 2.1.7. ಪರಾಮರ್ಶನ ಸೂಚಿ :

1. https://en.wikipedia.org/wiki/Self-concept
2. Rosenberg, M. (1965). Society and the adolescent self-image. Princeton, NJ: Princeton University Press.

************

# ಬ್ಲಾಕ್–2 : ಲಿಂಗತ್ವ ಮತ್ತು ಶಿಕ್ಷಣ

## ಘಟಕ–2 : ಲಿಂಗತ್ವ ವಿಚಾರಗಗಳನ್ನು ಬೋಧಿಸಲು ಕಲಿಕಾ ಸಾಮಗ್ರಿಗಳು

**ಘಟಕದ ರಚನೆ**


2.2.1. ಕಲಿಕೆಯ ಉದ್ದೇಶಗಳು

2.2.2. ಪೀಠಿಕೆ

2.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.2.3.1. ಲಿಂಗತ್ವ ವಿಚಾರಗಳಿಗೆ ಬೋಧನಾ ಮಾರ್ಗೋಪಾಯಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1.2.3.2. ಲಿಂಗತ್ವ ವಿಚಾರಗಳನ್ನು ಬೋಧಿಸಲು ಕಲಿಕಾ ಸಾಮಗ್ರಿಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

2.2.4. ಸಾರಾಂಶಿಸೋಣ

2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

2.2.6. ಘಟಕಾಂತ್ಯ ಅಭ್ಯಾಸಗಳು

2.2.7. ಪರಾಮರ್ಶನ ಸೂಚಿ


### 2.1.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಲಿಂಗತ್ವ ವಿಚಾರಗಳನ್ನು ಬೋಧಿಸುವ ಕಲಿಕಾ ಮಾರ್ಗೋಪಾಯಗಳನ್ನು ವಿವರಿಸುವರು; ಮತ್ತು
- ಲಿಂಗತ್ವ ವಿಚಾರಗಳನ್ನು ಬೋಧಿಸಲು ಬಳಸಬಹುದಾದ ಕಲಿಕಾ ಸಾಮಗ್ರಿಗಳನ್ನು ವಿವರಿಸುವರು.

### 2.1.1. ಪೀಠಿಕೆ

ಲಿಂಗತ್ವ ವಿಚಾರಗಳು ಮತ್ತು ಭಾರತದಲ್ಲಿ ಲಿಂಗತ್ವದ ಸಮಾನತೆಯ ಕುರಿತು ನಾವೀಗಾಗಲೇ ಸಾಕಷ್ಟು ಚರ್ಚೆ ಮಾಡಿದ್ದೇವೆ. ಈ ಕುರಿತು ಆಗಬೇಕಾದದ್ದು ಇನ್ನೂ ಬಹಳಷ್ಟಿದೆ ಎಂಬ ಅರಿವು ನಮಗಿದೆ. ಲಿಂಗ ಪಡಿಯಚ್ಚುಗಳನ್ನು ಇಲ್ಲವಾಗಿಸಿ ಎಲ್ಲರನ್ನೂ ಸಮಾನ ಸ್ಥಾನಮಾನವಿರುವಂತಹ ಸಮಾಜವನ್ನು ರೂಪಿಸಬೇಕಾಗಿದೆ. ಈ ದಿಶೆಯಲ್ಲಿ ಹೆಚ್ಚು ಸಾಧಿಸಲು ಅವಕಾಶವಿರುವ ಸಂಸ್ಥೆ ಎಂದರೆ ಶಾಲೆ. ಶಾಲೆಯು ಲಿಂಗತ್ವ ತಾಟಸ್ಥ್ಯವನ್ನು ಅಥವಾ ಸಮಾನತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಸಾಧಿಸಬಹುದು. ಶಾಲೆಯು ಲಿಂಗತ್ವ ವಿಚಾರಗಳನ್ನು ಪಠ್ಯಕ್ರಮದ ಅಂತರ್ಗತ ಭಾಗವಾಗಿ ಮಾಡಿಕೊಂಡು ವ್ಯವಸ್ಥಿತವಾದ ಕಲಿಕಾ ಅನುಭವಗಳನ್ನೊದಗಿಸುವುದರ ಮೂಲಕ ಎಲ್ಲ ಮಕ್ಕಳೂ ಲಿಂಗ ಸಂವೇದನಾಶೀಲರಾಗುವಂತೆ ಮಾಡಬಹುದು. ಈ ಪ್ರಕ್ರಿಯೆ ಹೇಗೆ ಸಾಗಬೇಕು, ಇದಕ್ಕೆ ಬಳಸಬಹುದಾದ ಬೋಧನೆ ಮತ್ತು ಕಲಿಕೆಯ ಉಪಕರಣಗಳಾವುವು ಎಂಬ ಅರಿವು ಈ ಕ್ಷೇತ್ರದಲ್ಲಿ ಕೆಲಸಮಾಡುವ ನಮ್ಮೆಲ್ಲರಿಗೂ ಅವಶ್ಯಕ. ಹಾಗಾಗಿ ಲಿಂಗ ವಿಚಾರಗಳ ಬೋಧನೆ ಮತ್ತು ಕಲಿಕೆಗೆ ಬಳಸಬಹುದಾದ ಉಪಕರಣಗಳು ಯಾವುವು ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

ಈ ಸನ್ನಿವೇಶದಲ್ಲಿ ಬಳಸಬಹುದಾದ ಕಲಿಕಾ ಉಪಕರಣಗಳನ್ನು ಶೂನ್ಯದಲ್ಲಿ ಗುರುತಿಸಲಾಗದು. ಈ ದಿಶೆಯಲ್ಲಿ ಬಳಸಬಹುದಾದ ಬೋಧನಾ ಕಲಿಕಾ ಮಾರ್ಗೋಪಾಯಗಳು ಅಗತ್ಯವಾದ ಕಲಿಕಾ ಉಪಕರಣಗಳನ್ನು ಸೂಚಿಸುತ್ತವೆ. ಹಾಗಾಗಿ ಮೊದಲಿಗೆ ಲಿಂಗವಿಚಾರಗಳನ್ನು ಬೋಧಿಸಲು ಬಳಸಬಹುದಾದ ಕಲಿಕಾ ಮಾರ್ಗೋಪಾಯಗಳನ್ನು ಮೊದಲಿಗೆ ಗಮನಿಸಿ, ನಂತರ ಸಂಬಂಧಪಟ್ಟ ಕಲಿಕಾ ಉಪಕರಣಗಳನ್ನು ಗಮನಿಸೋಣ.

## 2.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.2.3.1. ಲಿಂಗತ್ವ ವಿಚಾರಗಳಿಗೆ ಬೋಧನಾ ಮಾರ್ಗೋಪಾಯಗಳು

ಲಿಂಗ ವಿಚಾರಗಳನ್ನು ಬೋಧಿಸಲು ಅತ್ಯಂತ ಪರಿಣಾಮಕಾರಿ ಎಂಬುದಾಗಿ ಗುರುತಿಸಲಾಗಿರುವ ಕೆಲವು ನಿರ್ದಿಷ್ಟ ಮಾರ್ಗೋಪಾಯಗಳಿವೆ. ಅವುಗಳನ್ನು ಗಮನಿಸೋಣ.

**ಚಲನಚಿತ್ರ ವಿಶ್ಲೇಷಣೆ**

ಚಲನಚಿತ್ರಗಳು ಸಾಮಾಜಿಕ ಮಾಧ್ಯಮದ ಒಂದು ಪ್ರಕಾರ. ಹಾಗಾಗಿ ಇದಕ್ಕೆ ಸಮಾಜದ ಮೌಲ್ಯಗಳನ್ನು ಮತ್ತು ಸಂಸ್ಕೃತಿಯನ್ನು ಕಾಪಾಡುವ ಹೊಣೆಗಾರಿಕೆ ಇದೆ. ಅದು ಶ್ರವಣ ಹಾಗೂ ದೃಶ್ಯಮಾಧ್ಯಮಗಳೆರಡನ್ನೂ ಒಳಗೊಂಡಿರುವುದರಿಂದ ಜನರಿಗೆ ಸಂದೇಶವನ್ನು ಮುಟ್ಟಿಸುವಲ್ಲಿ ಇತರ ಮಾಧ್ಯಮಗಳಿಗಿಂತ ಹೆಚ್ಚು ಪರಿಣಾಮಕಾರಿ. ಚಲನಚಿತ್ರಗಳು ಜನರನ್ನ ಸಮಾಜೀಕರಿಸುವುದರಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆದರೆ ಕೆಲವೊಮ್ಮೆ ಈ ವಿಷಯದಲ್ಲಿ ಚಲನಚಿತ್ರಗಳು ಎಡವುತ್ತವೆ. ಒಂದು ಚಲನಚಿತ್ರ ಹೊರಬರುವಲ್ಲಿ ಅನೇಕ ಉದ್ದೇಶಗಳಿರುತ್ತವೆ. ಅದು ಹೆಚ್ಚು ಜನರಿಗೆ ಖುಷಿ ಕೊಡಬೇಕು. ಅದರಿಂದ ಸಾಕಷ್ಟು ಹಣ ಮಾಡಲು ಸಾಧ್ಯವಾಗಬೇಕು ಇತ್ಯಾದಿ. ಇದಕ್ಕಾಗಿ ಕೆಲವು ಚಲನಚಿತ್ರಗಳು ಅವು ಪಾಲಿಸಬೇಕಾದ ನೀತಿಸಂಹಿತೆಗೆ ಸಂಬಂಧಿಸಿದಂತೆ ಚಲನಚಿತ್ರಗಳು ಕೆಲವು  ಸಮಜಾಯಿಷಿ ಮಾಡಿಕೊಳ್ಳುತ್ತವೆ. ಜನಪ್ರಿಯತೆಯೇ ಇದರ ಪರಮ ಗುರಿ. ಹಾಗಾಗಿ ಇದು ಜನರ ಮನಸ್ಸಿನೊಂದಿಗೇ ಹೋಗಬೇಕು. ಇಲ್ಲವಾದರೆ ಅದನ್ನು ಜನರು ಒಪ್ಪುವುದಿಲ್ಲ. ಆದರೆ ಜನರ ಅಪೇಕ್ಷೆಗಳು ಮತ್ತು ಸಮಾಜದಲ್ಲಿ ಅಪೇಕ್ಷಿತವಾದ ಆದರ್ಶಗಳಿಗೆ ಹೊಂದಾಣಿಕೆಯಾಗದಿರುವ ಸಂದರ್ಭಗಳೂ ಉಂಟು. ಲಿಂಗತ್ವದ ವಿಚಾರ ಇದಕ್ಕೆ ಒಳ್ಳೆಯ ಉದಾಹರಣೆ. ಸಮಾಜ ವರ್ಗಾಯಿಸುವ ಲಿಂಗ ಪಾತ್ರಗಳು, ಲಿಂಗ ಪಡಿಯಚ್ಚುಗಳ ಬಗ್ಗೆ ಜನರ ಅಭಿಪ್ರಾಯಗಳು ಮುಖ್ಯವಾಗಿ ಮೂರು ರೀತಿಯದಾಗಿರುತ್ತದೆ. ಒಂದು, ಈ ಕುರಿತು ಕೆಲವರು ತಲೆಕೆಡಿಸಿಕೊಳ್ಳುವುದಿಲ್ಲ. ಸಮಾನತೆ ಬೇಕಾದರೆ ಇರಲಿ, ಬೇಡವಾದರೆ ಬೇಡ ಎಂಬುದು ಇವರ ನಿಲುವು. ಮತ್ತೆ ಕೆಲವರು ಲಿಂಗತ್ವ ಪಡಿಯಚ್ಚು ಮತ್ತು ಲಿಂಗಪಾತ್ರಗಳನ್ನು ವಿರೋಧಿಸುವವರು. ಮತ್ತೆ ಕೆಲವರು ಇವುಗಳು ಸಮಾಜದಲ್ಲಿ ಇರುವಂತೆಯೇ ಇರಬೇಕು ಎಂದು ಹಠ ಹಿಡಿಯುವವರು. ಇಂತಹವರ ಸಂಖ್ಯೆ ಹೆಚ್ಚು. ಇದಕ್ಕೆ ಅವರ ಅಜ್ಞಾನವೇ ಕಾರಣ ಎಂದು ಹೇಳಬಹುದಾದರೂ ಇಂತಹ ಅಜ್ಞಾನ ಅವರಿಗೆ ಅರಿವಿಲ್ಲದಂತೆ ಸಮಾಜವನ್ನು ಅಧೋಗತಿಗೆ ಒಯ್ಯುತ್ತದೆ. ಹಾಗಾಗಿ ಇಂತಹ ಲಿಂಗ ಸಮಾನತೆಗೆ ವಿರೋಧಿಯಾದ ಅಂಶಗಳು ಯಾವುದೇ ಮಾಧ್ಯಮದಲ್ಲಿ ಬಿತ್ತರವಾಗುತ್ತಿದ್ದರೆ ಅದನ್ನು ಗುರುತಿಸುವುದು, ಹಾಗಾಗದಂತೆ ತಡೆಯುವುದು ಹೇಗೆ ಎಂಬ ಅರಿವು ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಚಲನಚಿತ್ರಗಳ ವಿಶ್ಲೇಷಣೆ ಲಿಂಗವಿಚಾರಗಳ ಬೋಧನೆಗೆ ಒಂದು ಉತ್ತಮ ಮಾರ್ಗೋಪಾಯ. ಇದರ ಅಡಿಯಲ್ಲಿ ಒಂದು ಚಲನಚಿತ್ರವನ್ನು ಹೇಗೆ ನೋಡಬೇಕು, ಅದರ ಅಂಶಗಳನ್ನು ಹೇಗೆ ಗುರುತಿಸಬೇಕು ಇತ್ಯಾದಿ ಅಂಶಗಳನ್ನು ತಿಳಿಸಿ, ಪ್ರಾತ್ಯಕ್ಷಿಕೆಯಾಗಿ ಒಂದು ಅಥವಾ ಎರಡು ಚಲನಚಿತ್ರಗಳನ್ನು ವಿಶ್ಲೇಷಿಸಿ ತೋರಿಸಲಾಗುತ್ತದೆ. ಲಿಂಗ ವಿಚಾರಗಳ ಹಿನ್ನೆಲೆಯಲ್ಲಿನ ವಿಮರ್ಶೆ ಸಾಮಾನ್ಯ ವಿಮರ್ಶೆಗಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಹಾಗಾಗಿ ಈ ರೀತಿಯ ವಿಮರ್ಶೆಗೆ ಗಮನಿಸಬೇಕಾದ ಅಂಶಗಳನ್ನೊಳಗೊಂಡ ಮಾರ್ಗದರ್ಶನ ಸೂಚಿಯನ್ನು ಒದಗಿಸಬೇಕು.

**ಜಾಹಿರಾತು ವಿಶ್ಲೇಷಣೆ**

ಜಾಹಿರಾತುಗಳು ಸಾಮಾನ್ಯವಾಗಿ ಜನರು ಮೆಚ್ಚುವ ಅಂಶಗಳಿಗನುಗುಣವಾಗಿರುತ್ತದೆಯೇ ವಿನಾ ಸಮಾಜಕ್ಕೆ ಪೂರಕವಾಗುವ ಅಂಶಗಳಿಗನುಗುಣವಾಗಿರುವುದಿಲ್ಲ. ಅವು ಉತ್ಪನ್ನ ನಿರ್ದೇಶಿತವೂ ವ್ಯಾವಹಾರಿಕವೂ ಆದುದು.

ಉತ್ಪನ್ನಗಳು ಮಾರಾಟವಾಗಬೇಕು ಎಂಬುದಷ್ಟೇ ಇದರ ಗುರಿ. ಸಮಕಾಲೀನ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿನ್ಯಾಸಗಳ ಮೂಲಕ ಜನಮನ ಗೆಲ್ಲುವುದೇ ಅವುಗಳ ಉದ್ದೇಶ. ಜಾಹಿರಾತುಗಳು ಸಾಮಾಜಿಕ ನಡೆವಳಿಕೆ, ಅಭ್ಯಾಸಗಳ ವಿಮರ್ಶೆಯ ಗೋಜಿಗೆ ಹೋಗುವುದಿಲ್ಲ. ಹಲವಾರು ಬಾರಿ ಮಹಿಳೆಯರನ್ನು ನೇತ್ಯಾತ್ಮಕವಾಗಿ ಅಗೌರವದಿಂದ ಅಗತ್ಯವಿಲ್ಲದಿದ್ದರೂ ಬಿಂಬಿಸುವುದನ್ನು ನೀವು ಗಮನಿಸಿರಬಹುದು. ಇಂತಹ ಜಾಹಿರಾತುಗಳನ್ನು ಲಿಂಗಸಮಾನತೆ ಅಥವಾ ಲಿಂಗ ತಟಸ್ಥ ದೃಷ್ಟಿಕೋನಗಳಿಂದ ಅಭ್ಯಾಸಮಾಡಲು ತರಬೇತಿನೀಡಿ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಲಿಂಗ ಅಸಮಾನತೆಯ ಕುರಿತು ಮಕ್ಕಳಲ್ಲಿ ಸಂವೇದನಾ ಶೀಲತೆಯನ್ನು ಮೂಡಿಸಬಹುದು. ಮೇಲೆ ಹೇಳಿದಂತೆ ಈ ಸನ್ನಿವೇಶದಲ್ಲಿಯೂ ಜಾಹಿರಾತುಗಳನ್ನು ಹೇಗೆ ವಿಮರ್ಶೆಮಾಡಬೇಕು ಎಂಬುದರ ಕುರಿತು ಮಾರ್ಗದರ್ಶನ ಸೂಚಿಯನ್ನು ಒದಗಿಸಬೇಕು.

**ಜೀವನಚರಿತ್ರೆಗಳ ವಿಶ್ಲೇಷಣೆ**

ಜೀವನಚರಿತ್ರೆಗಳು ವ್ಯಕ್ತಿಯ ಜೀವನಗಾಥೆಯನ್ನು ಹೇಳುತ್ತವೆ. ಜೀವನ ಚರಿತ್ರಕಾರ ಯಾರ ಕುರಿತು ಬರೆಯುವನೋ ಅವರಲ್ಲಿ ಏನೋ ವಿಶಿಷ್ಟವಾದ ಅಂಶಗಳನ್ನು ಕಂಡುಕೊಂಡ ಕಾರಣ ಜೀವನ ಚರಿತ್ರೆಗಳು ಮೂಡಿಬರುತ್ತವೆ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಈ ಜೀವನಚರಿತ್ರೆಗಳು ಸಮಾಜದ ಸ್ಥಿತಿಗತಿಗಳನ್ನು ಬಿಂಬಿಸುತ್ತವೆ. ಅವು ಧನಾತ್ಮಕವಾಗಿರಬಹುದು; ಇಲ್ಲವೇ ಋಣಾತ್ಮಕವಾಗಿರಬಹುದು. ಲಿಂಗ ವಿಚಾರಗಳಿಗೆ ಸಂಬಂಧಿಸಿದಂತೆಯೂ ಅನೇಕ ಅಂಶಗಳು ಅವುಗಳಲ್ಲಿ ಪ್ರತಿಬಿಂಬಿತವಾಗಿರುತ್ತವೆ. ವ್ಯಕ್ತಿ ಲಿಂಗತ್ವದ ಕಾರಣದಿಂದ ಅನುಭವಿಸಿದ ಕಷ್ಟಗಳಾವುವು? ಅವು ಆಯಾ ಸಮಾಜದಲ್ಲಿ ಹೇಗೆ ಅಸ್ತಿತ್ವದಲ್ಲಿದ್ದವು ಇತ್ಯಾದಿ ಅಂಶಗಳ ಕಡೆಗೆ ವಿದ್ಯಾರ್ಥಿ ವಿದ್ಯಾರ್ಥಿನಿಯರ ಗಮನ ಸೆಳೆಯಬೇಕಾಗುತ್ತದೆ. ಇಲ್ಲಿಯೂ ಸೂಕ್ತ ಪ್ರಶ್ನೆಗಳನ್ನೊಳಗೊಂಡ ಒಂದು ಮಾರ್ಗಸೂಚಿ ಅಗತ್ಯ. ಈ ಮಾರ್ಗೋಪಾಯವನ್ನು ಬಳಸಿದ ಒಂದು ತರಗತಿಯಲ್ಲಿ ಒಬ್ಬಳು ವಿದ್ಯಾರ್ಥಿನಿ ಬರೆದ ವಾಕ್ಯಗಳನ್ನು ಗಮನಿಸಿ.

"ನನ್ನ ಅಮ್ಮನ ಕುರಿತು"

"..ಬೆಳಗಾಗುವ ಮೊದಲೇ ನನ್ನಮ್ಮನ ದಿನಚರಿ ಮೊದಲಾಗುತ್ತದೆ. ನಾವೆಲ್ಲ ಇನ್ನೂ ಹಾಸಿಗೆಯಲ್ಲಿ ಕನಸು ಕಾಣುತ್ತಿರುತ್ತೇವೆ. ಆಕೆ ಚಾವಡಿ ಗುಡಿಸಿ, ಅಂಗಳಕ್ಕೆ ನೀರು ಚುಮುಕಿಸಿ, ರಂಗೋಲಿ ಬರೆದು ಅದನ್ನು ಆ ಮೂಲೆಯಿಂದೊಮ್ಮೆ ಈ ಮೂಲೆಯಿಂದೊಮ್ಮೆ ನೋಡಿ ಅನುಭವಿಸಿಕೊಂಡು ಬೀಗುತ್ತಾ ಮನೆಯೊಳಗೆ ಬಂದು ಉಳಿದ ಕೆಲಸಗಳನ್ನು ಪ್ರಾರಂಭಿಸುತ್ತಾಳೆ. ಒಂದೇ ಎರಡೇ, ಸ್ವಿಚ್ ಹಾಕಿದರೆ ಯಂತ್ರ ಒಂದಾದಮೇಲೊಂದು ಕೆಲಸಮಾಡುವಂತೆ, ಸ್ವಲ್ಪವೂ ಬಿಡುವಿಲ್ಲದೆ ಅಚ್ಚುಕಟ್ಟಾಗಿ ಪ್ರತಿಯೊಂದು ಕೆಲಸವನ್ನೂ ಮಾಡುತ್ತಾಳೆ. ಮನೆ ಸ್ವಚ್ಛಮಾಡುವುದು, ಅಡಿಗೆ ಮಾಡುವುದು, ಬಾವಿಯಿಂದ ನೀರೆಳೆದು ಹಂಡೆ ಮೊದಲಾಗಿ ನೀರು ತುಂಬಿಸುವುದು, ನಮ್ಮನ್ನು ಶಾಲೆಗೆ ಕಳಿಸುವುದು, ಅಪ್ಪನನ್ನು ಆಫೀಸಿಗೆ ರೆಡಿ ಮಾಡುವುದು.. ಹೇಳುತ್ತಾ ಹೋದರೆ ಮುಗಿಯುವುದೇ ಇಲ್ಲ. ಈ ಮಧ್ಯೆ ಮನೆಗೆ ಬರುವ ಅಕ್ಕಪಕ್ಕದ ನಂಜಕ್ಕ, ಸೌಮ್ಯ ಆಂಟಿ ಎಲ್ಲರನ್ನೂ ಮನಸಾರೆ ಮಾತನಾಡಿಸುವುದು.. ನಾನದೆಷ್ಟು ಸಲ ಅಂದುಕೊಂಡಿದ್ದೇನೆ! ನನ್ನ ಅಮ್ಮನಿಗೂ ನಮ್ಮಂತೆ ಒಂದು ಬಿಡುವಿನ ದಿನ, ಭಾನುವಾರ ಇರಬಾರದೇ! ಅವಳು ನಿರಾಳವಾಗಿ ಉಸಿರಾಡಿ ಆರಾಮದಲ್ಲಿ ಕುಳಿತು ನಮ್ಮಂತೆ ದಿನವನ್ನು ಅನುಭವಿಸಬಾರದೇ! ಎಂದು.

**ಆತ್ಮಚರಿತ್ರೆಗಳ ವಿಶ್ಲೇಷಣೆ**

ಲೇಖಕ ತನ್ನ ಕಥೆಯನ್ನು ನಿರೂಪಿಸುವುದರ ಮೂಲಕ ತನ್ನ ಬದುಕಿನ ಘಟನೆಗಳನ್ನು ತೆರೆದಿಡುವ ಲೇಖನ ರೀತಿಯೇ ಆತ್ಮಚರಿತ್ರೆ. ಇದೂ ಜೀವನಚರಿತ್ರೆಯಂತೆ ಆಯಾಕಾಲದ ಸಮಾಜೋ ಸಾಂಸ್ಕೃತಿಕ ಅಂಶಗಳನ್ನು ಬಿಚ್ಚಿಡುತ್ತದೆ. ಈ ಮಾರ್ಗೋಪಾಯದಲ್ಲಿ ಇತರರು ಬರೆದ ಆತ್ಮಚರಿತ್ರೆಗಳನ್ನು ಲಿಂಗತ್ವ ವಿಚಾರಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು; ಇಲ್ಲವೇ ಲಿಂಗತ್ವ ದೃಷ್ಟಿಕೋನದ ಹಿನ್ನೆಲೆಯಲ್ಲಿ ಮಕ್ಕಳಿಂದಲೇ ಆತ್ಮಚರಿತ್ರೆಗಳನ್ನು ಬರೆಸಿ

ಅವುಗಳನ್ನು ವಿಶ್ಲೇಷಣೆ ಮಾಡಬಹುದು. ಇದು ಮಕ್ಕಳಿಗೆ ಲಿಂಗತ್ವ ವಿಚಾರಗಳ ಹಿನ್ನೆಲೆಯಲ್ಲಿ ತಮ್ಮನ್ನು ಮೌಲ್ಯಮಾಪನ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಸನ್ನಿವೇಶದಲ್ಲಿ ಬರೆಯುವ ಆತ್ಮಕಥನಗಳು ಸಾಮಾನ್ಯ ಆತ್ಮಕಥನಗಳಿಗಿಂತ ಭಿನ್ನವಾಗಿರುತ್ತವೆ. ಹಾಗಾಗಿ ಈ ಸನ್ನಿವೇಶಕ್ಕನುಗುಣವಾಗಿ ಸೂಕ್ತ ಮಾರ್ಗದರ್ಶನದೊಂದಿಗೆ ಬರೆಯಿಸಿ, ಅವುಗಳನ್ನು ವಿಶ್ಲೇಷಣೆ ಮಾಡಬೇಕು.

ಈ ಮಾರ್ಗೋಪಾಯವನ್ನು ಬಳಸಿದಾಗ ರೂಪುಗೊಂಡ ಆತ್ಮಕಥನದ ಒಂದು ಭಾಗವನ್ನು ಗಮನಿಸಿ :

"..ನನ್ನ ಜೀವನದಲ್ಲಿ ಸಾಮಾನ್ಯವಾಗಿ ಹೆಣ್ಣುಮಕ್ಕಳಿಗಿರುವ ಯಾವ ನಿಯಮಗಳೂ ಇರಲಿಲ್ಲ. ನನ್ನ ಅಪ್ಪ ಅಮ್ಮ ನನಗೆ ಸಾಕಷ್ಟು ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ನಾನೆಂದಿಗೂ ಅದನ್ನು ದುರುಪಯೋಗಪಡಿಸಿಕೊಳ್ಳಲಿಲ್ಲ. ಆದರೆ ನಮ್ಮ ನೆಂಟರನೇಕರು "ಹುಡುಗಿಯರಿಗೆ ಇಷ್ಟು ಸಲಿಗೆ ಒಳ್ಳೆಯದಲ್ಲ; ನಿನಗೆ ನಾಳೆ ಕಷ್ಟವಾಗಬಹುದು" ಎಂದು ನನ್ನ ಅಮ್ಮನ ಬಳಿ ಆಗಾಗ ಹೇಳುತ್ತಿದ್ದರು..

ಈ ಅಂಶಗಳನ್ನೇ ಕೇಂದ್ರವಾಗಿಟ್ಟುಕೊಂಡು ಲಿಂಗತ್ವ ವಿಚಾರಗಳನ್ನು ಮಕ್ಕಳಿಗೆ ತಿಳಿಸಬಹುದು.

**ಕಿರುನಾಟಕ ಅಥವಾ ಪಾತ್ರಾಭಿನಯ**

ಕಲಿಕೆಯ ಸಾಮಾಜಿಕ ಸ್ವರೂಪವನ್ನು ತೆರೆದಿಡುವ ಒಂದು ಮಾರ್ಗೋಪಾಯವೆಂದರೆ ಪಾತ್ರಾಭಿನಯ. ಇದು ಅನುಭವ ಆಧಾರಿತ ತಂತ್ರ. ಇದರಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಒಟ್ಟಾಗಿ ಅನೇಕ ಸಾಮಾಜಿಕ ವಿಚಾರಗಳನ್ನು ಪಾತ್ರಾಭಿನಯದ ಮೂಲಕ ತೆರೆದಿಡಬಹುದು. ಅದರ ವಿಶ್ಲೇಷಣೆ, ವಿಮರ್ಶೆ ಮಾಡಬಹುದು. ಸಮಾಜದಲ್ಲಿ ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದ ಯಾವುದಾದರೂ ಘಟನೆಯನ್ನು ಮಕ್ಕಳು ಪಾತ್ರಾಭಿನಯದ ಮೂಲಕ ಪ್ರದರ್ಶಿಸುವಂತೆ ಮಾಡಿ ಅಧ್ಯಾಪಕರು ಆ ಕುರಿತ ಚರ್ಚೆ ನಡೆಸಿ ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದ ಸೂಕ್ತ ಮಾಹಿತಿ ಮತ್ತು ಮನೋಭಾವಗಳನ್ನು ಮೂಡಿಸಬಹುದು.

**ಸಂದರ್ಶನ-ದತ್ತಾಂಶಗಳ ವಿಶ್ಲೇಷಣೆ**

ಲಿಂಗತ್ವ ವಿಚಾರಗಳನ್ನು ತಿಳಿಸಲು ಈ ಮಾರ್ಗೋಪಾಯವೂ ಅತ್ಯಂತ ಪರಿಣಾಮಕಾರಿ. ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದಂತೆ, ಉದ್ದೇಶಗಳಿಗನುಗುಣವಾಗಿ ಒಂದು ಪ್ರಶ್ನಾವಳಿ ತಯಾರಿಸಿ, ಅದಕ್ಕನುಗುಣವಾಗಿ ಮಹಿಳೆಯರು ಮತ್ತು ಪುರುಷರನ್ನು ಸಂದರ್ಶಿಸಿ, ಸಂಗ್ರಹಿಸಿದ ದತ್ತಾಂಶಗಳನ್ನು ತರಗತಿಗಳಲ್ಲಿ ಚರ್ಚಿಸುವುದರಿಂದ ಲಿಂಗತ್ವ ವಿಷಯಕವಾದ ಜಾಗೃತಿ ಮೂಡಿಸಬಹುದು. ಈ ಪ್ರಶ್ನಾವಳಿಗಳು ಪುರುಷರಿಗೆ ಮತ್ತು ಮಹಿಳೆಯರಿಗೆ ಸೂಕ್ತವಾಗುವಂತೆ ಭಿನ್ನ ರೀತಿಯಲ್ಲಿ ರೂಪಿತವಾಗಿರಬೇಕು ಎಂಬ ಅಂಶ ಮುಖ್ಯವಾಗುತ್ತದೆ.

ಮೇಲಿನ ಮಾರ್ಗೋಪಾಯಗಳು ಪ್ರಮುಖವಾಗಿ ಪ್ರೌಢಶಾಲಾ ಹಂತದಲ್ಲಿ ಹೆಚ್ಚು ಪರಿಣಾಮಕಾರಿಯಾಗುತ್ತವೆ. ಏಕೆಂದರೆ ಈ ಮಾರ್ಗೋಪಾಯಗಳಿಗೆ ಅಗತ್ಯವಾದ ಸಾಮರ್ಥ್ಯಗಳು ಈ ಹಂತದಲ್ಲಿ ಮಕ್ಕಳಲ್ಲಿ ಬೆಳೆಯುತ್ತಿರುತ್ತವೆ.

ಈ ಮಾರ್ಗೋಪಾಯಗಳನ್ನು ಅನುಸರಿಸುವಾಗ ಅಧ್ಯಾಪಕರ ಪಾತ್ರ ಬಹಳ ಮುಖ್ಯ. ಅವರು ಅತ್ಯಂತ ಸೂಕ್ಷ್ಮವಾಗಿ ಮಕ್ಕಳಿಗೆ ಮಾರ್ಗದರ್ಶನ ಮಾಡಬೇಕಾಗುತ್ತದೆ. ಮಾರ್ಗದರ್ಶನ ಸರಿಯಾಗದಿದ್ದರೆ ಒಳಿತಾಗುವುದಕ್ಕಿಂತ ಪ್ರಮಾದವಾಗುವ ಸಾಧ್ಯತೆಗಳಿವೆ.

**ಇತರ ಮಾರ್ಗೋಪಾಯಗಳು**

**ಉಪನ್ಯಾಸ**

ಇದು ಅಧ್ಯಾಪಕ ಕೇಂದ್ರಿತವಾದರೂ ಇದು ಸಾಕಷ್ಟು ಪರಿಣಾಮಕಾರಿಯಾಗಬಲ್ಲುದು. ಅಧ್ಯಾಪಕರು ಜಾಗರೂಕತೆಯಿಂದ ಅಗತ್ಯ ಮಾಹಿತಿಗಳ ಆಧಾರದ ಮೇಲೆ ಸಮರ್ಪಕವಾಗಿ ಉಪನ್ಯಾಸಗಳನ್ನು ಯೋಜಿಸಿ ಬೋಧಿಸದರೆ, ಅದು ಲಿಂಗತ್ವ ಸಂಬಂಧಿಯಾದ ಮಾಹಿತಿ ಹಾಗೂ ಮನೋಭಾವಗಳನ್ನು ರೂಢಿಸುವಲ್ಲಿ

ಪರಿಣಾಮಕಾರಿಯಾಗಬಹುದು. "ನನ್ನ ಅಧ್ಯಾಪಕರ ತರಗತಿ ಉಪನ್ಯಾಸಗಳಿಂದ ನನ್ನ ಬದುಕೇ ಬದಲಾಯಿತು" ಎಂದು ಹಲವರು ಹೇಳಿದುದನ್ನು ನೀವು ಕೇಳಿರಬಹುದು.

**ನಿರೂಪಣೆ**

ಉತ್ತಮ ನಿರೂಪಣೆಯೂ ಲಿಂಗತ್ವ ವಿಚಾರಗಳನ್ನು ಮಕ್ಕಳಿಗೆ ಮುಟ್ಟಿಸಲು ಉತ್ತಮ ಸಾಧನವಾಗಬಲ್ಲುದು. ಕಿತ್ತೂರು ರಾಣಿ ಚೆನ್ನಮ್ಮ, ಲಕ್ಷ್ಮೀಬಾಯಿ ಇತ್ಯಾದಿ ಮಹಿಳೆಯರ ಕತೆಗಳನ್ನೋ, ಸ್ವಂತ ಅನುಭವಗಳನ್ನೋ, ಪ್ರಭಾವಿ ವ್ಯಕ್ತಿಗಳ ಬದುಕಿನ ಆಸಕ್ತಿಯುತ ಸನ್ನಿವೇಶಗಳನ್ನೋ ಉತ್ತಮ ನಿರೂಪಣಾ ಶೈಲಿಯಲ್ಲಿ ಪ್ರಸ್ತುತಪಡಿಸುವುದರಿಂದ ಲಿಂಗತ್ವವಿಚಾರಗಳನ್ನು ಬೋಧಿಸಬಹುದು.

**ಪರಾಮರ್ಶೆ**

ಲಿಂಗತ್ವ ವಿಚಾರಗಳ ಅಧ್ಯಯನಕ್ಕೆ ಪೂರಕವಾದ ಘಟನೆಗಳನ್ನು ವಿಮರ್ಶಿಸುವುದರಿಂದಲೂ ಅಪೇಕ್ಷಿತ ವರ್ತನಾ ಬದಲಾವಣೆಗಳನ್ನು ಉಂಟುಮಾಡಬಹುದು. ಉದಾಹರಣೆಗೆ

- ಶಾಲೆಯಲ್ಲಿ ನಡೆದ ಒಂದು ಸನ್ನಿವೇಶ/ಘಟನೆ
- ಪಠ್ಯಪುಸ್ತಕದಲ್ಲಿ ವಿವರಿಸಿರುವ ಒಂದು ಘಟನೆ/ವಿಷಯ
- ಮಕ್ಕಳ ಸ್ಥಳೀಯ ಸನ್ನಿವೇಶದಲ್ಲಿ ನಡೆದ ಒಂದು ಘಟನೆ
- ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ಒಂದು ಸುದ್ದಿ/ಘಟನೆ
- ತರಗತಿಯಲ್ಲಿನ ಒಂದು ಧನಾತ್ಮಕ ಅಥವಾ ಋಣಾತ್ಮಕವಾದ ಘಟನೆ

**ಗುಂಪು ಚರ್ಚೆ**

ಮೇಲೆ ಹೇಳಿದ ಪರಾಮರ್ಶೆಯ ಒಂದು ಸಾಧನವಾಗಿ ಇದನ್ನು ಬಳಸಿಕೊಳ್ಳಬಹುದು. ಘಟನೆಗಳನ್ನು/ಘಟನೆಯನ್ನು ಆಯ್ಕೆಮಾಡಿಕೊಂಡು, ನಂತರ ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ, ಆಯ್ಕೆ ಮಾಡಿಕೊಂಡ ಘಟನೆಯ ಕುರಿತು ಗುಂಪುಗಳಲ್ಲಿ ಚರ್ಚಿಸಲು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳಲು ತಿಳಿಸಿ, ನಂತರ ಎಲ್ಲ ಗುಂಪಿನವರ ತೀರ್ಮಾನಗಳನ್ನು ಕಪ್ಪು ಹಲಗೆ ಅಥವಾ ಪ್ರೊಜೆಕ್ಟರ್ ಮೇಲೆ ಪ್ರದರ್ಶಿಸಿ, ಅಂತಿಮ ತೀರ್ಮಾನವನ್ನು ಅಧ್ಯಾಪಕರು ಅಪೇಕ್ಷಣೀಯವಾದ ವರ್ತನೆಗಳ ಹಿನ್ನೆಲೆಯಲ್ಲಿ ಪ್ರೋತ್ಸಾಹಿಸಬಹುದು.

**ಸಮಸ್ಯಾ ಪರಿಹಾರ**

ಇದೂ ಲಿಂಗತ್ವ ವಿಚಾರಗಳ ಬೋಧನೆಗೆ ಒಂದು ಉತ್ತಮ ಮಾರ್ಗ. ಲಿಂಗತ್ವ ವಿಷಯಗಳಿಗೆ ಸಂಬಂಧಿಸಿದಂತೆ ಶಾಲೆ, ಸ್ಥಳೀಯ ಬಡಾವಣೆ, ಇತ್ಯಾದಿ ಹಂತಗಳಲ್ಲಿ ಮೂಡಿಬಂದ ಒಂದು ಸಮಸ್ಯೆಯನ್ನು ಆಯ್ಕೆಮಾಡಿಕೊಂಡು ಅದನ್ನು ಪರಿಹರಿಸಿಕೊಳ್ಳುವ ವಿಧಾನವನ್ನು ಕಂಡುಕೊಳ್ಳಬಹುದು. ಉದಾಹರಣೆಗೆ,

ಶಾಲೆಯ ವತಿಯಿಂದ ಶಾಲಾ ಪ್ರವಾಸವನ್ನು ಯೋಜಿಸಲಾಗಿದೆ. ಹುಡುಗರಿಗೆ ಮತ್ತು ಹುಡುಗಿಯರಿಗೆ ಬೇರೆ ಬೇರೆ ಸ್ಥಳಗಳಿಗೆ ಪ್ರವಾಸದ ಯೋಜನೆ ಇದೆ. ಇದು ಮಕ್ಕಳಲ್ಲಿ ಅಸಮಾಧಾನವನ್ನುಂಟುಮಾಡಿದೆ. ಇದು ಸಮಸ್ಯೆ.

ಇದನ್ನು ಅತ್ಯಂತ ಕಾಳಜಿ ಮತ್ತು ಸಾವಧಾನದಿಂದ ಪರಿಹರಿಸಿಕೊಳ್ಳಬೇಕಾಗಿದೆ. ಇದಕ್ಕೆ ಅಧ್ಯಾಪಕರ ಮಾರ್ಗದರ್ಶನ ಅಗತ್ಯ. ಅಧ್ಯಾಪಕರೇ ಇದನ್ನು ನೇರವಾಗಿ ಅಧ್ಯಾಪಕರ ಸಭೆಯಲ್ಲಿ ಅಥವಾ ಮುಖ್ಯೋಪಾಧ್ಯಾಯರ ಜೊತೆಗಿನ ಚರ್ಚೆಯಲ್ಲಿ ಪರಿಹರಿಸಬಹುದಾದರೂ ಮಕ್ಕಳು ಹೇಗೆ ಪರಿಹರಿಸಿಕೊಳ್ಳಬಹುದು, ಆ ಸನ್ನಿವೇಶದಲ್ಲಿ ಅವರಲ್ಲಿರಬೇಕಾದ ಜಾಗ್ರತೆ, ಎಲ್ಲಿಯೂ ಯಾರ ಗೌರವಕ್ಕೂ ಚ್ಯುತಿ ಬಾರದ ರೀತಿಯ ವರ್ತನೆಯನ್ನು ಕಾಯ್ದುಕೊಳ್ಳುವುದು ಇವೆಲ್ಲವೂ ಅವರ ಬದುಕಿಗೆ ಮಾರ್ಗದರ್ಶಕವಾಗುತ್ತದೆ.

**ಯೋಜನೆಯನ್ನು ಕೈಗೊಳ್ಳುವುದು**

ಮೇಲೆ ಹೇಳಿದ ಸಂದರ್ಶನವನ್ನು ಒಂದು ಯೋಜನೆಯ ರೂಪದಲ್ಲಿ ಹಮ್ಮಿಕೊಳ್ಳಬಹುದು. ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದಂತೆ ಅವರ ಸ್ಥಳದ ಮಹಿಳೆಯರನ್ನು ಮತ್ತು ಪುರುಷರನ್ನು ಸಂದರ್ಶಿಸಿ, ಮಾಹಿತಿ ಸಂಗ್ರಹಿಸಿ, ಅದನ್ನು ತರಗತಿಯಲ್ಲಿ ಫಲಕಗಳಲ್ಲಿ ಪ್ರದರ್ಶಿಸಿ, ವಿಶ್ಲೇಷಿಸಬಹುದು.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1**

ನೀವು ಬೋಧಿಸುವ ತರಗತಿ ವಿಷಯಗಳಲ್ಲಿ ಲಿಂಗತ್ವದ ವಿಚಾರಗಳನ್ನು ಚರ್ಚಿಸಲು ಅವಕಾಶವಿರುವ ನಿಮ್ಮ ಆಯ್ಕೆಯ ಒಂದು ವಿಷಯಕ್ಕೆ ಮೇಲೆ ವಿವರಿಸಿರುವ ಯಾವುದಾದರೂ ಒಂದು/ ಎರಡು ಮಾರ್ಗೋಪಾಯಕ್ಕನುಗುಣವಾಗಿ ಪಾಠಯೋಜನೆ ತಯಾರಿಸಿ.

## 2.2.3.2. ಲಿಂಗತ್ವ ವಿಚಾರಗಳನ್ನು ಬೋಧಿಸಲು ಬಳಸಬಹುದಾದ ಬೋಧನಾ ಉಪಕರಣಗಳು

ಲಿಂಗತ್ವ ವಿಚಾರಗಳನ್ನು ಬೋಧಿಸುವ ಮಾರ್ಗೋಪಾಯಗಳನ್ನು ತಿಳಿದ ನಂತರ ಈ ಸನ್ನಿವೇಶದಲ್ಲಿ ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು ಸ್ಪಷ್ಟವಾಗುತ್ತವೆ. ಅವುಗಳನ್ನು ವಿಚಾರಮಾಡೋಣ.

**ಚಲನಚಿತ್ರಗಳು:** ಚಲನಚಿತ್ರಗಳು ಲಿಂಗತ್ವ ವಿಚಾರಗಳನ್ನು ಬೋಧಿಸುವಲ್ಲಿ ಅತ್ಯಂತ ಪರಿಣಾಮಕಾರಿಯಾದ ಸಾಮಗ್ರಿಗಳಾಗುತ್ತವೆ. ಲಿಂಗತ್ವ ವಿಚಾರಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ, ಧನಾತ್ಮಕವಾಗಿ ಅಥವಾ ಋಣಾತ್ಮಕವಾಗಿ ಬಿಂಬಿಸುವ, ಜೊತೆಗೆ ಪ್ರಗತಿಪರವಾದ ಚಲನಚಿತ್ರಗಳನ್ನು ಆಯ್ಕೆಮಾಡಿಕೊಂಡು ಅವುಗಳ ವಿಶ್ಲೇಷಣೆಯ ಮೂಲಕ ಅಪೇಕ್ಷಣೀಯ ವರ್ತನೆಗಳನ್ನು ಪ್ರೋತ್ಸಾಹಿಸಬಹುದು.

**ಜಾಹಿರಾತುಗಳು:** ಇವೂ ಲಿಂಗತ್ವ ವಿಚಾರಗಳನ್ನು ಬೋಧಿಸುವಲ್ಲಿ ಅತ್ಯಂತ ಪರಿಣಾಮಕಾರಿಯಾದ ಸಾಮಗ್ರಿಗಳಾಗುತ್ತವೆ. ಇದಕ್ಕೆ ಅವಕಾಶವಿರುವ ಜಾಹಿರಾತುಗಳನ್ನು ಗುರುತಿಸಿ, ಆ ಮೂಲಕ ಮಕ್ಕಳು ಈ ಕುರಿತು ಆಲೋಚಿಸುವಂತೆ ಪ್ರೋತ್ಸಾಹಿಸಬಹುದು.

**ಜೀವನಚರಿತ್ರೆಗಳು:** ಈ ಸನ್ನಿವೇಶದಲ್ಲಿ ಬಳಸಬಹುದಾದ ಜೀವನಚರಿತ್ರೆಗಳು ಸಾಮಾನ್ಯವಾಗಿ ವಿದ್ಯಾರ್ಥಿ–ವಿದ್ಯಾರ್ಥಿನಿಯರೇ ರಚಿಸಿದ ಜೀವನಚರಿತ್ರೆಗಳಾಗಿರುತ್ತವೆ. ಇವುಗಳ ಜೊತೆಗೆ ಸಾಹಿತ್ಯಿಕವಾದ ಜೀವನಚರಿತ್ರೆಗಳನ್ನೂ ಆಯ್ಕೆ ಮಾಡಿಕೊಳ್ಳಬಹುದು.

**ಆತ್ಮಚರಿತ್ರೆಗಳು:** ಇವೂ ವಿದ್ಯಾರ್ಥಿ–ವಿದ್ಯಾರ್ಥಿನಿಯರೇ ರಚಿಸಿದ ಆತ್ಮಚರಿತ್ರೆಗಳಾಗಿರುತ್ತವೆ. ಇದು ಸಾಮಾನ್ಯವಾಗಿ ನಾವು ಸಾಹಿತ್ಯಿಕವಾಗಿ ನಿರೀಕ್ಷಿಸುವ ಆತ್ಮಚರಿತ್ರೆಗಳಂತಲ್ಲ. ವಿದ್ಯಾರ್ಥಿ–ವಿದ್ಯಾರ್ಥಿನಿಯರೇ ಅವರ ಬದುಕಿನ ಘಟನೆಗಳನ್ನು ಕುರಿತಂತೆ ಬರೆದ ಬರಹಗಳಿವು.

**ವೀಡಿಯೋ ಚಿತ್ರಗಳು / ಕಿರುನಾಟಕಗಳು:** ವಿದ್ಯಾರ್ಥಿಗಳೇ ಕಿರುನಾಟಕಗಳನ್ನು ಅಭಿನಯಿಸುವುದು ಒಳ್ಳೆಯದು. ಅದು ಸಾಧ್ಯವಾಗದಿದ್ದಲ್ಲಿ ಲಿಂಗವಿಚಾರಗಳನ್ನು ಚರ್ಚಿಸಲು ಅವಕಾಶವಿರುವ ವೀಡಿಯೋ ರೂಪದಲ್ಲಿರುವ ಕಿರುನಾಟಕಗಳನ್ನು ಬಳಸಿಕೊಳ್ಳಬಹುದು.

**ಕೃತಿಗಳು / ಗ್ರಂಥಗಳು:** ಲಿಂಗವಿಚಾರಗಳನ್ನು ಚರ್ಚಿಸಲು ಅನುವುಮಾಡಿಕೊಡುವ ಕೃತಿಗಳು ಈ ದಿಶೆಯಲ್ಲಿ ಹೆಚ್ಚು ಉಪಯುಕ್ತವಾಗುತ್ತವೆ. ಉದಾಹರಣೆಗೆ, ಸಮಾಜಕ್ಕೆ ಕಾಣಿಕೆ ನೀಡಿದ ಮಹಿಳೆಯರ ವ್ಯಕ್ತಿ ಚಿತ್ರಗಳು, ಲಿಂಗ ಸಮಾನತೆಗೆ ಹೋರಾಡಿದ ಮಹನೀಯರ ವ್ಯಕ್ತಿ ಚಿತ್ರಗಳು ಇತ್ಯಾದಿ.

**ಪಠ್ಯಪುಸ್ತಕಗಳು:** ಇವು ಲಿಂಗವಿಚಾರಗಳನ್ನು ಚರ್ಚಿಸಲು ಸುಲಭವಾಗಿ ಲಭ್ಯವಾಗುವ ಮತ್ತು ಪರಿಣಾಮಕಾರಿಯಾದ ಆಕರಗಳು. ಪಠ್ಯಗಳನ್ನು ಲಿಂಗತ್ವ ವಿಚಾರಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಹೇಗೆ ಎಂಬುದನ್ನು ಅಧ್ಯಾಪಕರು ವಿದ್ಯಾರ್ಥಿಗಳಿಗೆ ತೋರಿಸಿಕೊಡಬೇಕು.

**ಮುದ್ರಣ ಮಾಧ್ಯಮಗಳು:** ವೃತ್ತಪತ್ರಿಕೆಗಳು, ನಿಯತಕಾಲಿಕೆಗಳು ಈ ಸನ್ನಿವೇಶದಲ್ಲಿ ಉತ್ತಮ ಸಾಮಗ್ರಿಗಳು. ಅಲ್ಲಿ ಪ್ರಕಟವಾಗುವ ಸುದ್ದಿಗಳನ್ನು ಲಿಂಗತ್ವ ವಿಚಾರಗಳ ಹಿನ್ನೆಲೆಯಲ್ಲಿ ವಿಮರ್ಶಿಸಬಹುದು.

**ಭಿತ್ತಿ ಫಲಕಗಳು/ ಮಾಹಿತಿ ಫಲಕಗಳು:** ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದಂತೆ ಲೇಖಕರ ಕವನಗಳು, ಕತೆಗಳು, ವಿದ್ಯಾರ್ಥಿಗಳು ರಚಿಸಿದ ಬರಹಗಳನ್ನು ಈ ಫಲಕಗಳಲ್ಲಿ ಪ್ರಕಟಿಸಿ ಮಕ್ಕಳ ಗಮನ ಸೆಳೆಯಬಹುದು.

**ಚಿತ್ರಗಳು ಮತ್ತು ಛಾಯಾಚಿತ್ರಗಳು:** ಲಿಂಗ ಅಸಮಾನತೆಯನ್ನು ತೋರಿಸುವ ಚಿತ್ರಗಳನ್ನು, ಲಿಂಗಸಮಾನತೆಗೆ ಹೋರಾಡಿದವರ ಛಾಯಾಚಿತ್ರಗಳನ್ನು ವೃತ್ತಪತ್ರಿಕೆಗಳು, ನಿಯತಕಾಲಿಕೆಗಳಿಂದ ಸಂಗ್ರಹಿಸಿ ಬಳಸಿಕೊಳ್ಳಬಹುದು. ಈ ಸಂದರ್ಭಗಳಲ್ಲಿ ಮಕ್ಕಳಲ್ಲಿ ಸೂಕ್ತ ಮನೋಭಾವಗಳನ್ನು ರೂಪಿಸುವುದರ ಕಡೆಗೆ ಗಮನವಿರಬೇಕು. ಲಿಂಗ ಪಡಿಯಚ್ಚುಗಳನ್ನು ತೋರಿಸುವ ಚಿತ್ರಗಳಿದ್ದಲ್ಲಿ ಅದನ್ನು ಕುರಿತಂತೆ ಸೂಕ್ತ ಚರ್ಚೆಗೆ ಅನುವುಮಾಡಿಕೊಟ್ಟು ಸೂಕ್ತ ವಿಚಾರಗಳನ್ನು ತಿಳಿಸಬೇಕು.

**ಚಾರ್ಟುಗಳು:** ಲಿಂಗ ಸಮಾನತೆಗೆ ಪೂರಕವಾದ ಚಿತ್ರಗಳನ್ನು ಬರಹವನ್ನು ಚಾರ್ಟುಗಳಲ್ಲಿ ಬಳಸಿಕೊಂಡು ಮಕ್ಕಳ ಗಮನ ಸೆಳೆಯಬಹುದು.

**ವ್ಯಂಗ್ಯ ಚಿತ್ರಗಳು:** ಮಹಿಳೆಯರ ಮೇಲಿನ ಹಿಂಸೆ, ದಬ್ಬಾಳಿಕೆ, ಶಿಶು ಹತ್ಯೆ, ಭ್ರೂಣ ಹತ್ಯೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ವ್ಯಂಗ್ಯ ಚಿತ್ರಗಳನ್ನು ಬಳಸಿಕೊಂಡು ಲಿಂಗತ್ವ ವಿಚಾರಗಳನ್ನು ಪರಿಣಾಮಕಾರಿಯಾಗಿ ಬೋಧಿಸಬಹುದು.

**ಪೋಸ್ಟರ್‌ಗಳು:** ಇವುಗಳು ಹೆಚ್ಚು ಜನರನ್ನು ಒಮ್ಮೆಗೇ ಮುಟ್ಟುತ್ತವೆ. ಪ್ರಮುಖವಾದ ವಿಷಯಗಳನ್ನು ಚಿತ್ರ, ನಕ್ಷೆಗಳ ರೂಪದಲ್ಲಿ ಪೋಸ್ಟರ್‌ಗಳಲ್ಲಿ ಬಿಂಬಿಸಬಹುದು.

**ಮಿಂಚು ಪಟ್ಟಿಗಳು:** ಇವು ಕೆಳಗಿನ ತರಗತಿಗಳಲ್ಲಿ ಹೆಚ್ಚು ಉಪಯೋಗಕ್ಕೆ ಬರುತ್ತವೆ. ಉದಾಹರಣೆಗೆ, ಮಹಿಳೆಯರ ಮತ್ತು ಪುರುಷರ ಕೆಲಸಗಳನ್ನು ಮಿಂಚುಪಟ್ಟಿಗಳಲ್ಲಿ ಮಕ್ಕಳು ಹೇಳುವಂತೆ ಬೇರೆ ಬೇರೆ ಗುಂಪುಗಳಲ್ಲಿ ವರ್ಗೀಕರಿಸಿ, ಲಿಂಗಸಮಾನತೆಯ ಪರಿಕಲ್ಪನೆಯನ್ನು ಮನಮುಟ್ಟಿಸಿದ ಮೇಲೆ ಕೊನೆಯಲ್ಲಿ ಮಕ್ಕಳೇ ಎಲ್ಲ ಮಿಂಚುಪಟ್ಟಿಗಳನ್ನು ಒಟ್ಟುಗೂಡಿಸುವ ರೀತಿಯಲ್ಲಿ ಬೋಧನೆ ಪರ್ಯವಸಾನವಾಗಬೇಕು.

**ಫಿಲ್ಮ್ ಸ್ಟ್ರಿಪ್‌ಗಳು ಮತ್ತು ಪಾರದರ್ಶಕಗಳು:** ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದ ಚಿತ್ರಗಳು ಮತ್ತು ಮಾಹಿತಿಗಳನ್ನು ಫಿಲ್ಮ್ ಸ್ಟ್ರಿಪ್ ಗಳು ಮತ್ತು ಪಾರದರ್ಶಕಗಳ ಮೂಲಕ ಪ್ರದರ್ಶಿಸಿ ವಿಚಾರಮಾಡಲು ಪ್ರೇರೇಪಿಸಬಹುದು.

**ಕಂಪ್ಯೂಟರ್ ಸಹಾಯಕ ಕಲಿಕಾ ಸಾಮಗ್ರಿಗಳು:** ಲಿಂಗ ವಿಚಾರಗಳಿಗೆ ಸಂಬಂಧಿಸಿದ ಮಾಹಿತಿಗಳು, ಸುದ್ದಿಗಳು, ಚಿತ್ರಗಳು ಇತ್ಯಾದಿ ಸಾಮಗ್ರಿಗಳನ್ನು 'ಸಾಫ್ಟ ವೇರ್' ರೂಪದಲ್ಲಿ ಸಂಗ್ರಹಿಸಿ ಬಳಸಿಕೊಳ್ಳಬಹುದು. ಇಂತಹ ಸಾಮಗ್ರಿಗಳು ಸಿದ್ಧರೂಪದಲ್ಲಿಯೂ ಲಭ್ಯವಿದೆ. ಅವುಗಳನ್ನೂ ಬಳಸಿಕೊಳ್ಳಬಹುದು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ-2

ಲಿಂಗವಿಚಾರಗಳನ್ನು ವಿಚಾರಮಾಡಲು ನೀವು ಬೋಧಿಸುವ ವಿಷಯಗಳಲ್ಲಿ ಒಂದು ವಿಷಯವನ್ನು ಆಯ್ಕೆಮಾಡಿಕೊಂಡು ಮೇಲೆ ತಿಳಿಸಿದ ಯಾವುದಾದರೂ ಎರಡು ಸಾಮಗ್ರಿಗಳನ್ನು ಬಳಸಿಕೊಂಡು ಪಾಠಯೋಜನೆ ತಯಾರಿಸಿ.

## 2.2.4. ಸಾರಾಂಶಿಸೋಣ

- ಲಿಂಗತ್ವ ವಿಚಾರಗಳನ್ನು ಬೋಧಿಸಲು ಅನೇಕ ಮಾರ್ಗಗಳು ಮಾರ್ಗೋಪಾಯಗಳು ಪರಿಣಾಮಕಾರಿಯೆಂದು ಕಂಡುಬಂದಿವೆ. ಅವುಗಳಲ್ಲಿ ಮುಖ್ಯವಾದವು ಚಲನಚಿತ್ರ ವಿಶ್ಲೇಷಣೆ, ಜಾಹಿರಾತು ವಿಶ್ಲೇಷಣೆ, ಜೀವನ ಚರಿತ್ರೆಗಳ ವಿಶ್ಲೇಷಣೆ, ಆತ್ಮಚರಿತ್ರೆಗಳ ವಿಶ್ಲೇಷಣೆ, ಸಂದರ್ಶನ ಮಾಹಿತಿ ವಿಶ್ಲೇಷಣೆ, ಪಾತ್ರಾಭಿನಯ, ಉಪನ್ಯಾಸ, ಚರ್ಚೆ, ಯೋಜನೆ, ಸಮಸ್ಯಾ ಪರಿಹಾರ, ಇತ್ಯಾದಿಗಳು ಪ್ರಮುಖವಾದವು.
- ಲಿಂಗತ್ವ ವಿಚಾರಗಳನ್ನು ಬೋಧಿಸಲು ಆ ಮೂಲಕ ಕಲಿಸಲು ಅನೇಕ ಬೋಧನಾ ಕಲಿಕಾ ಸಾಮಗ್ರಿಗಳನ್ನು ಬಳಸಿಕೊಳ್ಳಬಹುದು. ಅವುಗಳಲ್ಲಿ ಪ್ರಮುಖವಾದವು, ಚಲನಚಿತ್ರಗಳು, ಜಾಹಿರಾತುಗಳು, ಜೀವನಚರಿತ್ರೆಗಳು, ಆತ್ಮಚರಿತ್ರೆಗಳು, ಕೃತಿಗಳು, ಪಠ್ಯಪುಸ್ತಕಗಳು, ವ್ಯಂಗ್ಯಚಿತ್ರಗಳು, ಕಂಪ್ಯೂಟರ್ ಆಧಾರಿತ ಸಾಮಗ್ರಿಗಳು.

## 2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1**

ಯೋಜನೆಗನುಗುಣವಾಗಿ ಪಾಠ ಬೋಧಿಸಿ, ನಿಮ್ಮ ಅನುಭವಗಳನ್ನು ದಾಖಲಿಸಿ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2**

ಪಾಠವನ್ನು ಬೋಧಿಸಿ, ನೀವು ಕಂಡುಕೊಂಡಂತೆ ಈ ಸಾಮಗ್ರಿಗಳು ಹೇಗೆ ಮತ್ತು ಎಷ್ಟು ಉಪಯುಕ್ತವಾದವು ಎಂಬುದನ್ನು ದಾಖಲಿಸಿ, ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

## 2.2.6. ಘಟಕಾಂತ್ಯ ಅಭ್ಯಾಸಗಳು

1. ಲಿಂಗತ್ವ ವಿಚಾರಗಳನ್ನು ಬೋಧಿಸಲು ಸಹಾಯಕವಾಗುವ ಮಾರ್ಗಗಳು ಮತ್ತು ಮಾರ್ಗೋಪಾಯಗಳನ್ನು ವಿವರಿಸಿ.
2. ಲಿಂಗತ್ವ ವಿಚಾರಗಳನ್ನು ಬೋಧಿಸಲು ಸಹಾಯಕವಾಗುವ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳನ್ನು ವಿವರಿಸಿ.

## 2.2.7. ಪರಾಮರ್ಶನ ಸೂಚಿ


1. S.K. Mangal and Uma Mangal (2018), 'Essentials of Educational Technlogy' PHI Learning Private Limited.
2. Dr. N.B. Kongawad and Dr. N. P. Shahapur, "Gender, School and Society", Vidyanidhi Prakashana.
3. Dr. Mahabaleshwar Rao , Gender, School Education(2017), Vismaya Prakashana.
4. www.teachtaught.com
5. "How to promote Gender Equality in classroom",www.wikihow.com


*************

# ಬ್ಲಾಕ್– 2 : ಲಿಂಗತ್ವ ಮತ್ತು ಶಿಕ್ಷಣ

## ಘಟಕ– 3 : ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದ ತರಗತಿ ವ್ಯವಹಾರಗಳು

### ಘಟಕದ ರಚನೆ

2.3.1. ಕಲಿಕೆಯ ಉದ್ದೇಶಗಳು

2.3.2. ಪೀಠಿಕೆ

2.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.3.3.1. ತರಗತಿ ವ್ಯವಹಾರಗಳಲ್ಲಿ ಲಿಂಗತ್ವ ವಿಚಾರಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

2.3.3.2. ಲಿಂಗ ಸಮಾನತೆಗಾಗಿ ತರಗತಿಯಲ್ಲಿ ವಿಷಯ ನಿರ್ದಿಷ್ಟ ವ್ಯವಹಾರಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

2.3.4. ಸಾರಾಂಶಿಸೋಣ

2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

2.3.6. ಘಟಕಾಂತ್ಯ ಅಭ್ಯಾಸಗಳು

2.3.7. ಪರಾಮರ್ಶನ ಸೂಚಿ

### 2.3.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ತರಗತಿ ವ್ಯವಹಾರಗಳಲ್ಲಿ ಲಿಂಗತ್ವ ವಿಚಾರಗಳನ್ನು ವಿಚಾರಮಾಡುವರು; ಮತ್ತು
- ಲಿಂಗ ಸಮಾನತೆಗಾಗಿ ತರಗತಿಯಲ್ಲಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಹೇಗೆ ವ್ಯವಹರಿಸಬೇಕೆಂದು ವಿವರಿಸುವರು.

### 2.3.2. ಪೀಠಿಕೆ

ಒಟ್ಟು ಶಿಕ್ಷಣದಲ್ಲಿ ತರಗತಿಯಲ್ಲಿ ನಡೆಯುವ ಒಟ್ಟು ಚಟುವಟಿಕೆಗಳು ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಮುಖಾಮುಖಿಯಾಗಿ ಪರಸ್ಪರ ಪ್ರಭಾವ ಬೀರುವುದು ಕಾಣಬರುತ್ತದೆ. ವಿದ್ಯಾರ್ಥಿಗಳು ಈ ಸನ್ನಿವೇಶದಲ್ಲಿ ಅಧ್ಯಾಪಕರ ಪ್ರಭಾವಕ್ಕೆ ಅತಿ ಹೆಚ್ಚು ಒಳಗಾಗುತ್ತಾರೆ ಎಂಬುದು ಸರ್ವವಿದಿತ ಎಲ್ಲ ವಿಷಯಗಳಲ್ಲೂ ಅಧ್ಯಾಪಕರು ವಿದ್ಯಾರ್ಥಿಗಳ ವರ್ತನೆಯನ್ನು ನಿರಂತರವಾಗಿ ಮಾರ್ಗದರ್ಶನ ಮಾಡುತ್ತಿರುತ್ತಾರೆ. ಅವರ ವ್ಯಕ್ತಿತ್ವವನ್ನು ರೂಪಿಸುತ್ತಾರೆ. ಇಂತಹ ವಿಷಯಗಳಲ್ಲಿ ಲಿಂಗತ್ವ ವಿಚಾರವೂ ಒಂದು. ಲಿಂಗತ್ವ ವಿಚಾರಗಳು ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಪರಿಣಾಮಬೀರುತ್ತದೆ. ಹಾಗಾಗಿ ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದಂತೆ ಅತ್ಯಂತ ಜಾಗರೂಕವಾಗಿ ಅಧ್ಯಾಪಕರು ವಿದ್ಯಾರ್ಥಿಗಳೊಡನೆ ವ್ಯವಹರಿಸಬೇಕಾಗುತ್ತದೆ. ಅವರಿಗೆ ಮಾರ್ಗದರ್ಶನ ನೀಡಬೇಕಾಗುತ್ತದೆ. ಅಧ್ಯಾಪಕರ ನಡೆ, ನುಡಿಗಳಾದಿಯಾಗಿ ಎಲ್ಲ ಅಂಶಗಳೂ ವಿದ್ಯಾರ್ಥಿಗಳಿಗೆ ಒಂದು ರೀತಿಯ ಮಾದರಿಯಾಗಬೇಕಾಗುತ್ತದೆ. ಹಾಗಾಗಿ, ಲಿಂಗವಿಚಾರಗಳಿಗೆ ಸಂಬಂಧಿಸಿದಂತೆ ಅಧ್ಯಾಪಕರು

ಹೇಗೆ ವ್ಯವಹರಿಸಬೇಕು, ವಿವಿಧ ವಿಷಯಗಳನ್ನು ಬೋಧಿಸುವಾಗ ಯಾವ ರೀತಿಯ ಕಲಿಕೆಯ ಅನುಭವಗಳನ್ನು ಯೋಜಿಸಬೇಕು ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

## 2.3.3.1. ತರಗತಿ ವ್ಯವಹಾರಗಳಲ್ಲಿ ಲಿಂಗತ್ವ ವಿಚಾರಗಳು

ಸಾಂಪ್ರದಾಯಿಕ ಮನೋಭಾವವುಳ್ಳ ಅಧ್ಯಾಪಕರು ಲಿಂಗ ಸಮಾನತೆಯನ್ನು ಅಥವಾ ಲಿಂಗ ತಟಸ್ಥ ಸನ್ನಿವೇಶಗಳನ್ನು ರೂಪಿಸಲು ಅಗತ್ಯವಾದ ಮಾರ್ಪಾಡುಗಳ ಕುರಿತು ಹೆಚ್ಚು ಗಂಭೀರವಾಗಿ ಚಿಂತಿಸುವುದಿಲ್ಲ. ಅವರು ಸಮಾಜದಲ್ಲಿರುವ ಲಿಂಗ ಪಡಿಯಚ್ಚುಗಳನ್ನು ಲಿಂಗಪಾತ್ರಗಳನ್ನು ಹಾಗೆಯೇ ವರ್ಗಾಯಿಸಿಬಿಡುತ್ತಾರೆ. ಇದು ಸಾಮಾಜೀಕರಣದ ಒಂದು ಭಾಗ ಎಂದೂ ಅವರು ನಂಬುತ್ತಾರೆ. ಇಂತಹ ಅಧ್ಯಾಪಕರ ತರಗತಿ ವ್ಯವಹಾರಗಳು ಕೆಳಕಂಡಂತಿರುತ್ತವೆ:

**ಲಿಂಗಪಡಿಯಚ್ಚುಗಳು :** ಬಹಳ ಸಲ ತರಗತಿಯಲ್ಲಿ ಮಕ್ಕಳನ್ನು ಲಿಂಗಪಡಿಯಚ್ಚುಗಳಿಗನುಗುಣವಾಗಿ ರೂಪಿಸಲಾಗುತ್ತದೆ. ಹೆಣ್ಣುಮಕ್ಕಳು ಹೆಚ್ಚು ಮೌನವಾಗಿಯೂ ಸನ್ನಡತೆಯುಳ್ಳವರಾಗಿಯೂ ಹುಡುಗರು ಗಲಾಟೆ ಮಾಡುವವರೂ ತುಂಟರೂ ಅತಿ ಚಟುವಟಿಕೆಯುಳ್ಳವರೂ ಆಗಿರುತ್ತಾರೆ ಎಂದು ನಂಬುವುದಿದೆ. ಹೆಣ್ಣು ಮತ್ತು ಗಂಡುಮಕ್ಕಳಿಗೆ ನಿಗದಿಪಡಿಸುವ ಕೆಲಸಗಳೂ ಪಡಿಯಚ್ಚುಗಳಿಗನುಗುಣವಾಗಿಯೇ ಇರುತ್ತದೆ. ಹುಡುಗಿಯರು ಗುಡಿಸುವುದು, ಕಸ ಎಸೆಯುವುದು ಇವುಗಳನ್ನೂ ಹುಡುಗರು ಬೆಂಚು ಡೆಸ್ಕುಗಳಂತಹ ಭಾರವಾದ ವಸ್ತುಗಳನ್ನು ಆಚೀಚೆ ಸರಿಸುವಂತೆಯೂ ಹೇಳಲಾಗುತ್ತದೆ.

**ಬಳಸುವ ಭಾಷೆಯಲ್ಲಿಯೂ ಲಿಂಗಭೇದ :** ಅಧ್ಯಾಪಕರು ಮಾತನಾಡುವ ಭಾಷೆಯು ಪುಲ್ಲಿಂಗಾತ್ಮಕವಾಗಿರುತ್ತದೆ. ಉದಾಹರಣೆಗೆ ಮಾನವಲೋಕ, ಭಾತೃತ್ವ, ಅಧ್ಯಕ್ಷರು ಇತ್ಯಾದಿ. ಇದು ತಿಳಿದೋ ತಿಳಿಯದೆಯೋ ಲಿಂಗತ್ವವನ್ನು ಪ್ರೋತ್ಸಾಹಿಸುತ್ತದೆ. ಲಿಂಗ ತಟಸ್ಥ ಪದಗಳನ್ನು ಬಳಸಲು ಅವಕಾಶವಿರುವ ಸಂದರ್ಭಗಳಲ್ಲೂ ಹೆಚ್ಚಿನ ಶ್ರಮಪಡದೆ ಇವೇ ಪದಗಳನ್ನು ಬಳಸಲಾಗುತ್ತದೆ.

**ಅಂಗ ಭಾಷೆಯಲ್ಲಿ ಲಿಂಗ ಭೇದ :** ತರಗತಿಯಲ್ಲಿ ಅಧ್ಯಾಪಕರು ಗಮನವು ಹೆಚ್ಚಾಗಿ ಹುಡುಗರ ಕಡೆಗೇ ಇರುತ್ತದೆ. ಹುಡುಗರು ಹುಡುಗಿಯರಿಗಿಂತ ಹೆಚ್ಚು ತಂಟೆ ಮಾಡುತ್ತಾರೆ ಎಂಬ ಪಡಿಯಚ್ಚು ಇದಕ್ಕೆ ಕಾರಣ.

**ಲಿಂಗಸ್ನೇಹಿಯಲ್ಲದ ಆಸನ ವ್ಯವಸ್ಥೆ:** ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕವಾದ ಆಸನ ವ್ಯವಸ್ಥೆ ಇರುತ್ತದೆ. ಇದು ಅಧ್ಯಾಪಕರ ಗಮನವನ್ನ ಇಬ್ಭಾಗ ಮಾಡಿ ಹುಡುಗರ ಕಡೆಗೆ ಹೆಚ್ಚು ಗಮನಕೊಡುವಂತೆ ಮಾಡುತ್ತದೆ.

**ಶಾಲೆಯ ವಿವಿಧ ವಿಷಯಗಳ ಕುರಿತು ವ್ಯವಹರಿಸುವಾಗ ಲಿಂಗ ಪಡಿಯಚ್ಚುಗಳು:** ಹುಡುಗರು ಗಣಿತ ವಿಜ್ಞಾನ ಇತ್ಯಾದಿ ವಿಷಯಗಳಲ್ಲಿ ಚುರುಕಾಗಿರುತ್ತಾರೆ, ಹುಡುಗಿಯರು ಭಾಷಾವಿಷಯದಲ್ಲಿ ಚುರುಕಾಗಿರುತ್ತಾರೆ ಎಂಬ ಭ್ರಮೆ ಲಿಂಗ ಪಡಿಯಚ್ಚುಗಳಿಗೆ ಅವಕಾಶ ಮಾಡಿಕೊಡುತ್ತದೆ. ಇದರಿಂದಾಗಿ ಹುಡುಗರಿಗೆ ಮತ್ತು ಹುಡುಗಿಯರಿಗೆ ಆಯಾ ವಿಷಯಗಳಲ್ಲಿ ಹೆಚ್ಚಿನ ಅವಕಾಶಗಳನ್ನೊದಗಿಸಿಕೊಡುವ ಸಾಧ್ಯತೆಗಳಿರುತ್ತವೆ.

**ಮಕ್ಕಳ ಸಂಭೋದನೆಯಲ್ಲಿ ಲಿಂಗಪಡಿಯಚ್ಚುಗಳು:** ಸುಂದರ, ಬೆಡಗು, ವೈಯಾರ, ವಿನೀತೆ ಇತ್ಯಾದಿ ಪದಗಳನ್ನು ಹುಡುಗಿಯರಿಗೆ ಮತ್ತು ಬಲಶಾಲಿ, ಗಟ್ಟಿಗ, ಸ್ಫುರದ್ರೂಪಿ ಇತ್ಯಾದಿ ಪದಗಳನ್ನು ಹುಡುಗರಿಗೆ ಬಳಸುವುದುಂಟು.

ಇದಕ್ಕೆ ವಿರುದ್ಧವಾಗಿ ಲಿಂಗ ಸಂವೇದನಾಶೀಲತೆ, ಲಿಂಗ ಸಮಾನತೆಯ ಮನೋಭಾವವಿರುವ ಅಧ್ಯಾಪಕರ ತರಗತಿ ವ್ಯವಹಾರಗಳು ಬೇರೆಯೇ ಆಗಿರುತ್ತವೆ. ಲಿಂಗವಿಚಾರಗಳಿಗೆ ಸಂಬಂಧಿಸಿದಂತೆ ಅವರ ತರಗತಿಗಳ ಸ್ವರೂಪ ಕೆಳಕಂಡಂತಿರುತ್ತವೆ.

**ಲಿಂಗ ಸಮಾನ  ತರಗತಿ ವ್ಯವಹಾರಗಳು**

**ಲಿಂಗಸಮಾನ ನಿಯಮಗಳನ್ನು ರೂಪಿಸುವಿಕೆ:** ಲಿಂಗ ಸಮಾನತೆಯ ಸನ್ನಿವೇಶವನ್ನು ರೂಪಿಸಲು ಅಧ್ಯಾಪಕರು ಮೊದಲಿಗೆ ಕೆಲವು ನಿಯಮಗಳನ್ನು ರೂಪಿಸಬೇಕಾಗುತ್ತದೆ. ಇದಕ್ಕೆ ಉತ್ತಮ ಮಾರ್ಗ ಎಂದರೆ ಮಕ್ಕಳೇ ಈ ನಿಯಮಗಳನ್ನು ರೂಪಿಸುವಂತೆ ಮಾಡುವುದು. ಸಮಾನತೆಯ ಆಧಾರದ ಮೇಲೆ ಮಾನವ ಗೌರವವನ್ನು ಪೋಷಿಸುವ ನಮ್ಮ ತರಗತಿಗಳ ನಿಯಮಗಳು ಹೇಗಿರಬೇಕು ಎಂಬುದನ್ನು ಸೂಕ್ತ ಮಾರ್ಗದರ್ಶನದ ಮೂಲಕ ಮಕ್ಕಳಿಂದಲೇ ಹೊರತರಬೇಕು. ಇದರಿಂದಾಗಿ ಈ ನಿಯಮಗಳು ವಿದ್ಯಾರ್ಥಿಗಳೇ ರೂಪಿಸಿದವುಗಳಾಗಿದ್ದು ಎಲ್ಲರೂ ಇದಕ್ಕೆ ಬದ್ಧರಾಗಬೇಕಾದ ಅನಿವಾರ್ಯತೆಯನ್ನು ಉಂಟುಮಾಡುತ್ತದೆ. ಈ ನಿಯಮಗಳು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಬ್ಬರ ಘನತೆಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಿದ ನಿಯಮಗಳಾಗಿರಬೇಕು.

**ಸಮಾನ ಭಾಗವಹಿಕೆಯನ್ನು ಪೋಷಿಸುವ ಆಸನ ವ್ಯವಸ್ಥೆ:** ಕೆಲವು ಮಕ್ಕಳು ತರಗತಿ ಚಟುವಟಿಕೆಗಳಲ್ಲಿ ಸಾಕಷ್ಟು ಭಾಗವಹಿಸುತ್ತಿಲ್ಲ ಎಂದು ಕಂಡುಬಂದರೆ ಅವರು ಕುಳಿತುಕೊಳ್ಳುವ ಸ್ಥಳ ಬದಲಾಯಿಸಬೇಕು. ಅಂತಹ ಸಮಯದಲ್ಲಿ ಅಧ್ಯಾಪಕರು ಸಾಮಾನ್ಯವಾಗಿ ಮಕ್ಕಳನ್ನು ತಮಗೆ ಹತ್ತಿರವಾಗಿಯೇ ಕೂರಿಸುವುದುಂಟು. ಈ ಅವಕಾಶ ಎಲ್ಲರಿಗೂ ಸಿಗುವಂತೆ ತರಗತಿಯಲ್ಲಿ ಆಸನ ಸ್ಥಳಗಳನ್ನು ಬದಲಾಯಿಸುತ್ತಿರಬೇಕು.

**ಗುಂಪುಕಾರ್ಯಗಳಿಗೆ ಪ್ರಾಮುಖ್ಯತೆ:** ಸಮರ್ಪಕ ಲಿಂಗಸಮಾನ ಮನೋಭಾವವನ್ನು ಬೆಳೆಸಬೇಕಾದರೆ ಇದು ಅತ್ಯಂತ ಅವಶ್ಯಕ. ವಿದ್ಯಾರ್ಥಿಗಳನ್ನು ಚಿಕ್ಕ ಚಿಕ್ಕ ಗುಂಪುಗಳಾಗಿ ವಿಂಗಡಿಸಿ, ಲಿಂಗಭೇದವಿಲ್ಲದೆ ಎಲ್ಲರೂ ಈ ಗುಂಪುಗಳಲ್ಲ ಸಮಾನವಾಗಿ ಭಾಗವಹಿಸುವಂತೆ ನೋಡಿಕೊಳ್ಳಬೇಕು.

**ಸಮಾನ ಗಮನ:** ಸಂಶೋಧನೆಗಳ ಪ್ರಕಾರ ಸಹ ಶಿಕ್ಷಣ ತರಗತಿಗಳಲ್ಲಿ ಅಧ್ಯಾಪಕರು ಹೆಚ್ಚಾಗಿ ಹುಡುಗರನ್ನೇ ಪ್ರಶ್ನೆ ಕೇಳುತ್ತಾರೆ. ಹಾಗೆ ಮಾಡದೆ, ಪ್ರಶ್ನೆಗಳನ್ನು ಹುಡುಗ ಹುಡುಗಿಯರಿಗೆ ಸಮಾನ ಪ್ರಮಾಣದಲ್ಲಿ ಕೇಳಬೇಕು. ಈ ಸಮತೋಲನವನ್ನು ಕಾಪಾಡಿಕೊಳ್ಳಬೇಕು.

**ಉತ್ತರಿಸಲು ಅಗತ್ಯವಾದಷ್ಟು ಸಮಯ ನೀಡಿಕೆ:** ಕೆಲವು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಕೇಳಿದ ಪ್ರಶ್ನೆಗೆ ಉತ್ತರಿಸಲು ಸ್ವಲ್ಪ ಸಮಯ ಹಿಡಿಯುತ್ತದೆ. ಹಾಗಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಲು ಸಾಕಷ್ಟು ಸಮಯ ಕೊಡಬೇಕು. ಈ ರೀತಿ ಹೆಚ್ಚು ಸಮಯ ಕೊಟ್ಟರೆ ಭಾಗವಹಿಕೆ ಹೆಚ್ಚಾಗುತ್ತದೆ ಎಂದು ಸಂಶೋಧನೆಗಳು ತೋರಿಸಿಕೊಟ್ಟಿವೆ.

**ಲಿಂಗ ತಟಸ್ಥ ಭಾಷೆಯ ಬಳಕೆ:** ಕೆಲವೊಮ್ಮೆ ಒಟ್ಟು ತರಗತಿಯ ಎಲ್ಲರನ್ನೂ ಸಂಬೋಧಿಸುವಾಗ, ಹುಡುಗರು, ಹುಡುಗಿಯರು ಎಂದು ಹೇಳುವ ಬದಲಿಗೆ ಎಲ್ಲರೂ ಎಂಬ ಪದ ಬಳಸಬಹುದು. ನೀವೆಲ್ಲರೂ, ಎಲ್ಲರೂ, ಇತ್ಯಾದಿ ಪದಗಳ ಬಳಕೆ ಒಳ್ಳೆಯದು.

**ಅಂಗ ಭಾಷೆ:** ತರಗತಿಯಲ್ಲಿ ಅಧ್ಯಾಪಕರು ಹುಡುಗರ ಜೊತೆ ಮತ್ತು ಹುಡುಗಿಯರ ಜೊತೆ ಮಾತನಾಡುವಾಗ ಬಳಸುವ ಅಂಗ ಭಾಷೆ ಬೇರೆಬೇರೆಯಾಗಿರುತ್ತದೆ ಎಂದು ಗಮನಿಸಲಾಗಿದೆ. ಹಾಗೆ ಮಾಡದೆ ಎರಡೂ ಗುಂಪಿನವರನ್ನು ಒಂದೇ ರೀತಿಯಲ್ಲಿ ಮಾತನಾಡಿಸುವುದು, ಗಮನಿಸುವುದು ಒಳ್ಳೆಯದು.

**ಶಿಸ್ತು ಕಾಪಾಡುವಿಕೆ:** ತರಗತಿಯಲ್ಲಿ ಘರ್ಷಣೆಗಳಾಗುವಾಗ ಅವು ಲಿಂಗ ಆಧಾರಿತವಾಗಿಲ್ಲವೆಂಬುದನ್ನು ಎಚ್ಚರಿಕೆಯಿಂದ ಗಮನಿಸುತ್ತಿರಬೇಕು. ಹಾಗೇನಾದರೂ ಆದರೆ ತರಗತಿಯಲ್ಲಿ ಆ ಗುಂಪಿನ ಭಾಗವಹಿಕೆ ಕಡಿಮೆಯಾಗಿಬಿಡುತ್ತದೆ.

ಅದನ್ನು ಸರಿಯಾಗಿ ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1**

ತರಗತಿಯಲ್ಲಿ ಲಿಂಗ ತಟಸ್ಥ ಸನ್ನಿವೇಶವನ್ನು ಮಾಪನಮಾಡುವ ಮಾಪನಿಯನ್ನು ಕೆಳಗೆ ಕೊಡಲಾಗಿದೆ. ಅದನ್ನು ಬಳಸಿಕೊಂಡು ಇಬ್ಬರು ಅಧ್ಯಾಪಕರ ತರಗತಿಗಳನ್ನು ವೀಕ್ಷಿಸಿರಿ. ಅವರು ಎಷ್ಟರಮಟ್ಟಿಗೆ ಲಿಂಗ ತಟಸ್ಥ ಸನ್ನಿವೇಶವನ್ನು ರೂಪಿಸಲು ಪ್ರಯತ್ನಿಸುತ್ತಿದ್ದಾರೆ ಎಂಬುದರ ಕುರಿತು ಅವರಿಗೆ ಕ್ರಿಯಾಶೀಲವಾದ ಹಿಮ್ಮಾಹಿತಿ ಕೊಡಿ.

**ಸೂಚನೆ:** ತರಗತಿಯ ಚಟುವಟಿಕೆಗಳನ್ನು ವೀಕ್ಷಿಸಿ. ಕೊಟ್ಟಿರುವ ವರ್ತನೆಗಳು ಕಂಡುಬಂದಲ್ಲಿ ಮೊದಲನೇ ಕಾಲಂನಲ್ಲಿ '✓' ಗುರುತನ್ನೂ ಕಾಣಬರದಿದ್ದರೆ ಎರಡನೇ ಕಾಲಂನಲ್ಲಿ '✓' ಗುರುತನ್ನೂ ಹಾಕಿರಿ.

| ಕ್ರಮ ಸಂಖ್ಯೆ | ಅಧ್ಯಾಪಕರ ವರ್ತನೆಗಳು | ಹೌದು | ಇಲ್ಲ |
|---|---|---|---|
| 1 | ಹುಡುಗಿಯರಿಗೆ ಮತ್ತು ಹುಡುಗರಿಗೆ ಬೇರೆ ಬೇರೆ ಕೆಲಸಗಳನ್ನು ಕೊಡಲಾಗುತ್ತದೆ | | |
| 2 | ಹುಡುಗರಿಗೆ/ ಹುಡುಗಿಯರಿಗೆ ಹೆಚ್ಚು ಗಮನ ಕೊಡಲಾಗುತ್ತದೆ | | |
| 3 | ಹುಡುಗರಿಗೆ/ ಹುಡುಗಿಯರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಇದೆ | | |
| 4 | ಕೆಲವು ಭ್ರಮೆಗಳನ್ನು ವರ್ಗಾಯಿಸಲಾಗುತ್ತದೆ | | |
| 5 | ವಿಚಾರ/ ಅಭಿಪ್ರಾಯಗಳನ್ನು ಸೂಚಿಸಲು ತರಗತಿಯಲ್ಲಿ ಎಲ್ಲರನ್ನೂ ಪ್ರೋತ್ಸಾಹಿಸಲಾಗುತ್ತದೆ. | | |
| 6 | ತರಗತಿಯ ನಿಯಮಗಳನ್ನು ಮಕ್ಕಳೇ ರೂಪಿಸಿದ್ದಾರೆ. | | |
| 7 | ತರಗತಿಯ ನಿಯಮಗಳು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಬ್ಬರಲ್ಲೂ ಗೌರವವನ್ನು ಮೂಡಿಸುತ್ತದೆ. | | |
| 8 | ಹುಡುಗರು ಮತ್ತು ಹುಡುಗಿಯರಿಬ್ಬರೂ ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಚಟುವಟಿಕೆಗಳನ್ನು ರೂಪಿಸಲಾಗುತ್ತದೆ. | | |
| 9 | ಅಧ್ಯಾಪಕರು ಲಿಂಗ ತಟಸ್ಥ ಭಾಷೆಯನ್ನು ಬಳಸುತ್ತಾರೆ | | |
| 10 | ಅಧ್ಯಾಪಕರು ಎಲ್ಲರನ್ನೂ ಪ್ರಶಂಸೆ ಮಾಡುತ್ತಾರೆ | | |
| 11 | ಅಧ್ಯಾಪಕರ ಗಮನ ಎಲ್ಲರ ಮೇಲೂ ಇರುತ್ತದೆ. | | |

1 ರಿಂದ 4ರವರೆಗೆ ಮೊದಲನೇ ಕಾಲಂನಲ್ಲಿ '✓' ಗುರುತು ಹಾಕಿದ್ದರೆ '0' ಮಾರ್ಕು ಕೊಡಿ. ಎರಡನೇ ಕಾಲಂನಲ್ಲಿ ಗುರುತು ಹಾಕಿದ್ದರೆ ಮಾರ್ಕು ಕೊಡಿ.

5 ರಿಂದ 11ರವರೆಗೆ ಮೊದಲನೇ ಕಾಲಂನಲ್ಲಿ '✓' ಗುರುತು ಹಾಕಿದ್ದರೆ '1' ಮಾರ್ಕು ಕೊಡಿ. ಎರಡನೇ ಕಾಲಂನಲ್ಲಿ ಗುರುತು ಹಾಕಿದ್ದರೆ 10' ಮಾರ್ಕು ಕೊಡಿ.

## 2.3.3.2. ಲಿಂಗ ಸಮಾನತೆಗಾಗಿ ತರಗತಿಯಲ್ಲಿ ವಿಷಯ ನಿರ್ದಿಷ್ಟ ವ್ಯವಹಾರಗಳು/ವರ್ತನೆಗಳು

**ವಿಜ್ಞಾನ ವಿಷಯದ ಮೂಲಕ ಲಿಂಗ ಸಮಾನತೆ**

ವಿಜ್ಞಾನವು ಪ್ರಾಯೋಗಿಕ ಮತ್ತು ಶೋಧನಾ ಮಾರ್ಗದ ಮೇಲೆ ಅವಲಂಬಿತವಾದುದು. ಈ ಹಿನ್ನೆಲೆಯಲ್ಲಿ ಸೆಕೆಂಡರಿ ಹಂತದ ನಂತರ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಶೋಧನಾ ಮನೋಭಾವ ಉದ್ದೀಪನಗೊಳ್ಳುತ್ತದೆ ಎಂದು ಆಶಿಸಲಾಗುತ್ತದೆ. ಅವರು ಅವರ ಪರಿಸರದ ಸ್ವಾಭಾವಿಕ ಸನ್ನಿವೇಶವನನ್ನು ತಿಳಿಯಲು ಕುತೂಹಲ ಹೊಂದಿದವರಾಗಿ ಅನ್ವೇಷಣೆ, ಅನ್ವಯಗಳೊಂದಿಗಿನ ಅವರ ಪ್ರಯಾಣವನ್ನು ಮುನ್ನಡೆಸುತ್ತಾರೆ. ವಿಜ್ಞಾನದ ನೇರ ಉದ್ದೇಶ ಲಿಂಗ ಸಮಾನತೆಯನ್ನು ಸ್ಥಾಪಿಸುವುದಲ್ಲವಾದರೂ ಈ ದಿಶೆಯಲ್ಲಿ ವಿಜ್ಞಾನ ತರಗತಿಗಳಲ್ಲಿ ಮಾಡಬಹುದಾದುದು ಬಹಳಷ್ಟಿದೆ.ಅವುಗಳನ್ನು ವಿಚಾರಮಾಡೋಣ.

- ವಿಜ್ಞಾನಕ್ಕೆ ಅವಕಾಶವಿರುವೆಡೆಯಲ್ಲೆಲ್ಲಾ ಮಹಿಳೆಯರ ಕೊಡುಗೆಯನ್ನು ಎತ್ತಿ ಹಿಡಿಯಬೇಕು;
- ಎಲ್ಲ ಪ್ರಯೋಗಗಳಲ್ಲೂ ಹುಡುಗರು ಮತ್ತು ಹುಡುಗಿಯರಿಬ್ಬರೂ ಭಾಗವಹಿಸುವಂತೆ ನೋಡಿಕೊಳ್ಳಬೇಕು;
- ಎಲ್ಲ ಯೋಜನೆಗಳಲ್ಲೂ ಹುಡುಗರು ಮತ್ತು ಹುಡುಗಿಯರಿಬ್ಬರೂ ಕೆಲಸಮಾಡುವಂತೆ ಯೋಜಿಸಬೇಕು;
- ಜೀವನದ ಮೂಲಭೂತ ಘಟಕ, ಪ್ರಾಕೃತಿಕ ಸಂಪನ್ಮೂಲಗಳು, ಆಹಾರ ಸಂಪನ್ಮೂಲಗಳ ಉತ್ತಮಿಕೆ, ಬದುಕಿನ ಪ್ರಕ್ರಿಯೆಗಳು, ಅನುವಂಶೀಯತೆ ಮತ್ತು ವಿಕಾಸ ಹಾಗೂ ನಮ್ಮ ಪರಿಸರ ಇತ್ಯಾದಿ ಪಾಠಗಳಲ್ಲಿ ಲಿಂಗ ಅಂತರ್ಗತ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬೇಕು.
- ಆಹಾರ ಸಂಪನ್ಮೂಲಗಳು ಎಂಬ ಪಾಠವಿಷಯಗಳ ಚರ್ಚೆಯಲ್ಲಿ ವಿವಿಧ ರೀತಿಯ ಬೆಳೆಗಳನ್ನು ಬೆಳೆಯುವಲ್ಲಿ ಪುರುಷರು ಮತ್ತು ಸ್ತ್ರೀಯರಿಬ್ಬರ ಪಾತ್ರವನ್ನು ತಿಳಿಸಬಹುದು;
- ಪ್ರಾಣಿ ಸಾಕಣೆಯ ಪಾಠದಲ್ಲಿ ಪ್ರಾಣಿಗಳಿಗೆ ಆಹಾರ ಉಣಿಸುವಿಕೆ, ಕಾಯಿಲೆ ನಿಯಂತ್ರಣ ಇತ್ಯಾದಿ ವಿಷಯಗಳಲ್ಲಿ ಮಹಿಳೆಯರ ಪಾತ್ರವನ್ನು ವಿವರಿಸಬಹುದು;
- ರಾಸಾಯನಿಕ ಕ್ರಿಯೆಗಳನ್ನು ಕುರಿತ ಪಾಠದಲ್ಲಿ ಮನೆಯಲ್ಲಿ ಮಾಡುವ ಉಪ್ಪಿನಕಾಯಿ, ಜ್ಯಾಂ ಇತ್ಯಾದಿಗಳನ್ನು ವಿವರಿಸುತ್ತಾ ಪುರುಷ ಮತ್ತು ಸ್ತ್ರೀಯರು ಒಟ್ಟಾಗಿ ಕೈಗೊಳ್ಳುವ ಚಟುವಟಿಕೆಗಳ ಕಡೆಗೆ ಮಕ್ಕಳ ಗಮನ ಹರಿಸಬಹುದು.

**ಗಣಿತ**

ಸೆಕೆಂಡರಿ ಹಂತದ ಗಣಿತ ವಿಷಯದ ತರಗತಿಗಳೂ ವಿವೇಚನೆ ಮತ್ತು ತಾರ್ಕಿಕ ಚಿಂತನೆಗಳ ಮೂಲಕ ಮಕ್ಕಳಲ್ಲಿ ಗಣಿತಕ್ಕೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಮೂಡಿಸಬೇಕು. ಗಣಿತ ಬೋಧನೆಯನ್ನು ಅವರ ದಿನನಿತ್ಯದ ಬದುಕಿನೊಂದಿಗೆ ಸಂಯೋಜಿಸಬೇಕು.

**ಗಣಿತದ ಮೂಲಕ ಲಿಂಗಸಮಾನತೆ :**

- ಮಹಿಳಾ ಗಣಿತಜ್ಞರ ಹೆಸರುಗಳನ್ನು ಅವರ ಕುರಿತ ವಿವರಗಳನ್ನು ನೀಡುವುದು;
- ಅಂಕಗಣಿತದ ಲೆಕ್ಕಗಳನ್ನು ಕೊಡುವಾಗ ಹೆಂಗಸರು ಮತ್ತು ಗಂಡಸರಿಗೆ ತಾರತಮ್ಯವಿಲ್ಲದಂತೆ ಗಮನಹರಿಸುವುದು;
- ಸಂಖ್ಯಾಶಾಸ್ತ್ರದ ಸಮಸ್ಯೆಗಳನ್ನು ಕೊಡುವಾಗ ಮಕ್ಕಳ ದಾಖಲಾತಿ, ಶಾಲೆ ಬಿಡುವಿಕೆ, ಭಾರತ ಮತ್ತು ಇತರ ದೇಶಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಅನುಪಾತದಲ್ಲಿ ಇಳಿಕೆ ಇತ್ಯಾದಿ ಅಂಶಗಳನ್ನು ಕುರಿತ ದತ್ತಾಂಶಗಳನ್ನು ನೀಡುವುದು.

**ಸಮಾಜ ವಿಜ್ಞಾನ**

ಲಿಂಗ ಸಮಾನತೆಯನ್ನು ಬೆಳೆಸಲು ಸಮಾಜ ವಿಜ್ಞಾನ ತರಗತಿಗಳಲ್ಲಿ ಅತಿ ಹೆಚ್ಚು ಅವಕಾಶಗಳಿವೆ. ಇದು ವಿದ್ಯಾರ್ಥಿಗಳ ಹತ್ತಿರದ ಪರಿಸರವನ್ನು ಅರ್ಥಮಾಡಿಕೊಳ್ಳಲು ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತದೆ. ಇತಿಹಾಸ, ಪೌರನೀತಿ, ಭೂಗೋಳ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳನ್ನೊಳಗೊಂಡು ಈ ವಿಷಯವು ತನ್ನೆಲ್ಲ ವಿಷಯಗಳಲ್ಲಿ ಲಿಂಗ ಸಮಾನತೆಯನ್ನು ಅವಿನಾಭಾವವಾಗಿ ಬೆಸೆಯಬಲ್ಲ ಅವಕಾಶವನ್ನು ಹೊಂದಿದೆ. ಲಿಂಗ ಸಮಾನತೆಯ ವಿಷಯವನ್ನು ಈ ವಿಷಯಗಳಲ್ಲಿ ನೇರವಾಗಿಯೂ ಪರೋಕ್ಷವಾಗಿಯೂ ಚರ್ಚಿಸಬಹುದಾಗಿದೆ. ಇದು ವ್ಯತ್ಯಾಸ ಮತ್ತು ವೈವಿಧ್ಯತೆಗಳನ್ನು ಅವುಗಳ ನಡುವಿನ ಅಂತರವನ್ನೂ ವೈವಿಧ್ಯತೆಯನ್ನು ಏಕೆ ಮತ್ತು ಹೇಗೆ ಉಳಿಸಿಕೊಳ್ಳಬೇಕು ಎಂಬುದನ್ನೂ ದೃಷ್ಟಾಂತಗಳೊಂದಿಗೆ ತಿಳಿಸಲು ಅವಕಾಶಗಳನ್ನು ಒದಗಿಸುತ್ತದೆ. ಸಮಾಜದ ವಿವಿಧ ಸಮಸ್ಯೆಗಳನ್ನು ಗಂಭೀರವಾಗಿ ಪರಿಚಯಿಸಿ, ಅದರ ಪರಿಣಾಮಗಳನ್ನು ಮನಮುಟ್ಟಿಸಿ ಈ ನಿಟ್ಟಿನಲ್ಲಿ ಭಾರತದ ಪ್ರತಿಯೊಂದು ಪ್ರಜೆಯ ಕರ್ತವ್ಯವನ್ನು ಮನಗಾಣಿಸುವುದರ ಮೂಲಕ ಅಗತ್ಯವಾದ ಸಾಮಾಜೀಕರಣವನ್ನೂ ಈ ವಿಷಯಗಳು ಸಾಧ್ಯವಾಗಿಸುತ್ತವೆ.

**ಸಮಾಜ ವಿಜ್ಞಾನದ ತರಗತಿಗಳಲ್ಲಿ ಲಿಂಗ ಸಮಾನತೆಯನ್ನು ಸಾಧ್ಯವಾಗಿಸಲು ಚಟುವಟಿಕೆಗಳು:**

- ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರವನ್ನು ಕುರಿತ ಚರ್ಚೆ
- ಲಿಂಗ ಸಮಾನತೆಯ ಹಿನ್ನೆಲೆಯಲ್ಲಿ ಪಠ್ಯಪುಸ್ತಕದ ವಿಮರ್ಶೆ
- ಸಾಲು ಮರದ ತಿಮ್ಮಕ್ಕ, ಇಂದಿರಾ ಗಾಂಧಿ ಇತ್ಯಾದಿ ವಿಶೇಷ ಸಾಧನೆ ಮಾಡಿದ ಮಹಿಳೆಯರ ಕುರಿತ ಜೀವನಚರಿತ್ರೆ (ಸಣ್ಣ ಪ್ರಮಾಣದಲ್ಲಿ, ಮಕ್ಕಳಿಗೆ ಬಂದಂತೆ) ಬರೆಯಲು ಪ್ರೋತ್ಸಾಹ
- ಸಾಮಾಜಿಕ ವಿಚಾರಗಳನ್ನೂ ಪೂರ್ಣದೃಷ್ಟಿಕೋನದಲ್ಲಿ(ಮಹಿಳೆಯರು ಮತ್ತು ಪುರುಷರನ್ನು ಒಳಗೊಂಡಂತೆ) ಆಲೋಚಿಸಲು ಮಾರ್ಗದರ್ಶನ
- ನಮ್ಮ ಆರ್ಥಿಕತೆಯ ಕೃಷಿ, ಕೈಗಾರಿಕೆ ಹಾಗೂ ಸೇವಾ ವಿಭಾಗಗಳಲ್ಲಿ ಪುರುಷರ ಮತ್ತು ಸ್ತ್ರೀಯರ ಚಟುವಟಿಕೆಗಳು ಮತ್ತು ಆದಾಯವನ್ನು ಕುರಿತ ಚರ್ಚೆ
- ಭಾರತದ ಜನಸಂಖ್ಯೆ, ಸಾಕ್ಷರತೆ, ಲಿಂಗ ಅನುಪಾತ, ಶಾಲಾ ದಾಖಲಾತಿ ಮತ್ತು ಶಾಲೆ ಬಿಡುವಿಕೆ– ಈ ಕುರಿತ ವಿಶೇಷ ಚರ್ಚೆ ಮತ್ತು ಸಂವಾದ
- ಲಿಂಗಸಮಾನತೆಯ ದೃಷ್ಟಿಯಿಂದ ಕಳೆದೆರಡು ವರ್ಷಗಳ ಭಾರತದ ಬಜೆಟ್ ವಿಶ್ಲೇಷಣೆ
- ಕಲೆ, ವಾಸ್ತುಶಿಲ್ಪ, ಲಲಿತಕಲೆ ಈ ಕ್ಷೇತ್ರಗಳಲ್ಲ ಮಹಿಳೆಯರ ಮತ್ತು ಪುರುಷರ ಕೊಡುಗೆಯನ್ನು ಕುರಿತ ಪ್ರಾಜೆಕ್ಟ್ ಮಾಡಿಸುವುದರ ಮೂಲಕ ಈ ಕ್ಷೇತ್ರಗಳಲ್ಲಿ ಮಹಿಳೆಯರ ಮತ್ತು ಪುರುಷರ ಪಾತ್ರವನ್ನು ಸ್ಪಷ್ಟಪಡಿಸುವುದು
- ಭಾರತೀಯ ಕುಟುಂಬಗಳಲ್ಲಿ ಪುರುಷರ ಮತ್ತು ಸ್ತ್ರೀಯರ ಪಾತ್ರದ ಕುರಿತ ಚರ್ಚೆ
- ಈಚಿನ ವರ್ಷಗಳಲ್ಲಿ ಮಹಿಳಾ ಸಾಧಕರ ಕುರಿತ ದತ್ತಾಂಶ ಸಂಗ್ರಹಣೆ ಮತ್ತು ಅವರ ಸಾಧನೆಗೆ ಪೂರಕವಾದ ಮತ್ತು ತೊಡಕಾದ ಅಂಶಗಳನ್ನು ದಾಖಲಿಸುವಿಕೆ
- ಮಹಿಳಾ ಪರಿಸರತಜ್ಞರ ಜೀವನಚರಿತ್ರೆಯ ನಿರೂಪಣೆ
- ಭಾರತದ ರಾಜಕೀಯದಲ್ಲಿ ಮಹಿಳೆಯರ ಮತ್ತು ಪುರುಷರ ಭಾಗವಹಿಕೆಯನ್ನು ಕುರಿತ ದತ್ತಾಂಶ ಸಂಗ್ರಹಣೆ, ನಿರೂಪಣೆ ಮತ್ತು ಲಿಂಗಸಮಾನತೆಯ ದೃಷ್ಟಿಯಿಂದ ಅದರ ಕುರಿತ ಚರ್ಚೆ
- ಭಾರತದ ಸನ್ನಿವೇಶದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಅಡ್ಡಿಯಾಗಿರುವ ಅಂಶಗಳ ಕುರಿತ ಚರ್ಚೆ

**ಭಾಷಾ ಪಾಠಗಳು**

**ಭಾಷಾ ಪಾಠಗಳ ಮೂಲಕ ಲಿಂಗಸಮಾನತೆಗೆ ಚಟುವಟಿಕೆಗಳು**

ಭಾಷೆ ಎಂಬುದು ಸಂವಹನ ಮಾಧ್ಯಮ ಮಾತ್ರವಲ್ಲ; ಅನೇಕ ಜ್ಞಾನಶಿಸ್ತುಗಳ ವಿಷಯಗಳ ಅರಿವನ್ನು ಮುಟ್ಟಿಸುವ ಮಾಧ್ಯಮವೂ ಹೌದು. ಅದು ನೈಜತೆಯನ್ನು ನಿರೂಪಿಸುವುದಲ್ಲದೆ ಅನನ್ಯತೆಯ ಅರಿವು ಮೂಡಿಸುತ್ತದೆ. ಭಾಷೆಯ ಕಲಿಕೆ ಶೂನ್ಯದಲ್ಲಾಗುವಂತಹುದಲ್ಲ. ಅದಕ್ಕೆ ವಿಷಯಗಳ ಮಾಧ್ಯಮ ಅಗತ್ಯವಿದೆ. ಭಾಷಾ ಪಾಠಗಳು ವಿವಿಧ ಕೌಶಲಗಳನ್ನು ಕಲಿಸುವಾಗ ಲಿಂಗ ಸಮಾನತೆಯ ಮೂಲ ಅಂಶಗಳನ್ನು ಮನಗಾಣಿಸುವ ಅವಕಾಶಗಳು ಹೇರಳವಾಗಿವೆ. ಭಾಷೆ ಮೂಲಭೂತವಾಗಿ ಅನುಭವಗಳನ್ನು ಅಭಿಪ್ರಾಯಗಳನ್ನು ಅನಿಸಿಕೆಗಳನ್ನು ಸಂವಹನ ಮಾಡುವುದರಿಂದ ಮಕ್ಕಳು ಲಿಂಗವಿಚಾರಗಳಿಗೆ ಸಂಬಂಧಿಸಿದಂತೆಯೂ ಈ ಎಲ್ಲ ಪ್ರಕ್ರಿಯೆಗಳನ್ನು ನಡೆಸಬಹುದು. ಸಾಹಿತ್ಯವನ್ನು ಅಭ್ಯಾಸಮಾಡುವಾಗ, ಪ್ರಬಂಧವನ್ನು ಬರೆಯುವಾಗ, ಗಾದೆಗಳನ್ನು ವಿಸ್ತರಿಸುವಾಗ ಇತ್ಯಾದಿ ಎಲ್ಲ ಸನ್ನಿವೇಶಗಳಲ್ಲೂ ಲಿಂಗವಿಚಾರಗಳ ವಿಮರ್ಶೆ ಸಾಧ್ಯವಿದೆ. ಈ ನಿಟ್ಟಿನಲ್ಲಿ ಕೈಗೊಳ್ಳಬಹುದಾದ ನಿರ್ದಿಷ್ಟ ಚಟುವಟಿಕೆಗಳು

- ಭಾಷೆ ಮತ್ತು ಸಾಹಿತ್ಯದಲ್ಲಿ ಕಾಣಿಕೆ ನೀಡಿರುವ ಪುರುಷರು ಮತ್ತು ಮಹಿಳೆಯರ ಕುರಿತ ಪ್ರಾಜೆಕ್ಟ್ ಮಾಡಿಸುವುದು;
- ಪ್ರಸಿದ್ಧ ಪುರುಷರ ಮತ್ತು ಮಹಿಳೆಯರು ಉಕ್ತಿಗಳ ಸಂಗ್ರಹ ಮತ್ತು ಚರ್ಚೆ
- ಲಿಂಗ ವಿಚಾರಗಳಿಗೆ ಸಂಬಂಧಿಸಿದ ಕವನಗಳ ಸಂಗ್ರಹ ಮತ್ತು ಪ್ರಸ್ತುತಿ
- ಲಿಂಗ ತಟಸ್ಥ ಪದ/ಭಾಷೆಯ ಬಳಕೆ
- ಲಿಂಗ ಸಮಾನತೆಯ ದೃಷ್ಟಿಯಿಂದ ಪಠ್ಯಗಳ ವಿಮರ್ಶೆ
- ಲಿಂಗ ವಿಚಾರಗಳನ್ನು ಕುರಿತ ಪ್ರಬಂಧ, ಗಾದೆ, ಇತ್ಯಾದಿಗಳ ವಿಮರ್ಶೆ
- ಸ್ವಂತ ಬರಹಕ್ಕೆ ಪ್ರೋತ್ಸಾಹ
- ಲಿಂಗ ವಿಚಾರಾಧರಿತ ಆಶುಭಾಷಣ, ಭಾಷಣ ಸ್ಪರ್ಧೆಗಳು

## ನಿಮ್ಮ ಪ್ರಗತಿಯನ್ನು ಗಮನಿಸಿಕೊಳ್ಳಿ –2

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಲಿಂಗ ಸಮಾನ ಪರಿಸರವನ್ನು ರೂಪಿಸುವಲ್ಲಿ ಅಧ್ಯಾಪಕರ ಸಾಮರ್ಥ್ಯವನ್ನು ಅಳೆಯುವ ಒಂದು ಮಾಪನಿಯನ್ನು ತಯಾರಿಸಿಕೊಂಡು ನಿಮ್ಮ ಸಹೋದ್ಯೋಗಿಗಳ ಎರಡು ತರಗತಿಗಳನ್ನು ವೀಕ್ಷಿಸಿರಿ. ನೀವು ವೀಕ್ಷಿಸಿದ ಅಂಶಗಳನ್ನು ದಾಖಲಿಸಿ

## 2.3.4. ಸಾರಾಂಶಿಸೋಣ

- ಸಾಂಪ್ರದಾಯಿಕ ಮನೋಭಾವವುಳ್ಳ ಅಧ್ಯಾಪಕರು ಲಿಂಗ ಸಮಾನತೆಯನ್ನು ಅಥವಾ ಲಿಂಗ ತಟಸ್ಥ ಸನ್ನಿವೇಶಗಳನ್ನು ರೂಪಿಸಲು ಅಗತ್ಯವಾದ ಮಾರ್ಪಾಡುಗಳ ಕುರಿತು ಹೆಚ್ಚು ಗಂಭೀರವಾಗಿ ಚಿಂತಿಸುವುದಿಲ್ಲ. ಅವರು ಸಮಾಜದಲ್ಲಿರುವ ಲಿಂಗ ಪಡಿಯಚ್ಚುಗಳನ್ನು ಲಿಂಗಪಾತ್ರಗಳನ್ನು ಹಾಗೆಯೇ ವರ್ಗಾಯಿಸಿಬಿಡುತ್ತಾರೆ. ಇದು ಸಾಮಾಜೀಕರಣದ ಒಂದು ಭಾಗ ಎಂದೂ ಅವರು ನಂಬುತ್ತಾರೆ.
- ಲಿಂಗ ಸಮಾನತೆ,ಸಂವೇದನಾಶೀಲತೆಯಲ್ಲಿ ನಂಬಿಕೆಯುಳ್ಳ ಅಧ್ಯಾಪಕರ ತರಗತಿಗಳು ಸಾಂಪ್ರದಾಯಿಕ ಅಧ್ಯಾಪಕರ ತರಗತಿಗಳಿಗಿಂತ ಭಿನ್ನವಾಗಿರುತ್ತವೆ. ಇವರು ಲಿಂಗಸಮಾನ ನಿಯಮಗಳನ್ನು ಮಕ್ಕಳೇ ರೂಪಿಸುವಂತೆ ಮಾಡುತ್ತಾರೆ, ಸಮಾನ ಭಾಗವಹಿಕೆಯನ್ನು ಪೋಷಿಸುವ ಆಸನ ವ್ಯವಸ್ಥೆಯನ್ನು ಕಲ್ಪಿಸುತ್ತಾರೆ, ಗುಂಪುಕಾರ್ಯಗಳಿಗೆ ಪ್ರಾಮುಖ್ಯತೆ ಕೊಡುವುದಲ್ಲದೆ ಗಂಡು ಮತ್ತು ಹೆಣ್ಣುಮಕ್ಕಳಿಬ್ಬರಿಗೂ

ಸಮಾನ ಗಮನ ನೀಡುತ್ತಾರೆ. ಉತ್ತರಿಸಲು ಅಗತ್ಯವಾದಷ್ಟು ಸಮಯ ನೀಡುತ್ತಾರೆ, ಲಿಂಗತಟಸ್ಥ ಭಾಷೆಯನ್ನು ಬಳಸುತ್ತಾರೆ.

- ಲಿಂಗ ಸಮಾನತೆಯನ್ನು ತರುವಲ್ಲಿ ಶಾಲೆಗಳಲ್ಲಿ ಬೋಧಿಸಲಾಗುವ ಪ್ರತೀ ವಿಷಯದಲ್ಲೂ ಸಾಕಷ್ಟು ಅವಕಾಶಗಳಿರುತ್ತವೆ. ವಿಷಯಗಳ ಸ್ವರೂಪಕ್ಕೆ ತಕ್ಕಂತೆ, ಅಗತ್ಯವಿರುವ ಸಂದರ್ಭಗಳಲ್ಲೆಲ್ಲ ಅವುಗಳನ್ನು ಗುರುತಿಸಿಕೊಂಡು ಅಧ್ಯಾಪಕರು ಸೂಕ್ಷ್ಮವಾಗಿ ಲಿಂಗ ಸಮಾನತೆಯ ಮನೋಭಾವವನ್ನು ಬೆಳೆಸಬೇಕಾಗುತ್ತದೆ.

## 2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1**

ಈ ಸಾಧನದ ಒಟ್ಟು ಸ್ಕೋರುಗಳು 11. ಲಿಂಗ ಸಮಾನತೆಯನ್ನು ಕಾಪಾಡುವಲ್ಲಿ ಅಧ್ಯಾಪಕರ ಸ್ಥಾನವನ್ನು ಗುರುತಿಸಿ. ಅವರಿಗೆ ಕ್ರಿಯಾಶೀಲವಾದ ಹಿಮ್ಮಾಹಿತಿ ಕೊಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2**

ನೀವು ವೀಕ್ಷಿಸಿದ ಅಧ್ಯಾಪಕರಿಗೆ ಕ್ರಿಯಾಶೀಲವಾದ ಹಿಮ್ಮಾಹಿತಿಯನ್ನು ಸಕಾರಣವಾಗಿ ಕೊಡಿ. ಅವರು ಲಿಂಗಸಮಾನ ಪರಿಸರವನ್ನು ರೂಪಿಸಲು ಸಹಕರಿಸಿ.

## 2.3.6. ಘಟಕಾಂತ್ಯ ಅಭ್ಯಾಸಗಳು

ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದ ತರಗತಿ ವ್ಯವಹಾರಗಳನ್ನು ವಿವರಿಸಿ.

## 2.3.7. ಪರಾಮರ್ಶನ ಸೂಚಿ


1. www.learningenglish.voanews.com
2. www.ncert.nic.in
3. S.K. Mangal and Uma Mangal (2018), ‘Essentials of Educational Technlogy’ PHI Learning Private Limited.
4. Dr. N.B. Kongawad and Dr. N. P. Shahapur, “Gender, School and Society”, Vidyanidhi Prakashana.
5. Dr. Mahabaleshwar Rao , Gender, School Education(2017), Vismaya Prakashana.


**********

# ಬ್ಲಾಕ್– 2 : ಲಿಂಗತ್ವ ಮತ್ತು ಶಿಕ್ಷಣ

## ಘಟಕ– 4 : ಲಿಂಗತ್ವ ಮತ್ತು ಸಮಾಜದ ಸಂದರ್ಭದಲ್ಲಿ ಬದಲಾವಣೆಯ ನಿಯೋಗಿಯಾಗಿ ಶಿಕ್ಷಕರು

**ಘಟಕದ ರಚನೆ**


2.4.1 ಕಲಿಕೆಯ ಉದ್ದೇಶಗಳು

2.4.2. ಪೀಠಿಕೆ

2.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.4.3.1. ಶಿಕ್ಷಕರು ಬದಲಾವಣೆಯ ನಿಯೋಗಿಗಳಾಗಬೇಕಾದ ಅಗತ್ಯ ಮತ್ತು ಪ್ರಾಮುಖ್ಯತೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

2.4.3.2. ಲಿಂಗವಿಚಾರಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ಬದಲಾವಣೆಯ ನಿಯೋಗಿಗಳಾಗಲು ಮಾರ್ಗಗಳು ಮತ್ತು ಮಾರ್ಗೋಪಾಯಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

2.4.4. ಸಾರಾಂಶಿಸೋಣ

2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

2.4.6. ಘಟಕಾಂತ್ಯ ಅಭ್ಯಾಸಗಳು

2.4.7. ಪರಾಮರ್ಶನ ಸೂಚಿ


## 2.4.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಿಕ್ಷಕರು ಬದಲಾವಣೆಯ ನಿಯೋಗಿಗಳಾಗಬೇಕಾದ ಅಗತ್ಯ ಮತ್ತು ಪ್ರಾಮುಖ್ಯತೆಯನ್ನು ವಿವರಿಸುವರು;
- ಶಾಲಾ ಸನ್ನಿವೇಶದಲ್ಲಿ ಲಿಂಗ ತಾರತಮ್ಯವಿದೆ ಎಂಬ ಅಂಶವನ್ನು ಗುರುತಿಸುವರು; ಮತ್ತು
- ಲಿಂಗವಿಚಾರಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ಬದಲಾವಣೆಯ ನಿಯೋಗಿಗಳಾಗಲು ಮಾರ್ಗಗಳು ಮತ್ತು ಮಾರ್ಗೋಪಾಯಗಳನ್ನು ಸ್ಪಷ್ಟಪಡಿಸುವರು.

## 2.4.2. ಪೀಠಿಕೆ

"ಒಂದು ಲಿಂಗ (ಪುರುಷರು) ವು ಅಧಿಕಾರಕ್ಕೂ ಮತ್ತೊಂದು ಲಿಂಗವು (ಮಹಿಳೆಯರು) ಅಧಿಕಾರಹೀನತೆಗೂ ಒಗ್ಗಿಕೊಂಡಿದೆ; ಈ ವ್ಯವಸ್ಥೆಯಿಂದ ಪುರುಷರು ಲಾಭವನ್ನೂ ಮಹಿಳೆಯರು ನಷ್ಟವನ್ನೂ ಪಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ನಾವು ಮರೆಯಲಾಗದು" –ಡೇಲ್ ಸ್ಪೆಂಡರ್(1983)

ಲಿಂಗತ್ವ ಸಂಬಂಧಗಳು ಐತಿಹಾಸಿಕವಾದುದು; ಅವುಗಳನ್ನು ಹೊಸ ವಿನ್ಯಾಸಗಳಲ್ಲಿ ಪುನರ್ರೂಪಿಸಬಹುದು. ಹೊಸ ವಿನ್ಯಾಸಗಳು ನಿರ್ದಿಷ್ಟ ಗುಂಪುಗಳಿಗೆ ಉಪಯುಕ್ತವೂ ನಿರುಪಯುಕ್ತವೂ ಆಗಬಹುದು"– ಕೊನೆಲ್ (1987).

"ಅರೆ! ಸಂತೋಷ್, ನೀನು ಅಳುತ್ತಿದ್ದೀಯ! ನೀನು ಹುಡುಗ ಎಂಬುದನ್ನು ಮರೆತಿಲ್ಲ ತಾನೇ! ಅಳುವುದಾದರೆ ನಾಳೆಯಿಂದ ಫ್ರಾಕ್ ಹಾಕಿಕೊಂಡು ಬಾ" ಎಂಬಿತ್ಯಾದಿ ಮಾತುಗಳು ಅಧ್ಯಾಪಕರಿಂದ ಮೂಡುವುದು ಆಶ್ಚರ್ಯಕರವೇನಲ್ಲ. ಇಂತಹ ಮಾತುಗಳು ಮಕ್ಕಳ ಮೇಲೆ ಅತ್ಯಂತ ಅಪಾಯಕಾರಿಯಾದ ಪರಿಣಾಮ ಬೀರಬಹುದು ಎಂಬ ಅರಿವು ಅಧ್ಯಾಪಕರಿಗೆ ಇರುವುದಿಲ್ಲ. "ಸಂತೋಷ್ ಅಳುತ್ತಿದ್ದಾನೆಯೇ! ಛೇ, ಅವನಿಗೆ ಬೇಜಾರಾಗಿರಬಹುದು, ಏಕೆ ಎಂದು ವಿಚಾರಿಸೋಣ" ಎನ್ನುವ ಶಿಕ್ಷಕರು ನಮ್ಮಲ್ಲಿ ಎಷ್ಟು ಜನರಿದ್ದಾರೆ? ಅನೇಕ ರೀತಿಯ ಲಿಂಗ ಪಡಿಯಚ್ಚುಗಳನ್ನು ಸಮಾಜ ವರ್ಗಾಯಿಸುತ್ತದೆ. ಶಾಲೆ ಇದಕ್ಕೆ ಹೊರತೇನೂ ಅಲ್ಲ. ಇದನ್ನು ಬದಲಾಯಿಸಲು ಅಧ್ಯಾಪಕರು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುವುದು ಅಗತ್ಯ.

ಮೇಲಿನ ನಿದರ್ಶನವು ನಮ್ಮ ಶಾಲೆಗಳಲ್ಲಿ ಇಂದಿಗೂ ಲಿಂಗಭೇದ ಇದೆ ಎಂಬುದನ್ನು ಸ್ಪಷ್ಟೀಕರಿಸುತ್ತದೆ. ಇದು ಅನೇಕ ಸಂದರ್ಭಗಳಲ್ಲಿ ಢಾಳಾಗಿ ಕಾಣಿಸುತ್ತದೆ. ಇದರ ಮೂಲಕವೇ ಮಕ್ಕಳು ಲಿಂಗ ಪಡಿಯಚ್ಚುಗಳನ್ನು ಹೀರಿಕೊಳ್ಳುತ್ತಾರೆ. ಇದು ತಲೆಮಾರುಗಳ ಮೂಲಕ ಸಾಗುತ್ತಲೇ ಇರುತ್ತದೆ. ಕೆಲವೊಮ್ಮೆ ಈ ಲಿಂಗ ತಾರತಮ್ಯಗಳು ಉದ್ದೇಶಪೂರ್ವಕವಲ್ಲದಿರಬಹುದು. ಆದರೂ ಮಕ್ಕಳು ತಿಳಿದೋ ತಿಳಿಯದೆಯೋ ಅವುಗಳನ್ನು ಗ್ರಹಿಸಿಕೊಂಡುಬಿಡುತ್ತಾರೆ. ಇದು ಮಕ್ಕಳ, ಹಾಗೂ ಒಟ್ಟು ಸಮಾಜದ ಬೆಳವಣಿಗೆಗೆ ಮಾರಕವಾಗುತ್ತದೆ. ಹಾಗಾಗಿ, ಅಧ್ಯಾಪಕರು ಬದಲಾವಣೆಯನ್ನು ತರುವ ನಿಯೋಗಿಗಳಾಗಿ ಸಮಾಜವನ್ನು ಮುನ್ನಡೆಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ, ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದಂತೆ ಶಾಲೆಗಳ ಸ್ಥಿತಿ ಹೇಗಿದೆ? ಅಧ್ಯಾಪಕರು ಏಕೆ ಬದಲಾವಣೆಯ ನಿಯೋಗಿಗಳಾಗಬೇಕು, ಬದಲಾವಣೆಯ ನಿಯೋಗಿಗಳಾಗಿ ಅಗತ್ಯವಾದ ಲಿಂಗತ್ವ ಸಂಬಂಧಿ ಬದಲಾವಣೆಗಳನ್ನು ತರಲು ಯಾವ ಮಾರ್ಗಗಳು ಮತ್ತು ಮಾರ್ಗೋಪಾಯಗಳು ಸಹಾಯಮಾಡುತ್ತವೆ ಎಂಬುದನ್ನು ಈ ಘಟಕದಲ್ಲಿ ತಿಳಿಯೋಣ.

## 2.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.4.3.1. ಶಿಕ್ಷಕರು ಬದಲಾವಣೆಯ ನಿಯೋಗಿಗಳಾಗಬೇಕಾದ ಅಗತ್ಯ ಮತ್ತು ಪ್ರಾಮುಖ್ಯತೆ

ನಮ್ಮ ಶಿಕ್ಷಣ ವ್ಯವಸ್ಥೆ 'ಲಿಂಗಭೇದ ಮುಕ್ತ ಶಿಕ್ಷಣ' ವ್ಯವಸ್ಥೆಯಾಗಬೇಕು ಎಂದು ನಾವು ಹೇಳುತ್ತಲೇ ಬಂದಿದ್ದರೂ ಅದು ಇದುವರೆಗೆ ಸಾಧಿತವಾಗಿಲ್ಲ. 'ಲಿಂಗ ಮುಕ್ತ ಶಿಕ್ಷಣ' ಎಂದರೆ, "ಯಾರು ಶಿಕ್ಷಣ ಪಡೆಯಬೇಕು, ಯಾರು ಶಾಲೆಗೆ ಹೋಗಬೇಕು, ಯಾರಿಗೆ ಶಿಕ್ಷಣಕ್ಕೆ ಅವಕಾಶವಿರಬೇಕು, ಯಾರು ಯಾವ ವಿಷಯಗಳನ್ನು ಅಧ್ಯಯನ ಮಾಡಬೇಕು ಎಂಬ ಅಂಶಗಳ ಚರ್ಚೆಗೇ ಅವಕಾಶವಿರದ ವ್ಯವಸ್ಥೆ." ಆದರೆ ನಾವು ಈ ಎಲ್ಲ ವಿಷಯಗಳನ್ನೂ ನಿರಂತರವಾಗಿ ಚರ್ಚೆ ಮಾಡುತ್ತಲೇ ಇರುತ್ತೇವೆ. ಇದರಿಂದಾಗಿ ಲಿಂಗಮುಕ್ತವಾಗಬೇಕಾದ ಶಿಕ್ಷಣ, ಅಂಧಲಿಂಗತ್ವ ಶಿಕ್ಷಣವಾಗಿಬಿಟ್ಟಿದೆ. ಇಂದಿಗೂ ಲಿಂಗ ಪಡಿಯಚ್ಚುಗಳನ್ನು ಪೋಷಿಸುತ್ತಲೇ ಇದೆ. ಇದನ್ನು ಇಂದು ನಾವು ಆದ್ಯತೆಯ ಮೇರೆಗೆ ಚರ್ಚಿಸಿ, ಪರಿಹಾರಗಳನ್ನು ಕಂಡುಕೊಂಡು, ಒಂದು ಆರೋಗ್ಯಕರ ಸಮಾಜವನ್ನು ಸೃಷ್ಟಿಸಬೇಕಾಗಿದೆ.

ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದಂತೆ ಅಧ್ಯಾಪಕರೇ ಏಕೆ ಬದಲಾವಣೆಯ ನಿಯೋಗಿಗಳಾಗಬೇಕು? ಇದು ಅವಶ್ಯಕ. ಇದಕ್ಕೆ ಕಾರಣಗಳಿವೆ. ಅಧ್ಯಾಪಕರೇ ಮಕ್ಕಳ ಬದುಕಿನ ಸೋಲು ಗೆಲುವುಗಳನ್ನು ಯಶಸ್ಸು ಅಪಯಶಸ್ಸುಗಳನ್ನು ರೂಪಿಸುವವರು. ಪಠ್ಯಕ್ರಮವನ್ನು ಕುರಿತ ಅವರ ವ್ಯಾಖ್ಯಾನಗಳು, ಮಕ್ಕಳೊಂದಿಗಿನ ಅವರ ಅಂತರ್‌ಕ್ರಿಯೆ, ಅವರು ಮಾಡಿಸುವ ಕೆಲಸಗಳು, ಮೂಡಿಸುವ ಆಸಕ್ತಿಗಳು, ಮನೋಭಾವಗಳು, ಮೌಲ್ಯಗಳು ಮಕ್ಕಳನ್ನು ಧನಾತ್ಮಕವಾದ ಗುರಿಗಳೆಡೆಗೆ ಸಾಗಲು ಅನುವು ಮಾಡಿಕೊಡುತ್ತವೆ. ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದಂತೆ ಸಮರ್ಪಕ ಅರಿವು, ಮನೋಭಾವ ಮತ್ತು ಗ್ರಹಿಕೆಗಳನ್ನು ಮೂಡಿಸುವುದೂ ಬದುಕಿಗೆ ಸಂಬಂಧಿಸಿದಂತೆ ಅತ್ಯಂತ ಮಹತ್ವದ ವಿಷಯವಾದುದರಿಂದ ಇದನ್ನು ಸಮರ್ಪಕವಾಗಿ ಮಾಡಲು ಅಧ್ಯಾಪಕರಿಗೆ ಮಾತ್ರ ಸಾಧ್ಯ. ನಮ್ಮ ಸಮಾಜ ಈಗಾಗಲೇ ಅನಗತ್ಯವಾದ ಲಿಂಗ ಪಾತ್ರಗಳು, ಲಿಂಗಪಡಿಯಚ್ಚುಗಳನ್ನು ಒಳಗೊಂಡು ಕಲುಷಿತವಾಗಿದೆ.

ಇದನ್ನು ಶುದ್ಧೀಕರಿಸುವ ಕಾರ್ಯ ಶಾಲೆಗಳಿಂದಲೇ ಆಗಬೇಕು. ಇದು ಇಂದಿನ ಮತ್ತು ಮುಂದಿನ ಪೀಳಿಗೆಯ ಮಕ್ಕಳಲ್ಲಿ ಬೇರೂರಬೇಕು. ಸಮಾಜದಲ್ಲಿ ಮಕ್ಕಳನ್ನು ಪ್ರಭಾವಿಸುವ ಇತರ ಎಲ್ಲ ವ್ಯಕ್ತಿ ಸಮುದಾಗಳಿಗಿಂತ ಹೆಚ್ಚು ಪ್ರಭಾವಿಗಳಾಗಿರುವುದೆಂದರೆ ಶಿಕ್ಷಕರೇ. ಅವರೇ ತಮ್ಮ ಮುಂದಿರುವ ಮಾದರಿಗಳು ಎಂದು ಮಕ್ಕಳು ಒಪ್ಪಿಕೊಂಡುಬಿಟ್ಟಿರುತ್ತಾರೆ. ಹಾಗಾಗಿ ಅಪೇಕ್ಷಿತ ಬದಲಾವಣೆಗಳನ್ನು ತರುವ ನಿಯೋಗಿಗಳಾಗಿ ಪಾತ್ರ ವಹಿಸುವಲ್ಲಿ ಅವರು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ತರಗತಿಯಿಂದ ಹಿಡಿದು ರಾಜಕೀಯದವರೆಗೆ ಅವರು ಈ ಬದಲಾವಣೆಗೆ ಕಾರಣರಾಗಿರುತ್ತಾರೆ. ರಾಜಕೀಯ ರಂಗದಲ್ಲಿ ರಾರಾಜಿಸುವ ರಾಜಕೀಯ ವ್ಯಕ್ತಿಗಳೂ ಒಂದಾನೊಂದು ಕಾಲದಲ್ಲಿ ಶಾಲೆಗಳ ನೆಲದಲ್ಲಿ ಬೆಳೆದವರೇ ಅಲ್ಲವೇ? ಹಾಗಾಗಿ ಸಾಮಾಜಿಕ ಪರಿವರ್ತನೆಗೆ ಶಾಲೆಯೇ ಮೊದಲ ತಾಣ; ಅಧ್ಯಾಪಕರೇ ಪರಿವರ್ತನೆಯ ಮೊದಲ ಪ್ರವರ್ತಕರು. ಶಿಕ್ಷಣವು ಸಾಮಾಜಿಕವರ್ಗ ಸ್ತರೀಕರಣವಿರುವ ಸಮಾಜದಲ್ಲಿ ಊರ್ಧ್ವಮುಖ ಚಲನೆಗೆ ಕಾರಕವಾದ ಮೂಲಭೂತ ಸಾಧನ.  ವರ್ಗಗಳ ನಡುವೆ ಸಮಾನತೆಯನ್ನು ತರುವ ಗುರಿಯ ಸಾಧನೆಯಲ್ಲೇ ಶಿಕ್ಷಣದ ಪಾತ್ರ ಹಿರಿದು. ವಿದ್ಯಾರ್ಥಿಗಳು, ಭವಿಷ್ಯ ಜೀವನದಲ್ಲಿ, ವರ್ಗ, ಲಿಂಗ, ಜಾತಿ, ವಂಶ ಇತ್ಯಾದಿಗಳ ಆಧಾರದ ಮೇಲಲ್ಲದೆ,  ತಮ್ಮದೇ ಪ್ರಯತ್ನಗಳು, ಸಾಮರ್ಥ್ಯಗಳು ಮತ್ತು ಯಶಸ್ಸಿನಿಂದ ಮೇಲೆ ಬರುವಾಗ ಮಾತ್ರ ಸಮಾನತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಈ ಅರಿವು ಸಾಕಾರವಾಗಲು ಅಧ್ಯಾಪಕರ ಒತ್ತಾಸೆ ಬೇಕಾಗುತ್ತದೆ.

ಲಿಂಗಸಮಾನತೆ ಅಥವಾ ಲಿಂಗತಟಸ್ಥ ಸಮಾಜದ ಗುರಿ ಸಾಧಿತವಾಗಬೇಕಾದರೆ ನಿರ್ದಿಷ್ಟ ಅರಿವನ್ನು ಮೂಡಿಸುವುದೂ ಅಗತ್ಯವಾಗುತ್ತದೆ. ಉದಾಹರಣೆಗೆ, ದಿನನಿತ್ಯದ ಸನ್ನಿವೇಶಗಳಲ್ಲಿ ಮಾತನಾಡುವಾಗ, "ಮಹಿಳೆಯರಿಗೆ ಶಿಕ್ಷಣಕ್ಕಾಗಿ ವಿಶೇಷ ಅವಕಾಶ ಮಾಡಿಕೊಡಲಾಗುತ್ತಿದೆ, ಇದು ನಮ್ಮ ವಿಶೇಷ ಸಾಧನೆ" ಇತ್ಯಾದಿ ಮಾತುಗಳು ಕೇಳಿಬರುತ್ತದೆ. ಮಹಿಳೆಯರಿಗೆ ಶಿಕ್ಷಣ ನೀಡುವುದು ಒಂದು ಸಮಾಜಕ್ಕೆ ಅಥವಾ ದೇಶಕ್ಕೆ ಒಳಿತಾಗಲೀ ಎಂದಾಗಲೀ ಸಮಾಜಕ್ಕೆ ಒಳಿತಾಗಲೀ ಎಂದಾಗಲೀ ಅಲ್ಲ. ಅದು ಸಹಾನುಭೂತಿಯಿಂದ ಉದಾರವಾಗಿ ನೀಡುವ ಅವಕಾಶವೂ ಅಲ್ಲ. ಇದರಿಂದ ಸಮಾಜಕ್ಕೆ ದೇಶಕ್ಕೆ ಒಳ್ಳೆಯದಾಗಬಹುದು. ಆದರೆ ಅವಳು ಮಾನವವರ್ಗಕ್ಕೆ ಸೇರಿರುವುದರಿಂದ ಶಿಕ್ಷಣವನ್ನು ತನ್ನದಾಗಿಸಿಕೊಳ್ಳುವ ಹಕ್ಕು ಅವಳಿಗೂ ಸಂಪೂರ್ಣವಾಗಿ ಇದೆ. ಆದ್ದರಿಂದ ಅವಳಿಗೆ ಶಿಕ್ಷಣ ಸಿಗುವಂತಾಗಬೇಕು. ಅದು ಇತರರು ಯಾರೋ ಮಹಿಳೆಗೆ ನೀಡುವಂತಹುದಲ್ಲ. ಈ ಅರಿವು ಗಂಡು ಮತ್ತು ಹೆಣ್ಣುಮಕ್ಕಳಿಗೆ ಪ್ರಾರಂಭದಿಂದಲೇ ಮನಸ್ಸಿನಲ್ಲಿ ಮೂಡಬೇಕು. ಇದನ್ನು ಬೆಳೆಸುವವರೂ ಶಿಕ್ಷಕರೇ ಆಗಿರುತ್ತಾರೆ.

ಲಿಂಗ ಸಮಾನತೆ ಮತ್ತು ಗೌರವಯುತ ಸಂಬಂಧಗಳನ್ನು ಪೋಷಿಸಲು ತರಗತಿ ಶಿಕ್ಷಕರಿಗೆ ಆದರ್ಶವಾದ ಅವಕಾಶಗಳಿರುತ್ತವೆ. ಇದು ಪರಿಣಾಮಕಾರಿ ಅಭ್ಯಾಸಗಳಿಂದ ಸಾಧ್ಯ. ಸಂಶೋಧನೆಗಳು ಲಿಂಗಾಧಾರಿತ ಪೂರ್ವಾಗ್ರಹಗಳನ್ನು ಕಡಿಮೆಮಾಡಲು ಸಂಬಂಧಿತ ಕೌಶಲಗಳ ಬೆಳವಣಿಗೆಯನ್ನು ಶಿಕ್ಷಣದ ಮೊದಲ ವರ್ಷಗಳಿಂದಲೇ ಪ್ರಾರಂಭವಾಗಬೇಕು ಎಂದು ಗುರುತಿಸಿವೆ. ನಮ್ಮ ನಡುವಿನ ವ್ಯತ್ಯಾಸಗಳು ನಮ್ಮನ್ನು ಅನನ್ಯವಾಗಿಸುವುದಾದರೂ ಸಮಾನತೆಯು ನಮ್ಮನ್ನು ಮಾನವೀಯವಾಗಿಸುತ್ತದೆ. ನಾವು ಹುಡುಗರೇ ಆಗಿರಲಿ, ಹುಡುಗಿಯರೇ ಇರಲಿ, ನಮಗೆಲ್ಲರಿಗೂ ಆಶಯಗಳಿರುತ್ತವೆ, ಕನಸುಗಳಿರುತ್ತವೆ, ನಾವೆಲ್ಲರೂ ಇತರರನ್ನು ಗೌರವ ಮತ್ತು ಘನತೆಯಿಂದ ಕಾಣಬೇಕು" ಎಂಬ ಸಂದೇಶವನ್ನು ಮಕ್ಕಳಿಗೆ ತಲುಪಿಸಬೇಕು. ಯಾವ ಲಿಂಗದವರೂ ಮತ್ತೊಂದು ಲಿಂಗದವರಿಗಿಂತ ಮೇಲೂ ಅಲ್ಲ, ಕೀಳೂ ಅಲ್ಲ. ಪ್ರತಿ ವ್ಯಕ್ತಿಗೂ ಸ್ವಸಾಮರ್ಥ್ಯಕ್ಕನುಗುಣವಾಗಿ ಗರಿಷ್ಠಮಟ್ಟವನ್ನು ತಲುಪುವ ಹಕ್ಕು ಇದೆ. ಅಧ್ಯಾಪಕರು 'ಲಿಂಗ-ತಟಸ್ಥ' ತರಗತಿಗಳನ್ನು ರೂಪಿಸುವುದರ ಮೂಲಕ ಲಿಂಗ ಅಸಮಾನತೆ ಮತ್ತು ಲಿಂಗ ಆಧಾರಿತ ಹಿಂಸೆಯನ್ನು ಪೋಷಿಸುವ ಸಾಮಾಜಿಕ ಮಾನಕಗಳನ್ನು ಮುರಿಯುವಲ್ಲಿ ಮುಂಚೂಣಿಯಲ್ಲಿರಲು ಸಾಧ್ಯವಾಗುತ್ತದೆ.

ಸಾಮಾಜೀಕರಣವನ್ನುಂಟುಮಾಡುವ ವಿವಿಧ ನಿಯೋಗಗಳಾದ ಕುಟುಂಬ, ಶಾಲೆ ಮಾಧ್ಯಮ, ಧರ್ಮ, ಕಾನೂನು ಮತ್ತು ರಾಜಕೀಯ ಸಂಸ್ಥೆಗಳಲ್ಲಿನ ಪುರುಷಪ್ರಧಾನತೆಯ ಸಾಂಸ್ಥೀಕರಣವು ವ್ಯಕ್ತಿಗಳು ಲಿಂಗ ಪೂರ್ವಾಗ್ರಹವನ್ನು ವರ್ಗಾಯಿಸಲು ಅವಕಾಶಮಾಡಿಕೊಡುತ್ತವೆ. ಶಾಲೆಯಲ್ಲಿ ಈ ಸಾಂಸ್ಥೀಕರಣವು ಅತ್ಯಂತ

ಸೂಕ್ಷ್ಮವಾದ ರೀತಿಯಲ್ಲಿ ನಡೆಯುತ್ತದೆ. ಅಧ್ಯಾಪಕರು ಮಾತ್ರ ವಿದ್ಯಾರ್ಥಿಗಳು ವಿಮರ್ಶಾತ್ಮಕವಾಗಿ ಅಲೋಚನೆ ಮಾಡುವಂತೆ ಮಾಡುವುದರ ಮೂಲಕ ಪುರುಷಪ್ರಧಾನತೆಯನ್ನು ಪ್ರಶ್ನಿಸುವಂತೆ ಮಾಡಬಹುದು. ಇದಕ್ಕಾಗಿ ಮೊದಲಿಗೆ ತರಗತಿಯು ಸಮಾನತೆಯ ಪ್ರಪಂಚವನ್ನು ಸೃಷ್ಟಿಸಬೇಕು.

ಶಾಲೆಯಲ್ಲಿನ ಪ್ರಸ್ತುತ ಸನ್ನಿವೇಶವು ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದಂತೆ ಅಸಂತೃಪ್ತಿಕರ ಮಾತ್ರವಲ್ಲ; ಮಕ್ಕಳ ಒಟ್ಟು ವ್ಯಕ್ತಿತ್ವವನ್ನು ಘಾಸಿಗೊಳಿಸುವುದೂ ನಿಜ. ಶಿಕ್ಷಣದ ಪ್ರಕ್ರಿಯೆಯಲ್ಲಿ ಭಾಗಿಗಳಾಗಿರುವ ಅನೇಕ ಸಿಬ್ಬಂದಿಗಳಿಗೆ, ತಾವು ಲಿಂಗ ಅಸಮಾನತೆಯನ್ನು ಪ್ರಚುರಪಡಿಸುತ್ತಿದ್ದೇವೆ ಎಂಬ ಅರಿವೂ ಇರುವುದಿಲ್ಲ. ಲಿಂಗ ತಾರತಮ್ಯವನ್ನು ಹೋಗಲಾಡಿಸಬೇಕಾದವರೇ ಅದನ್ನು ಪೋಷಿಸುವುದಾದರೆ, ಸನ್ನಿವೇಶವು ಲಿಂಗತಟಸ್ಥವಾಗಿರಬೇಕು ಎಂದು ಅಪೇಕ್ಷಿಸುವುದಾದರೂ ಹೇಗೆ?

ಬಹಳಷ್ಟು ಅಧ್ಯಾಪಕರು ತಾವು ಲಿಂಗ ಸಮಾನತೆಯನ್ನು ಪೋಷಿಸುವವರು ಎಂಬುದಾಗಿ ಹೇಳಿಕೊಳ್ಳುವುದಾದರೂ ಅವರ ತರಗತಿಗಳನ್ನು ಖುದ್ದಾಗಿ ವೀಕ್ಷಿಸಿದರೆ, ಅವರ ವರ್ತನೆಗಳು ಮತ್ತು ಮನೋಭಾವಗಳು ಇದಕ್ಕೆ ಭಿನ್ನವಾದ ಅಂಶವನ್ನೇ ಹೊರಗೆಡಹುತ್ತದೆ. ಅವರ ಲಿಂಗ ಅಂಧತ್ವ ಅಥವಾ ಲಿಂಗ ಪೂರ್ವಾಗ್ರಹ, ಅವರ ಲಿಂಗಗ್ರಹಿಕೆಯ ಪರಿಣಾಮವಷ್ಟೆ. ಅವರು ಲಿಂಗ ಸಮಾನತೆಗಾಗಿ ಹೇಗೆ ಪ್ರಯತ್ನಿಸಬೇಕು ಎಂಬುದನ್ನು ಕುರಿತಂತೆ ಪೂರ್ವಯೋಜಿತವಾದ ಯಾವುದೇ ರೂಪುರೇಷೆಗಳನ್ನು ಹಾಕಿಕೊಳ್ಳದೆ, ತಮ್ಮದೇ ಆದ ನಂಬಿಕೆಗಳ ಆಧಾರದ ಮೇಲೆ ತರಗತಿಗಳಲ್ಲಿ ವ್ಯವಹರಿಸುತ್ತಾರೆ. ಅವರು ಹುಡುಗಿಯರಿಗೆ ಅಪಚಾರವಾಗುವ ವ್ಯವಸ್ಥೆಗೆ, ಶಾಲೆಯ ಲಿಂಗ ಪರಿಸರಕ್ಕೆ ಅಂಧರಾಗಿ ವರ್ತಿಸುತ್ತಾರೆ.

ಸುಮಾರು 1982ರ ವೇಳೆಗಾಗಲೇ ಶಿಕ್ಷಣ ಕ್ಷೇತ್ರದ ಕೆಲವು ತಜ್ಞರು ಲಿಂಗತ್ವ ದೃಷ್ಟಿಕೋನದಿಂದ ಶಾಲೆಯ ಪರಿಸರವನ್ನು ವರ್ಣಿಸಲು ಪ್ರಯತ್ನಿಸಿದ್ದಾರೆ. ಇದು ನೇರವಾಗಿ ಭಾರತೀಯ ನೆಲದಿಂದಲ್ಲದಿದ್ದರೂ ಇಲ್ಲಿಯ ಪರಿಸ್ಥಿತಿಗೂ ಅನ್ವಯವಾಗುತ್ತದೆ. ಅವರು ಈ ಸನ್ನಿವೇಶವನ್ನು 'ಚಳಿಗುಟ್ಟಿಸುವ ಪರಿಸರ' ಎಂದು ವರ್ಣಿಸಿದ್ದಾರೆ. ಇಷ್ಟು ವರ್ಷಗಳಾಗಿದ್ದರೂ ನಮ್ಮಲ್ಲಿ ಇದೇ 'ಹವಾ' ಹಸಿರಾಗಿದೆ. ಆ 'ತಂಡಿ ಹವಾ' (chilly climate)ದ ಲಕ್ಷಣಗಳನ್ನು ಅವರು ಕೆಳಕಂಡಂತೆ ಗುರುತಿಸಿದ್ದಾರೆ.

- ಶಾಲೆ/ತರಗತಿಗಳಲ್ಲಿ ಹುಡುಗಿಯರಿಗೆ ಮತ್ತು ಮಹಿಳೆಯರಿಗೆ ಸಿಗುವ ಗಮನ ಅತಿ ಕಡಿಮೆ, ಕಡಿಮೆ 'ಕಣ್ಣು ಸಂಪರ್ಕ' (eye contact) ಮತ್ತು ಕಡಿಮೆ ಪ್ರೋತ್ಸಾಹ.
- ಸೌಂದರ್ಯ ಮತ್ತು ಅಚ್ಚುಕಟ್ಟುತನಕ್ಕೆ ಮಹಿಳೆಯರಿಗೆ, ಕಾರ್ಯದಕ್ಷತೆ ಮತ್ತು ಸೃಜನಶೀಲತೆಗೆ ಪುರುಷರಿಗೆ ಮೆಚ್ಚುಗೆ ಸೂಚಿಸುವುದು;
- ಪುರುಷರು ಮಾತನಾಡುವಾಗ ಹೆಚ್ಚು ಗಮನಕೊಡುವುದು, ಮಹಿಳೆಯರು, ಹುಡುಗಿಯರು ಮಾತನಾಡುವಾಗ 'ಹಾ, ಹೂ' ಮಾಡುವುದು.
- ಹುಡುಗಿಯರು ಉತ್ತರ ಹೇಳಲು ಕೈಮೇಲೆತ್ತಿದರೂ ಹುಡುಗರಿಗೇ ಉತ್ತರ ಹೇಳಲು ಸೂಚಿಸುವುದು;
- ಹುಡುಗರನ್ನು ಹೆಸರು ಹಿಡಿದು ಗಟ್ಟಿಸ್ವರದಲ್ಲಿ ಸಂಭೋದಿಸುವುದು;
- ಹುಡುಗರಿಗೆ ಬೌದ್ಧಿಕವಾಗಿ ಮೇಲ್ಮಟ್ಟದ ಪ್ರಶ್ನೆಗಳನ್ನೂ (ನಮಗೆ ಪ್ರಜಾಪ್ರಭುತ್ವ ಏಕೆ ಬೇಕು) ಹುಡುಗಿಯರಿಗೆ ಕೆಳಮಟ್ಟದ ಪ್ರಶ್ನೆಗಳನ್ನೂ (ಪ್ರಜಾಪ್ರಭುತ್ವ ಎಂದರೇನು) ಕೇಳುವುದು.

ಈ ಸಂಶೋಧನೆಯ ನಂತರ ಅನೇಕ ಸಂಶೋಧನೆಗಳು ನಡೆದಿದ್ದು ಬಹಳಷ್ಟು ಸಂಶೋಧನೆಗಳು ಈ ಫಲಿತಾಂಶವನ್ನೇ ಮೌಲ್ಯೀಕರಿಸುತ್ತವೆ. ಇಷ್ಟಾದರೂ ಭಾರತದಲ್ಲಿ, ನಗರ ಪ್ರದೇಶದಲ್ಲಿ ಈ ಸನ್ನಿವೇಶ ಸ್ವಲ್ಪಮಟ್ಟಿಗಾದರೂ ಬದಲಾಗಿದೆ ಎಂಬುದು ನಮ್ಮ ಅನುಭವ. ಸಂಶೋಧನೆಗೆ ಇದೊಂದು ಫಲವತ್ತಾದ ಕ್ಷೇತ್ರವಂತೂ ಹೌದು.

ಈ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಅಧ್ಯಾಪಕರು ಖಂಡಿತವಾಗಿಯೂ ಲಿಂಗತಟಸ್ಥ ಸಮಾಜವನ್ನು ರೂಪಿಸಲು ಕೊಡುಗೆ ನೀಡಬಹುದು. ಲಿಂಗ ಪಕ್ಷಪಾತವು ಸಾಮಾನ್ಯವಾಗಿ ಉದ್ದೇಶಪೂರ್ವಕವಾಗಿಯಲ್ಲದೆ, ಅಪ್ರಜ್ಞಾಪೂರ್ವಕವಾಗಿ ವರ್ಗಾವಣೆಗೊಳ್ಳುತ್ತಿರುತ್ತದೆ. ಹಾಗಾಗಿ, ಪಕ್ಷಪಾತ ಸಾರ್ವತ್ರಿಕವಾದರೂ ಅದು ಉದ್ದೇಶಪೂರ್ವಕವಾಗಿ ಮಾಡಿದುದಾಗಿರುವುದಿಲ್ಲ. ಈ ರೀತಿಯ ಮನೋಭಾವಗಳು, ವರ್ತನೆಗಳು ಬದಲಾಗುವ ಸಾಧ್ಯತೆಗಳು ಇವೆ.

ವ್ಯಕ್ತಿಗಳು ಒಮ್ಮೆ ವಿಮರ್ಶಾತ್ಮಕವಾಗಿ ಮತ್ತು ವಿವೇಚನಾತ್ಮಕವಾಗಿ ಚಿಂತಿಸಲು ಮೊದಲುಮಾಡಿದರೆ, ಅವರು ಪುರುಷಪ್ರಾಧಾನ್ಯತೆಯನ್ನು ಸವಾಲಾಗಿ ಎದುರಿಸಬಹುದು ಎಂಬುದನ್ನು ಇತಿಹಾಸವೂ ತೋರಿಸಿಕೊಟ್ಟಿದೆ.

ವಿರೋಧಾಭಾಸವೆಂದರೆ, ಸಮಾನತೆಯ ಆಧಾರದ ಮೇಲಿನ ಸಂಬಂಧಗಳನ್ನು ಸಾಮಾಜೀಕರಣದ ಮೂಲಕ ಪೋಷಿಸಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸಬೇಕಾದುದು ಶಿಕ್ಷಣ ಸಂಸ್ಥೆಗಳ ಕರ್ತವ್ಯ. ಆದರೆ ಅವುಗಳೇ ಆ ಮೌಲ್ಯಗಳನ್ನು ಕಡೆಗಣಿಸಿರುವ ಸ್ಥಿತಿ ಬಂದೊದಗಿದೆ. ಎಲ್ಲಿಯವರೆಗೆ ಜನಸಂಖ್ಯೆಯ ಅರ್ಧಭಾಗ ಗೌಣವಾಗಿ ಪರಿಗಣಿತವಾಗುತ್ತದೆಯೋ ಅಲ್ಲಿಯವರೆಗೆ ಪ್ರಜಾಪ್ರಭುತ್ವದ ಗುರಿಸಾಧನೆ ಸಾಧ್ಯವಾಗುವುದಿಲ್ಲ.

ಈವರೆಗೆ ಶಾಲೆಗಳಲ್ಲಿ ಲಿಂಗ ಸಮಾನತೆ ಸ್ಥಾಪಿತವಾಗಬೇಕು, ಈ ಪ್ರಕ್ರಿಯೆಯಲ್ಲಿ ಅಧ್ಯಾಪಕರು ನಿಯೋಗಿಗಳಾಗಿ ಪಾತ್ರವಹಿಸಬೇಕು ಎಂಬುದನ್ನು ಗಮನಸಿದ್ದೇವೆ. ಹೀಗೆ ಅಧ್ಯಾಪಕರು( ಹೀಗೆ ಬಳಸಿದಾಗಲೆಲ್ಲಾ ಅದು ಅಧ್ಯಾಪಕಿಯರನ್ನೂ ಒಳಗೊಳ್ಳುತ್ತದೆ ಎಂಬುದು ಗಮನವಿರಲಿ) ನಿಯೋಗಿಗಳಾಗಿ ಕಾರ್ಯನಿರ್ವಹಿಸಬೇಕಾದಾಗ ಅನುಸರಿಸಬಹುದಾದ ಮಾರ್ಗಗಳು ಮತ್ತು ಮಾರ್ಗೋಪಾಯಗಳು ಯಾವುವು ಎಂಬುದನ್ನು ಮುಂದಿನ ಭಾಗದಲ್ಲಿ ತಿಳಿಯೋಣ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1**

ನೀವು ಒಂದು ಸಣ್ಣ ಸಂಶೋಧನೆಯನ್ನು ಕೈಗೊಳ್ಳಿ. ನಿಮ್ಮ ಶಾಲೆಯ ಹುಡುಗ ಹುಡುಗಿಯರಿಗೆ ಕೆಳಕಂಡ ಸಾಧನವನ್ನು ಕೊಟ್ಟು ಅವರ ಪ್ರತಿಕ್ರಿಯೆಯನ್ನು ಗುರುತಿಸಿಕೊಳ್ಳಿ. ಅದನ್ನು ವಿಶ್ಲೇಷಿಸಿ, ಅದರ ಆಧಾರದ ಮೇಲೆ ನಿಮ್ಮ ಶಾಲೆಯಲ್ಲಿ ಲಿಂಗ ಸಮಾನತೆ ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ ಎಂದು ಗುರುತಿಸಿ.

ಸೂಚನೆ : ಈ ಶಾಲೆಯಲ್ಲಿ ಲಿಂಗ ಸಮಾನತೆಗೆ ಸಂಬಂಧಿಸದಂತೆ ಕೆಲವು ಹೇಳಿಕೆಗಳನ್ನು ಕೊಡಲಾಗಿದೆ. ಅವುಗಳನ್ನು ನೀವು ಬಹಳಮಟ್ಟಿಗೆ ಒಪ್ಪುವುದಾದರೆ ಮೊದಲನೇ ಕಾಲಂನಲ್ಲೂ ಸ್ವಲ್ಪಮಟ್ಟಿಗೆ ಒಪ್ಪುವುದಾದರೆ ಎರಡನೇ ಕಾಲಂನಲ್ಲೂ ಒಪ್ಪುವುದೇ ಇಲ್ಲವಾದರೆ ಮೂರನೇ ಕಾಲಂನಲ್ಲೂ '✓' ಗುರುತು ಹಾಕಿ

| | ಹೇಳಿಕೆಗಳು | ಬಹಳಮಟ್ಟಿಗೆ | ಸ್ವಲ್ಪಮಟ್ಟಿಗೆ | ಇಲ್ಲವೇ ಇಲ್ಲ |
|---|---|---|---|---|
| 1 | ನಮ್ಮ ಶಾಲೆಯಲ್ಲಿ ಹುಡುಗರಿಗೆ ಇರುವ ಎಲ್ಲ ಸೌಲಭ್ಯಗಳು ನಮಗೂ ಇವೆ/ನಮ್ಮ ಶಾಲೆಯಲ್ಲಿ ಹುಡುಗಿಯರಿಗೆ ಇರುವ ಎಲ್ಲ ಸೌಲಭ್ಯಗಳು ನಮಗೂ ಇವೆ. | | | |
| 2 | ಅಧ್ಯಾಪಕರು ಹುಡುಗರಿಗೆ ಕೊಡುವಷ್ಟು ಗಮನವನ್ನು ನಮಗೂ ಕೊಡುತ್ತಾರೆ/ ಅಧ್ಯಾಪಕರು ಹುಡುಗಿಯರಿಗೆ ಕೊಡುವಷ್ಟು ಗಮನವನ್ನು ನಮಗೂ ಕೊಡುತ್ತಾರೆ. | | | |
| 3 | ಹುಡುಗ ಹುಡುಗಿಯರಿಗೆ ನಿಯಮಗಳು ಒಂದೇ ಆಗಿವೆ. | | | |

| | | | | |
|---|---|---|---|---|
| 4 | ಹುಡುಗ ಹುಡುಗಿಯರು ಆಡಬಹುದಾದ ಆಟಗಳು ಬೇರೆಯೇ ಆಗಿವೆ. | | | |
| 5 | ಹುಡುಗ ಹುಡುಗಿಯರು ಒಟ್ಟಾಗಿ ಓದಿಕೊಳ್ಳಬಹುದು. | | | |
| 6 | ಯಾವುದೇ ಕೆಲಸವಾದರೂ ಇಬ್ಬರಿಗೂ ಒಟ್ಟಾಗಿ ಹೇಳುತ್ತಾರೆ. | | | |
| 7 | ಹುಡುಗಿಯರಿಗೆ ಮತ್ತು ಹುಡುಗರಿಗೆ ನಿಯಮಿತವಾಗಿರುವ ಕೆಲಸಗಳು ಬೇರೆ ಬೇರೆ. | | | |
| 8 | ತರಗತಿಯಲ್ಲಿ ಹುಡುಗ ಹುಡುಗಿಯರಿಬ್ಬರಿಗೂ ಪ್ರಶ್ನೆ ಕೇಳುತ್ತಾರೆ. | | | |
| 9 | ತರಗತಿಯಲ್ಲಿ ಹುಡುಗ ಹುಡುಗಿಯರಿಬ್ಬರನ್ನೂ ಪ್ರಶಂಸೆ ಮಾಡುತ್ತಾರೆ. | | | |

ಈ ರೀತಿ 'ಲಿಂಗ ಸಮಾನತೆ'ಯ ಸ್ಥಿತಿಯನ್ನು ತಿಳಿಯಲು ಅನುಕೂಲವಾಗುವ ಇತರ ಅಂಶಗಳನ್ನು ಸೇರಿಸಿಕೊಳ್ಳಿ.

## 2.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

## 2.4.3.2. ಲಿಂಗವಿಚಾರಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ಬದಲಾವಣೆಯ ನಿಯೋಗಿಗಳಾಗಲು ಮಾರ್ಗಗಳು ಮತ್ತು ಮಾರ್ಗೋಪಾಯಗಳು

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ 'ಸಬಲೀಕರಣ' ಎಂದರೇನು? ಶಾಲೆಗಳಲ್ಲಿ ವಿದ್ಯಾರ್ಥಿ/ ವಿದ್ಯಾರ್ಥಿನಿ ಸಮೂಹದ ವ್ಯಕ್ತಿಸಹಜವಾದ ಸಾಮಾಜಿಕ ಸಾಮರ್ಥ್ಯಗಳನ್ನು ಮೊಟಕುಮಾಡುವಂತಹ, ಹುಡುಗರು–ಹುಡುಗಿಯರು ಇತ್ಯಾದಿ ಭೇದಭಾವವನ್ನು, ಲಿಂಗಪಡಿಯಚ್ಚುಗಳನ್ನು ವಿರೋಧಿಸಿ, ಅವುಗಳನ್ನು ಸಂಪೂರ್ಣವಾಗಿ ಶೂನ್ಯಗೊಳಿಸಲು ಅಗತ್ಯವಾದ ಜ್ಞಾನ ಮತ್ತು ಕೌಶಲವನ್ನು ಬೆಳೆಸಿಕೊಳ್ಳಲು ಸಮರ್ಥರನ್ನಾಗಿಸುವುದೇ ಸಬಲೀಕರಣ. ಇದು ಅಧ್ಯಾಪಕರ ವತಿಯಿಂದ ನಿರ್ದಿಷ್ಟ ಸಿದ್ಧತೆಯನ್ನು ಅಪೇಕ್ಷಿಸುತ್ತದೆ.

**ಅಧ್ಯಾಪಕರು ಈ ಅಂಶಗಳನ್ನು ಗಮನಿಸಬೇಕು.**

ಲಿಂಗಸಮಾನತೆಯುಳ್ಳ ಸಮಾಜವನ್ನು ಕುರಿತಂತೆ ನಿಮಗೆ ಧನಾತ್ಮಕ ಮನೋಭಾವವಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ: ಮನೋಭಾವವನ್ನು ಬದಲಿಸಿಕೊಳ್ಳುವುದು ಎಂದರೆ ಗ್ರಹಿಕೆಗಳನ್ನು, ತಿಳಿವಳಿಕೆ, ನಿರೀಕ್ಷೆಗಳನ್ನು, ನಂಬಿಕೆಗಳನ್ನು ಮತ್ತು ಭಾಷೆಯ ಬಳಕೆಯ ರೀತಿಯನ್ನು ಬದಲಿಸಿಕೊಳ್ಳುವುದು ಎಂದರ್ಥ. ಈ ಎಲ್ಲ ಅಂಶಗಳು ವ್ಯಕ್ತಿಯು ತನ್ನ ವ್ಯವಸ್ಥೆಯಿಂದ ಈಗಾಗಲೇ ಹೀರಿಕೊಂಡು ತಮ್ಮಲ್ಲಿ ಸ್ಥಾಪಿಸಿಕೊಂಡಿರುವ ಅಂಶಗಳಾಗಿರುತ್ತವೆ.

ನಿಮಗೆ ಲಿಂಗತ್ವ ವಿಚಾರಗಳು ಅಗತ್ಯವಿರುವಷ್ಟು ತಿಳಿದಿದೆಯೇ ಎಂದು ಖಚಿತಪಡಿಸಿಕೊಳ್ಳಿ: ಲಿಂಗ ಸಮಾನ ಪರಿಸರವನ್ನು ಸೃಷ್ಟಿಸುವಲ್ಲಿನ ಮೊದಲ ಹೆಜ್ಜೆ ಎಂದರೆ ಅಧ್ಯಾಪಕರು ಈ ಕುರಿತ ಅರಿವನ್ನು ಮೂಡಿಸಿಕೊಳ್ಳುವುದು. ಈ ಅಂಶ ಸಮರ್ಪಕವಾದರೆ ಗುರಿಸಾಧಿತವಾಗುತ್ತದೆ ಎಂಬುದನ್ನು ಸಂಶೋಧನೆಗಳು ತೋರಿಸಿಕೊಟ್ಟಿವೆ. ಇದು ಅಧ್ಯಾಪಕರ ಅಧ್ಯಯನ ತರಬೇತಿಯ ಸಮಯದಲ್ಲೇ ಆಗಬೇಕು.

ಲಿಂಗತ್ವವೆಂಬುದು ಸಾಮಾಜಿಕವಾಗಿ ರೂಪುಗೊಂಡಿರುವುದೇ ವಿನಾ ಸ್ವಾಭಾವಿಕವಲ್ಲ ಎಂದು ತಿಳಿಯಿರಿ ಲಿಂಗ ಎಂಬುದು ಜೀವಶಾಸ್ತ್ರೀಯವಾದುದು, ನೈಸರ್ಗಿಕವಾದುದು ಮತ್ತು ಲಿಂಗತ್ವ ಎಂಬುದು ಸಾಮಾಜಿಕವಾಗಿ ರಚಿತವಾದುದು ಎಂಬ ಅರಿವು ಲಿಂಗಪಕ್ಷಪಾತವನ್ನು ನಿವಾರಿಸಲು ಅತಿ ಅಗತ್ಯ. ಇದು ಸ್ವಾಭಾವಿಕವಲ್ಲದುದರಿಂದಲೇ ಜೊತೆಗೆ ಸಮಾಜದ ಬೆಳವಣಿಗೆಗೆ ಪೂರಕವಲ್ಲದಿರುವುದರಿಂದಲೇ ಇದನ್ನು ಬದಲಾಯಿಸಬಹುದು ಮತ್ತು ಬದಲಾಯಿಸಬೇಕು. ಹುಡುಗ ಹುಡುಗಿಯರನ್ನು ಭಿನ್ನಮಾಡಬೇಕಾದ ಯಾವ ಅಂಶವೂ ಸ್ವಾಭಾವಿಕವಲ್ಲ; ಸಮಾಜ ಸೃಷ್ಟಿಸಿರುವಂತಹುದು. ಹಾಗಾಗಿ ಹುಡುಗರು ಗಣಿತದಲ್ಲಿ ಬುದ್ಧಿವಂತರು ಹುಡುಗಿಯರು ಕೈಕೆಲಸದಲ್ಲಿ ನಿಪುಣರು ಎಂಬ ನಿರ್ಣಯಗಳನ್ನು ಮಾಡಬೇಕಾಗಿಲ್ಲ. ಅದು ಅಭ್ಯಾಸಬಲವಷ್ಟೆ. ಅಭ್ಯಾಸ ಬದಲಾಗಿ ಗಟ್ಟಿಗೊಂಡರೆ, ನೈಪುಣ್ಯತೆಯೂ ನುಣುಪಾಗುತ್ತದೆ. ನೀವು ಇದನ್ನು ವರ್ತನಾವಾದದಲ್ಲಿ ಕಲಿತಿದ್ದೀರಿ.

ಈ ಸಿದ್ಧತೆಯ ಜೊತೆಗೆ ಅಧ್ಯಾಪಕರು ಕೆಲವು ಮಾರ್ಗಗಳನ್ನು ಮತ್ತು ಮಾರ್ಗೋಪಾಯಗಳನ್ನು ಸಾಧಿಸುವುದರಿಂದ ಲಿಂಗ ಸಂಬಂಧಿಯಾದ ಗುರಿಗಳನ್ನು ಸಾಧಿಸಲು ಸಾಧ್ಯವಿದೆ.

ಪಠ್ಯಕ್ರಮದ ಬದಲಾವಣೆ: ಲಿಂಗಸಂಬಂಧಿಯಾದ ಮೌಲ್ಯಗಳನ್ನು ಬೆಳೆಸಲು ಉದ್ದೇಶಿಸಿರುವ ಶಿಕ್ಷಕ ಶಿಕ್ಷಕಿಯರು ಪಠ್ಯಕ್ರಮ ಹಾಗೂ ಅಡಗು ಪಠ್ಯಕ್ರಮವೆರಡನ್ನೂ ಸಂಬೋಧಿಸಬೇಕಾಗುತ್ತದೆ. ಶಿಕ್ಷಣದ ಮತ್ತು ಶಾಲೆಯ ಉದ್ದೇಶಗಳನ್ನು ಸಾಧಿಸಲು ಶಾಲೆ ಉದ್ದೇಶಪೂರ್ವಕವಾಗಿ ಯೋಜಿಸಿರುವ ಕಲಿಕೆಯ ಅನುಭವಗಳ ಸಮಷ್ಟಿ ಪಠ್ಯಕ್ರಮವೆನಿಸಿಕೊಳ್ಳುತ್ತದೆ. ಹಾಗಾದರೆ ಅಡಗು ಪಠ್ಯಕ್ರಮವೆಂದರೇನು? ಇದು ಬಹಳಮಟ್ಟಿಗೆ ಉದ್ದೇಶಿತವಲ್ಲ; ಕಣ್ಣಿಗೆ ಕಾಣುವಂತಹುದೂ ಅಲ್ಲ. ಉದಾಹರಣೆಗೆ, ಶಾಲೆಯಲ್ಲಿ ಶಿಸ್ತು ಪಾಲಿಕೆಗೆ ನಿಯಮಗಳಿವೆ. ಹುಡುಗರು ಹುಡುಗಿಯರು 'ಒಟ್ಟಾಗಿ' ಕಲಿಯಬೇಕು. ಹುಡುಗಿಯರೆಲ್ಲರೂ ಎಡಭಾಗದಲ್ಲಿ ಹುಡುಗರೆಲ್ಲರೂ ಬಲಭಾಗದಲ್ಲಿ ಕುಳಿತುಕೊಳ್ಳಬೇಕು. ಹುಡುಗರು ಮತ್ತು ಹುಡುಗಿಯರು ಸಾಲುಗಳಲ್ಲಿ ಮೈದಾನಕ್ಕೆ ಹೋಗಬೇಕು. ಇತ್ಯಾದಿ. ನೋಡುವವರಿಗೆ, 'ಅಬ್ಬಾ, ಇದೇನು ಶಿಸ್ತು? ಎಲ್ಲವೂ ಕ್ರಮಬದ್ಧವೇ! ಹುಡುಗರು ಅದೆಷ್ಟು ಚೆನ್ನಾಗಿ ಒಟ್ಟಿಗೇ ಆಡುತ್ತಾರೆ! ಹುಡುಗಿಯರೂ ಕೂಡಿ ನಲಿಯುತ್ತಿದ್ದಾರೆ ಎನಿಸಬಹುದು. ಆದರೆ ಈ ಕ್ರಮದಲ್ಲಿರುವ 'ಅಕ್ರಮ' ಯಾರಿಗೂ ಕಣ್ಣಿಗೆ ಬೀಳುವುದಿಲ್ಲ. ಇದು ಶಾಲಾಯೋಜನೆಯಲ್ಲಿ ಅಡಗಿಕುಳಿತಿರುತ್ತದೆ. ಇದು ಲಿಂಗಭೇದವನ್ನು ಲಿಂಗಪಕ್ಷಪಾತವನ್ನು ಇಬ್ಬರೂ ಒಟ್ಟಿಗೆ ಬೆಳೆಯಲು ಅವಕಾಶಮಾಡಿಕೊಡದ ಸಾಮಾಜಿಕವಲ್ಲದ ಕ್ರಮವನ್ನು, ಅದನ್ನು ಸ್ವೀಕರಿಸುವ ಮನಸ್ಥಿತಿ ಇಲ್ಲದ ಪರಿಸರವನ್ನು ಪೋಷಿಸುತ್ತಿದೆ ಎಂಬ ಅಂಶ ಅಧ್ಯಾಪಕರ ಗಮನಕ್ಕೆ ಬಂದಿರಬಹುದು, ಬಹಳ ಸನ್ನಿವೇಶದಲ್ಲಿ ಬಂದಿಲ್ಲದೆಯೂ ಇರಬಹುದು.

ಬಹಳಷ್ಟು ಬಾರಿ ಪಠ್ಯಕ್ರಮದಲ್ಲಿನ ವಿಷಯಗಳ ಆಯ್ಕೆ ರಾಜಕೀಯ ಪ್ರೇರಿತವಾಗಿರುತ್ತದೆ. ನೀವು 'ಪಠ್ಯಕ್ರಮವ್ಯಾಪಿ ಭಾಷೆ' ಕೋರ್ಸಿನಲ್ಲಿ ಈ ಕುರಿತು ಕಲಿತಿದ್ದೀರಿ. ನಮ್ಮ ದೇಶಕ್ಕೆ ಇಂಗ್ಲಿಷ್ ಆಗಮನವನ್ನು ಅತ್ಯುತ್ಸಾಹದಿಂದ ಸ್ವಾಗತಿಸಿ, ನಮ್ಮದಾಗಿಸಿಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲವೂ ಸೋತು ಇಂದು ಎಡಬಿಡಂಗಿಯಾಗಿರುವ ನಮ್ಮ ಸ್ಥಿತಿ ನೆನಪಿಸಿಕೊಳ್ಳಿ. ಈ ದೃಷ್ಟಿಯಿಂದ ಅಧ್ಯಾಪಕರು ಬಹಳಷ್ಟು ಸಲ ಈ ಅಡಗು ಪಠ್ಯಕ್ರಮದ ಅಂಶಗಳನ್ನು ಗುರುತಿಸಿ ಎದುರಿಸಬೇಕು. 'ಲಿಂಗ ಪಕ್ಷಪಾತ' ಅಡಗು ಪಠ್ಯಕ್ರಮವಾಗಿ ಮೂಡಿಬಂದಿರುವ ರೀತಿಗಳನ್ನು ಗಮನಿಸಬೇಕು. ಪಠ್ಯಕ್ರಮದ ಚೌಕಟ್ಟನ್ನು ರಾಷ್ಟ್ರ ಅಥವಾ ರಾಜ್ಯಗಳು ಕೊಡುತ್ತವೆಯೇ ವಿನಾ ಪಠ್ಯಕ್ರಮದ ಪಡಿಯಚ್ಚುಗಳನ್ನಲ್ಲ! ಅದನ್ನು ಅಪೇಕ್ಷಣೀಯವಾದ ರೀತಿಯಲ್ಲಿ ಅಳವಡಿಸಿಕೊಳ್ಳಬೇಕು. ಲಿಂಗ ತಾರತಮ್ಯಕ್ಕೆ ಯಾವ ಅಂಶವೂ ಕಾರಣವಾಗದಂತೆ ಎಚ್ಚರ ವಹಿಸಬೇಕು.

ತಜ್ಞರ ಪ್ರಕಾರ, ಶಾಲೆಗಳಲ್ಲಿ ಮೂರು ಅಂಶಗಳಿರುತ್ತವೆ; ಇಲ್ಲಿ ಮಕ್ಕಳು ದಿನದ ಹೆಚ್ಚಿನ ಕಾಲ ಕಳೆಯುತ್ತಾರೆ; ಇಲ್ಲಿನ ವ್ಯವಸ್ಥೆ ಎಲ್ಲರಿಗೂ ಏಕರೂಪಿಯಾಗಿ ಅನ್ವಯವಾಗುವಂತಹುದು ಮತ್ತು ಕಡ್ಡಾಯವಾದುದು. ವಿದ್ಯಾರ್ಥಿ/ ವಿದ್ಯಾರ್ಥಿನಿಯರು ಶಾಲೆಯ ಮೂಲಭೂತ ನಿಯಮಗಳನ್ನು ಪಾಲಿಸಬೇಕು. ಶಾಲೆಯ ನಿಯಮಗಳಿಗೆ ಒಗ್ಗಿಕೊಳ್ಳುವ ತಾಳ್ಮೆಯನ್ನು ಬೆಳೆಸಿಕೊಳ್ಳಬೇಕು. ಆ ನಿಯಮಗಳ ಸಾಧುತ್ವ, ಸಿಂಧುತ್ವವನ್ನು ಪ್ರಶ್ನಿಸುವುದಾಗಲೀ ಅದರ ತರ್ಕಬದ್ಧತೆಯನ್ನು ತನಿಖೆಮಾಡುವುದಾಗಲೀ ಸಲ್ಲದು. ಅಂದರೆ ಶಾಲೆಯಲ್ಲಿ ಲಿಖಿತ ನಿಯಮಗಳೊಂದಿಗೆ ಅಲಿಖಿತ ನಿಯಮಗಳೂ

ಇರುತ್ತವೆ. ಇವು ಎಲ್ಲಿಯೂ ಕಾಣಸಿಗುವುದಿಲ್ಲ. ಶಾಲೆ ಮತ್ತು ಅಧ್ಯಾಪಕರು ತಮ್ಮ ಅಧಿಕಾರವನ್ನು ಹೇಗೆ ತೋರಿಸುತ್ತಾರೆ ಎಂಬ ಅಡಗು ಪಠ್ಯಕ್ರಮದಿಂದ ಇದನ್ನು ಊಹಿಸಬಹುದು. ಈ ಅಡಗು ಪಠ್ಯಕ್ರಮ ಲಿಂಗ ಸಮಾನತೆಗೆ ಒಂದು ತೊಡಕು ಎಂದು ಹೇಳಲಾಗುತ್ತದೆ. ಏಕೆಂದರೆ ಬಹಳಷ್ಟು ಸನ್ನಿವೇಶಗಳಲ್ಲಿ ಶಾಲೆಗಳಲ್ಲಿ ಹುಡುಗರಿಗೆ ಹುಡುಗಿಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತವೆ. ಇದು ಅಡಗು ಪಠ್ಯಕ್ರಮದಲ್ಲಿ ಅಡಗಿ ಕುಳಿತಿರುತ್ತವೆ. ಇದನ್ನು ಅಧ್ಯಾಪಕವರ್ಗದವರು ಗುರುತಿಸಿ ಸರಿಪಡಿಸಬೇಕು. ಕಾರ್ಯವಿತರಣೆ, ಆಟದ ಮೈದಾನದಲ್ಲಿ ಪ್ರತ್ಯೇಕವಾಗಿ ಪ್ರತ್ಯೇಕ ಆಟಗಳು, ಭಿನ್ನ ಸಮವಸ್ತ್ರ ಇತ್ಯಾದಿ ಅಂಶಗಳು ಅಡಗು ಪಠ್ಯಕ್ರಮದ ಅಂಶಗಳನ್ನು ಊಹಿಸುವಂತೆ ಮಾಡುತ್ತವೆ. ಈ ಅಡಗು ಪಠ್ಯಕ್ರಮವನ್ನು 'ಸಾಮಾಜಿಕ ವ್ಯವಸ್ಥೆಯ ಕಾಣದ ಕೈಗಳ ಸೃಷ್ಟಿ' ಎಂದು ಹೇಳಲಾಗುತ್ತದೆ.

ಶಾಲಾ ಸಿಬ್ಬಂದಿಯಲ್ಲಿನ ಕಾರ್ಯಹಂಚಿಕೆಯ ಮಾದರಿಯಿಂದಲೂ ವಿದ್ಯಾರ್ಥಿಗಳು ಸಂದೇಶಗಳನ್ನು ಗ್ರಹಿಸುತ್ತಾರೆ. ಆಡಳಿತ ವರ್ಗದಲ್ಲಿರುವವರೆಲ್ಲರೂ ಪುರುಷರು, ಅಥವಾ ಮಹಿಳೆಯರಾಗಿದ್ದರೆ, ಇಂತಹ ಸನ್ನಿವೇಶಗಳಲ್ಲಿ ಅಧಿಕಾರ ಮತ್ತು ಲಿಂಗಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಅವರದೇ ಆದ  ನಿಗಮನಗಳನ್ನು ಮಾಡಿಕೊಳ್ಳಲು ಕಾರಣವಾಗುತ್ತದೆ. ಇದಲ್ಲದೆ ಆಡಳಿತವರ್ಗದವರ ಮತ್ತು ಅಧ್ಯಾಪಕರ ಆದರ್ಶಗಳು, ಮೌಲ್ಯಗಳು, ನಂಬಿಕೆಗಳೂ ಮುಖ್ಯವಾಗುತ್ತವೆ. ಏಕೆಂದರೆ ವಿದ್ಯಾರ್ಥಿಗಳು ಯಾವ ರೀತಿ ವರ್ತಿಸಬೇಕು ಎಂಬ ಪರಿಸರವನ್ನು ಇವು ಸೃಷ್ಟಿಸುತ್ತವೆ. ಇದರಿಂದಾಗಿ ವಿದ್ಯಾರ್ಥಿಗಳು ಲಿಂಗತ್ವವನ್ನು ಕುರಿತಂತೆ ನಿರ್ದಿಷ್ಟ ಸಿದ್ಧಾಂತಗಳನ್ನು ರೂಪಿಸಿಕೊಂಡುಬಿಡುತ್ತಾರೆ.

**ಪಠ್ಯಪುಸ್ತಕಗಳ ಕಡೆಗೆ ಗಮನ:**

ಮತ್ತೊಂದು ಕಾಳಜಿಯ ಕ್ಷೇತ್ರ ಎಂದರೆ ಪಠ್ಯಗಳಲ್ಲಿ ಬಿಂಬಿತವಾಗುವ ಲಿಂಗಪಾತ್ರಗಳ ಪಡಿಯಚ್ಚುಗಳು. ಲಿಂಗ ಪಾತ್ರಗಳನ್ನು ಪಠ್ಯಪುಸ್ತಕಗಳು ಸ್ಥಾಪಿಸಿಬಿಡುತ್ತವೆ ಎಂಬುದನ್ನು ಸಂಶೋಧನೆಗಳೂ ದೃಢೀಕರಿಸಿವೆ. ಮಕ್ಕಳ ಗಮನಸೆಳೆಯಲು ಇದೊಂದು ಸುಲಭವಾದ ತಂತ್ರ. ತಂದೆ ವರಮಾನಗಳಿಸುವುದು, ತಾಯಿ ಮನೆವಾರ್ತೆ ನಡೆಸುವುದು ಎಂದು ಎಲ್ಲಿಯೂ ಅಚ್ಚಾಗಿಲ್ಲವಾದರೂ ಆ ಸಂದೇಶ ಪಠ್ಯದ ವಿವಿಧ ಅಂಶಗಳಲ್ಲಿ ಮಕ್ಕಳಿಗೆ ರವಾನೆಯಾಗಿಬಿಡುತ್ತದೆ. ಅದರಲ್ಲಿನ ಭಾಷೆ ಪುರುಷಪ್ರಧಾನವಾದುದು ಮಾತ್ರವಲ್ಲ; ಪುರುಷ ನಿರ್ಮಿತವೂ ಹೌದು. ಶಾಲೆಯ ಎಲ್ಲ ಮಕ್ಕಳನ್ನು ಕುರಿತು ಹೇಳುವಾಗ 'ವಿದ್ಯಾರ್ಥಿಗಳು' ಎಂಬ ಪದ, ಅಧ್ಯಾಪಕರೆಲ್ಲರನ್ನು ಕುರಿತು ಹೇಳುವಾಗ 'ಅಧ್ಯಾಪಕರು' ಎಂಬ ಪದದ ಬಳಕೆ ನಿಮಗೆ ತಿಳಿದೇ ಇದೆ.  ಇವು ವಿದ್ಯಾರ್ಥಿನಿಯರನ್ನು ಅಧ್ಯಾಪಕಿಯರನ್ನು ಒಳಗೊಳ್ಳಲೂಬಹುದು, ಒಳಗೊಳ್ಳದೆಯೂ ಇರಬಹುದು. ನಮ್ಮಲ್ಲಿ ಇಂಗ್ಲಿಷ್ ಭಾಷೆಯ 'teacher' ಮತ್ತು  'student' ಎಂಬ ಲಿಂಗನಿರ್ದಿಷ್ಟವಲ್ಲದ ಪದಗಳಿಗೆ ಸಂವಾದಿಯಾದ ಪದಗಳೇ ಇಲ್ಲ ಎಂಬುದನ್ನು ನೀವು ಗಮನಿಸಿದ್ದೀರಾ? ಇಂಗ್ಲಿಷಿನ ಈ ಪದಗಳು ವಿದ್ಯಾರ್ಥಿ ವಿದ್ಯಾರ್ಥಿನಿಯರಿಬ್ಬರನ್ನೂ ಅಧ್ಯಾಪಕ ಅಧ್ಯಾಪಕಿಯರಿಬ್ಬರನ್ನೂ ಒಳಗೊಳ್ಳುತ್ತದೆ. ನಮ್ಮಲ್ಲಿ ಏಕೆ ಹಾಗಾಗಲಿಲ್ಲ. ಏಕೆಂದರೆ ಶಿಕ್ಷಣ ಎಂಬುದು ಅದು ಕಲಿಯುವ ಪ್ರಕ್ರಿಯೆಯಾಗಲಿ, ಕಲಿಸುವ ಪ್ರಕ್ರಿಯೆಯಾಗಲೀ ಪುರುಷಪ್ರಧಾನವಾಗಿದ್ದುದು. ಪುರುಷರಿಗೇ ಸೀಮಿತವಾಗಿದ್ದುದು. ಹಾಗಾಗಿ ವಿದ್ಯಾರ್ಥಿನಿಯನ್ನೂ ಒಳಗೊಳ್ಳುವ ಪದ ಸೃಷ್ಟಿಯಾಗಲಿಲ್ಲ. ಸಂಸ್ಕೃತದಲ್ಲೂ 'ಅಧ್ಯಾಪಕ' ಎಂಬ ಪದ ಕೇವಲ ಪುರುಷರಿಗೆ ಮಾತ್ರ ಅನ್ವಯಿಸುವಂತಹುದು. ನಾವಾದರೂ ಸ್ವಲ್ಪ ಸಮಜಾಯಿಷಿ ಮಾಡಿಕೊಂಡು ಅಧ್ಯಾಪಕಿಯರನ್ನೂ ಸೇರಿಸಿಕೊಳ್ಳುತ್ತೇವೆ. (ನಾನು ಈ ಸಾಮಗ್ರಿಯನ್ನು ರೂಪಿಸುವಾಗಲೂ ಅದೇ ಸಮಸ್ಯೆಯನ್ನು ಎದುರಿಸಿದ್ದೇನೆ. ಪ್ರತಿ ಬಾರಿಯೂ ಶಿಕ್ಷಕ–ಶಿಕ್ಷಕಿಯರು, ವಿದ್ಯಾರ್ಥಿ–ವಿದ್ಯಾರ್ಥಿನಿಯರು ಎಂದು ಬಿಡಿಸಿ ಬರೆಯದಿದ್ದರೂ ಅಧ್ಯಾಪಕ/ ವಿದ್ಯಾರ್ಥಿ ಎಂಬ ಪದಗಳಿಂದ ಎರಡೂ ವರ್ಗದವರು ಎಂದು ಅರ್ಥವಾಗುತ್ತದೆ ಎಂದುಕೊಂಡಿದ್ದೇನೆ). ಮಕ್ಕಳು ಭಾಷೆಯನ್ನು ಬಳಸುವಾಗ ಲಿಂಗಕ್ಕೆ ಸಂಬಂಧಿಸಿದಂತೆ ಭೇದಭಾವ ಸೂಚಿಸದ ಪದಗಳನ್ನು ಬಳಸುವುದು ಅಗತ್ಯ. (ಅನೇಕ ವೇಳೆ ಪುಲ್ಲಿಂಗ, ಸ್ತ್ರೀಲಿಂಗ ಸೂಚಕ ಪದಗಳನ್ನು ಬಳಸುವ ಬದಲು ತಟಸ್ಥ ರೂಪಗಳನ್ನು ಬಳಸಿ ಎಂದು ಹೇಳುವುದುಂಟು. ಅಧ್ಯಾಪಕರು, ಅಧ್ಯಾಪಕಿಯರು ಇಬ್ಬರನ್ನೂ ಒಳಗೊಂಡಂತೆ ಒಂದು ಪದ ಬಳಸುವುದಾಗಲೀ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಬ್ಬರನ್ನೂ ಒಳಗೊಂಡಂತೆ ಒಂದು ಪದವನ್ನು ಬಳಸುವುದಾಗಲೀ ಹೇಗೆ

ಸಾಧ್ಯ?) ಗಟವಾಣಿ, ಬಜಾರಿ, ಹೆಣ್ಣಿಗ ಮುಂತಾದ ಪದಗಳ ಉಚ್ಚಾರವೇ ಒಪ್ಪಿತವಾಗದ, ಲಿಂಗನಿಯಮಿತವಾದ ವರ್ತನೆಗಳನ್ನು ಹೇಗೆ ಸೂಚಿಸುತ್ತವೆ ಎಂಬುದನ್ನು ಗಮನಿಸಿ. ಅಲ್ಲದೆ ಮೊದಲೆರಡು ಪದಗಳಿಗೆ ಪುಲ್ಲಿಂಗಸೂಚಕ ಪದಗಳಾವುವು? ಈ ವರ್ತನೆ ಹುಡುಗಿಯರಲ್ಲಿ ಮಾತ್ರ ಅಪೇಕ್ಷಣೀಯವಲ್ಲ ಎಂಬುದೂ ಅಡಗಿಕೊಂಡ ಅರ್ಥವಲ್ಲವೇ?

ಈ ಎಲ್ಲದರ ಅರ್ಥ ಶಾಲೆಯ ಒಟ್ಟು ಸಿಬ್ಬಂದಿ ಲಿಂಗತಟಸ್ಥ ಭಾಷೆಯನ್ನು ಬಳಸಬೇಕೆಂಬುದು. 'ನರ', 'ಮಾನವ' ಎಂಬ ಪದವನ್ನು ಒಂದು ಸಾಮಾನ್ಯಪದವಾಗಿ ಬಳಸಲಾಗುತ್ತದೆ. ಇವು ಎರಡೂ ವರ್ಗಗಳನ್ನು ಒಳಗೊಳ್ಳುತ್ತವೆಯಾದರೂ ಇವು ಪುಲ್ಲಿಂಗ ಪದಗಳು. ಈ ಪದ ಪುರುಷರನ್ನು ಸೂಚಿಸುವಷ್ಟು ಪ್ರಮುಖವಾಗಿ ಸ್ತ್ರೀಯರನ್ನೇಕೆ ಸೂಚಿಸುವುದಿಲ್ಲ. ಭಾಷೆಯೇ ಇಂತಹ ಸಂದರ್ಭಗಳಲ್ಲಿ ಸೋಲುತ್ತದೆ. ಏಕೆಂದರೆ ಅದು ಪುರುಷಸೃಷ್ಟಿ. ಪರಮಾತ್ಮ, ಸೃಷ್ಟಿಕರ್ತ, ದೇವರು, ಜಗದೊಡೆಯ, ಈ ಪದಗಳು ಬಳಕೆಯಾಗುವಷ್ಟು ವ್ಯಾಪಕವಾಗಿ ದೇವಿ, ದೇವತೆ, ಜಗದೊಡತಿ ಇವುಗಳು ಚಾಲ್ತಿಗೆ ಬರಲಿಲ್ಲ. ಮದುವೆಯಾದ ಹಾಗೂ ಮದುವೆಯಾಗದ ಪುರುಷರಿಬ್ಬರಿಗೂ 'ಶ್ರೀ' ಎಂಬ ಪೂರ್ವಪದವು ಸಾಮಾನ್ಯ. ಆದರೆ ಮದುವೆಯಾಗದ ಮಹಿಳೆಗೆ 'ಕುಮಾರಿ' ಮದುವೆಯಾದ ಮಹಿಳೆಗೆ 'ಶ್ರೀಮತಿ' ಇತ್ಯಾದಿ ಪದಗಳ ಬಳಕೆಯಾಗಿ, ಮಹಿಳೆಯ ವೈವಾಹಿಕ ಅಂಶವನ್ನು ಮಾತ್ರ ಹೊರಗೆಡಹುದುವುದೇಕೆ ಇತ್ಯಾದಿ ಅಂಶಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳುವಂತಹವು. ಇವೆಲ್ಲವೂ ಹೇಗೆ ಲಿಂಗಪಡಿಯಚ್ಚುಗಳನ್ನು ಸೃಷ್ಟಿಸುತ್ತವೆ ಎಂಬುದರ ಕುರಿತು ವಿಮರ್ಶಾತ್ಮಕವಾಗಿ ಚರ್ಚಿಸಿ ಮಕ್ಕಳಲ್ಲಿ ಲಿಂಗಭೇದವನ್ನು ಕುರಿತ ಜಾಗೃತಿ ಮೂಡಿಸುವುದು ಅಧ್ಯಾಪಕರ ಕರ್ತವ್ಯ.

ಪಠ್ಯಪುಸ್ತಕಗಳು ಪುರುಷರ ಕೊಡುಗೆಗಳನ್ನು ವಿವರಿಸುವಂತೆ ಮಹಿಳೆಯರ ಕೊಡುಗೆಯನ್ನೂ ಎತ್ತಿ ಹಿಡಿಯಬೇಕು. ಸಮಾಜದಲ್ಲಿ ಅವರನ್ನು ಗೌರವದಿಂದ ಕಾಣುವುದನ್ನು ಬಿಂಬಿಸುವ ಪಾಠಗಳಿರಬೇಕು. ಚಿತ್ರಗಳು, ವಿಷಯಗಳು ಯಾವುದೇ ಕಾರಣಕ್ಕೂ ಲಿಂಗ ಪಕ್ಷಪಾತವನ್ನು ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಮೂಡಿಸುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವಿಜ್ಞಾನಿಗಳಲ್ಲಿ ಪುರುಷರನ್ನು ಬಿಂಬಿಸುವಂತೆ ಮಹಿಳೆಯರನ್ನೂ ಬಿಂಬಿಸಬೇಕು. ಈಗ ಬಿಂಬಿಸಿಲ್ಲ ಎಂದ ಮಾತ್ರಕ್ಕೆ ಮಹಿಳಾ ವಿಜ್ಞಾನಿಗಳು ಇರಲೇ ಇರಲಿಲ್ಲ ಎಂದರ್ಥವಲ್ಲ. ಒಂದು ಪಕ್ಷ ಕಾಣಿಸದಿದ್ದರೆ ಅದಕ್ಕೆ ಕಾರಣವೇನು ಎಂಬ ಜಾಗೃತಿ ಮೂಡಿಸುವ ಪಾಠಗಳೂ ಪಠ್ಯದ ಭಾಗವಾಗಬೇಕು.

**ಸಹಪಠ್ಯಚಟುವಟಿಕೆಗಳ ಯೋಜನೆ**

ತರಗತಿಯಲ್ಲಿ ಮಾಡಲಾಗದೆ ಉಳಿದುದನ್ನು ಆಟದ ಮೈದಾನದಲ್ಲಿ ಸಾಧಿಸಬಹುದು. ಎಲ್ಲರನ್ನೂ ಸಬಲೀಕರಣಗೊಳಿಸುವತ್ತ ಗಮನವಿಡಬೇಕು. ಇಬ್ಬರಿಗೂ ಸಮಾನವಾದ ಪ್ರೋತ್ಸಾಹ, ತರಬೇತಿ ಅಗತ್ಯ. ಹುಡುಗಿಯರು ಹುಡುಗರು ಇಬ್ಬರಲ್ಲಿ ಯಾರಿಗೂ 'ಇದು ನಿನಗಲ್ಲ' ಎಂಬ ಮಾತನ್ನು ಹೇಳಬಾರದು. ಒಬ್ಬರ ಸಾಧನೆಯನ್ನು ಮತ್ತೊಬ್ಬರೊಡನೆ ಹೋಲಿಸಲೂ ಬಾರದು. ಪ್ರತಿಯೊಬ್ಬರಿಗೂ ಅವರ ಇಂದಿನ ಸಾಧನೆಯೇ ನಾಳೆಗೆ ಅಳತೆಗೋಲು. ವ್ಯಕ್ತಿಯ 'ಹಿಂದಿನದಕ್ಕಿಂತ ಹೆಚ್ಚು ಸಾಧನೆ' ಮುಖ್ಯವೇ ವಿನಾ 'ಇತರರಿಗಿಂತ ಹೆಚ್ಚು ಸಾಧನೆ'ಯಲ್ಲ.

'ಕಬಡ್ಡಿಯಾಡಲು ನೀನೇನು ಹುಡುಗನೇ' 'ಟೆನ್ನಿಕ್ವಾಯ್ಟ್ ಆಡಲು ನೀನೇನು ಹುಡುಗಿಯೇ' ಇತ್ಯಾದಿ ಮಾತುಗಳನ್ನಾಡಬಾರದು. ಹುಡುಗಿಯರಿಗೆ 'ಸಂಜೆಯಾಯಿತು ನೀವು ಬೇಗ ಮನೆ ಸೇರಿಕೊಳ್ಳಿ' ಎಂದೂ ಹುಡುಗರಿಗೆ 'ನೀವು ಇನ್ನೂ ಸ್ವಲ್ಪ ಹೊತ್ತು ಅಭ್ಯಾಸ ಮಾಡಿ' ಇತ್ಯಾದಿಯಾಗಿ ಹೇಳಬಾರದು. ಸನ್ನಿವೇಶ ಅಪಾಯಕಾರಿಯಾಗಿದ್ದರೆ, ಅಧ್ಯಾಪಕರ ನಿಯಂತ್ರಣದಲ್ಲಿಲ್ಲದಿದ್ದರೆ ಸುರಕ್ಷತೆಗೆ  ಸೂಕ್ತ ಕ್ರಮ ಕೈಗೊಳ್ಳಬೇಕು.

**ಲಿಂಗನಿರ್ದಿಷ್ಟವಲ್ಲದ ಬೋಧನಾ ಸಾಮಗ್ರಿಗಳ ಆಯ್ಕೆ**

ತಂದೆ ಮನೆಯ ಯಜಮಾನನಾಗಿರುವುದು, ತಾಯಿ ಮನೆಕೆಲಸ ಮಾಡುತ್ತಿರುವುದು, ಹೆಣ್ಣು ಮಕ್ಕಳು ಆಟಿಕೆಯೊಂದಿಗೆ ಆಡುವುದು, ಗಂಡು ಮಕ್ಕಳು ಗನ್ ಹಿಡಿದು ಶೂಟ್ ಮಾಡುವುದು ಇತ್ಯಾದಿ ಲಿಂಗಪಾತ್ರಗಳನ್ನು ಬಿಂಬಿಸುವ ಚಿತ್ರಗಳನ್ನು ಕತೆಗಳನ್ನು ಬಳಸಬಾರದು. ಮಹಿಳೆಯರನ್ನು ವೈದ್ಯರಾಗಿ, ಇಂಜಿನಿಯರುಗಳಾಗಿ, ಬಾಹ್ಯಾಕಾಶ ತಜ್ಞರಾಗಿ ಉದಾಹರಿಸಬೇಕು. ಗಂಡಸು ಮನೆಗೆಲಸಮಾಡಲು ಸಹಾಯಮಾಡುವ, ಅದರಲ್ಲಿ ಪಾಲ್ಗೊಳ್ಳುವ

ಉದಾಹರಣೆಗಳನ್ನು ಚಿತ್ರಗಳನ್ನು ಬಿಂಬಿಸಬೇಕು. ಹೆಣ್ಣುಮಕ್ಕಳಿಗೂ ಕಾರುಗಳು, ಡೈನೊಸೋರ್‌ಗಳು, ಪ್ರಾಣಿಗಳು, ಸೈಕಲ್ಲು – ಈ ಆಟಿಕೆಗಳೊಂದಿಗೆ ಆಡಲು ಬಿಡಬೇಕು. ಇಬ್ಬರನ್ನೂ ಎಲ್ಲ ಕ್ಷೇತ್ರಗಳಲ್ಲಿ ಬಿಂಬಿಸಿದರೆ ಸಹಜವಾಗಿಯೇ ಲಿಂಗಪಾತ್ರಗಳ ಪಡಿಯಚ್ಚುಗಳು ಮಕ್ಕಳ ಮನಸ್ಸಿನಿಂದ ಮಾಯವಾಗುತ್ತವೆ.

ದೀನಳಾದ ಹುಡುಗಿಯನ್ನು ಧೀರನಾದ ನಾಯಕ ರಕ್ಷಿಸಲು ಬರುವುದು, ಬಲಹೀನಳಾದವಳನ್ನು ಬಲಿಷ್ಠನಾದವನು ಕಾಪಾಡುವುದು ಇವೆಲ್ಲಾ ನಮ್ಮ ಕತೆಯ ತಿರುಳು. ಅಂತಹ ಸಾಮಗ್ರಿಗಳನ್ನು ಬದಿಗಿಟ್ಟು ಇಬ್ಬರೂ ಸಬಲರಾಗಿರುವ ಮಾದರಿಗಳನ್ನು ಒದಗಿಸಬೇಕು. ಶಾಲೆಯಲ್ಲಿ ಪ್ರದರ್ಶಿಸುವ ಚಿತ್ರಗಳು, ಬಳಸುವ ಸಾಹಿತ್ಯ, ಭಿತ್ತಿ ಪತ್ರಗಳು ಎಲ್ಲವೂ ಲಿಂಗಸಮಾನತೆಯನ್ನು ಬಿಂಬಿಸುವಂತಿರಬೇಕು. 'ಹೆಂಗಸು ಅಬಲೆಯರು; ಅವರನ್ನು ರಕ್ಷಿಸಿ' 'ಮಹಿಳೆಯರ ಮಾನ ಕಾಪಾಡುವುದು ನಿಮ್ಮ ಹೊಣೆ' ಇತ್ಯಾದಿ ಶೀರ್ಷಿಕೆಗಳನ್ನು ಹಾಕಬಾರದು.

**ಲಿಂಗಸಮಾನ ಅಭ್ಯಾಸಗಳ ಅಳವಡಿಕೆ**

ಶಾಲೆಯಲ್ಲಿ ನಡೆಯುವ ಕಾರ್ಯಕ್ರಮಗಳಿಗೆ, ಶಿಕ್ಷಕ ಪೋಷಕ ಸಂಘಗಳಿಗೆ, ಮಕ್ಕಳ ಸಾಧನೆಯನ್ನು ಕುರಿತ ಚರ್ಚೆಗೆ ಕೇವಲ ತಂದೆಯನ್ನು ಮಾತ್ರ ಆಹ್ವಾನಿಸದೆ, ತಾಯಿಯನ್ನೂ ಆಹ್ವಾನಿಸಬೇಕು. ಆಹ್ವಾನ ಪತ್ರಿಕೆ ಕೊಡುವುದಾದರೆ ಅದರ ಮೇಲೆ ತಂದೆತಾಯಿಯರಿಬ್ಬರ ಹೆಸರನ್ನೂ ಬರೆಯಬೇಕು.

**ಕಲಿಕೆಯ ಪ್ರಕ್ರಿಯೆಯಲ್ಲಿ ಹುಡುಗ-ಹುಡುಗಿಯರಿಬ್ಬರ ಸಮ ಸಹಭಾಗಿತ್ವ**

ತರಗತಿ ಅಧ್ಯಯನಕ್ಕೆ ಸಂಬಂಧಿಸಿದ ಸಂಶೋಧನೆಗಳು, ತರಗತಿಯಲ್ಲಿ ಹುಡುಗಿಯರಿಗಿಂತ ಹುಡುಗರು ಹೆಚ್ಚು ಭಾಗವಹಿಸುವುದನ್ನು, ಹೆಚ್ಚು ಕ್ರಿಯಾಶೀಲರಾಗಿರುವುದನ್ನು ತೆರೆದಿಟ್ಟಿವೆ. ಒಂದು ಪ್ರಶ್ನೆ ಅಥವಾ ಚರ್ಚೆಯನ್ನು ಮೊದಲು ಮಾಡಲು ಹುಡುಗಿಯರು ಹಿಂದೇಟುಹಾಕುತ್ತಾರೆ. ಇಂತಹ ಸಂದರ್ಭಗಳಲ್ಲಿ ಅಧ್ಯಾಪಕರು ಹುಡುಗಿಯರ ಹೆಸರು ಹೇಳಿ ಕರೆದು ಭಾಗವಹಿಸುವಂತೆ ಮಾಡಬೇಕು. ಅವಳು ಉತ್ತರಹೇಳಿದಾಗ ಪ್ರೋತ್ಸಾಹಿಸಬೇಕು; ಉತ್ತರ ಹೇಳದಾಗ ಹಿಯಾಳಿಸುವುದಾಗಲೀ ಮನಸ್ಸಿಗೆ ನೋವಾಗುವಂತಾಗಲೀ ಮಾಡಬಾರದು. ಹುಡುಗಿಯರಿಗೂ ನಾಯಕತ್ವ ವಹಿಸಿಕೊಡಬೇಕು. ಎಲ್ಲ ಗುಂಪುಚಟುವಟಿಕೆಗಳಲ್ಲೂ ಹುಡುಗ ಹುಡುಗಿಯರಿಬ್ಬರ ಭಾಗವಹಿಕೆ ಒಟ್ಟಾಗಿ ಆಗಬೇಕು.

**ಸೂಕ್ತ ಸಮಯದಲ್ಲಿ ಲೈಂಗಿಕ ಶಿಕ್ಷಣ**

ಮಕ್ಕಳು ಕಿಶೋರಾವಸ್ಥೆಗೆ ತಲುಪುವಾಗ ದೈಹಿಕವಾಗಿ ಮತ್ತು ಮಾನಸಿಕವಾಗಿ ಅನೇಕ ಬದಲಾವಣೆಗಳಾಗುತ್ತವೆ. ಅವರನ್ನು ನಿಯಂತ್ರಿಸಿಕೊಳ್ಳಲು ಅವರಿಗೇ ಸಾಧ್ಯವಾಗದು. ಈ ಸಮಯದಲ್ಲಿ ಸೂಕ್ತ ಸಮಾಲೋಚನೆ, ಮಾಹಿತಿಗಳನ್ನು ಅರಿವು ಆದ್ಯತೆಗಳನ್ನು ತಪ್ಪದೆ ತಿಳಿಸಿಕೊಡಬೇಕು. ಲೈಂಗಿಕ ಹಿಂಸೆ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಮೊದಲೇ ಪ್ರಾರಂಭವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅತಿ ನಾಜೂಕಾಗಿ ಸನ್ನಿವೇಶವನ್ನು ನಿಭಾಯಿಸಬೇಕು. ಮಕ್ಕಳಿಗೆ ನೋವಾಗಬಾರದು. ಹುಡುಗರ ಮತ್ತು ಹುಡುಗಿಯರ ಕಿಶೋರಾವಸ್ಥೆಯಲ್ಲಿ ಅವರ ಅನುಭವಗಳನ್ನು ಧೈರ್ಯವಾಗಿ ಹೇಳಿಕೊಳ್ಳುವ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಲೈಂಗಿಕ ಹಿಂಸೆಗೆ ಒಳಗಾದ ಹುಡುಗಿಯರನ್ನೇ ಬಾಯಿಗೆ ಬಂದಂತೆ ಬೈಯುವ ಪರಿಪಾಠ ಇಲ್ಲದಿಲ್ಲ. ಹುಡುಗರೂ ಅವರಿಗೆ ಅಸಹಜವೆನಿಸುವ ಅನುಭವಗಳನ್ನು ಹಿರಿಯರಿಗೆ, ಅಧ್ಯಾಪಕರಿಗೆ ಹೇಳಿಕೊಳ್ಳಬೇಕು. ಶಾಲೆಯಲ್ಲಿ ಇದಕ್ಕಾಗಿಯೇ ಒಂದು 'ಸೆಲ್' ಇರಬೇಕು.

**ಅಧ್ಯಾಪಕರೇ ಮಾದರಿ**

ಎಲ್ಲರಿಗಿಂತ ಹೆಚ್ಚು ಪರಿಣಾಮಕಾರಿಯಾದ ಪಾತ್ರಮಾದರಿ ಎಂದರೆ ಶಿಕ್ಷಕರೇ. ಶಿಕ್ಷಕರ ನಡೆ, ನುಡಿ, ಕಾರ್ಯಗಳು ಅನುಕರಣೀಯವಾಗಿರಬೇಕು. ಯಾವುದಾದರೊಂದು ಹುಡುಗಿ ಪೈಲೆಟ್ ಅಥವಾ ಪೊಲಿಸ್ ಆಗುವ ಆಸೆ ಇದೆ ಎಂದರೆ 'ಅಯ್ಯೋ' ಎಂದು ಮೂಗುಮುರಿಯಬಾರದು. ಹಾಗೆಯೇ ಹುಡುಗರು ಸಂಗೀತ, ವಾದ್ಯ ಇತ್ಯಾದಿ ಅಂಶಗಳಲ್ಲಿ ಆಸಕ್ತಿ ತೋರಿದರೆ ಪ್ರೋತ್ಸಾಹಿಸಬೇಕು. ಗೆಳೆಯರ ಗುಂಪಿನ ಪ್ರಭಾವ ಮಕ್ಕಳಲ್ಲಿ ವಿಶೇಷವಾಗಿರುತ್ತದೆ. ಅದನ್ನು ಧನಾತ್ಮಕವಾಗಿ ಪೋಷಿಸಬೇಕು.

**ಲಿಂಗ ಮುಕ್ತ ವೃತ್ತಿ ಸಮಾಲೋಚನೆಯ ಯೋಜನೆ**

ವೃತ್ತಿಸಮಾಲೋಚನೆ ಮೊದಲಿಗೆ ಶಾಲೆಯಲ್ಲೇ ಪ್ರಾರಂಭವಾಗುತ್ತದೆ. ಈ ಹಂತದಲ್ಲಿ ಮಕ್ಕಳಲ್ಲಿ ಮೂಡಿಸುವ ವಿಶ್ವಾಸ ಭವಿಷ್ಯದ ನಾಯಕರನ್ನು ರೂಪಿಸುತ್ತದೆ. ಹುಡುಗರಂತೆಯೇ ವೃತ್ತಿಗಳನ್ನು ಕೈಗೊಳ್ಳಬೇಕೆಂದು ಹುಡುಗಿಯರಿಗೆ ಹೇಳುವುದಾದರೂ ಅವರಿಗೆ ಕುಟುಂಬ ವೃತ್ತಿಗಿಂತ ಆದ್ಯತೆಯ ಅಂಶ ಎಂದು ಹೇಳಿ ಮುಕ್ತಾಯಮಾಡಲಾಗುತ್ತದೆ. ಹುಡುಗಿಯರು ಉತ್ತಮ ಪತ್ನಿಗಳಾಗಬೇಕು, ತಾಯಂದಿರಾಗಬೇಕು ಎಂದು ಹೇಳಲಾಗುತ್ತದೆಯೇ ವಿನಾ ಹುಡುಗರು ಉತ್ತಮ ಅಪ್ಪಂದಿರಾಗಬೇಕು, ಗಂಡಂದಿರಾಗಬೇಕು ಎಂದು ಹೇಳುವುದು ಕಡಿಮೆ. ಎಲ್ಲರೂ ಉತ್ತಮ ಜೊತೆಗಾರರೂ ಪೋಷಕರೂ ಆಗಬೇಕು ಎಂದು ಹೇಳಿಕೊಡಬೇಕು. ಹುಡುಗಹುಡುಗಿಯರಿಬ್ಬರಿಗೂ ಮನೆಯ ಜವಾಬ್ದಾರಿ ಎಷ್ಟು ಮುಖ್ಯವೋ ಉದ್ಯೋಗದಲ್ಲಿ ಒಳ್ಳೆಯ ಹೆಸರು ಮಾಡುವುದೂ ಸೇವೆ ಸಲ್ಲಿಸುವುದೂ ಅಷ್ಟೇ ಮುಖ್ಯ ಎಂಬ ಸಂದೇಶವನ್ನು ಕೊಡಬೇಕು.

**ಪಡಿಯಚ್ಚುಗಳನ್ನು ಹೋಗಲಾಡಿಸಬೇಕೇ ವಿನಾ ಮಗುಚಿ ಹಾಕಬಾರದು**

ಪಡಿಯಚ್ಚುಗಳನ್ನು ಪರಿಶೀಲಿಸಿ ಅದನ್ನು ಮತ್ತೊಂದು ರೂಪದಲ್ಲಿ ಸ್ಥಾಪಿಸುವ ಪ್ರಯತ್ನಗಳಾಗಬಾರದು. ಅವಕಾಶಗಳು, ಗಮನ, ಸೇವೆ ಎಲ್ಲಕ್ಕೂ ಹುಡುಗಿಯರನ್ನು ಮತ್ತು ಮಹಿಳೆಯರನ್ನೇ ಕೇಂದ್ರವಾಗಿರಿಸಿಕೊಂಡು ಹುಡುಗರು, ಪುರುಷರು ಬಳಲುವಂತಾಗಬಾರದು. ಲಿಂಗಭೇದ ಮುಕ್ತ ಸಮಾಜವಷ್ಟೇ ನಮ್ಮ ಗುರಿಯಾಗಬೇಕು. ಇದು ರಾತ್ರೋ ರಾತ್ರಿ ಆಗುವ ಕೆಲಸವಲ್ಲ. ನಿಧಾನವಾಗಿ ಸಂಪೂರ್ಣ ಅರ್ಥೈಕೆಯೊಂದಿಗೆ ಮೂಡಿಬರಬೇಕು. ಆಗ ಅದು ಶಾಶ್ವತವಾಗಿರುತ್ತದೆ.

**ವಿಚಿತ್ರ ಅಭಿವ್ಯಕ್ತಿಗಳನ್ನು ಬಳಸದಿರುವುದರ ಕಡೆಗೆ ಗಮನ**

ಕೆಲವೊಮ್ಮೆ ತಿಳಿದೋ ತಿಳಿಯದೆಯೋ ಅಧ್ಯಾಪಕರು ಕೆಲವು ಮಾತುಗಳನ್ನು ಆಡುವುದುಂಟು. 'ಅವರು ಹುಡುಗರಲ್ಲವೇ, ಗಲಾಟೆ ಮಾಡುತ್ತಾರೆ; ಹುಡುಗಿಯರಲ್ಲವೇ ವೈಯ್ಯಾರವಿದ್ದದ್ದೇ' ಇತ್ಯಾದಿಯಾಗಿ. ಇದು ನಿಜವೇನಲ್ಲ. ಇಂತಹ ಮಾತುಗಳನ್ನು ಉದ್ದೇಶಪೂರ್ವಕವಾಗಿ ತಡೆದಿಡಬೇಕು.

**ಮಕ್ಕಳೊಂದಿಗಿನ ಅಂತರ್ ಕ್ರಿಯೆಯಲ್ಲಿ ಸ್ವನಿಯಂತ್ರಣ**

ಹುಡುಗಿಯರನ್ನು ಹೆಚ್ಚು ಸಮಾಧಾನಪಡಿಸುವುದು, ಹುಡುಗರನ್ನು 'ಬಿಂದಾಸ್ ಬಿಡುವುದು' ಇದೆಲ್ಲಾ ಸಲ್ಲದು. ಇಬ್ಬರಿಗೂ ಭಾವನೆಗಳಿವೆ. ಇಬ್ಬರನ್ನೂ ಅರ್ಥಮಾಡಿಕೊಳ್ಳಬೇಕಾಗಿದೆ. ಒಂದೇ ರೀತಿ ಪರಿಗಣಿಸಬೇಕಾಗಿದೆ.

**ಸಾಂಪ್ರದಾಯಿಕ ಶೈಲಿಯಲ್ಲಿ ಕಾರ್ಯಹಂಚಿಕೆ ಮಾಡದಿರುವುದು**

ಹುಡುಗಿಯರು ತರಗತಿಯ ಕಸ ಗುಡಿಸಿ, ಹುಡುಗರು ಬೆಂಚು ಜರುಗಿಸಿ, ಹುಡುಗಿಯರು ತರಗತಿ ಅಲಂಕರಣ ನೋಡಿಕೊಳ್ಳಿ, ಹುಡುಗರು ತರಗತಿಯ ಹೊರಗೆ ಬಂಟಿಂಗ್ಸ್ ಕಟ್ಟಿ ಎಂದು ಹೇಳುವ ಬದಲಿಗೆ ಇವುಗಳನ್ನು ಈ ತರಗತಿಯವರು ಮಾಡಿರಿ ಎಂದು ಹೇಳಿದರೆ ಅವರಿಗೆ ಯಾವುದು ಇಷ್ಟವೋ ಯಾವುದು ಸಾಧ್ಯವೋ ಅದನ್ನು ಮಾಡುತ್ತಾರೆ. ಕೆಲವೊಮ್ಮೆ ಮಕ್ಕಳೇ 'ಮಿಸ್ ಅವಳು ಹುಡುಗಿ, ಅದಕ್ಕೇ ನಮ್ಮೊಂದಿಗೆ ಚೆಂಡು ಆಡಲು ಬರುವುದಿಲ್ಲ' ಎಂದು ಹೇಳುತ್ತಾರೆ. ಅದನ್ನೇ 'ಬೋಧನಾ ಕ್ಷಣ'ವಾಗಿ ಗುರುತಿಸಿಕೊಂಡು ಆ ಮಗುವನ್ನೂ ಚೆಂಡು ಆಡಲು ಪ್ರೋತ್ಸಾಹಿಸಿ, ಕಳುಹಿಸಬೇಕು.

**ಪಡಿಯಚ್ಚು ಗ್ರಹಿಕೆಗಳ ಬದಲಿಸುವಿಕೆ**

ಮಕ್ಕಳಿಗೆ ಮೊದಲಿಗೆ ಪೋಲೀಸು, ನರ್ಸು, ಕಂಡಕ್ಟರ್ ಚಿತ್ರಗಳನ್ನು ಬಿಡಿಸಲು ಹೇಳಬೇಕು. ಅವರು ಸಾಮಾನ್ಯವಾಗಿ ಗಂಡು ಪೋಲೀಸ್, ಹೆಣ್ಣು ನರ್ಸ್ ಮತ್ತು ಗಂಡು ಕಂಡಕ್ಟರ್‌ಗಳ ಚಿತ್ರ ಬರೆಯುತ್ತಾರೆ. ಶಾಲೆಗೆ ಮಹಿಳಾ ಪೋಲೀಸ್, ಗಂಡು ನರ್ಸ್(ಬ್ರದರ್) ಮತ್ತು ಹೆಣ್ಣು ಕಂಡಕ್ಟರ್‌ಗಳನ್ನು ಕರೆಸಿ ಅವರ ಅನುಭವಗಳನ್ನು ಹಂಚಿಕೊಳ್ಳಲು ಹೇಳಿ. ಇದು ಸಹಜವಾಗಿಯೇ ಪಡಿಯಚ್ಚುಗಳನ್ನು ಬದಲಿಸುತ್ತದೆ.

**ಲಿಂಗ ಸಮಾನ ನೀತಿಗಳನ್ನು ರೂಪಿಸಿ**

ಲಿಂಗ ತಟಸ್ಥ ಭಾಷೆ, ವರ್ತನೆ, ಕೌಶಲಗಳು ಇತ್ಯಾದಿಗಳನ್ನು ಪೋಷಿಸುವ ಲಿಂಗ ಸಮಾನ ನಿಯಮಗಳನ್ನು ರೂಪಿಸಿಕೊಳ್ಳಲು ಶಾಲಾ ಸಿಬ್ಬಂದಿ ಪ್ರಯತ್ನಿಸಬೇಕು. ಲಿಂಗ ಭೇದವನ್ನು ಹುಟ್ಟಿಸದ ವರ್ತನೆಗಳನ್ನು ಪೋಷಿಸಬೇಕು.

**ಪ್ರತಿಫಲನಾತ್ಮಕವಾದ ಮತ್ತು ವಸ್ತುನಿಷ್ಠವಾದ ಚಿಂತನೆ**

ಅಭ್ಯಾಸಗಳನ್ನು ಕಾರ್ಯಕ್ರಮಗಳನ್ನು ವೀಡಿಯೋ ಮಾಡಿಕೊಂಡು ಅಧ್ಯಾಪಕರು ಅವರ ತಪ್ಪುಗಳನ್ನು ಅವರೇ ತಿದ್ದಿಕೊಳ್ಳಬೇಕು. ನಾವು ಸರಿ ಇರುವುದು ಇಲ್ಲದಿರುವುದು ಇಲ್ಲಿ ತಿಳಿಯುತ್ತವೆ. ಮತ್ತು ಉತ್ತಮಿಕೆಗೆ ಆಲೋಚನೆಗಳು ಮೂಡುತ್ತವೆ.

**ಸವಾಲುಗಳು**

ಲಿಂಗಮುಕ್ತ ಶಾಲಾ ಪರಿಸರವನ್ನು ಮೂಡಿಸುವುದು ಅಷ್ಟೇನೂ ಸುಲಭವಲ್ಲ. ಈ ಹಾದಿಯಲ್ಲಿ ಹಲವಾರು ಸವಾಲುಗಳಿವೆ. ಅವುಗಳಲ್ಲಿ ಕೆಲವು ಹೀಗಿವೆ:

- ಅಂತಹ ನಿಲುವುಗಳನ್ನು ತೆಗೆದುಕೊಳ್ಳಲು ಶಾಲಾ ಸಿಬ್ಬಂದಿಯ ಒಮ್ಮತ ಇಲ್ಲದಿರಬಹುದು;
- ಲಿಂಗ ಪಡಿಯಚ್ಚು ವಿರೋಧಿ ಚಿಂತನೆಗಳು ಅಧ್ಯಾಪಕರಿಗೆ ಇಷ್ಟವಾಗದಿರಬಹುದು;
- ಈ ಪರಿಸರ ಬಯಸುವ ವರ್ತನೆಗಳಿಗೆ ಅಧ್ಯಾಪಕರು ಹೊಂದಿಕೊಳ್ಳದಿರಬಹುದು;
- ಶಾಲೆಯೊಳಗಿನ 'ರಾಜಕೀಯ' ಇದಕ್ಕೆ ಅಡ್ಡಿಯಾಗಬಹುದು;
- ಪುರುಷಪ್ರಧಾನ ಮನೋಭಾವ ನಿರ್ದಿಷ್ಟ ಪ್ರದೇಶದಲ್ಲಿ ಅತ್ಯಂತ ಬಲಿಷ್ಠವಾಗಿದ್ದು ಇಂತಹ ಆಲೋಚನೆಗಳ ವಿರುದ್ಧ ಸಿಡಿದೇಳಬಹುದು;
- ಸಂಪ್ರದಾಯಸ್ಥ ಮಹಿಳೆಯರೇ ಇಂತಹ ಮನೋಭಾವವನ್ನು ಮೆಚ್ಚದಿರಬಹುದು;
- ಹುಡುಗರು ಬದಲಾಗಲು ಒಪ್ಪದಿರಬಹುದು; ಅವರ ಹಿನ್ನೆಲೆಯ ಮನೋಭಾವಗಳನ್ನೇ ಬೆಳೆಸಿಕೊಳ್ಳುವ ಹಠ ಹಿಡಿಯಬಹುದು; ಅದೇ ಸರಿಯೆಂದು ಮೊಂಡುವಾದ ಮಾಡಬಹುದು;
- ಹಿಂದಿನವರೆಲ್ಲ ಅಜ್ಞಾನಿಗಳೇ? ಹಿಂದೆ ಜನ ಸರಿ ಇರಲಿಲ್ಲವೇ? ಇದೇನು ಹೊಸತು ಎಂಬ ಮಾತುಗಳು ಸುಳಿದಾಡಬಹುದು ಮತ್ತು ಇದೂ ಒಂದು ರೀತಿಯ ತಾಟಸ್ಥ್ಯದ ಅಭಿವ್ಯಕ್ತಿಯಾಗಿರಬಹುದು;
- ಹುಡುಗರು/ ಗಂಡಸರು ಅವರ ಸವಲತ್ತುಗಳನ್ನು ಬಿಟ್ಟುಕೊಡಲು ಒಪ್ಪದಿರಬಹುದು.

ಈ ಎಲ್ಲ ಸವಾಲುಗಳನ್ನು ಎದುರಿಸಿಯೇ ಸೂಕ್ತ ಅರಿವು ಮನೋಭಾವಗಳನ್ನು ಬೆಳೆಸಿಕೊಂಡೇ ಶಾಲಾ ಪರಿಸರವು ಲಿಂಗಭೇದ ಮುಕ್ತ ಪರಿಸರವನ್ನು ರೂಪಿಸುವಲ್ಲಿ ನಿಷ್ಠುರವಾದ ನೀತಿ ನಿಯಮಗಳನ್ನು ರೂಪಿಸಿ, ಸನ್ನಿವೇಶ ಸರಳವಾಗಿಲ್ಲದಿದ್ದರೆ ಗುರಿಮುಟ್ಟುವತನಕ ಹೋರಾಡಬೇಕಾಗುತ್ತದೆ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

ಲಿಂಗಭೇದ ಮುಕ್ತವಾದ ಶಾಲಾ ಪರಿಸರವನ್ನು ಸೃಷ್ಟಿಸುವಲ್ಲಿ ಅಗತ್ಯವಾದ ಕೆಲವು ವರ್ತನೆಗಳನ್ನು ಕೆಳಗೆ ಕೊಡಲಾಗಿದೆ. ನೀವು ಈ ವಿಚಾರಕ್ಕೆ ಸಂಬಂಧಿಸಿದಂತೆ ಎಷ್ಟು ಸಕ್ರಿಯರಾಗಿರುವಿರಿ ಎಂಬುದನ್ನು ಗಮನಿಸಿಕೊಳ್ಳಿ.

| | **ಹೇಳಿಕೆಗಳು** | **ಬಹಳಮಟ್ಟಿಗೆ ಒಪ್ಪುತ್ತೇನೆ 3** | **ಸ್ವಲ್ಪಮಟ್ಟಿಗೆ ಒಪ್ಪುತ್ತೇನೆ 2** | **ಒಪ್ಪುವುದಿಲ್ಲ 1** |
|---|---|---|---|---|
| 1 | ಲಿಂಗಭೇದ ಶಾಲೆಯಲ್ಲಿ ಇರಬಾರದು ಎಂಬ ಅರಿವು ನನ್ನಲ್ಲಿ ಜಾಗೃತವಾಗಿ ಇದೆ. | | | |
| 2 | ಲಿಂಗಭೇದವನ್ನು ಹೋಗಲಾಡಿಸುವುದು ನನ್ನ ಜವಾಬ್ದಾರಿ | | | |
| 3 | ನಮ್ಮ ಶಾಲೆಯಲ್ಲಿ ಲಿಂಗಭೇದವಿದೆಯೇ ಎಂಬುದರ ಕುರಿತು ನಾನು ಗಮನದಿಂದ ವೀಕ್ಷಿಸುತ್ತಿರುತ್ತೇನೆ | | | |
| 4 | ನಮ್ಮ ಶಾಲೆಯಲ್ಲಿ ಲಿಂಗಭೇದ ಉಂಟುಮಾಡುವ ಅಭ್ಯಾಸಗಳು ಇವೆ ಎಂಬ ಅರಿವು ನನಗಿದೆ | | | |
| 5 | ಲಿಂಗಭೇದವನ್ನು ಹೋಗಲಾಡಿಸುವ ಪ್ರಕ್ರಿಯೆಯಲ್ಲಿ ನಾನು ಸಕ್ರಿಯವಾಗಿದ್ದೇನೆ | | | |
| 6 | ಲಿಂಗಭೇದ ಕಂಡುಬಂದ ಕೂಡಲೆ ಅಧ್ಯಾಪಕರಲ್ಲಿ, ಮುಖ್ಯೋಪಾಧ್ಯಾಯರಲ್ಲಿ ಚರ್ಚಿಸುತ್ತೇನೆ | | | |
| 7 | ಎಂತಹ ವರ್ತನೆಗಳು ಲಿಂಗಭೇದವನ್ನುಂಟುಮಾಡಬಲ್ಲವು ಎಂಬುದನ್ನು ನಾನು ಮಕ್ಕಳಿಗೆ ಸಾಂದರ್ಭಿಕವಾಗಿ ತಿಳಿಸಿ ಹೇಳುತ್ತೇನೆ | | | |
| 8 | ಲಿಂಗಭೇದವನ್ನು ಪೋಷಿಸುವ ಸುತ್ತೋಲೆಗಳೇನಾದರೂ ಬಂದರೆ ಅದನ್ನು ವಿರೋಧಿಸುತ್ತೇನೆ | | | |
| 9 | ಲಿಂಗಭೇದವನ್ನುಂಟುಮಾಡುವ ಮಾತುಗಳನ್ನಾಡದಿರಲು ಜಾಗ್ರತೆ ವಹಿಸುತ್ತೇನೆ | | | |
| 10 | ಬಳಸುವ ಯಾವುದೇ ಬೋಧನಾ ಕಲಿಕಾ ಸಾಮಗ್ರಿ ಲಿಂಗಭೇದದಿಂದ ಮುಕ್ತವಾಗಿದೆ ಎಂದು ಖಚಿತಪಡಿಸಿ ಕೊಳ್ಳುತ್ತೇನೆ | | | |

ನೀವು ಪಡೆದ ಅಂಕಗಳನ್ನು ಗುರುತಿಸಿಕೊಳ್ಳಿ. ಕಡಿಮೆಯಾದರೆ ಕಾರಣಗಳನ್ನು ಕಂಡುಕೊಂಡು ಮುಂದೆ ಹೆಚ್ಚು ಸಕ್ರಿಯರಾಗಲು ಒಂದು ಕಾರ್ಯಯೋಜನೆಯನ್ನು ರೂಪಿಸಿಕೊಳ್ಳಿ.

## 2.4.4. ಸಾರಾಂಶಿಸೋಣ

- ನಮ್ಮ ಶಾಲೆಗಳಲ್ಲಿ ಇಂದಿಗೂ ಲಿಂಗಭೇದ ಇದೆ
- ನಮ್ಮ ಶಿಕ್ಷಣ ವ್ಯವಸ್ಥೆ 'ಲಿಂಗಭೇದ ಮುಕ್ತ ಶಿಕ್ಷಣ' ವ್ಯವಸ್ಥೆಯಾಗಬೇಕು ಎಂದು ನಾವು ಹೇಳುತ್ತಲೇ ಬಂದಿದ್ದರೂ ಅದು ಇದುವರೆಗೆ ಸಾಧಿತವಾಗಿಲ್ಲ.

- ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದಂತೆ ಅಧ್ಯಾಪಕರೇ ಬದಲಾವಣೆಯ ನಿಯೋಗಿಗಳಾಗುವಲ್ಲಿ ಹೆಚ್ಚಿನ ಪ್ರಯೋಜನಗಳಿವೆ.
- ಲಿಂಗ ಸಮಾನತೆ ಮತ್ತು ಗೌರವಯುತ ಸಂಬಂಧಗಳನ್ನು ಪೋಷಿಸಲು ತರಗತಿ ಶಿಕ್ಷಕರಿಗೆ ಆದರ್ಶವಾದ ಅವಕಾಶಗಳಿರುತ್ತವೆ.
- ಲಿಂಗವಿಚಾರಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ಬದಲಾವಣೆಯ ನಿಯೋಗಿಗಳಾಗಲು ವಿಶಿಷ್ಟ ಮಾರ್ಗಗಳು ಮತ್ತು ಮಾರ್ಗೋಪಾಯಗಳು ಇವೆ.

## 2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1**

ನಿಮ್ಮ ನಿಗಮನಗಳನ್ನು ಗುರುತಿಸಿಕೊಂಡು ಶಿಕ್ಷಕರ ಸಭೆಯಲ್ಲಿ ಚರ್ಚಿಸಿ. ಸೂಕ್ತ ಕಾರ್ಯಯೋಜನೆಯನ್ನು ರೂಪಿಸಿಕೊಳ್ಳಿ

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

ಫಲಿತಾಂಶಗಳನ್ನು ಅಧ್ಯಾಪಕರೊಂದಿಗೆ ಚರ್ಚಿಸಿ ಲಿಂಗಭೇದವನ್ನು ಹೋಗಲಾಡಿಸಲು ನಿಮ್ಮನ್ನು ಸಿದ್ಧಪಡಿಸಿಕೊಳ್ಳಿ.

## 2.4.6. ಘಟಕಾಂತ್ಯ ಅಭ್ಯಾಸಗಳು

1. ಲಿಂಗಭೇದಮುಕ್ತವಾದ ಸಮಾಜವನ್ನು ರೂಪಿಸುವಲ್ಲಿ ಇತರ ಸಂಸ್ಥೆಗಳಿಗಿಂತ ಶಾಲೆ ಹೆಚ್ಚು ಪರಿಣಾಮಕಾರಿ ಏಕೆ ಎಂಬುದನ್ನು ಮತ್ತು ಅಂತಹ ಪರಿಸರವನ್ನು ಸೃಷ್ಟಿಸಬೇಕಾದ ಇಂದಿನ ಅಗತ್ಯವನ್ನು ಚರ್ಚಿಸಿ.
2. ಲಿಂಗಭೇದಮುಕ್ತವಾದ ಸಮಾಜವನ್ನು ರೂಪಿಸುವ ಗುರಿಯನ್ನು ಸಾಧಿಸಲು ಅಧ್ಯಾಪಕರು ಶಾಲೆಯಲ್ಲಿ ಅನುಸರಿಸಬಹುದಾದ ಮಾರ್ಗಗಳನ್ನು ಮತ್ತು ಮಾರ್ಗೋಪಾಯಗಳನ್ನು ವಿವರಿಸಿ.

## 2.4.7. ಪರಾಮರ್ಶನ ಸೂಚಿ


1. http://www.teachersofindia.org/en/article/gender-equality-classroom
2. https://e2epublishing.info/blog/2016/9/11/tips-to-promote-gender-equality-in-your-classroom
3. HABÝBE BURCU BABA : Teacher Candidates as the agents of Change for a more Gender Equal Socitey: A Master thesis submitted to the graduate school of social sciences of middle east technical university. SEPTEMBER 2007
4. https://learningenglish.voanews.com/a/promoting-gender-equality-with-teaching-strategies/3986846.html
5. https://etd.lib.metu.edu.tr/upload/12608851/index.pdf
6. https://tandfonline.com/doi/full/10.1080/13540602.2015.1044328?src=recsys
7. http://www.bdu.ac.in/cde/docs/ebooks/B-Ed/II/GENDER,%20SCHOOL,%20SOCIETY%20 AND%20INCLUSIVE%20SCHOOL.pdf
8. https://www.empowerwomen.org/en/community/discussions/2015/11/schools-and-teachers-role-in-promoting-gender-equality


*************

# ಬ್ಲಾಕ್–2 : ಲಿಂಗತ್ವ ಮತ್ತು ಶಿಕ್ಷಣ

## ಘಟಕ–5 : ಲಿಂಗತ್ವ ಮತ್ತು ಶಿಕ್ಷಣದ ಸಿದ್ಧಾಂತಗಳ ಪರಿಚಯ (ಭಾರತೀಯ ಹಿನ್ನೆಲೆ): ಸಾಮಾಜೀಕರಣ ಸಿದ್ಧಾಂತ ಮತ್ತು ರಚನಾತ್ಮಕ ಸಿದ್ಧಾಂತ

**ಘಟಕದ ರಚನೆ**


2.5.1. ಕಲಿಕೆಯ ಉದ್ದೇಶಗಳು

2.5.2. ಪೀಠಿಕೆ

2.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.5.3.1. ಸಾಮಾಜೀಕರಣ ಸಿದ್ಧಾಂತ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

2.5.3.2. ರಚನಾತ್ಮಕ ಸಿದ್ಧಾಂತ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

2.5.3.3. ಸಾಮಾಜೀಕರಣ ಮತ್ತು ರಚನಾತ್ಮಕ ಸಿದ್ಧಾಂತಗಳ ಶೈಕ್ಷಣಿಕ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 3

2.5.4. ಸಾರಾಂಶಿಸೋಣ

2.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2 ಮತ್ತು 3

2.5.6. ಘಟಕಾಂತ್ಯ ಅಭ್ಯಾಸಗಳು

2.5.7. ಪರಾಮರ್ಶನ ಸೂಚಿ


## 2.5.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಪೂರ್ಣಗೊಳಿಸಿದ ನಂತರ, ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು:

- ಲಿಂಗತ್ವ ಪರಿಚಯದ ಸಾಮಾಜೀಕರಣ ಸಿದ್ಧಾಂತದ ತತ್ತ್ವಗಳನ್ನು ವಿವರಿಸುವರು;
- ಲಿಂಗತ್ವ ಪರಿಚಯದ ರಚನಾತ್ಮಕ ಸಿದ್ಧಾಂತದ ತತ್ತ್ವಗಳನ್ನು ವಿವರಿಸುವರು;
- ಸಾಮಾಜೀಕರಣ ಸಿದ್ಧಾಂತ ಮತ್ತು ರಚನಾತ್ಮಕ ಸಿದ್ಧಾಂತಗಳ ಶೈಕ್ಷಣಿಕ ನಿಹಿತಾರ್ಥಗಳನ್ನು ಗುರುತಿಸುವರು; ಮತ್ತು
- ಸಾಮಾಜಿಕ ಮತ್ತು ರಚನಾತ್ಮಕ ಸಿದ್ಧಾಂತಗಳ ತತ್ತ್ವಗಳನ್ನು ವಿಶ್ಲೇಷಿಸುವರು.

## 2.5.2. ಪೀಠಿಕೆ

ಲಿಂಗತ್ವ ಅನನ್ಯತೆಯ ಪರಿಕಲ್ಪನೆಯು ನಿಮಗೆ (ಈಗಾಗಲೇ) ಹಿಂದಿನ ಘಟಕಗಳಲ್ಲಿ ಅರ್ಥವಾಗಿದೆ. ನಮ್ಮ ಶಿಷ್ಯರಿಗೆ ಮಾರ್ಗದರ್ಶನ ನೀಡುವುದಕ್ಕಾಗಿ ಶಿಕ್ಷಕರಾದ ನಮಗೆ ಈ ಪರಿಕಲ್ಪನೆಯ ಕುರಿತು ಮತ್ತಷ್ಟನ್ನು ತಿಳಿದುಕೊಳ್ಳುವ ಅಗತ್ಯವಿದೆ. ಕೇವಲ ಈ ಶಬ್ದದ ಅರ್ಥ ತಿಳಿದಿರುವುದು ಸಾಕಾಗುವುದಿಲ್ಲ, ಆದರೆ, ಈ ಪರಿಕಲ್ಪನೆಯ ಏಕೆ ಮತ್ತು ಹೇಗೆಯ ಕುರಿತು ಸಂಪೂರ್ಣವಾಗಿ ತಿಳಿದಿರುವುದೂ ಅಗತ್ಯವಾಗಿದೆ. ಸಾಕಷ್ಟು ತಜ್ಞರು ಈ ಪ್ರಕ್ರಿಯೆಯ ಕುರಿತು ಆಲೋಚಿಸಿದ್ದಾರೆ ಮತ್ತು ಲಿಂಗತ್ವ ಅನನ್ಯತೆಗೆ ಸಂಬಂಧಿಸಿದ ಹಲವಾರು ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ಸಿದ್ಧಾಂತಗಳು ಎಂದರೇನು? ಎಂಬ ಪ್ರಶ್ನೆ ನಿಮ್ಮ ಮುಂದೆ ಬಂದರೆ, ಹೇಗೆ ಮತ್ತು ಏಕೆ ಪ್ರಕ್ರಿಯೆಗಳು ಕೆಲಸಮಾಡುತ್ತವೆ ಅಥವಾ ಜಗತ್ತು ನಿರ್ವಹಣೆ ಮಾಡುತ್ತದೆ ಎಂಬುದನ್ನು ತಿಳಿಸುವುದೇ ಸಿದ್ಧಾಂತ. ಶಿಕ್ಷಣದಂತಹ ಸಮಾಜ ವಿಜ್ಞಾನಗಳಿಗೆ ಜನರು ತಮ್ಮನ್ನು ಗುರುತಿಸುವ ವಿಧಾನಗಳ ವಿದ್ಯಮಾನವನ್ನು ಅರ್ಥಮಾಡಿಕೊಳ್ಳಲು ಬೇಕಾದ ಒಂದು ಚೌಕಟ್ಟಾಗಿ ಸೈದ್ಧಾಂತಿಕ ದೃಷ್ಟಿಕೋನಗಳನ್ನು ಬಳಸುವುದು ಮುಖ್ಯವಾಗಿದೆ. ಲಿಂಗತ್ವ ಅನನ್ಯತೆಯ ವಿದ್ಯಮಾನವನ್ನು ಅರ್ಥಮಾಡಿಕೊಳ್ಳಲು ಈ ಸಿದ್ಧಾಂತಗಳು ಸರಿಯಾದ ನೆಲೆಯನ್ನು ನೀಡುವುದರೊಂದಿಗೆ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲೂ ಸಹಾಯಮಾಡುತ್ತವೆ. ಆದ್ದರಿಂದ, ಈ ಘಟಕದಲ್ಲಿ ನಾವು ಲಿಂಗತ್ವ ಅನನ್ಯತೆಗೆ ಸಂಬಂಧಿಸಿದ ಕೆಲವು ಸಿದ್ಧಾಂತಗಳನ್ನು ವಿವರಿಸಿ ಅವುಗಳ ಶೈಕ್ಷಣಿಕ ಇಂಗಿತಗಳ ಕುರಿತು ಚರ್ಚಿಸಲಿದ್ದೇವೆ.

ಲಿಂಗತ್ವ ಅನನ್ಯತೆ ಎಂದರೆ ಒಬ್ಬ ವ್ಯಕ್ತಿಯ ಲಿಂಗದ ಕುರಿತು ಇರುವ ವೈಯಕ್ತಿಕ ಸಂವೇದನೆ. ಜನನ ಸಮಯದಲ್ಲಿ ನಿಗದಿತವಾದ ಲಿಂಗಕ್ಕೆ ಲಿಂಗತ್ವ ಅನನ್ಯತೆ ಸಂಬಂಧ ಹೊಂದಿರಬಹುದು ಅಥವಾ ಅದರಿಂದ ಭಿನ್ನವಾಗಿಯೂ ಇರಬಹುದು. ಎಲ್ಲಾ ಸಮಾಜಗಳೂ ಲಿಂಗತ್ವ ವರ್ಗಗಳ ಒಂದು ವ್ಯವಸ್ಥೆಯನ್ನು ಹೊಂದಿರುತ್ತದೆ. ಈ ವ್ಯವಸ್ಥೆಯು ಸಮಾಜದ ಇತರ ಸದಸ್ಯರ ಜೊತೆ ಒಬ್ಬ ವ್ಯಕ್ತಿಯ ಸಾಮಾಜಿಕ ಅನನ್ಯತೆ ಉಂಟಾಗುವುದಕ್ಕೆ ಆಧಾರವಾಗುತ್ತದೆ.

ಹೆಚ್ಚಿನ ಸಮಾಜಗಳಲ್ಲಿ, ಗಂಡಸರು ಮತ್ತು ಹೆಂಗಸರಿಗೆ ನಿಗದಿತವಾದ ಲಿಂಗತ್ವದ ಗುಣಲಕ್ಷಣಗಳಲ್ಲಿ ಮೂಲಭೂತ ವ್ಯತ್ಯಾಸವು ಇರುತ್ತದೆ. ಇದನ್ನು ಲಿಂಗತ್ವ ದ್ವೈವಿಧ್ಯ ಎಂದು ತಿಳಿಯಲಾಗಿದ್ದು, ಹೆಚ್ಚಿನವರು ಇದನ್ನು ಅನುಸರಿಸುತ್ತಾರೆ. ಜೈವಿಕ ಲೈಂಗಿಕತೆ, ಲಿಂಗತ್ವ ಪರಿಚಯ ಮತ್ತು ಲಿಂಗತ್ವ ಅಭಿವ್ಯಕ್ತಿಗಳು ಎಂಬ ಲಿಂಗ ಮತ್ತು ಲಿಂಗತ್ವಗಳ ಎಲ್ಲಾ ಅಂಶಗಳಲ್ಲಿ. ಪುರುಷತ್ವ ಮತ್ತು ಸ್ತ್ರೀತ್ವದ ಎಲ್ಲಾ ನಿರೀಕ್ಷೆಗಳೂ ಒಳಗೊಂಡಿರುತ್ತದೆ. ಕೆಲವರನ್ನು ತಮ್ಮ ಜೈವಿಕ ಲಿಂಗಕ್ಕೆ ನಿಗದಿತವಾದ ಲಿಂಗತ್ವದ ಎಲ್ಲಾ ಅಥವಾ ಕೆಲವು ಅಂಶಗಳೊಂದಿಗೆ ಗುರುತಿಸಲಾಗುವುದಿಲ್ಲ. ಇವರಲ್ಲಿ ಕೆಲವರು ಲಿಂಗತ್ವ–ಅನನ್ವಯಿ (Trans Gender), ದ್ವೈವಿಧ್ಯ–ಹೀನ (Gender Queer) ಆಗಿರುತ್ತಾರೆ. ಕೆಲವು ಸಮಾಜಗಳಲ್ಲಿ ಮೂರನೆಯ ಲಿಂಗತ್ವವರ್ಗವಿರುತ್ತದೆ.

ಲಿಂಗತ್ವ ಗುರುತಿನ ರಚನೆಯು ಹೇಗೆ, ಯಾವಾಗ ಮತ್ತು ಏಕೆ ಎಂಬವುಗಳನ್ನು ವಿವರಿಸುವುದಕ್ಕಾಗಿ ಅನೇಕ ಸಿದ್ಧಾಂತಗಳನ್ನು ಮುಂದಿಡಲಾಗಿದೆ. ಇದರ ಅಧ್ಯಯನವು ಸವಾಲಿನಿಂದ ಕೂಡಿದೆ, ಏಕೆಂದರೆ ಮಕ್ಕಳು ತಮ್ಮ ಈ ಅಂಶಗಳನ್ನು ವ್ಯಕ್ತಪಡಿಸಲಾರರು, ಆದ್ದರಿಂದ ಸಂಶೋಧಕರು ಕಲ್ಪಿಸಿಕೊಳ್ಳಬೇಕಾಗುತ್ತದೆ ಅಥವಾ ಊಹಿಸಿಕೊಳ್ಳಬೇಕಾಗುತ್ತದೆ. ಆದರೆ, 18 ತಿಂಗಳುಗಳಿಂದ ಎರಡು ವರ್ಷದೊಳಗಿನಷ್ಟು ಮುಂಚೆಯೇ ಮಕ್ಕಳಲ್ಲಿ ಲಿಂಗತ್ವದ ಕುರಿತು ಅರಿವು ಇದ್ದು ಅವರು ಅದಕ್ಕೆ ಅಷ್ಟಿಷ್ಟು ಮಹತ್ವವನ್ನು ಕೊಡುತ್ತಾರೆ ಎಂದು ಕೆಲವು ಸಂಶೋಧಕರು ಹೇಳುತ್ತಾರೆ. ಪ್ರಸಿದ್ಧ ಮನಃಶಾಸ್ತ್ರಜ್ಞರಾದ ಲಾರೆನ್ಸ್ ಕೋಲ್‌ಬರ್ಗ್ ಅವರು ಮೂರು ವರ್ಷದವರೆಗೆ ಲಿಂಗತ್ವ ಅನನ್ಯತೆ ರೂಪುಗೊಳ್ಳುವುದಿಲ್ಲವೆಂದು ವಾದಿಸುತ್ತಾರೆ. ಮೂರು ವರ್ಷಗಳೊಳಗೆ ಲಿಂಗತ್ವ ಅನನ್ಯತೆ ಸ್ವಲ್ಪಮಟ್ಟಿಗೆ ರೂಪುಗೊಂಡಿರುತ್ತದೆ ಎಂದು ವ್ಯಾಪಕವಾಗಿ ಒಪ್ಪಲಾಗಿದೆ. ಈ ವಯಸ್ಸಿನಲ್ಲಿ ಮಕ್ಕಳು ತಮ್ಮ ಲಿಂಗತ್ವದ ಕುರಿತು ನಿರ್ದಿಷ್ಟ ಹೇಳಿಕೆಗಳನ್ನು ಮಾಡಬಲ್ಲರು. ತಮ್ಮ ಲಿಂಗತ್ವಕ್ಕೆ ಸೂಕ್ತವಾದ ಆಟದ ಚಟುವಟಿಕೆಗಳು ಮತ್ತು ಆಟಿಕೆಗಳನ್ನೇ ಅವರು ಆಯ್ದುಕೊಳ್ಳುತ್ತಾರೆ. ಇದು ಹೆಣ್ಣು ಮಕ್ಕಳಿಗೆ ಗೊಂಬೆಗಳು ಮತ್ತು ವರ್ಣಚಿತ್ರಗಳಾಗಿರಬಹುದು ಮತ್ತು ಗಂಡು ಮಕ್ಕಳಿಗೆ ಯಾಂತ್ರಿಕ ಉಪಕರಣಗಳು ಮತ್ತು ದಾಂಡು–ಚೆಂಡುಗಳಾಗಿರಬಹುದು. ಆದರೂ, ಈ ವಯಸ್ಸಿನಲ್ಲಿ

ಲಿಂಗತ್ವದ ಇಂಗಿತಗಳ ಕುರಿತು ಅವರಿಗೆ ಸ್ಪಷ್ಟತೆ ಇರುವುದಿಲ್ಲ. ಲಿಂಗತ್ವದ ಅನನ್ಯತೆಯನ್ನು ಮೂರನೇ ವಯಸ್ಸಿನ ನಂತರ ಬದಲಾಯಿಸುವುದು ಕಷ್ಟ ಮತ್ತು ಅಂತಹ ಯಾವುದೇ ಪ್ರಯತ್ನದಿಂದ ಮಗು ತನ್ನನ್ನು ಗ್ರಹಿಸುವುದು ಮತ್ತು ಜನರು ಈ ಮಗುವನ್ನು ಗ್ರಹಿಸುವ ವಿಷಯದಲ್ಲಿ ಸಂಘರ್ಷವುಂಟಾಗಬಹುದು. ಇದನ್ನು ಲಿಂಗತ್ವ 'ಮುಜುಗರ' (Gender Dysphria) ಎಂದು ಕರೆಯುತ್ತಾರೆ.

ಬೆಳವಣಿಗೆಯ ಈ ಪ್ರಕ್ರಿಯೆಯನ್ನು ಕೆಲವು ತಜ್ಞರು ಮೂರು ಹಂತಗಳಾಗಿ ವಿವರಿಸುತ್ತಾರೆ. ಮೊದಲಿಗೆ, ಅಂಬೆಗಾಲಿಡುವ ಮತ್ತು ಶಾಲೆಗೆ ಸೇರುವ ಮುಂಚಿನ ಹಂತದಲ್ಲಿ ಮಕ್ಕಳು ಲಿಂಗತ್ವದ ಸಾಮಾಜೀಕೃತ ಅಂಶಗಳ ನಿರ್ದಿಷ್ಟ ಗುಣಲಕ್ಷಣಗಳ ಕುರಿತು ಕಲಿಯುತ್ತಾರೆ. ಎರಡನೆಯದಾಗಿ, ಎಂದರೆ 5–7 ವರ್ಷಗಳ ಸುಮಾರಿಗೆ ಮಕ್ಕಳಲ್ಲಿ ಈ ಅನನ್ಯತೆ ಗಟ್ಟಿಗೊಂಡಿರುತ್ತದೆ ಮತ್ತು ಬಿಗಿಯಾಗಿರುತ್ತದೆ. ಬಿಗಿತನದ ಈ ಪರಾಕಾಷ್ಠೆಯ ನಂತರ, ಮೂರನೆಯ ಹಂತದಲ್ಲಿ ತರಲತೆಯು ಮತ್ತೆ ಬರುತ್ತದೆ ಮತ್ತು ಸಾಮಾಜಿಕವಾಗಿ ನಿರ್ದಿಷ್ಟವಾದ ಲಿಂಗತ್ವಸಂಬಂಧೀ ಪಾತ್ರಗಳು ಸ್ವಲ್ಪಮಟ್ಟಿಗೆ ಸಡಿಲಾಗುತ್ತವೆ. ಲಿಂಗತ್ವ ಪರಿಚಯದ ಬೆಳವಣಿಗೆಯನ್ನು ಕೆಲವು ತಜ್ಞರು ಲಿಂಗತ್ವದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು, ಲಿಂಗತ್ವಸಂಬಂಧೀ ಪಾತ್ರದ ನಿಗದಿತ ಅಳತೆಗೋಲುಗಳು ಮತ್ತು ರೂಢಿಗಳನ್ನು ಕಲಿತುಕೊಳ್ಳುವುದು, ಪೋಷಕರೊಂದಿಗೆ ಗುರುತಿಸಿಕೊಳ್ಳುವುದು ಮತ್ತು ಲಿಂಗತ್ವ ಆದ್ಯತೆಯನ್ನು ರೂಪಿಸಿಕೊಳ್ಳುವುದು ಎಂಬ ನಾಲ್ಕು ಹಂತಗಳಲ್ಲಿ ಕಾಣುತ್ತಾರೆ.

ಲಿಂಗತ್ವ ಗುರುತಿನ ರಚನೆಯ ಪ್ರಕ್ರಿಯೆಯನ್ನು ಇಲ್ಲಿಯವರೆಗೂ ಪೂರ್ಣವಾಗಿ ಅರ್ಥಮಾಡಿಕೊಳ್ಳಲಾಗದಿದ್ದರೂ ಜೈವಿಕ ಹಾಗೂ ಪರಿಸರಸಂಬಂಧೀ ಅಂಶಗಳೆರಡಕ್ಕೂ ಈ ವಿದ್ಯಮಾನವನ್ನು ಜನರು ಜೋಡಿಸುತ್ತಾರೆ. ಲಿಂಗತ್ವ ಪರಿಚಯದ ಕುರಿತು ಇರುವ ಹೆಚ್ಚಿನ ಸಿದ್ಧಾಂತಗಳು, ಇದು ಪರಿಸರಸಂಬಂಧೀ ಅಂಶಗಳ ಪರಿಣಾಮವೆಂಬುದಕ್ಕೆ ಒತ್ತು ನೀಡುತ್ತಾ, ಎರಡನೆಯ ಅಂಶಕ್ಕೆ ಸೇರಿಕೊಳ್ಳುತ್ತವೆ.

ಲಿಂಗತ್ವ ಅನನ್ಯತೆಯ ಮೇಲೆ ಪ್ರಭಾವ ಬೀರುವ ಸಾಮಾಜಿಕ ಅಂಶಗಳಲ್ಲಿ ಕುಟುಂಬ, ಅಧಿಕೃತ ಅಂಕಿಸಂಖ್ಯೆಗಳು, ಸಮೂಹ ಮಾಧ್ಯಮಗಳು ಮತ್ತು ಒಂದು ಮಗುವಿನ ಜೀವನದ ಮೇಲೆ ಪ್ರಭಾವ ಬೀರುವ ಇತರೆ ವ್ಯಕ್ತಿಗಳು ಲಿಂಗತ್ವವು ವಹಿಸುವ ಪಾತ್ರಗಳ ಬಗ್ಗೆ ಹೇಳಿಕೊಡುವ ಕಲ್ಪನೆಗಳು ಒಳಗೊಳ್ಳುತ್ತವೆ. ಲಿಂಗತ್ವದ ಪಾತ್ರಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ವ್ಯಕ್ತಿಗಳಿಂದ ಮಕ್ಕಳು ಬೆಳೆಸಲ್ಪಟ್ಟಾಗ, ಮಕ್ಕಳು ತಮ್ಮ ಲಿಂಗತ್ವ ಅನನ್ಯತೆಯನ್ನು ಸರಿಹೊಂದುವ ರೂಢಿಗತ ನಮೂನೆಗಳೊಂದಿಗೆ ಹೊಂದಿಸಿಕೊಂಡು ಅದೇ ರೀತಿಯಲ್ಲಿ ನಡೆದುಕೊಳ್ಳುವ ಸಾಧ್ಯತೆ ಇರುತ್ತದೆ. ಭಾಷೆಯೂ ಇಲ್ಲಿ ಪಾತ್ರ ವಹಿಸುತ್ತದೆ. ಮಕ್ಕಳು, ಒಂದು ಭಾಷೆಯನ್ನು ಕಲಿಯುವಾಗ, ಪುರುಷತ್ವ ಮತ್ತು ಸ್ತ್ರೀತ್ವದ ಲಕ್ಷಣಗಳನ್ನು ಬೇರ್ಪಡಿಸಲು ಕಲಿತು, ಈ ಪೂರ್ವನಿಗದಿತ ಪಾತ್ರಗಳಿಗೆ ತಮ್ಮ ನಡವಳಿಕೆಯನ್ನು ಅರಿವಿಲ್ಲದೆಯೇ ಹೊಂದಿಸಿಕೊಳ್ಳುತ್ತಾರೆ.

ಲಿಂಗತ್ವವನ್ನು ಸಾಮಾಜಿಕವಾಗಿ ಕಲಿಯಲಾಗುತ್ತದೆ ಎಂಬುದು ನಮಗೆ ತಿಳಿದಿದ್ದರೂ ಈ ಪ್ರಕ್ರಿಯೆಯು ನಿಜವಾಗಿಯೂ ಹೇಗಿರುತ್ತದೆ ಎಂಬುದನ್ನು ನಾವು ನಿರ್ದಿಷ್ಟವಾಗಿ ತಿಳಿದುಕೊಳ್ಳಬೇಕು. ಸಾಮಾಜೀಕರಣವು ಕೊಡುಕೊಳ್ಳುವಿಕೆಗಳಿಂದ ನಡೆಯುತ್ತದೆ, ಆದರೆ ಇದು ಮೇಲ್ನೋಟಕ್ಕೆ ಕಾಣುವಷ್ಟು ಸರಳವಾದದ್ದಲ್ಲ. ಲಿಂಗತ್ವ ಬೆಳವಣಿಗೆಯ ಬಗ್ಗೆ ಕೆಲವು ಸಿದ್ಧಾಂತಗಳನ್ನು ವಿಚಾರಮಾಡೋಣ.

## 2.5.3.1. ಲಿಂಗತ್ವ ಅನನ್ಯತೆಯ ಸಾಮಾಜೀಕರಣ ಸಿದ್ಧಾಂತಗಳು

ಪುರುಷತ್ವದ ವಿಷಯಗಳಾದ ಗಣಿತ ಮತ್ತು ವಿಜ್ಞಾನಗಳಲ್ಲಿ ಹೆಣ್ಣುಮಕ್ಕಳು ಕಳಪೆಯಾಗಿ ನಿರ್ವಹಿಸುವ ಸಾಧ್ಯತೆ ಇದೆ ಎಂಬ ಕಾರಣಕ್ಕಾಗಿ ಅವರು ಉನ್ನತಮಟ್ಟದ ಬೌದ್ಧಿಕ ಅಳತೆಗೋಲುಗಳನ್ನು ತಲುಪುವುದಿಲ್ಲ ಎಂದು ಒಂದು ಕಾಲದಲ್ಲಿ ಜನರು ನಂಬಿದ್ದರು. ಅನೇಕ ಸ್ತ್ರೀವಾದಿ ಚಿಂತಕರು ಇದನ್ನು ಅಲ್ಲಗಳೆದು ಹೆಣ್ಣು ಮಕ್ಕಳ ಬಗ್ಗೆ, ಅವರು ಕೆಲವು ವಿಷಯಗಳಲ್ಲಿ ಉತ್ತಮವಾಗಿ ನಿರ್ವಹಿಸಲಾಗದ್ದಕ್ಕೆ ಕಾರಣವಾದ, ಅನುಚಿತ ನಡೆವಳಿಕೆ ಮತ್ತು ತಪ್ಪುಸಾಮಾಜೀಕರಣಗಳೇ ಇದಕ್ಕೆ ಕಾರಣ ಎಂಬ ತೀರ್ಮಾನಕ್ಕೆ ಬಂದರು. ಇದು ಸಾಮಾಜೀಕರಣ

ಸಿದ್ಧಾಂತದ ಮೊದಲ ಹಂತ. ಸಾಮಾಜೀಕರಣದ ಮಧ್ಯವರ್ತನಗಳಿಂದ ಋಣಾತ್ಮಕ ಹಸ್ತಕ್ಷೇಪಕ್ಕೆ ಹೆಣ್ಣುಮಕ್ಕಳು ಗುರಿಯಾಗದಿದ್ದರೆ, ಗಂಡುಮಕ್ಕಳು ತಲುಪುವ ಅದೇ ಶೈಕ್ಷಣಿಕ ಗುಣಮಟ್ಟವನ್ನು ಹೆಣ್ಣುಮಕ್ಕಳೂ ತಲುಪಬಲ್ಲರು ಎಂದು ಸಾಮಾಜೀಕರಣ ಸಿದ್ಧಾಂತಜ್ಞರು ವಾದಿಸುತ್ತಾರೆ. ಸಾಮಾಜೀಕರಣ ಸಿದ್ಧಾಂತಜ್ಞರ ಮುಖ್ಯ ಚಿಂತನೆಗಳು ಈ ಕೆಳಗಿನಂತಿವೆ:

- ಲಿಂಗತ್ವಕ್ಕೆ ಸಂಬಂಧಿಸಿದ ನಡೆವಳಿಕೆಗಳು ಸಾಮಾಜೀಕರಣದ ಉತ್ಪನ್ನಗಳಾಗಿವೆ.
- ಪೋಷಕರು ಮತ್ತು ಇತರ ಹಿರಿಯರನ್ನು ಗಮನಿಸುವ ಮತ್ತು ಅನುಸರಿಸುವುದರ ಮೂಲಕ ಮಕ್ಕಳು ಗಂಡಸರು ಅಥವಾ ಹೆಂಗಸರಂತೆ ಇರಲು ಕಲಿಯುತ್ತಾರೆ.
- ಸಮಾಜದ ಲಿಂಗತ್ವ ಪದ್ಧತಿಗಳನ್ನು ತಮ್ಮೊಳಗೆ ತೆಗೆದುಕೊಳ್ಳುವ ಮೂಲಕ ಮಕ್ಕಳು ತಮ್ಮ ಗುರುತನ್ನು ಕಲಿಯುತ್ತಾರೆ.
- ಲಿಂಗತ್ವದ ರೂಢಿಗಳು ಮತ್ತು ಪಾತ್ರಾಪೇಕ್ಷೆಗಳಿಗೆ ಸಂಬಂಧಿಸಿದ ವಿಧೇಯತೆಯು ಕುಟುಂಬಗಳಲ್ಲಿನ ಲಿಂಗತ್ವವನ್ನು ಅವಲಂಬಿಸಿದ ದೈನಿಕ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಬೆಳೆಯುತ್ತದೆ.
- ಬಾಲ್ಯದ ಲಿಂಗತ್ವಬದ್ಧ ನಡೆವಳಿಕೆಗಳು ಜೀವಮಾನವಿಡೀ ಮುಂದುವರೆಯುತ್ತವೆ.
- ಬಾಲ್ಯದ ಲಿಂಗತ್ವಬದ್ಧ ನಡೆವಳಿಕೆಗಳು ಸಾಪೇಕ್ಷವಾಗಿ ಸ್ಥಿರವಾಗಿರುವ ಸಾಮಾಜಿಕ ಮತ್ತು ಸಾಂಪ್ರದಾಯಿಕ ಶಕ್ತಿಗಳ ಪರಿಣಾಮವಾಗಿರುತ್ತವೆ.
- ಎಲ್ಲಾ ಮಕ್ಕಳಿಗೆ ಲಿಂಗತ್ವ–ತಟಸ್ಥವಾಗಿರುವ ಶಿಕ್ಷಣವನ್ನು ನೀಡಿ ಹೆಣ್ಣುಮಕ್ಕಳ ಯಶಸ್ಸಿಗೆ ಇರುವ ಇತರ ತಡೆಗಳನ್ನು ನಿವಾರಿಸಿದರೆ, ಶಾಲೆಗಳು ಸಮಾನತೆಯನ್ನು ಖಾತರಿಪಡಿಸುವುದಲ್ಲದೆ ಕುಶಲ ಕಾರ್ಮಿಕರ ಸಂಖ್ಯಾಬಲವನ್ನು ಹೆಚ್ಚಿಸಿ ಆ ಮೂಲಕ ಒಟ್ಟು ಸಮಾಜಕ್ಕೆ ಪ್ರಯೋಜನವುಂಟು ಮಾಡಬಹುದು.
- ತರಗತಿಗಳಿಗೆ ಜನಪ್ರಿಯ ಮಹಿಳೆಯರನ್ನು ಭೇಟಿನೀಡಲು ಆಹ್ವಾನಿಸುವುದು ಅಥವಾ ಹೆಣ್ಣು ಮಕ್ಕಳಿಗಾಗಿ ಗಣಿತ ಮತ್ತು ವಿಜ್ಞಾನದ ಕಾರ್ಯಾಗಾರಗಳನ್ನು ಆಗಾಗ ಏರ್ಪಾಡು ಮಾಡುವುದು ಮುಂತಾದ ಚಟುವಟಿಕೆಗಳಿಂದ ಹೆಣ್ಣುಮಕ್ಕಳೂ ಅಪೇಕ್ಷಣೀಯವಾದ ಸಾಧನೆಗಳನ್ನು ಮಾಡಬಹುದು ಎಂಬುದನ್ನು ತೋರಿಸಿಕೊಡಬಹುದು. ಸಾಮಾಜೀಕರಣ ಸಿದ್ಧಾಂತವು ಮುಂದಿಟ್ಟ ಬೋಧನಶಾಸ್ತ್ರೀಯ ಹಸ್ತಕ್ಷೇಪಗಳು ಸಾಕಷ್ಟು ನೇರವಾಗಿವೆ: ಹೆಣ್ಣುಮಕ್ಕಳು ಅಭಿವೃದ್ಧಿಯನ್ನು ಹೊಂದಬೇಕಾದರೆ, ಶಿಕ್ಷಕರು, ಪೋಷಕರು ಮತ್ತು ಆಡಳಿತಾಧಿಕಾರಿಗಳು ಗಂಡುಮಕ್ಕಳೊಂದಿಗೆ ವ್ಯವಹರಿಸುವಂತೆಯೇ ಹೆಣ್ಣು ಮಕ್ಕಳೊಂದಿಗೆಯೂ ನಡೆದುಕೊಳ್ಳಬೇಕು.

ಶಿಕ್ಷಕರು ಗಂಡು ಮತ್ತು ಹೆಣ್ಣುಮಕ್ಕಳನ್ನು ಸರಿಸಮಾನವಾಗಿ ನೋಡಿಕೊಳ್ಳಲು ಬಯಸುವುದು ಮಾತ್ರವಲ್ಲ, ತಾವು ಹೆಣ್ಣು ಮತ್ತು ಗಂಡು ಮಕ್ಕಳೊಂದಿಗೆ ನಡೆದುಕೊಳ್ಳುವ ವಿಷಯದಲ್ಲಿ ತಮ್ಮಲ್ಲಿರುವ ಸಾಮಾಜಿಕ ಗ್ರಹಿಕೆಗಳನ್ನೂ ಮೆಟ್ಟಿನಿಲ್ಲಬೇಕು.

ಈ ಸಮಸ್ಯೆಯನ್ನು ಬಗೆಹರಿಸುವುದು ಸುಲಭವಲ್ಲ. ಗಂಡು ಮಕ್ಕಳಿಗೆ ನೀಡುವಷ್ಟೇ ಗಮನವನ್ನು ಹೆಣ್ಣುಮಕ್ಕಳಿಗೆ ನೀಡಬೇಕೆಂಬ ಉದ್ದೇಶ ಶಿಕ್ಷಕರಿಗೆ ಇದ್ದರೂ ಒಬ್ಬ ಶಿಕ್ಷಕಿಯು ಲಿಂಗತ್ವತಟಸ್ಥಳಾಗಿರುವಲ್ಲಿ ಯಶಸ್ವಿಯಾಗಿದ್ದರೂ ತನ್ನ ಪ್ರಯತ್ನಗಳು ಸಕಾರಾತ್ಮಕ ಪರಿಣಾಮ ನೀಡುವುದಕ್ಕೆ ಅವಳು ಒಂದು ವಿಸ್ತೃತವಾದ ಬೆಂಬಲ ವ್ಯವಸ್ಥೆಯನ್ನು ಅವಲಂಬಿಸಿರುತ್ತಾಳೆ. ಪಠ್ಯಪುಸ್ತಕಗಳು ಮತ್ತು ಇತರ ಮಾಧ್ಯಮಗಳೂ ಕೂಡ ಹೆಂಗಸರು ಮತ್ತು ಹೆಣ್ಣುಮಕ್ಕಳೊಂದಿಗೆ ಆಸಕ್ತಿಕರ ಮತ್ತು ವಿಶಿಷ್ಟವಾದ ರೀತಿಗಳಲ್ಲಿ ನಡೆದುಕೊಳ್ಳುವುದು ಅಗತ್ಯವಾಗಿದೆ. ಇಲ್ಲದಿದ್ದರೆ, ಒಂದು ಪ್ರಾತಿನಿಧ್ಯಯುಕ್ತ ಮತ್ತು ಸಮಾನಾಚರಣೆಯ ಪಠ್ಯಕ್ರಮವನ್ನು ಒದಗಿಸುವ ಶಿಕ್ಷಕಿಯ ಪ್ರಯತ್ನವು ತಾರತಮ್ಯವುಳ್ಳ ಮತ್ತು ವ್ಯಕ್ತಿನಿಷ್ಠವಾಗಿರುವ

ಹಾಗೆ ತೋರುತ್ತದೆ. ಹೆಣ್ಣು ಮತ್ತು ಗಂಡು ಮಕ್ಕಳೊಂದಿಗೆ ಸರಿಸಮಾನವಾಗಿ ನಡೆದುಕೊಳ್ಳುವ ಸ್ತ್ರೀವಾದಿ ಶಿಕ್ಷಕಿಯರ ಉಪಕ್ರಮಗಳನ್ನು ಪೋಷಕರು ಮತ್ತು ಇತರ ಶಿಕ್ಷಕರು ಬೆಂಬಲಿಸದೇ ಇದ್ದರೆ, ಲಿಂಗತ್ವತಟಸ್ಥ ಶಿಕ್ಷಕಿಯರ ಪರಿಹಾರಕಾರಿ ಪ್ರಯತ್ನಗಳು ಸ್ತ್ರೀವಾದಿ ತರಗತಿಕೊಠಡಿ ಮತ್ತು ಮಕ್ಕಳು ಸುತ್ತಲೂ ಕಾಣುವ ಜಗತ್ತಿನ ನಡುವೆ ಸಂವಹನದ ಕೊರತೆಯಿಂದಾಗಿ ದುರ್ಬಲಗೊಳ್ಳಬಹುದು. ಪ್ರಗತಿಗೆ ಎದುರಾಗುತ್ತಿರುವ ಹಲವಾರು ಅಡೆತಡೆಗಳಿದ್ದರೂ ಹೆಚ್ಚುತ್ತಿರುವ ಸುಧಾರಣೆಗಳು ಇನ್ನಷ್ಟು ಸಮಾನತೆಯುಳ್ಳ ಸಮಾಜವನ್ನು ತಯಾರುಮಾಡುತ್ತವೆ ಎಂಬುದು ಸಾಮಾಜೀಕರಣದ ಸಿದ್ಧಾಂತಜ್ಞರ ವಿಶ್ವಾಸವಾಗಿದೆ. ಸಮಾನ ನಡತೆಯ ಕುರಿತು ಇರುವ ಪ್ರಯತ್ನಗಳ ನೈಜ ಪರಣಾಮಗಳು ನಿರಾಶೆಯನ್ನುಂಟುಮಾಡುತ್ತಿರುವಂತೆ ತೋರಿದರೂ ಶತಮಾನಗಳಿಂದ ನಡೆದುಕೊಂಡು ಬಂದಿರುವ ಲಿಂಗಾಧಾರಿತ ಸಾಮಾಜೀಕರಣವನ್ನು ಹಿಮ್ಮೆಟ್ಟಿಸಬೇಕಾದ ಆವಶ್ಯಕತೆಯನ್ನು ಸಾಮಾಜೀಕರಣ ಸ್ತ್ರೀವಾದಿಗಳು ಗುರುತಿಸುತ್ತಾರೆ. ಗಂಡುಮಕ್ಕಳಿಗೆ ಸಿಗುವಂತಹದೇ ಶಿಕ್ಷಣವನ್ನು ಹೆಣ್ಣುಮಕ್ಕಳಿಗೂ ಒದಗಿಸುವ ನಿರಂತರ ಮತ್ತು ಜಾಗರೂಕ ಪ್ರಯತ್ನಗಳು ನಾಳಿನ ಹೆಂಗಸರು ಎಲ್ಲಾ ಚಟುವಟಿಕೆಗಳಲ್ಲಿ ಸಂಪೂರ್ಣ ಪಾಲುದಾರರಾಗಲು ಸಜ್ಜಾಗುವಂತೆ ಮಾಡಲು ಸಾಧ್ಯಮಾಡುತ್ತವೆ. ಸಾಮಾಜೀಕರಣ ಸಿದ್ಧಾಂತಜ್ಞರು ಗಂಡು–ಹೆಣ್ಣು ಮಕ್ಕಳ ನಡುವಿನ ಬೇಧ–ಭಾವವು ನಿವಾರಣೆಯಾಗಬೇಕಾದ ಒಂದು ಸಮಸ್ಯೆಯೆಂದು ಅರ್ಥಮಾಡಿಕೊಂಡಿದ್ದಾರೆ.

## ಸಾಮಾಜಿಕ ಕಲಿಕೆಯ ಸಿದ್ಧಾಂತ

ಸಾಮಾಜಿಕ ಕಲಿಕೆಯ ಸಿದ್ಧಾಂತವು ಸಾಮಾಜೀಕರಣ ಸಿದ್ಧಾಂತಗಳ ಅಡಿಯಲ್ಲಿ ವರ್ಗೀಕರಿಸಲ್ಪಟ್ಟ ಸಿದ್ಧಾಂತಗಳಲ್ಲಿ ಒಂದಾಗಿದೆ. ಆಲ್ಬರ್ಟ್ ಬಂಡುರಾ ಎಂಬ ಮನಶ್ಶಾಸ್ತ್ರಜ್ಞರ ಆಲೋಚನೆಗಳಿಗೆ ಇದು ಹೆಚ್ಚು ಹತ್ತಿರವಾಗಿದೆ. ಕಲಿಕೆಯನ್ನು ಪ್ರಚೋದನೆ ಮತ್ತು ಪ್ರತಿಕ್ರಿಯೆ ಎಂಬ ಪದಗಳಲ್ಲಿ ವ್ಯಾಖ್ಯಾನಿಸುವ ನಡೆವಳಿಕೆ ಅಧ್ಯಯನ ಸಂಪ್ರದಾಯದಿಂದ ಹೊರಹೊಮ್ಮಿದೆ. ಮಕ್ಕಳು ಸಕಾರಾತ್ಮಕ ಪ್ರೋತ್ಸಾಹವನ್ನು ಪಡೆದರೆ, ಒಂದು ನಿರ್ದಿಷ್ಟವಾದ ನಡೆವಳಿಕೆಯನ್ನು ಮುಂದುವರಿಸಲು ಅವರು ಪ್ರೇರಣೆಯನ್ನು ಪಡೆಯುತ್ತಾರೆ ಎಂದು ವಾದಿಸುವ, ಬಾಹ್ಯ ಪ್ರೇರಣಾಂಶಗಳನ್ನು ಸಾಮಾಜಿಕ ಕಲಿಕೆಯ ಸಿದ್ಧಾಂತವು ಅವಲಂಬಿಸಿದೆ. ಒಂದು ವಿಧದ ನಡೆವಳಿಕೆಗೆ ಅವರು ಶಿಕ್ಷೆಯನ್ನು ಅನುಭವಿಸಿದರೆ ಅಥವಾ ಅಸಮ್ಮತಿಯ ಸೂಚನೆಗಳನ್ನು ಪಡೆದರೆ ಅವರು ಆ ನಡೆವಳಿಕೆಯನ್ನು ನಿಲ್ಲಿಸಲು ಹೆಚ್ಚಾಗಿ ಪ್ರೇರಿತರಾಗುತ್ತಾರೆ. ಲಿಂಗತ್ವ ಬೆಳವಣಿಗೆಯ ವಿಷಯದಲ್ಲಿ ಮಕ್ಕಳು ಸಾಂಸ್ಕೃತಿಕವಾಗಿ ಸೂಕ್ತವೆನಿಸುವಂತಹ ಲಿಂಗತ್ವ ಪ್ರದರ್ಶನಗಳಲ್ಲಿ ತೊಡಗಿದರೆ ಪ್ರಶಂಸೆಯನ್ನು ಮತ್ತು ಹಾಗೆ ಮಾಡದಿದದ್ದರೆ ಶಿಕ್ಷೆಯನ್ನೂ ಪಡೆಯುತ್ತಾರೆ. ಗಂಡುಮಕ್ಕಳಲ್ಲಿರುವ ಆಕ್ರಮಣಕಾರಿ ಗುಣಕ್ಕೆ ಒಪ್ಪಿಗೆ ಸಿಕ್ಕಿದಾಗ ಅಥವಾ ಹುಡುಗರು ಹುಡುಗರೇ ಎಂಬ ಮನೋಭಾವ ದೊರೆತಾಗ, ಆದರೆ ಹೆಣ್ಣು ಮಕ್ಕಳಲ್ಲಿನ ಆಕ್ರಮಣಕಾರಿ ಮನೋಭಾವವು ಹೆಚ್ಚಿನ ಗಮನವೇ ದೊರೆಯದಿದ್ದಾಗ ಆ ಇಬ್ಬರು ಮಕ್ಕಳು ತಮ್ಮ ಲಿಂಗತ್ವ ಬೆಳವಣಿಗೆಯ ವಿಷಯಕ್ಕೆ ಸಂಬಂಧಿಸಿ ತಮ್ಮ ಆಕ್ರಮಣಕಾರಿ ಸ್ವಭಾವದ ಕುರಿತು ಬೇರೆ ಬೇರೆ ಅರ್ಥಗಳನ್ನು ಕಲಿಯುತ್ತಾರೆ. ಹೀಗೆ, ಗಂಡುಮಕ್ಕಳು ತಮ್ಮ ಆಕ್ರಮಣಕಾರಿ ಸ್ವಭಾವವನ್ನು ಮುಂದುವರಿಸುತ್ತಾರೆ, ಆದರೆ ಹೆಣ್ಣು ಮಕ್ಕಳು ತಮ್ಮ ಸ್ವಭಾವದಿಂದ ಈ ಗುಣವನ್ನು ಹೊರಗಿಡುತ್ತಾರೆ.

ಈ ದೃಷ್ಟಿಕೋನದ ಅನುಸಾರ, ಲಿಂಗಕ್ಕೆ ಸೂಕ್ತವೆನಿಸುವ ಮತ್ತು ಸೂಕ್ತವೆನಿಸದ ನಡೆವಳಿಕೆಗಳಿಗೆ ಸಂಬಂಧಿಸಿ ಮಕ್ಕಳು ಸಕಾರಾತ್ಮಕವಾಗಿ ಹಾಗೂ ನಕಾರಾತ್ಮಕವಾಗಿ ಪ್ರೋತ್ಸಾಹಿಸಲ್ಪಡುತ್ತಾರೆ. ಲಿಂಗತ್ವಕ್ಕೆ ಸಂಬಂಧಿಸಿದ ನಡೆವಳಿಕೆಗಳಿಗೆ ಭಿನ್ನವಾಗಿ ಪ್ರೋತ್ಸಾಹವನ್ನು ಪಡೆದ ಮಗುವಿಗೆ ಪೋಷಕರು ಮತ್ತು ಇತರರು ಲಿಂಗಕ್ಕೆ ಸಂಬಂಧಿಸಿ ಒಂದು ಚೌಕಟ್ಟನ್ನು ಹಾಕುತ್ತಾರೆಂದು ಈ ದೃಷ್ಟಿಕೋನವು ಭಾವಿಸುತ್ತದೆ. ಒಬ್ಬ ಹುಡುಗ ಅಥವಾ ಹುಡುಗಿಯು ತಮ್ಮ ಲಿಂಗಕ್ಕೆ ಸಂಬಂಧಿಸಿದ ನಡೆವಳಿಕೆಗಳಿಗೆ ನಿರಂತರವಾಗಿ ಪುರಸ್ಕರಿಸಲ್ಪಟ್ಟಾಗ, ತನ್ನನ್ನು ಗಂಡು ಅಥವಾ ಹೆಣ್ಣು ಎಂದು ತಿಳಿದುಕೊಳ್ಳುವುದೇ ಆ ಮಗುವಿಗೆ ಪುರಸ್ಕಾರಯೋಗ್ಯವೆನಿಸುತ್ತದೆ. ಲಿಂಗ–ವರ್ಗೀಕರಣ (ಸಾಮಾಜಿಕವಾಗಿ ಸೂಚಿಸಲ್ಪಟ್ಟ ಲಿಂಗಾನುಸಾರಿ–ಪಾತ್ರಕ್ಕೆ ಲಿಂಗತ್ವ ಗುರುತನ್ನು ಹೊಂದಿಸಿಕೊಳ್ಳುವ ವಿಧೇಯತೆ) ಪ್ರಾಧಾನ್ಯವನ್ನು ಪಡೆದು ಲಿಂಗತ್ವ ಗುರುತಿನ ಬೆಳವಣಿಗೆಗೆ ಆಧಾರವಾಗುತ್ತದೆ. ಉದಾಹರಣೆಗೆ: ಚಿತ್ರಕಲೆಯಲ್ಲಿ ತೊಡಗಿದ ಒಬ್ಬ

ಸಣ್ಣ ಹುಡುಗನು ತನ್ನ ತಂದೆಯಿಂದ ನಿರ್ಲಕ್ಷಿಸಲ್ಪಟ್ಟರೆ; ತಂದೆಯ ಗಮನದ ಕೊರತೆಯು ಋಣಾತ್ಮಕ ಪ್ರೋತ್ಸಾಹವಾಗುತ್ತದೆ, ಮತ್ತು ಅದರಿಂದಾಗಿ ಆ ಹುಡುಗನು ಕ್ರಮೇಣ ಕಲೆಯ ಕೆಲಸವನ್ನೇ ಸಂಪೂರ್ಣವಾಗಿ ನಿಲ್ಲಿಸಿಬಿಡಬಹುದು. ಅಥವಾ, ಒಂದು ಹೆಣ್ಣು ಮಗುವನ್ನು ಗೊಂಬೆಗಳೊಂದಿಗೆ ಆಡಲು ಪೋಷಕರು ಪ್ರೋತ್ಸಾಹಿಸಿದರೆ, ಇದೇ ಗುಣಾತ್ಮಕ ಪ್ರೋತ್ಸಾಹವಾಗಿ ಆ ಹೆಣ್ಣು ಮಗುವಿಗೆ ಗೊಂಬೆಗಳೊಂದಿಗೆ ಆಟವಾಡುವುದು ಮತ್ತಷ್ಟು ಇಷ್ಟವಾಗಬಹುದು. ಈ ಸಿದ್ಧಾಂತದ ಪ್ರಕಾರ, ಹೆಣ್ಣು ಮತ್ತು ಗಂಡುಮಕ್ಕಳು ಇದೇ ರೀತಿಯಲ್ಲಿ ತಮ್ಮ ಮೇಲಿರುವ ಅಪೇಕ್ಷೆಗಳಿಗನುಸಾರವಾಗುವಂತಹ ನಡೆವಳಿಕೆಗಳನ್ನು ಕಲಿತುಕೊಳ್ಳುತ್ತಾರೆ. ಗಂಡುಮಕ್ಕಳು ಚಿತ್ರಕಲೆಯನ್ನು ಸೂಕ್ತವಲ್ಲದ್ದು ಎಂದು ಕಲಿಯುತ್ತಾರೆ ಮತ್ತು ಗೊಂಬೆಗಳೊಂದಿಗೆ ಆಟವಾಡುವುದು ಹೆಣ್ಣಾಗಿರಲು ಸುಸಂಗತವಾದದ್ದೆಂದು ಹೆಣ್ಣುಮಕ್ಕಳು ಕಲಿತುಕೊಳ್ಳುತ್ತಾರೆ. ಸಮಾನ–ಲಿಂಗಿ ಹಿರಿಯರ ನಡೆವಳಿಕೆಯನ್ನು ಗಮನಿಸಿ ಅನುಸರಿಸುವ ಮೂಲಕವೂ ಮಕ್ಕಳು ಕಲಿಯುತ್ತಾರೆಂಬುದನ್ನು ಸಾಮಾಜಿಕ ಕಲಿಕೆಯ ಸಿದ್ಧಾಂತವು ಸೂಚಿಸುತ್ತದೆ. ಒಂದು ಸಣ್ಣ ಹುಡುಗಿಯು ತನ್ನ ತಾಯಿಯನ್ನು ಗಮನಿಸಿ ಹೆಣ್ಣಾಗಿರುವುದರ ಅರ್ಥವನ್ನು ತಿಳಿಯುತ್ತಾಳೆ ಮತ್ತು ಒಬ್ಬ ಸಣ್ಣ ಹುಡುಗನು ತನ್ನ ತಂದೆಯನ್ನು ಗಮನಿಸಿ ಹುಡುಗನಾಗಿರುವುದರ ಅರ್ಥವನ್ನು ತಿಳಿದುಕೊಳ್ಳುತ್ತಾನೆ. 1950 ಮತು 1960ರಲ್ಲಿ ಮೊದಲ ಬಾರಿಗೆ ಪ್ರಸ್ತಾಪಿಸಲ್ಪಟ್ಟ ಸಾಮಾಜಿಕ ಕಲಿಕೆಯ ಸಿದ್ಧಾಂತಕ್ಕೆ ಕಾಲದ ಪರೀಕ್ಷೆಯನ್ನು ಮೆಟ್ಟಿನಿಲ್ಲಲಾಗಲಿಲ್ಲ. ಮಕ್ಕಳು, ಅದರಲ್ಲೂ ಗಂಡುಮಕ್ಕಳು, ಪ್ರೋತ್ಸಾಹವಿಲ್ಲದೆ ಇದ್ದರೂ ಲಿಂಗತ್ವಕ್ಕೆ ಸೂಕ್ತವಾದ ನಡವಳಿಕೆಯನ್ನು ಪ್ರದರ್ಶಿಸುತ್ತಾರೆಂಬುದನ್ನು ಸಂಶೋಧನೆಯು ತೋರಿಸಿಕೊಟ್ಟಿದೆ. ಕೊನೆಯದಾಗಿ, ಪೋಷಕರು ಗಂಡು ಮತ್ತು ಹೆಣ್ಣುಮಕ್ಕಳನ್ನು ಬೇರೆ ಬೇರೆ ರೀತಿಯಲ್ಲಿ ಪ್ರೋತ್ಸಾಹಿಸುವ ಪ್ರಮಾಣ ಎಷ್ಟೆಂಬ ಬಗ್ಗೆ ಆಧಾರವು ಸ್ಪಷ್ಟವಾಗಿಲ್ಲ. ಸಿದ್ಧಾಂತವು ಒಪ್ಪಿಕೊಳ್ಳುವುದಕ್ಕಿಂತ ಹೆಚ್ಚು ಸಕ್ರಿಯವಾಗಿ ಮಕ್ಕಳು ತಮ್ಮ ಸಾಮಾಜೀಕರಣದಲ್ಲಿ ತೊಡಗಿಕೊಳ್ಳುತ್ತಾರೆ ಎಂದು ವಿಮರ್ಶಕರು ವಾದಿಸುತ್ತಾರೆ.

## ಮನೋಕ್ರಿಯಾಶೀಲತಾ ಸಿದ್ಧಾಂತ

ವಿಯೆನ್ನಾದ ಮನೋವಿಶ್ಲೇಷಕರಾದ ಸಿಗ್‌ಮಂಡ್ ಫ್ರಾಯ್ಡ್‌ರ ಕೃತಿಗಳಲ್ಲಿ ಮನೋಕ್ರಿಯಾಶೀಲತಾ ಸಿದ್ಧಾಂತವು ತನ್ನ ಬೇರುಗಳನ್ನು ಹೊಂದಿದೆ. ಒಬ್ಬ ವ್ಯಕ್ತಿಯ ಲಿಂಗತ್ವ ಅನನ್ಯತೆಯನ್ನು ರೂಪಿಸುವುದರಲ್ಲಿ ಈ ಸಿದ್ಧಾಂತವು ಕುಟುಂಬದವರ ಪಾತ್ರವನ್ನು, ಅದರಲ್ಲಿಯೂ ತಾಯಿಯ ಪಾತ್ರವನ್ನು ಬಹು ಮುಖ್ಯವಾದದ್ದೆಂದು ತಿಳಿದಿದೆ. ಹುಡುಗರು ಮತ್ತು ಹುಡುಗಿಯರು ತಮ್ಮ ತಾಯಿಗೆ ಸಂಬಂಧಿಸಿದಂತೆ ತಮ್ಮ ತಮ್ಮ ಅನನ್ಯತೆಯನ್ನು ರೂಪಿಸಿಕೊಳ್ಳುತ್ತಾರೆ. ಹುಡುಗಿಯರು ಜೈವಿಕವಾಗಿ ತಮ್ಮ ತಾಯಿಯಂತೆ ಇರುವುದರಿಂದ, ತಮ್ಮನ್ನು ತಮ್ಮ ತಾಯಿಯೊಂದಿಗೆ ಸಂಪರ್ಕವುಳ್ಳವರೆಂದು ತಿಳಿಯುತ್ತಾರೆ. ಆದರೆ ಹುಡುಗರು ಜೈವಿಕವಾಗಿ ತಮ್ಮ ತಾಯಿಗಿಂತ ಭಿನ್ನವಾಗಿರುವುದರಿಂದ, ಅವಳಿಗೆ ಭಿನ್ನವಾದ ರೀತಿಯಲ್ಲಿ ತಮ್ಮ ಲಿಂಗತ್ವ ಅನನ್ಯತೆಯನ್ನು ರೂಪಿಸಿಕೊಳ್ಳುತ್ತಾರೆ. ಒಂದು ತರಗತಿಯಲ್ಲಿದ್ದ ಹುಡುಗನ ಬಳಿ ಅವನ ಲಿಂಗತ್ವ ಅನನ್ಯತೆಯ ಬೆಳವಣಿಗೆಯ ಕುರಿತು ಕೇಳಿದಾಗ, ಅವನು ಹೀಗೆ ಉತ್ತರಿಸಿದನು, "ಒಂದು ದಿನ ನನ್ನ ತಾಯಿಯೊದಿಗೆ ಸ್ನಾನ ಮಾಡುವಾಗ ನಾನು ಹುಡುಗನೆಂಬುದುವನ್ನು ಕಲಿತುಕೊಂಡ ನೆನಪು ನನಗಿದೆ. ಅವಳಲ್ಲಿ ಇರದೇ ಇದ್ದದ್ದು ನನ್ನಲ್ಲಿ ಇರುವುದನ್ನು ನಾನು ಗಮನಿಸಿದೆನು." ಈ ವಿದ್ಯಾರ್ಥಿಯ ಅನುಭವವು ನಮಗೆ ಲಿಂಗತ್ವದ ಬೆಳವಣಿಗೆಯಲ್ಲಿ ಮನೋಕ್ರಿಯಾಶೀಲತಾ ಸಿದ್ಧಾಂತದ ಬಳಕೆಯನ್ನು ಉದಾಹರಣೆಯಾಗಿ ನೀಡುತ್ತದೆ.

## ಸಾಂಕೇತಿಕ ಪರಸ್ಪರಕ್ರಿಯಾ ಸಿದ್ಧಾಂತ

ಸಾಂಕೇತಿಕ ಪರಸ್ಪರಕ್ರಿಯಾ ಸಿದ್ಧಾಂತವು ನಿರ್ದಿಷ್ಟವಾಗಿ ಸಂವಹನವನ್ನು ಅವಲಂಬಿಸಿದೆ. ಲಿಂಗತ್ವ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿಯೇ ಇದನ್ನು ಬೆಳೆಸಿಲ್ಲವಾದರೂ ಅದು ಇಲ್ಲಿಗೆ ನಿರ್ದಿಷ್ಟವಾಗಿ ಅನ್ವಯಿಸುತ್ತದೆ. ಸಾಂಸ್ಕೃತಿಕ ಸಂದರ್ಭಗಳಲ್ಲಿ ಸಂವಹನದ ಮುಖಾಂತರ ಲಿಂಗತ್ವವನ್ನು ಕಲಿಯುವುದರಿಂದ, ಇಂತಹ ಸಂದೇಶಗಳ ರೂಪಾಂತರಿಸುವಿಕೆಗೆ ಸಂವಹನವು ಅತ್ಯಗತ್ಯವಾಗಿದೆ. ಸಣ್ಣ ಹುಡುಗಿಯರನ್ನು ಉದ್ದೇಶಿಸಿ ಒಬ್ಬ ಸ್ತ್ರೀಯಂತೆ ನೇರವಾಗಿ ಕುಳಿತುಕೊ ಎಂದು ಅಥವಾ ಸಭ್ಯ ಗಂಡಸರು ಇತರರಿಗಾಗಿ ಬಾಗಿಲನ್ನು ತೆರೆಯುತ್ತಾರೆ

ಎಂದು ಹುಡುಗರನ್ನು ಉದ್ದೇಶಿಸಿ ಹೇಳಿದಾಗ, ಹುಡುಗರು ಮತ್ತು ಹುಡುಗಿಯರು ಲಿಂಗತ್ವದ ಗುರುತಿಸುವಿಕೆಯನ್ನು (ಪುಲ್ಲಿಂಗ ಮತ್ತು ಸ್ತ್ರೀಲಿಂಗ) ಮಾತುಗಳ (ಸಂಕೇತಗಳು) ಮೂಲಕ ಇತರರಿಂದ (ಸಂವಹನದ ಮೂಲಕ) ಕಲಿತುಕೊಳ್ಳುತ್ತಾರೆ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1**

ಈ ಕೆಳಗಿನ ವಾಕ್ಯಗಳಲ್ಲಿ ಸಾಮಾಜೀಕರಣ ಸಿದ್ಧಾಂತದನುಸಾರ ಸರಿಯಾದವುಗಳನ್ನು '✓' ಚಿಹ್ನೆಯ ಮೂಲಕ ಗುರುತಿಸಿ.

1. ಲಿಂಗತ್ವಕ್ಕೆ ಸಂಬಂಧಿಸಿದ ಎಲ್ಲಾ ನಡೆವಳಿಕೆಗಳು ಸಾಮಾಜೀಕರಣದ ಪರಿಣಾಮಗಳಲ್ಲ.
2. ತಮ್ಮ ಪೋಷಕರು ಮತ್ತು ಇತರ ಹಿರಿಯರನ್ನು ಗಮನಿಸುವುದು ಮತ್ತು ಅನುಸರಿಸುವ ಮೂಲಕ ಮಕ್ಕಳು ಗುಂಡು ಅಥವಾ ಹೆಣ್ಣಾಗಿರಲು ಕಲಿತುಕೊಳ್ಳುತ್ತಾರೆ.
3. ವರಿಷ್ಠರನ್ನು ಅನುಸರಿಸುವ ಮೂಲಕ ಮಕ್ಕಳು ತಮ್ಮ ಅನನ್ಯತೆಯನ್ನು ಕಲಿತುಕೊಳ್ಳುತ್ತಾರೆ.
4. ಲಿಂಗತ್ವದ ರೂಢಿಗಳು ಮತ್ತು ಪಾತ್ರಾಪೇಕ್ಷೆಗಳಿಗೆ ವಿಧೇಯತೆಯು ಕುಟುಂಬಗಳಲ್ಲಿನ ಲಿಂಗತ್ವವನ್ನು ಅವಲಂಬಿಸಿದ ದೈನಿಕ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಬೆಳೆಯುತ್ತದೆ.
5. ಬಾಲ್ಯದ ಲಿಂಗತ್ವ ನಡತೆಯನ್ನು ಜೀವನದ ವಿವಿಧ ಹಂತಗಳಲ್ಲಿ ಕಾಣಬಹುದು.
6. ಬಾಲ್ಯದ ಲಿಂಗತ್ವ ನಡತೆಗಳು ಸಾಮಾನ್ಯವಾಗಿ ಸ್ಥಿರವಾದ ಸಾಮಾಜಿಕ ಮತ್ತು ಸಾಂಪ್ರದಾಯಿಕ ಶಕ್ತಿಗಳ ಪರಿಣಾಮವಾಗಿವೆ.
7. ಎಲ್ಲಾ ಮಕ್ಕಳಿಗೆ ಲಿಂಗತ್ವದ-ಭೇದರಹಿತ ಶಿಕ್ಷಣವನ್ನು ಒದಗಿಸುವುದು ಮತ್ತು ಹೆಣ್ಣುಮಕ್ಕಳ ಯಶಸ್ಸಿಗೆ ತಡೆಯಾಗಿರುವಂತಹ ಇತರ ಅಡೆತಡೆಗಳನ್ನು ನಿವಾರಿಸುವ ಮೂಲಕ ಶಾಲೆಗಳಲ್ಲಿನ ಶಿಕ್ಷಣದಲ್ಲಿ ಗುಣಮಟ್ಟವನ್ನು ಸಾಧಿಸಬಹುದು.

## 2.5.3.2 ಲಿಂಗತ್ವ ಅನನ್ಯತೆಯ ರಚನಾತ್ಮಕ ಸಿದ್ಧಾಂತ

ಸಾವಾಜಿಕ ರಚನಾತ್ಮಕ ಸಿದ್ಧಾಂತಗಳು ವ್ಯಕ್ತಿಗಳು ಪ್ರತ್ಯೇಕ ಲಿಂಗತ್ವ ಅನನ್ಯತೆಯನ್ನು ಅಭಿವೃದ್ಧಿಗೊಳಿಸಿಕೊಳ್ಳುವುದಕ್ಕಿಂತ, ಸಮಾಜವು ಲಿಂಗತ್ವ ಪಾತ್ರಗಳನ್ನು ರಚಿಸಿ ಬೆಂಬಲಿಸುವ ವಿಧಾನವನ್ನು ಪರೀಕ್ಷಿಸುತ್ತವೆ. ಈ ಸಿದ್ಧಾಂತಗಳು, ಗಂಡಸರು ಮತ್ತು ಹೆಂಗಸರ ನಡುವಿನ ಸಂಬಂಧಗಳು ಲಿಂಗತ್ವ-ಪಾತ್ರ ಮತ್ತು ಲಿಂಗ-ಅನುಕಾರಿಗಳೊಂದಿಗೆ ಹೇಗೆ ಸಂಬಂಧಿಸಿವೆ ಮತ್ತು ಈ ಪಾತ್ರಗಳು ಮತ್ತು ಅನುಕಾರಿಗಳನ್ನು ಬೆಂಬಲಿಸುವ ಸಾಮಾಜಿಕ ರಚನೆಗಳು ಎಂಬ ಸಾಮಾಜಿಕ-ಸಾಂಸ್ಕೃತಿಕ ಸಂದರ್ಭಗಳ ಮೇಲೆ ಗಮನ ಹರಿಸುತ್ತವೆ. ಗಂಡಸರು ಮತ್ತು ಹೆಂಗಸರ ನಡುವಿನ ಭಿನ್ನತೆಗಳನ್ನು ಬೆಳೆಸುವುದು ಮತ್ತು ನಿರ್ವಹಿಸುವುದರಲ್ಲಿ ಅಧಿಕಾರ ಮತ್ತು ಸ್ಥಾನಮಾನದ ಭೇದಗಳನ್ನೇ ನಿರ್ಣಯಕಾಂಶಗಳನ್ನಾಗಿ ಕಾಣಲಾಗುತ್ತದೆ.

ಕೆಲವೇ ಕೆಲವರ ಕೈಗಳಲ್ಲಿ ಅಧಿಕಾರ ಮತ್ತು ವಿಶೇಷ ಸವಲತ್ತುಗಳ ವ್ಯವಸ್ಥಿತ ಹೆಚ್ಚಳದ ಕಡೆಗೆ ರಚನಾತ್ಮಕ ಸಿದ್ಧಾಂತಗಳು ಗಮನ ಹರಿಸುತ್ತವೆ. ಈ ಸಿದ್ಧಾಂತಗಳ ಅನುಸಾರ, ಅಧಿಕಾರವೆಂದರೆ ಒಂದು ಸಮೂಹವು ಬೇರೊಂದು ಸಮೂಹದ ಮೇಲೆ ಪ್ರದರ್ಶಿಸುವಂಥದ್ದಾಗಿದೆ; ಅದು ನಿಯಮಗಳು, ಗುಣಮಟ್ಟಗಳು, ಆಧಿಪತ್ಯದ ಅಭ್ಯಾಸಗಳು ಮತ್ತು ಸಾಂಸ್ಥಿಕ ಸಂಬಂಧಗಳ ಮೂಲಕ ಕಾನೂನುಬದ್ಧಗೊಳಿಸಲಾಗಿರುವ ಒಂದು ಬಗೆಯ ಸ್ವತ್ತು ಅಥವಾ ಸಂಪತ್ತು. ಬಹುಪಾಲು ಸ್ಥಿರವಾಗಿರುವ (ಆದರೂ ಬದಲಾಯಿಸಬಹುದಾದ) ಅಧಿಕಾರ ವ್ಯವಸ್ಥೆಗಳ ಮೂಲಕ ಲಿಂಗತ್ವಕ್ಕೆ ಸಂಬಂಧಿಸಿದ ಮತ್ತು ಇತರ ಅಸಮಾನತೆಯ ರೂಪಗಳನ್ನು ವ್ಯವಸ್ಥೆಗೊಳಿಸಲಾಗುತ್ತದೆ ಉಳಿಸಿಕೊಳ್ಳಲಾಗುತ್ತದೆ. ಭಾರತವು ಪುರುಷಶಾಹಿ ಸಮಾಜವಾಗಿರುವುದರಿಂದ, ಇಲ್ಲಿ ಹೆಂಗಸರಿಗಿಂತ ಗಂಡಸರೇ

ಹೆಚ್ಚಿನ ಘನತೆ ಮತ್ತು ವಿಶೇಷಸವಲತ್ತುಗಳನ್ನು ಅನುಭವಿಸುತ್ತಿದ್ದಾರೆ. ಭಾರತೀಯ ಸಮಾಜದಲ್ಲಿ ಗಂಡಸರು ಸಾಮಾಜಿಕವಾಗಿ ಹಾಗೂ ಸಾಂಪ್ರದಾಯಿಕವಾಗಿ ಅಧಿಕಾರದ ಮೇಲುಗೈ ಹೊಂದಿರುವುದನ್ನು ಕಾಣಬಹುದು. ಇಂತಹ ಪಾತ್ರನಿಯೋಜನೆಯು ಪಿತೃಪ್ರಧಾನ ಸಮಾಜದಿಂದಾಗಿ ಬರುತ್ತದೆ. ಉದಾಹರಣೆಗೆ: ಹಲವಾರು ಪಾಶ್ಚಾತ್ಯ ದೇಶಗಳಲ್ಲಿ ಸಂಗಾತಿಗಳಿಗೆ ವಿಮಾ ರಕ್ಷಣೆ, ದತ್ತು ಸ್ವೀಕರಿಸುವುದು ಮತ್ತು ಪೋಷಣೆಯ ನಿಯಮಗಳು, ವಿವಾಹವಾಗುವ ಹಕ್ಕು ಮತ್ತು ತಾರತಮ್ಯ ವಿರೋಧಿ ನಿಯಮಗಳಲ್ಲಿ ಪ್ರಾತಿನಿಧ್ಯ ಇಂತಹ ವಿಷಯಗಳಲ್ಲಿ ಸಲಿಂಗಿ ಸಂಘಟನೆಗಳಿಗಿಂತ ಭಿನ್ನಲಿಂಗೀಯ ಸಂಘಟನೆಗಳು ವಾಸ್ತವಿಕವಾಗಿ ಹೆಚ್ಚಿನ ಸವಲತ್ತುಗಳನ್ನು ಅನುಭವಿಸುತ್ತಾರೆ. ಭಾರತದಲ್ಲಿನ ಹೆಚ್ಚಿನ ಉದ್ಯೋಗ ಕ್ಷೇತ್ರಗಳಲ್ಲಿ ಹೆಂಗಸರು ಅಷ್ಟೇ ಕೆಲಸಕ್ಕೆ ಗಂಡಸರಿಗಿಂತ ಕಡಿಮೆ ಆದಾಯವನ್ನು ಪಡೆಯುತ್ತಾರೆ. ಲಿಂಗವನ್ನು ಆಧರಿಸಿಕೊಂಡು ಕೆಲವು ಕೆಲಸಗಳನ್ನು ಹೆಂಗಸರಿಗೆಂದೇ ನಿಗದಿಸಲಾಗಿದೆ. 'ಗರ್ಭವತಿಯಾಗುವುದು ಹೆಂಗಸರ ಹೊಣೆ' ಎಂದು ಭಾವಿಸುವ ಧೋರಣೆಗಳು ಮತ್ತು ಕಾನೂನು ವ್ಯವಸ್ಥೆಗಳು ಅವರಿಗೆ ಗರ್ಭಪಾತಮಾಡಿಕೊಳ್ಳುವ ಹಕ್ಕನ್ನು ನಿರಾಕರಿಸುತ್ತವೆ. ರಚನಾತ್ಮಕ ಅಸಮಾನತೆಯು ಜ್ಞಾನದ ಶಾಖೆಗಳ ಲಕ್ಷಣವೂ ಆಗಿಬಿಡಬಹುದು. ಶಿಕ್ಷಣಕ್ಕೆ ಅವಕಾಶ ತಪ್ಪಿಹೋಗುವುದು ಮತ್ತು ನಾಯಕತ್ವದ ಸ್ಥಾನಗಳು ದೊರೆಯದೇ ಇರುವುದರಿಂದಾಗಿ ಬದಿಗೆ ಸರಿಸಲ್ಪಟ್ಟ ಗುಂಪುಗಳನ್ನು ಗಣನೀಯವಾದ ಇತಿಹಾಸ, ಸಾಹಿತ್ಯ, ವಿಜ್ಞಾನ ಮತ್ತು ಕಲೆಗಳಲ್ಲಿ ಕಳಪೆಯಾಗಿ ಪ್ರತಿನಿಧಿಸಲಾಗಿದೆ ಎಂದು ಸಾಮಾಜೀಕರಣ ಹಾಗೂ ರಚನಾತ್ಮಕ ಸಿದ್ಧಾಂತಜ್ಞರಿಬ್ಬರೂ ಒಂದೇ ರೀತಿಯಲ್ಲಿ ವಾದಿಸುತ್ತಾರೆ. ಭಾರತದಲ್ಲಿ ಸಾಮಾನ್ಯ ಮಹಿಳೆಯರಿಗೆ ಶಿಕ್ಷಣಕ್ಕೆ ಅವಕಾಶವು ಲಭಿಸುವುದಿಲ್ಲ. ಇವು ಭಾರತೀಯ ಸಮಾಜದಲ್ಲಿ ಪಿತೃಪ್ರಧಾನ ಅಧಿಕಾರದ ಪರಿಣಾಮ.

ಇತಿಹಾಸದಲ್ಲಿ ಮಾನವೀಯತೆಯ ಅಭಿವೃದ್ಧಿಯಲ್ಲಿ ಹೆಂಗಸರನ್ನು ಕೊಡುಗೆದಾರರನ್ನಾಗಿ ಕಾಣುವ ಸಂದರ್ಭಗಳು ಬಹಳ ಕಡಿಮೆ. ಕೇವಲ ಸೇನಾ ಮತ್ತು ರಾಜಕೀಯ ನಾಯಕರು, ಪ್ರಸಿದ್ಧ ಕಲಾವಿದರು ಮತ್ತು ಸಾರ್ವಜನಿಕರ ದೃಷ್ಟಿಯಲ್ಲಿರುವ ವ್ಯಕ್ತಿಗಳ ಕಡೆಗೆ ಇತಿಹಾಸದ ಮುಖ್ಯವಾಹಿನಿಯು ಗಮನ ಹರಿಸುವುದರಿಂದ, ಖಾಸಗಿ ವಲಯದಲ್ಲಿ, ಕೆಲಸದವರು ಅಥವಾ ಆಳುಗಳು ಅಥವಾ ಸಮೂಹಗಳಿಗೆ ಸಂಬಂಧಿಸಿ ಮಾಡಿದ ಕೆಲಸಗಳನ್ನು ಇತಿಹಾಸ ಎಂದು ದಾಖಲು ಮಾಡಲು ಯೋಗ್ಯ ಸಾಧನೆಯೆಂದು ಸಾಮಾನ್ಯವಾಗಿ ಪರಿಗಣಿಸುವುದಿಲ್ಲ. ಹೀಗೆ ಕೂಲಿವರ್ಗದ ಹೆಚ್ಚಿನ ಸದಸ್ಯರನ್ನು ರಾಜಕೀಯ, ಜ್ಞಾನ ಮತ್ತು ಕಲೆಯ ಕ್ಷೇತ್ರಗಳಲ್ಲಿ ವಿಶಿಷ್ಟ ಕೊಡುಗೆಗಳನ್ನು ನೀಡಿದವರೆಂದು ನೋಡುವುದನ್ನು ಶಿಕ್ಷಣಕ್ರಮದ ಮಾನದಂಡಗಳು ತಡೆಯುತ್ತವೆ. ಲಿಂಗತ್ವ/ಲಿಂಗ, ವರ್ಣ ಮತ್ತು ವರ್ಗದ ವಿಧಾನಗಳಲ್ಲಿ ತಮ್ಮನ್ನು ಹೊರಗಿಡುವುದನ್ನು ಸಹಜ ಮತ್ತು ಸೂಕ್ತವೆಂದು ಕಾಣಲು ಹೆಂಗಸರು ಕಲಿಯುವುದರಿಂದ, ಅವುಗಳನ್ನು ಗುರುತಿಸುವುದು ಕಷ್ಟ. ಅವರ ಈ ಹೊರಗಿಡಲಾದ ಲಕ್ಷಣವು ಜಾಗರೂಕ ಹಾಗೂ ವ್ಯವಸ್ಥಿತ ಅಧ್ಯಯನದಿಂದ ಮಾತ್ರ ಸ್ಪಷ್ಟವಾಗುತ್ತದೆ. ಹೆಚ್ಚಿನ ರಚನಾತ್ಮಕ ದೃಷ್ಟಿಕೋನಗಳಿಂದ, ದಬ್ಬಾಳಿಕೆಯನ್ನು ಬದಲಿಸುವ ಪ್ರಯತ್ನ ಮಾಡುವುದಕ್ಕೂ ಮೊದಲು ದಬ್ಬಾಳಿಕೆಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಹಾಗಾಗಿ, ರಚನಾತ್ಮಕ ಸ್ತ್ರೀತ್ವವಾದಿ ಶೈಕ್ಷಣಿಕ ಮಧ್ಯವರ್ತನಗಳು ತೆಗೆದುಕೊಳ್ಳುವ ಪ್ರಾಥಮಿಕ ರೂಪಗಳು ಯಾವುವೆಂದರೆ, ವಿದ್ಯಾರ್ಥಿಗಳಿಗೆ ತಮ್ಮ ಮತ್ತು ಇತರರ ಪರಿಸ್ಥಿತಿಗಳ ಬಗ್ಗೆ ವಿಮರ್ಶಕ ಪ್ರಭಾವವನ್ನು ನೀಡುವಂತಹ ಉದ್ದೇಶ್ಯವುಳ್ಳ ವಿಮೋಚನಾವಾದಿ ಬೋಧನಶಾಸ್ತ್ರ ಮತ್ತು ಏಕಪಕ್ಷೀಯನಾಯಕತ್ವ ವಿರೋಧಿ ಪಠ್ಯಕ್ರಮ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

ಈ ಕೆಳಗಿನ ವಾಕ್ಯಗಳಲ್ಲಿ ರಚನಾತ್ಮಕ ಸಿದ್ಧಾಂತಜ್ಞರ ಅನುಸಾರ ಸರಿಯಾದವುಗಳನ್ನು '✓' ಚಿಹ್ನೆಯ ಮೂಲಕ ಗುರುತಿಸಿ.

1. ಕೂಲಿ ವರ್ಗದ ಹೆಚ್ಚಿನ ಸದಸ್ಯರನ್ನು ರಾಜಕೀಯ, ಜ್ಞಾನ ಮತ್ತು ಕಲೆಯ ಕ್ಷೇತ್ರಗಳಲ್ಲಿ ವಿಶಿಷ್ಟ ಕೊಡುಗೆಗಳನ್ನು ನೀಡಿದವರೆಂದು ನೋಡುವುದನ್ನು ಶಿಕ್ಷಣಕ್ರಮದ ಮಾನದಂಡಗಳು ತಡೆಯುತ್ತವೆ.

2. ಕೆಲವೇ ಕೆಲವರ ಕೈಗಳಲ್ಲಿ ಅಧಿಕಾರ ಮತ್ತು ವಿಶೇಷ ಸವಲತ್ತುಗಳ ವ್ಯವಸ್ಥಿತ ಹೆಚ್ಚಳದಿಂದಾಗಿ ಹೆಂಗಸರ ಲಿಂಗತ್ವ ಗುರುತು ಕುಂಠಿತವಾಗಲು ಕಾರಣವಾಗಿದೆ.

3. ಲಿಂಗತ್ವ/ಲಿಂಗ, ವರ್ಣ ಮತ್ತು ವರ್ಗದ ವಿಧಾನಗಳಲ್ಲಿ ತಮ್ಮನ್ನು ಹೊರಗಿಡುವುದನ್ನು ಸಹಜವೆಂದು ಕಾಣಲು ಹೆಂಗಸರು ಕಲಿತಿದ್ದಾರೆ.

4. ದಬ್ಬಾಳಿಕೆಯನ್ನು ಪರಿವರ್ತಿಸುವ ಮೊದಲು ಅದನ್ನು ನಾವು ಅರ್ಥಮಾಡಿಕೊಳ್ಳಬೇಕು.

5. ಬಹುಪಾಲು ಸ್ಥಿರವಾಗಿರುವ ಅಧಿಕಾರ ವ್ಯವಸ್ಥೆಗಳ ಮೂಲಕ ಲಿಂಗತ್ವಕ್ಕೆ ಸಂಬಂಧಿಸಿದ ಅಸಮಾನತೆಯು ವ್ಯವಸ್ಥಾಪಿಸಲ್ಪಟ್ಟುದಲ್ಲದೆ ಉಳಿಸಿಕೊಳ್ಳಲ್ಪಟ್ಟಿದೆ.

6. ಮಕ್ಕಳು ಸಕಾರಾತ್ಮಕವಾದ ಪ್ರೋತ್ಸಾಹವನ್ನು ಪಡೆದರೆ, ನಿರ್ದಿಷ್ಟವಾದ ಆ ನಡವಳಿಕೆಯನ್ನು ಮುಂದುವರಿಸಲು ಅವರು ಪ್ರೇರಿತರಾಗುತ್ತಾರೆ.

7. ಗಮನಿಸುವುದು, ಅನುಕರಿಸುವುದು, ಶಿಕ್ಷೆ ಮತ್ತು ಪ್ರೋತ್ಸಾಹಗಳನ್ನೊಳಗೊಂಡ ಪ್ರಕ್ರಿಯೆಯ ಮೂಲಕ ಲಿಂಗತ್ವ ಗುರುತು ಮತ್ತು ಲಿಂಗತ್ವ ಪಾತ್ರಗಳನ್ನು ಕಲಿಯಲಾಗುತ್ತದೆ.

## 2.5.3.3. ಅನನ್ಯತೆಯ ಸಿದ್ಧಾಂತಗಳ ಶೈಕ್ಷಣಿಕ ನಿಹಿತಾರ್ಥಗಳು

**ಸಾಮಾಜೀಕರಣ ಸಿದ್ಧಾಂತಗಳ ಶೈಕ್ಷಣಿಕ ನಿಹಿತಾರ್ಥಗಳು**

ಈ ಸಿದ್ಧಾಂತದ ಸಿಂಧುತ್ವವು ಪ್ರಶ್ನಾರ್ಹವಾಗಿದೆ. ಆದ್ದರಿಂದ, ವೈಯಕ್ತಿಕ ಅನುಭವಗಳು ಮತ್ತು ವಿದ್ಯಾರ್ಥಿಗಳ ಅನುಭವಗಳ ಸಹಾಯದೊಂದಿಗೆ ಶಿಕ್ಷಕರು ಪ್ರಸ್ತುತ ಸಾಮಾಜೀಕರಣ ಸಿದ್ಧಾಂತದ ಸಿಂಧುತ್ವದ ಕುರಿತು ಚರ್ಚೆ ನಡೆಸಬೇಕು ಮತ್ತು ಈ ಸಿದ್ಧಾಂತದ ಸಿಂಧುತ್ವದ ವ್ಯಾಪ್ತಿಯನ್ನು ನಿರ್ಧರಿಸಬೇಕು. ಪ್ರಸ್ತುತ ಸಿದ್ಧಾಂತವು ವಿವರಿಸುವಂತೆಯೇ ಹೆಚ್ಚಿನವರು ತಮ್ಮ ಲಿಂಗತ್ವ ಅನನ್ಯತೆಯನ್ನು ತಿಳಿದುಕೊಳ್ಳುತ್ತಾರೆಂದಾದರೆ, ಅವರು ಈ ಕೆಳಗಿನ ನಿಹಿತಾರ್ಥಗಳ ಕುರಿತು ಚಿಂತಿಸಬಹುದು–

1. ಪೋಷಕರಿಗಾಗಿ ಅರಿವಿನ ಶಿಬಿರಗಳನ್ನು ನಡೆಸಬೇಕು. ಅವರು ಈಗ ಮಾಡುತ್ತಿರುವ ವಿಧಾನದಲ್ಲಿ ಲಿಂಗತ್ವ ಅನನ್ಯತೆಯನ್ನು ಬೆಳೆಸಿಕೊಳ್ಳುತ್ತಿರುವ ಕ್ರಮವು ಸರಿಯಿಲ್ಲವೆಂದೂ ಮತ್ತು ಅದರ ಪರಿಣಾಮಗಳು ಕೆಟ್ಟದಾಗಿರುತ್ತವೆ ಮತ್ತು ಈ ವಿಧಾನದಲ್ಲಿ ಸಣ್ಣ ಮಕ್ಕಳು ಹೊಂದಿರುವ ಗರಿಷ್ಠ ಸಾಮರ್ಥ್ಯ ಮತ್ತು ಪ್ರತಿಭೆಗಳೊಂದಿಗೆ ಬೆಳೆಯಲು ಅವಕಾಶ ಕೊಡದಿರುವುದರಿಂದ ಅವರ ವ್ಯಕ್ತಿತ್ವವನ್ನು ಅದು ಕಿರಿದಾಗಿಸುತ್ತದೆ ಎಂಬ ತಿಳುವಳಿಕೆಯನ್ನು ಅವರಿಗೆ ಕೊಡಬೇಕು.

2. ಶಿಕ್ಷಣದಲ್ಲಿ ಪೋಷಕರ ಗರಿಷ್ಠ ಭಾಗವಹಿಸುವಿಕೆಯಿರುವಂತೆ ಪ್ರಯತ್ನ ಪಡಬೇಕು. ಇಂತಹ ಭಾಗವಹಿಸುವಿಕೆಯಿಂದ ಅವರಿಗೆ ಸತ್ಯವನ್ನು ಗುರುತಿಸುವುದು ಸಾಧ್ಯವಾಗುತ್ತದೆ. ಹುಡುಗರು ಅಥವಾ ಹುಡುಗಿಯರಿಗೆಂದು ಮೀಸಲಾಗಿರುವ ಯಾವುದೇ ಪ್ರತಿಭೆ ಅಥವಾ ಕೌಶಲ್ಯವಿಲ್ಲ ಎನ್ನುವುದು ಅವರಿಗೆ ಅರಿವಾಗುತ್ತದೆ.

3. ಸಾಮಾಜೀಕರಣ ಪ್ರಕ್ರಿಯೆಯನ್ನು ಬದಲಿಸಲು ಪ್ರಯತ್ನಿಸಬೇಕು. ಹುಡುಗರು ಮತ್ತು ಹುಡುಗಿಯರ ಕುರಿತು ಪೋಷಕರಿಗೆ ಇರುವ ಭೇದ ಮನೋಭಾವವನ್ನು ಬದಲಿಸಬೇಕು.

4. ಮಕ್ಕಳನ್ನು ಲಿಂಗ–ಭೇದ ರಹಿತ ಜೀವನ ಶೈಲಿಯ ಮೂಲಕ ಪೋಷಕರು ಮಕ್ಕಳನ್ನು ಹೇಗೆ ಬೆಂಬಲಿಸಬಹುದು ಎಂದು ತೋರಿಸಿ ಈ ಸಿದ್ಧಾಂತವನ್ನು ಅಲ್ಲಗಳೆಯಬೇಕು.

5. ಪೋಷಕರಿಗೆ ಶಿಕ್ಷಣ ನೀಡಬೇಕು. ಹೆಚ್ಚಿನ ಪೋಷಕರು ಲಿಂಗತ್ವವನ್ನು ಆಧರಿಸಿದ ಮನೋಭಾವವನ್ನು ಪ್ರದರ್ಶಿಸುತ್ತಾರೆ ಏಕೆಂದರೆ ಅವರಿಗೆ ಶಿಕ್ಷಣವು ದೊರೆತಿರುವುದಿಲ್ಲ. ಶಿಕ್ಷಣದಿಂದಾಗಿ ಪೋಷಕರಿಗೆ

ತರ್ಕಬದ್ಧವಾಗಿ ಮತ್ತು ಸಾಮಾನ್ಯಜ್ಞಾನದೊಂದಿಗೆ ಚಿಂತಿಸಲು ಸಹಜವಾಗಿ ಸಾಧ್ಯವಾಗುತ್ತದೆ.

6. ಸಮಾಜದಲ್ಲಿ ಪೋಷಕರಿಗೆ ಕೆಲವು ಜವಾಬ್ದಾರಿಗಳನ್ನು ಕೊಡುವ ಮೂಲಕ ಅವರನ್ನು ಔಪಚಾರಿಕ ಹಾಗೂ ಅನೌಪಚಾರಿಕ ಕಾರ್ಯಕ್ರಮಗಳಲ್ಲಿ ತೊಡಗಿಸಬೇಕು, ಮತ್ತು ಇಂತಹ ತೊಡಗುವಿಕೆಯಿಂದ ಅವರ ದೃಷ್ಟಿಕೋನವು ವಿಸ್ತಾರವಾಗುತ್ತದೆ.

7. ಲಿಂಗತ್ವಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಸೂಕ್ತ ಸಂದರ್ಭಗಳಲ್ಲಿ ಪ್ರಸಾರ ಮಾಡಬೇಕು.

8. ಪೋಷಕರ ನಡವಳಿಕೆಯನ್ನು ಬದಲಿಸಲು ಹೆಚ್ಚು ವಿಶಿಷ್ಟವಾದ ಇತ್ತೀಚಿನ ಸಿದ್ಧಾಂತಗಳು ಮತ್ತು ಮಾಹಿತಿಗಳು ವಿದ್ಯಾರ್ಥಿಗಳಿಗೆ ದೊರಕುವಂತೆ ಮಾಡಬೇಕು.

9. ಲಿಂಗಕ್ಕೆ ಸಂಬಂಧಿಸಿದ ಚರ್ಚೆಗಳಲ್ಲಿ ಪೋಷಕರನ್ನು ತೊಡಗಿಸಿಕೊಂಡು ಲಿಂಗತ್ವ–ಭೇದರಹಿತ ಪರಿಸರದಲ್ಲಿ ಮಕ್ಕಳನ್ನು ಬೆಳೆಸುವ ಕುರಿತು ಪೋಷಕರನ್ನು ತರಬೇತಿಗೊಳಿಸಬೇಕು. ಯಾವುದೇ ಮೂಲದಿಂದ ತಮ್ಮ ಮಕ್ಕಳು ಲಿಂಗತ್ವ–ಭೇದವನ್ನು ಆಧರಿಸಿದ ಯಾವುದೇ ಯೋಚನೆಗಳನ್ನು ತೆಗೆದುಕೊಳ್ಳದಂತೆ ಅವರು ಜಾಗರೂಕರಾಗಿರುವಂತೆ ಮಾಡಬೇಕು.

**ರಚನಾತ್ಮಕ ಸಿದ್ಧಾಂತಗಳ ಶೈಕ್ಷಣಿಕ ನಿಹಿತಾರ್ಥಗಳು**

ರಚನಾತ್ಮಕ ಸಿದ್ಧಾಂತದ ಅನುಸಾರ, ಗಂಡು/ಹೆಣ್ಣು ಎಂಬಂತಹ ದ್ವೈವಿಧ್ಯ ಸಂಬಂಧೀ ವಿರೋಧಗಳಲ್ಲಿ ಸಾಮಾಜಿಕವಾಗಿ ಮತ್ತು ಅಚಿಂತಿತವಾಗಿ ಕ್ರಿಯಾಶೀಲವಾಗಿರುವ ಭಾಷಾಶಾಸ್ತ್ರೀಯ ಚಿಹ್ನೆಗಳಿಂದ ಮಾನವ ಜ್ಞಾನ ಮತ್ತು ಗ್ರಹಿಕೆಯನ್ನು ಪಡೆಯಲಾಗಿದೆ.

- ಹೆಂಗಸರನ್ನು ಯಾವಾಗಲೂ ತಪ್ಪು ಮಾಡುವವರು, ಕೊರತೆಯುಳ್ಳವರು ಅಥವಾ ಅನುಪಸ್ಥಿತರು ಎಂದು ತೋರಿಸುವಂತಹ ಸಿದ್ಧಾಂತಗಳಲ್ಲಿನ ಗಂಡಸರ ಮೇಲುಗೈಯನ್ನು ರಚನಾತ್ಮಕ ಸಿದ್ಧಾಂತದ ಸ್ತ್ರೀವಾದಿ ವಿಮರ್ಶಕರು ಪ್ರಶ್ನಿಸುತ್ತಾ ಬಂದಿದ್ದಾರೆ.

- ಯಾವುದೇ ವಿಧದ ಜೈವಿಕ ನಿರ್ಣಯಶಾಸ್ತ್ರವು ಯಾವುದನ್ನು ವಿರೋಧಿಸಲು ಇಚ್ಛಿಸುತ್ತದೆಯೋ, ಅದನ್ನೇ ಅಂತಿಮವಾಗಿ ಬಲಿಷ್ಠಗೊಳಿಸುತ್ತದೆ ಎಂದು ರಚನಾತ್ಮಕಸಿದ್ಧಾಂತಾನಂತರದ ಸ್ತ್ರೀವಾದಿ ವಿಮರ್ಶಕರು ವಾದಿಸಿದ್ದಾರೆ. ಹೀಗೆ, ಲಿಂಗತ್ವವನ್ನು ಸಂಸ್ಕೃತಿಯ ಪರಿಣಾಮವೆಂದು ಕಾಣಬೇಕೇ ಹೊರತು ಸಂಸ್ಕೃತಿಯನ್ನು ನಿರ್ಮಾಣಮಾಡುವ ನೆಲೆ ಎಂದು ತಿಳಿಯಬಾರದು ಎಂದು ವಾದಿಸಲಾಗಿದೆ. ಆದ್ದರಿಂದ ಲಿಂಗತ್ವವು ಸಂಸ್ಕೃತಿಯ ಪರಿಣಾಮವಾಗಿದೆ ಎಂಬ ಈ ಜ್ಞಾನವನ್ನು ಪ್ರಸಾರ ಮಾಡುವುದು ಮುಖ್ಯವಾಗಿದೆ.

- ಈಗ ಇರುವ ಅಧಿಕಾರ ಸಂಬಂಧಗಳು ಲಿಂಗತ್ವ ನಡವಳಿಕೆಗೆ ಸಂಬಂಧಿಸಿ ಸಹಜವಾಗಿವೆಯೋ ಅಥವಾ ಅರ್ಹತಾಪ್ರಭುತ್ವವುಳ್ಳವು ಆಗಿವೆಯೋ ಎಂದು ಪ್ರಶ್ನಿಸುವುದಕ್ಕೆ ಬೇಕಾದಷ್ಟು ಮಾಹಿತಿಯನ್ನು ಮಕ್ಕಳಿಗೆ ಒದಗಿಸಬೇಕು.

- ವಿದ್ಯಾರ್ಥಿಗಳನ್ನು ಅಸಮಾನವಾದ ಲಿಂಗತ್ವ ಪಾತ್ರಗಳ ಪರಿಸ್ಥಿತಿಗಳಿಗೆ ಪರಿಚಯಿಸಬೇಕು ಮತ್ತು ಕೆಲವು ಸಾಮಾಜಿಕ ಸಮೂಹಗಳ ದಬ್ಬಾಳಿಕೆಯನ್ನು ದಾಖಲಿಸಿಕೊಂಡು, ಈ ದಬ್ಬಾಳಿಕೆಯು ಅಧಿಕಾರದಲ್ಲಿರುವವರ ಆಸಕ್ತಿಗಳಿಗೆ ಹೇಗೆ ಪ್ರಯೋಜನಕಾರಿಯಾಗಿದೆ ಎಂಬುದನ್ನು ತೋರಿಸಬೇಕು.

- ಇತಿಹಾಸ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಅಥವಾ ರಾಜಕೀಯ ಸಿದ್ಧಾಂತಗಳಂತಹ ಭೌತವಾದಿ ಶಿಕ್ಷಣಶಾಖೆಗಳನ್ನು ಕಲಿಸುವಾಗ ಲಿಂಗತ್ವ ಅಸಮಾನತೆಯ ವಸ್ತುನಿಷ್ಠ ವಿನ್ಯಾಸಗಳ ಕಡೆಗೆ ಗಮನ

ಗಮನ ಹರಿಯುವಂತೆ ಮಾಡಬೇಕು. ಕೂಲಿ ಮತ್ತು ಅಂತಹ ವಿವಿಧ ಕ್ಷೇತ್ರಗಳಲ್ಲಿ ಹೆಂಗಸರ ಕೊಡುಗೆಗಳು ಇದ್ದರೂ ಉದ್ದೇಶಪೂರ್ವಕವಾಗಿ ಅಡಗಿಸಲ್ಪಟ್ಟಂತಹ ವಿಚಾರಗಳನ್ನು ಮಕ್ಕಳಿಗೆ ಪರಿಚಯಿಸಬೇಕು.

- ಪ್ರಬಲ ಆಲೋಚನಾಕ್ರಮಕ್ಕೆ ಸಂಬಂಧಿಸಿದ ಅರ್ಹತಾಪ್ರಭುತ್ವವಾದಿ ಹಾಗೂ ಅಗತ್ಯಗೊಳಿಸಿದ ಮಾನದಂಡಗಳ ವಿವರಣಾಶಕ್ತಿಗೆ ಸಮಸ್ಯೆಯುಂಟಾಗುವ ರೀತಿಯಲ್ಲಿ, ಕ್ಷುಲ್ಲಕಗೊಳಿಸಲಾಗಿರುವ ಸಮೂಹಗಳು ಮೇಲುಗೈ ಇರುವ ಸಮೂಹಗಳಿಗಿಂತ ಉತ್ತಮ ಪ್ರದರ್ಶನ ನೀಡುವುದು ಮತ್ತು ಮಾನದಂಡಗಳ ತಿದ್ದುಪಡಿ ಮಾಡುವುದು ಹೇಗೆ ಮತ್ತು ಯಾವಾಗ ಎಂಬುದನ್ನು ಅವು ತೋರಿಸುತ್ತವೆ. ಹೀಗೆ, ಪರೀಕ್ಷೆಗಳಲ್ಲಿ ಹೆಂಗಸರು ಗಂಡಸರಿಗಿಂತ ಹೆಚ್ಚಿನ ಅಂಕಗಳನ್ನು ಪಡೆದರೆ ಅಥವಾ ಹೆಚ್ಚು ಶೈಕ್ಷಣಿಕ ಗೌರವಗಳನ್ನು ಸಂಪಾದಿಸಿದರೆ, ಶಿಕ್ಷಣಕ್ಕೆ ಹೆಂಗಸರ ಪ್ರವೇಶ ಅವಕಾಶಗಳನ್ನು ತಡೆಯುವಂತಹ ನಿರ್ಬಂಧಗಳನ್ನು ಅಳವಡಿಸಿಕೊಳ್ಳಬಹುದು, ಅಥವಾ ಪ್ರಸ್ತುತ ಪರೀಕ್ಷೆಗಳು ಅಥವಾ ಶಿಕ್ಷಣಶಾಸ್ತ್ರದ ನ್ಯಾಯಸಮ್ಮತವಲ್ಲ ಎಂಬ ಪ್ರಶ್ನೆಯನ್ನೇ ಒಡ್ಡಬಹುದು. ಅದರ ಬದಲು, ಹೆಂಗಸರ ಸ್ಥಾನಮಾನಗಳಲ್ಲಿ ಉಂಟಾಗುವ ಬದಲಾವಣೆಯಿಂದಾಗಿ ಸಮಾಜಕ್ಕೆ ಪ್ರಯೋಜನವಾಗುವುದಾದರೆ, ಈ ಬದಲಾವಣೆಯನ್ನು ಒಳಗೊಳ್ಳುವಂತಹ ರೀತಿಯಲ್ಲಿ ಸಿದ್ಧಾಂತವೇ ಪರಿವರ್ತನೆಯಾಗುತ್ತದೆ. ಉದಾಹರಣೆಗೆ, ಉದ್ಯೋಗಸ್ಥರ/ಕಾರ್ಮಿಕರ ಕೊರತೆ ಉಂಟಾದಾಗ, ಹೆಂಗಸರ ನೈಸರ್ಗಿಕ ಸ್ಥಳ ಮನೆ ಎಂಬ ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ನಿರ್ದಿಷ್ಟವಾಗಿರುವ ಗೃಹೀತವನ್ನು ಸುಲಭವಾಗಿ ತಿರಸ್ಕರಿಸಲು ಆಗುತ್ತದೆ. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಹೆಂಗಸರ ತೊಡಗುವಿಕೆಯ ಸನ್ನಿವೇಶವೇ ಇದಕ್ಕೆ ಉತ್ತಮವಾದ ಉದಾಹರಣೆ. ಸ್ವಾತಂತ್ರ್ಯ ಹೋರಾಟದಲ್ಲಿ ಮನಃಪೂರ್ವಕವಾಗಿ ಪಾಲ್ಗೊಳ್ಳುವುದಕ್ಕೆ ಹೆಂಗಸರನ್ನು ಆಹ್ವಾನಿಸಲಾಗಿತ್ತು ಮತ್ತು ಪ್ರೇರಿಸಲಾಗಿತ್ತು. ಆದರೆ, ಸ್ವಾತಂತ್ರ್ಯ ದೊರೆತ ನಂತರ, ಮನೆಹೊರಗಿನ ಚಟುವಟಿಕೆಗಳಲ್ಲಿ ಹೆಂಗಸರ ತೊಡಗುವಿಕೆಯ ಕುರಿತು ಸಂಪೂರ್ಣ ಮೌನ ಕಂಡುಬಂದಿತು. ಇದು ಸಾಮಾನ್ಯ ನಾಗರಿಕನ ಪ್ರತಿಕ್ರಿಯೆಯಾಗಿರದೆ ಆ ಕಾಲದ 'ಮಹಾನ್' ವ್ಯಕ್ತಿಗಳ ಪ್ರತಿಕ್ರಿಯೆಯಾಗಿತ್ತು.

- ವಿಮರ್ಶಕ ಸಿದ್ಧಾಂತಗಳು ಮತ್ತು ಉಪಕರಣಗಳಿಗೆ ಮಕ್ಕಳನ್ನು ಪರಿಚಯಿಸುವುದರಿಂದ, ಸ್ಪಷ್ಟವಾದ ರಚನಾತ್ಮಕ ಶೈಕ್ಷಣಿಕ ಹಸ್ತಕ್ಷೇಪಗಳು, ಅವರವರ ಆಸಕ್ತಿಗಳಿಗನುಸಾರವಾಗಿ ಲಿಂಗತ್ವ, ಲೈಂಗಿಕತೆ, ವರ್ಣ ಮತ್ತು ವರ್ಗಗಳ ವಿನ್ಯಾಸಗಳ ವಿಶ್ಲೇಷಣೆ ಮಾಡಲು ಮಕ್ಕಳಿಗೆ ಸಾಧ್ಯವಾಗುತ್ತದೆ.

- ಹೆಂಗಸರ ಬಗ್ಗೆಯೇ ಇರುವ ಪಠ್ಯಗಳತ್ತ ಮಕ್ಕಳನ್ನು ನಿರ್ದೇಶಿಸಬೇಕು ಮತ್ತು ಮುಖ್ಯವಾಹಿನಿಯ ಅಧಿಕಾರ ಸಂಬಂಧಗಳಿಗೆ ಬದಲಾಗಿ ಸಮೃದ್ಧವಾಗಿ ಅಭಿವೃದ್ಧಿ ಪಡಿಸಿದ ಪರ್ಯಾಯವನ್ನು ಅವರಿಗೆ ಒದಗಿಸಬೇಕು. ಈ ಪ್ರಯತ್ನದಿಂದ ವಿದ್ಯಾರ್ಥಿಗಳು ಮೇಲುಗೈ ಕ್ರಮವನ್ನು ಸಂರಕ್ಷಿಸುತ್ತಿರುವ ಸೈದ್ಧಾಂತಿಕ ಉಪಕರಣಗಳನ್ನು ಬದಿಗಿಟ್ಟು, ಹೆಂಗಸರು ತಮ್ಮ ಅನುಭವದಿಂದ ತಯಾರಿಸಿದ ಪಠ್ಯಗಳು ಮತ್ತು ಉಪಕರಣಗಳ ಮೂಲಕ ಹೆಂಗಸರ ವಿವಿಧ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು ಸಾಧ್ಯವಾಗುತ್ತದೆ. ಬಾಹ್ಯ ದೃಷ್ಟಿಕೋನ ಮತ್ತು ಮಾರ್ಕ್ಸ್‌ವಾದಿ ಸ್ತ್ರೀವಾದ, ನಾರೀವಾದ, ತೀವ್ರಗಾಮಿ ಸ್ತ್ರೀವಾದ, ವಿಮರ್ಶಕ ವರ್ಣಭೇದ ಸಿದ್ಧಾಂತ ಇತ್ಯಾದಿಗಳನ್ನು ಒಳಗೊಂಡ ಪರ್ಯಾಯ ಸಿದ್ಧಾಂತಗಳೊಂದಿಗೆ ವಿದ್ಯಾರ್ಥಿಗಳು ಪರಿಚಿತರಾಗುವಷ್ಟಾದರೆ, ಅಧಿಕಾರವನ್ನು ಆಧರಿಸಿಕೊಂಡ ಸಂಬಂಧಗಳಿಗೆ ಸವಾಲನ್ನು ಎದುರಿಟ್ಟು ನಿಗೂಢತೆಯನ್ನು ಸ್ಪಷ್ಟಮಾಡಿಕೊಳ್ಳಲು ಬೇಕಾಗುವ ಉಪಕರಣಗಳನ್ನು ಇವರು ಪಡೆದಂತಾಗುತ್ತದೆ. ಸಮಾಜದಲ್ಲಿ ಹುಡುಗಿಯರು ಮತ್ತು ಹೆಂಗಸರ ಘನತೆಯನ್ನು ಮೌಲ್ಯೀಕರಿಸುವ ಉಪಕರಣಗಳು ಮತ್ತು ತಂತ್ರಜ್ಞಾನಗಳು ವಿದ್ಯಾರ್ಥಿಗಳು ಪರಿಚಿತರಾಗಬೇಕು ಮತ್ತು ಪ್ರಸ್ತುತ ಪರಿಸ್ಥಿತಿಗೆ ಕಾರಣಗಳನ್ನು ಗುರುತಿಸಲು ಪ್ರೇರಿತರಾಗಬೇಕು.

- ತಮಗಾದ ಅನುಭವಗಳಲ್ಲಿನ ವಿರೋಧಾಭಾಸಗಳನ್ನು ತಾವೇ ಪರೀಕ್ಷಿಸಿ, ನೈಜ ಅನುಭವಕ್ಕೆ ತುಲನೆ ಮಾಡಿ ಮೇಲುಗೈ ಸಿದ್ಧಾಂತವು ಹೊಂದಿರುವ ಸುಳ್ಳು ಸಂಬಂಧಗಳನ್ನು ವಿರೋಧಿಸಬಹುದು. ಪರ್ಯಾಯ ಮತ್ತು/ಅಥವಾ ವಿಮರ್ಶಕ ವಿಶ್ಲೇಷಣೆಗಳು, ಪಠ್ಯಗಳು ಮತ್ತು ಪಠ್ಯಕ್ರಮಗಳ ಮೂಲಕವೇ ವಿದ್ಯಾರ್ಥಿಗಳು ಮೇಲುಗೈ ಸಿದ್ಧಾಂತದ ವಿರೂಪಕಾರಿ ಅಧಿಕಾರದ ಕುರಿತು ತಿಳುವಳಿಕೆಯನ್ನು ಪಡೆಯುವುದಾದ್ದರಿಂದ, ಶಿಕ್ಷಣದ ರಚನಾತ್ಮಕ ಸ್ತ್ರೀವಾದಿ ಪ್ರಸ್ತಾವನೆಗಳಲ್ಲಿಯೇ ಪಠ್ಯಗಳು ಮತ್ತು ಸಿದ್ಧಾಂತಗಳು ವಿಮರ್ಶೆಯ ಭಾರವನ್ನು ಹೊರಬೇಕಾಗುತ್ತದೆ.
- ವಿವಿಧ ಕ್ಷೇತ್ರಗಳಲ್ಲಿ ಹೆಂಗಸರ ಕೊಡುಗೆಯನ್ನು ಗುರುತಿಸುವಂತೆ ವಿದ್ಯಾರ್ಥಿಗಳನ್ನು ಪ್ರೇರಿಸಬೇಕು ಮತ್ತು ಅದನ್ನು ಹಲವಾರು ವಿಧಾನಗಳ ಎತ್ತಿತೋರಿಸಬೇಕು.
- ವಿದ್ಯಾರ್ಥಿಗಳು ಸಮಾಜದ ರಚನೆಯ ಭಾಗವಾಗಿರುವುದರಿಂದ, ಇನ್ನೊಂದು ಲಿಂಗದ ಕುರಿತು ಸರಿಯಾದ ಮನೋಭಾವವನ್ನು ಬೆಳೆಸಬೇಕು.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

ಈ ಕೆಳಗಿನ ನಿಹಿತಾರ್ಥಗಳಲ್ಲಿ ಸಾಮಾಜೀಕರಣ ಸಿದ್ಧಾಂತದ ನಿಹಿತಾರ್ಥಗಳನ್ನು 'ಸಾಸಿ' ಎಂದು ಸೂಚಿಸುವ ಮೂಲಕ ಮತ್ತು ರಚನಾತ್ಮಕ ಸಿದ್ಧಾಂತದ ನಿಹಿತಾರ್ಥಗಳನ್ನು 'ರಸಿ' ಎಂದು ಸೂಚಿಸುವ ಮೂಲಕ ವರ್ಗೀಕರಿಸಿ.

1. ಈಗ ಇರುವ ಅಧಿಕಾರ ಸಂಬಂಧಗಳು ಲಿಂಗತ್ವ ನಡವಳಿಕೆಗೆ ಸಂಬಂಧಿಸಿ ಪ್ರಾಕೃತಿಕವಾಗಿವೆಯೋ ಅಥವಾ ಅರ್ಹತಾಪ್ರಭುತ್ವವುಳ್ಳವು ಆಗಿವೆಯೋ ಎಂದು ಪ್ರಶ್ನಿಸುವುದಕ್ಕೆ ಬೇಕಾದಷ್ಟು ಸಾಹಿತ್ಯವನ್ನು ಮಕ್ಕಳಿಗೆ ಒದಗಿಸಬೇಕು.
2. ಸಾಮಾಜೀಕರಣ ಪ್ರಕ್ರಿಯೆಯನ್ನು ಬದಲಿಸಲು ಪ್ರಯತ್ನಿಸಬೇಕು. ಹುಡುಗರು ಮತ್ತು ಹುಡುಗಿಯರ ಕುರಿತು ಪೋಷಕರಿಗೆ ಇರುವ ಭೇದ ಮನೋಭಾವವನ್ನು ಬದಲಿಸಬೇಕು.
3. ವಿದ್ಯಾರ್ಥಿಗಳನ್ನು ಅಸಮಾನವಾದ ಲಿಂಗತ್ವ ಪಾತ್ರಗಳ ಪರಿಸ್ಥಿತಿಗಳಿಗೆ ಪರಿಚಯಿಸಬೇಕು ಮತ್ತು ಕೆಲವು ಸಾಮಾಜಿಕ ಸಮೂಹಗಳ ದಬ್ಬಾಳಿಕೆಯನ್ನು ದಾಖಲಿಸಿಕೊಂಡು, ಈ ದಬ್ಬಾಳಿಕೆಯು ಅಧಿಕಾರದಲ್ಲಿರುವವರ ಆಸಕ್ತಿಗಳಿಗೆ ಹೇಗೆ ಪ್ರಯೋಜನಕಾರಿಯಾಗಿದೆ ಎಂಬುದನ್ನು ತೋರಿಸಬೇಕು.
4. ಮಕ್ಕಳನ್ನು ಲಿಂಗ-ಭೇದ ರಹಿತ ಜೀವನ ಶೈಲಿಯ ಮೂಲಕ ಪೋಷಕರು ಮಕ್ಕಳನ್ನು ಹೇಗೆ ಬೆಂಬಲಿಸಬಹುದು ಎಂದು ತೋರಿಸಿ ಈ ಸಿದ್ಧಾಂತವನ್ನು ಅಲ್ಲಗಳೆಯಬೇಕು.
5. ಇತಿಹಾಸ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಅಥವಾ ರಾಜಕೀಯ ಸಿದ್ಧಾಂತಗಳಂತಹ ಭೌತವಾದಿ ಶಿಕ್ಷಣಶಾಖೆಗಳನ್ನು ಕಲಿಸುವಾಗ ಲಿಂಗತ್ವ ಅಸಮಾನತೆಯ ವಸ್ತುನಿಷ್ಠ ವಿನ್ಯಾಸಗಳ ಕಡೆಗೆ ಗಮನ ಗಮನ ಹರಿಯುವಂತೆ ಮಾಡಬೇಕು. ಕೂಲಿ ಮತ್ತು ಅಂತಹ ವಿವಿಧ ಕ್ಷೇತ್ರಗಳಲ್ಲಿ ಹೆಂಗಸರ ಕೊಡುಗೆಗಳು ಇದ್ದರೂ ಉದ್ದೇಶಪೂರ್ವಕವಾಗಿ ಅಡಗಿಸಲ್ಪಟ್ಟಂತಹ ವಿಚಾರಗಳನ್ನು ಮಕ್ಕಳಿಗೆ ಪರಿಚಯಿಸಬೇಕು.
6. ಶಿಕ್ಷಣದಲ್ಲಿ ಪೋಷಕರ ಗರಿಷ್ಠ ಭಾಗವಹಿಸುವಿಕೆಯಿರುವಂತೆ ಪ್ರಯತ್ನ ಪಡಬೇಕು. ಇಂತಹ ಭಾಗವಹಿಸುವಿಕೆಯಿಂದ ಅವರಿಗೆ ಸತ್ಯವನ್ನು ಗುರುತಿಸುವುದು ಸಾಧ್ಯವಾಗುತ್ತದೆ. ಹುಡುಗರು ಅಥವಾ ಹುಡುಗಿಯರಿಗೆಂದು ಮೀಸಲಾಗಿರುವ ಯಾವುದೇ ಪ್ರತಿಭೆ ಅಥವಾ ಕೌಶಲ್ಯವಿಲ್ಲ ಎನ್ನುವುದು ಅವರಿಗೆ ಅರಿವಾಗುತ್ತದೆ.

## 2.5.4. ಸಾರಾಂಶಿಸೋಣ

- ಲಿಂಗತ್ವ ಅನನ್ಯತೆ ಎಂಬುದು ಒಬ್ಬ ವ್ಯಕ್ತಿಯ ಲಿಂಗದ ಕುರಿತು ಇರುವ ವೈಯಕ್ತಿಕ ಸಂವೇದನೆ. ಲಿಂಗತ್ವ ಗುರುತು ಜನನದ ಸಮಯದಲ್ಲಿ ನಿಗದಿಸಲ್ಪಟ್ಟ ಲಿಂಗಕ್ಕೆ ಸರಿಸಮಾನವಾಗಿರಬಹುದು ಅಥವಾ ಅದರಿಂದ ಭಿನ್ನವಾಗಿಯೂ ಇರಬಹುದು.
- ಲಿಂಗತ್ವ ಅನನ್ಯತೆಯ ರಚನೆಯು ಹೇಗೆ, ಯಾವಾಗ ಮತ್ತು ಏಕೆ ಆಗುತ್ತದೆ ಎಂಬುದನ್ನು ವಿವರಿಸಲು ಅನೇಕ ಸಿದ್ಧಾಂತಗಳನ್ನು ಮುಂದಿಡಲಾಗಿದೆ. ಮಕ್ಕಳು ಈ ಅಂಶಗಳನ್ನು ವಿವರಿಸುವುದು ಕಷ್ಟವಾಗಿರುವುದರಿಂದ ಇದರ ಅಧ್ಯಯನವು ಸವಾಲಿನಿಂದ ಕೂಡಿದೆ. ಆದ್ದರಿಂದ ಸಂಶೋಧಕರು ಕಲ್ಪಿಸಿಕೊಳ್ಳಬೇಕಾಗುತ್ತದೆ ಅಥವಾ ಊಹಿಸಿಕೊಳ್ಳಬೇಕಾಗುತ್ತದೆ.
- 18 ತಿಂಗಳುಗಳಿಂದ ಎರಡು ವರ್ಷದೊಳಗಿನಷ್ಟು ಮುಂಚೆಯೇ ಮಕ್ಕಳಲ್ಲಿ ಲಿಂಗತ್ವದ ಕುರಿತು ಅರಿವು ಇದ್ದು ಅವರು ಅದಕ್ಕೆ ಅಷ್ಟಿಷ್ಟು ಮಹತ್ವವನ್ನು ಕೊಡುತ್ತಾರೆ ಎಂದು ಕೆಲವು ಸಂಶೋಧಕರು ಹೇಳುತ್ತಾರೆ.
- ಬೆಳವಣಿಗೆಯ ಈ ಪ್ರಕ್ರಿಯೆಯನ್ನು ಕೆಲವು ತಜ್ಞರು ಮೂರು ಹಂತಗಳಾಗಿ ವಿವರಿಸುತ್ತಾರೆ.
- ಲಿಂಗತ್ವ ಅನನ್ಯತೆಯ ರಚನೆಯ ಪ್ರಕ್ರಿಯೆಯನ್ನು ಇಲ್ಲಿಯವರೆಗೂ ಪೂರ್ಣವಾಗಿ ಅರ್ಥಮಾಡಿಕೊಳ್ಳಲಾಗದಿದ್ದರೂ, ಜೈವಿಕ ಹಾಗೂ ಪರಿಸರಸಂಬಂಧೀ ಅಂಶಗಳೆರಡಕ್ಕೂ ಈ ವಿದ್ಯಮಾನವನ್ನು ಜನರು ಜೋಡಿಸುತ್ತಾರೆ.
- ಲಿಂಗತ್ವ ಅನನ್ಯತೆಯ ಮೇಲೆ ಪ್ರಭಾವ ಬೀರುವ ಸಾಮಾಜಿಕ ಅಂಶಗಳಲ್ಲಿ ಕುಟುಂಬ, ಅಧಿಕೃತ ಅಂಕಿಸಂಖೆಗಳು, ಸಮೂಹ ಮಾಧ್ಯಮಗಳು ಮತ್ತು ಒಂದು ಮಗುವಿನ ಜೀವನದ ಮೇಲೆ ಪ್ರಭಾವ ಬೀರುವ ಇತರೆ ವ್ಯಕ್ತಿಗಳು ಲಿಂಗತ್ವವು ವಹಿಸುವ ಪಾತ್ರಗಳ ಬಗ್ಗೆ ಹೇಳಿಕೊಡುವ ಕಲ್ಪನೆಗಳು ಒಳಗೊಳ್ಳುತ್ತವೆ.
- ಸಾಮಾಜೀಕರಣದ ಮಧ್ಯವರ್ತಿಗಳಿಂದ ಋಣಾತ್ಮಕ ಹಸ್ತಕ್ಷೇಪಕ್ಕೆ ಹೆಣ್ಣು ಮಕ್ಕಳು ಗುರಿಯಾಗದಿದ್ದರೆ, ಗಂಡುಮಕ್ಕಳು ತಲುಪುವ ಅದೇ ಶೈಕ್ಷಣಿಕ ಗುಣಮಟ್ಟವನ್ನು ಹೆಣ್ಣುಮಕ್ಕಳೂ ತಲುಪಬಲ್ಲರು ಎಂದು ಸಾಮಾಜೀಕರಣ ಸಿದ್ಧಾಂತಜ್ಞರು ವಾದಿಸುತ್ತಾರೆ.
- ಸಾಮಾಜಿಕ ಕಲಿಕೆಯ ಸಿದ್ಧಾಂತದ ಅನುಸಾರ, ಲಿಂಗಕ್ಕೆ ಸೂಕ್ತವೆನಿಸುವ ಮತ್ತು ಸೂಕ್ತವೆನಿಸದ ನಡೆವಳಿಕೆಗಳಿಗೆ ಸಂಬಂಧಿಸಿ ಮಕ್ಕಳು ಸಕಾರಾತ್ಮಕವಾಗಿ ಹಾಗೂ ನಕಾರಾತ್ಮಕವಾಗಿ ಪ್ರೋತ್ಸಾಹಿಸಲ್ಪಡುತ್ತಾರೆ. ಲಿಂಗತ್ವಕ್ಕೆ ಸಂಬಂಧಿಸಿದ ನಡೆವಳಿಕೆಗಳಿಗೆ ಭಿನ್ನವಾಗಿ ಪ್ರೋತ್ಸಾಹವನ್ನು ಪಡೆದ ಮಗುವಿಗೆ ಪೋಷಕರು ಮತ್ತು ಇತರರು ಲಿಂಗಕ್ಕೆ ಸಂಬಂಧಿಸಿ ಒಂದು ಚೌಕಟ್ಟನ್ನು ಹಾಕುತ್ತಾರೆಂದು ಈ ದೃಷ್ಟಿಕೋನವು ಭಾವಿಸುತ್ತದೆ.
- ವಿಯೆನ್ನಾದ ಮನೋವಿಶ್ಲೇಷಕರಾದ ಸಿಗ್‌ಮಂಡ್ ಫ್ರಾಯ್ಡ್‌ರ ಕೃತಿಗಳಲ್ಲಿ ಮನೋಕ್ರಿಯಾಶೀಲತಾ ಸಿದ್ಧಾಂತವು ತನ್ನ ಬೇರುಗಳನ್ನು ಹೊಂದಿದೆ. ಒಬ್ಬ ವ್ಯಕ್ತಿಯ ಲಿಂಗತ್ವ ಅನನ್ಯತೆಯನ್ನು ರೂಪಿಸುವುದರಲ್ಲಿ ಈ ಸಿದ್ಧಾಂತವು ಕುಟುಂಬದವರ ಪಾತ್ರವನ್ನು, ಅದರಲ್ಲಿಯೂ ತಾಯಿಯ ಪಾತ್ರವನ್ನು ಬಹು ಮುಖ್ಯವಾದದ್ದೆಂದು ತಿಳಿದಿದೆ. ಹುಡುಗರು ಮತ್ತು ಹುಡುಗಿಯರು ತಮ್ಮ ತಾಯಿಗೆ ಸಂಬಂಧಿಸಿದಂತೆ ತಮ್ಮ ತಮ್ಮ ಗುರುತನ್ನು ರೂಪಿಸಿಕೊಳ್ಳುತ್ತಾರೆ.
- ಸಾಂಕೇತಿಕ ಪರಸ್ಪರಕ್ರಿಯಾ ಸಿದ್ಧಾಂತವನ್ನು ಲಿಂಗತ್ವ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿಯೇ ಇದನ್ನು ಬೆಳೆಸಿಲ್ಲವಾದರೂ, ಅದು ಲಿಂಗತ್ವ ಗುರುತಿನ ಪ್ರಕ್ರಿಯೆಗೆ ನಿರ್ದಿಷ್ಟವಾಗಿ ಅನ್ವಯಿಸುತ್ತದೆ.

ಈ ಸಿದ್ಧಾಂತದ ಪ್ರಕಾರ, ಸಾಂಸ್ಕೃತಿಕ ಸಂದರ್ಭಗಳಲ್ಲಿ ಸಂವಹನದ ಮುಖಾಂತರ ಸಾಮಾಜಿಕ ಲಿಂಗತ್ವವನ್ನು ಕಲಿತುಕೊಳ್ಳಲಾಗುತ್ತದೆ.

- ಅಧಿಕಾರವೆಂದರೆ ಒಂದು ಸಮೂಹವು ಇನ್ನೊಂದು ಸಮೂಹದ ಮೇಲೆ ಪ್ರದರ್ಶಿಸುವಂಥದ್ದಾಗಿದೆ ಎಂದು ಸಾಮಾಜಿಕ ರಚನಾತ್ಮಕ ಸಿದ್ಧಾಂತಗಳು ಹೇಳುತ್ತವೆ. ಅದು ನಿಯಮಗಳು, ಗುಣಮಟ್ಟಗಳು, ಆಧಿಪತ್ಯದ ಅಭ್ಯಾಸಗಳು ಮತ್ತು ಸಾಂಸ್ಥಿಕ ಸಂಬಂಧಗಳ ಮೂಲಕ ಕಾನೂನುಬದ್ಧಗೊಳಿಸಲಾಗಿರುವ ಒಂದು ಬಗೆಯ ಸ್ವತ್ತು ಅಥವಾ ಸಂಪತ್ತು. ಬಹುಪಾಲು ಸ್ಥಿರವಾಗಿರುವ ಅಧಿಕಾರ ವ್ಯವಸ್ಥೆಗಳ ಮೂಲಕ ಲಿಂಗತ್ವಕ್ಕೆ ಸಂಬಂಧಿಸಿದ ಮತ್ತು ಇತರ ಅಸಮಾನತೆಯ ರೂಪಗಳೆರಡೂ ವ್ಯವಸ್ಥಾಪಿಸಲ್ಪಟ್ಟುದಲ್ಲದೆ ಉಳಿಸಿಕೊಳ್ಳಲ್ಪಟ್ಟಿವೆ.

## 2.5.5. ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1, 2, ಮತ್ತು 3, ಇದಕ್ಕೆ ಉತ್ತರಗಳು

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1**

2, 4 ಮತ್ತು 6 ಸರಿಯಾಗಿವೆ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

1 ರಿಂದ 5 ಸರಿಯಾಗಿವೆ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 3**

1, 3, 5 ಮತ್ತು 7: ಸಾಸಿ

2, 4, ಮತ್ತು 6: ರಸಿ

## 2.5.6. ಘಟಕಾಂತ್ಯ ಅಭ್ಯಾಸಗಳು

ಲಿಂಗತ್ವ ಅನನ್ಯತೆಯ ಸಾಮಾಜೀಕರಣ ಸಿದ್ಧಾಂತ ಮತ್ತು ರಚನಾತ್ಮಕ ಸಿದ್ಧಾಂತಗಳ ತತ್ವಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳನ್ನು ವಿವರಿಸಿ.

## 2.5.7. ಪರಾಮರ್ಶನ ಸೂಚಿ


1. https://facweb.northseattle.edu/jreis/cmn145/Gender%201.htm
2. https://pdfs.semanticscholar.org/b976/bfebcd6eb9320e006d8a 368f60b491558 aa9.pdf
3. https://courses.lumenlearning.com/introductiontocommunication/chapter/theories-of-gender-development/
4. Caring in Context: Four Feminist Theories on Gender and . https://canvas.brown.edu/courses/202417/files/6183584/download.. [PDF]
5. https://canvas.brown.edu › download
6. https://en.wikipedia.org/wiki/Feminist_theory
7. https://www.thoughtco.com/feminist-theory-3026624
8. https://en.wikipedia.org/wiki/Gender_identity

9. https://www.genderspectrum.org/quick-links/understanding-gender/
10. https://www.sciencedirect.com/topics/medicine-and-dentistry/gender-identity
11. https://files.eric.ed.gov/fulltext/ED377422.pdf
12. https://emedicine.medscape.com/article/917990-overview
13. https://courses.lumenlearning.com/introductiontocommunication/chapter/theories-of-gender-development/
14. https://onlinelibrary.wiley.com/doi/full/10.1002/9781118663219.wbegss258

***********

# ಬ್ಲಾಕ್–2 : ಲಿಂಗತ್ವ ಮತ್ತು ಶಿಕ್ಷಣ

## ಘಟಕ–6: ಪಠ್ಯಕ್ರಮದಲ್ಲಿ ಲಿಂಗತ್ವ ವಿಚಾರಗಳು: ಲಿಂಗತ್ವ, ಸಂಸ್ಕೃತಿ ಮತ್ತು ಸಂಸ್ಥೆ, ಕಲಿಕಾರ್ಥಿಗಳಾಗಿ ಬಾಲಕಿಯರು; ಲಿಂಗತ್ವ ಮತ್ತು ಅಡಗು ಪಠ್ಯಕ್ರಮ

**ಘಟಕದ ರಚನೆ**


2.6.1. ಕಲಿಕೆಯ ಉದ್ದೇಶಗಳು

2.6.2. ಪೀಠಿಕೆ

2.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.6.3.1. ಲಿಂಗತ್ವ, ಸಂಸ್ಕೃತಿ ಮತ್ತು ಸಂಸ್ಥೆ; ಕಲಿಕಾರ್ಥಿಗಳಾಗಿ ಬಾಲಕಿಯರು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

2.6.3.2. ಲಿಂಗತ್ವ ಸಂಸ್ಕೃತಿ ಮತ್ತು ಅಡಗು ಪಠ್ಯಕ್ರಮ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

2.6.4. ಸಾರಾಂಶಿಸೋಣ

2.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

2.6.6. ಘಟಕಾಂತ್ಯ ಅಭ್ಯಾಸಗಳು

2.6.7. ಪರಾಮರ್ಶನ ಸೂಚಿ


## 2.6.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಸಂಸ್ಕೃತಿಯ ಅರ್ಥವನ್ನು ವಿಶ್ಲೇಷಿಸಿ ಲಿಂಗತ್ವ ಮತ್ತು ಸಂಸ್ಕೃತಿಗಳಿಗಿರುವ ಸಂಬಂಧವನ್ನು ವಿವರಿಸುವರು;
- ಕಲಿಕಾರ್ಥಿಗಳಾಗಿ ಬಾಲಕಿಯರ ವಿಚಾರಗಳನ್ನು ವಿವರಿಸುವರು;
- ಪಠ್ಯಕ್ರಮದಲ್ಲಿ ಲಿಂಗವಿಚಾರಗಳನ್ನು ವಿಶ್ಲೇಷಿಸಬೇಕಾದ ಅಗತ್ಯವನ್ನು ಅವುಗಳನ್ನು ಪ್ರಸ್ತುತಪಡಿಸಬೇಕಾದ ರೀತಿಯನ್ನು ತಿಳಿಸುವರು; ಮತ್ತು
- ಶಾಲೆಯಲ್ಲಿ ಬೋಧಿಸಲಾಗುವ ವಿಷಯಗಳಲ್ಲಿ ಲಿಂಗತ್ವ ವಿಷಯಗಳನ್ನು ವಿವೇಚಿಸುವ ಸಂವೇದನಾಶೀಲತೆಯನ್ನು ಬೆಳೆಸಿಕೊಳ್ಳುವರು.

## 2.6.2. ಪೀಠಿಕೆ

ಮಾನವಕುಲದ ಇತಿಹಾಸದಲ್ಲಿ ಒಂದು ಸಮಾಜದ ಸ್ಥಾನಮಾನವನ್ನು ನಿರ್ಧರಿಸುವ ಪ್ರಮುಖ ಅಂಶವೆಂದರೆ ಆ ಸಮಾಜದ ಸಂಸ್ಕೃತಿ. ಸಂಸ್ಕೃತಿ ಎಂಬುದು ಸಮಾಜದ ವಿಚಾರಗಳ, ರೂಢಿಗಳ, ಮೌಲ್ಯಗಳ ಮತ್ತು ಸಾಮಾಜಿಕ

ವರ್ತನೆಗಳ ಅಭಿವ್ಯಕ್ತಿ. ಜನರ ಲಿಂಗತ್ವ ವರ್ತನೆಗಳನ್ನು ನಿಯಂತ್ರಿಸುವಲ್ಲಿ ಸಂಸ್ಕೃತಿಯ ಪಾತ್ರ ಹಿರಿದಾದುದು. ಸಂಸ್ಕೃತಿ ಮತ್ತು ಲಿಂಗತ್ವ ವರ್ತನೆಗಳ ನಡುವೆ ಅವಿನಾಭಾವ ಸಂಬಂಧವಿರುವುದರಿಂದ, ಅವೆರಡನ್ನೂ ಜವಾಬ್ದಾರಿಯುತವಾದ ಕುಟುಂಬ, ಧರ್ಮ ಅಥವಾ ರಾಜಕೀಯ ಮೊದಲಾದ ಸಂಸ್ಥೆಗಳು ಅಥವಾ ನಿಯೋಗಗಳು ರೂಪಿಸಬೇಕು. ಒಂದು ಸಮಾಜದ ಸಂಸ್ಕೃತಿಯನ್ನು ರೂಪಿಸುವ ಮತ್ತೊಂದು ಪ್ರಮುಖ ಸಂಸ್ಥೆ ಎಂದರೆ ಶಿಕ್ಷಣ. ಶಿಕ್ಷಣವು ತನ್ನ ಅನೇಕ ಆಯಾಮಗಳ ಮೂಲಕ ಈ ಕೆಲಸವನ್ನು ಮಾಡುತ್ತದೆ. ಅದರಲ್ಲಿ ಪಠ್ಯಕ್ರಮವೂ ಒಂದು. ಈ ಹಿನ್ನೆಲೆಯಲ್ಲಿ ಸಂಸ್ಕೃತಿ, ಲಿಂಗತ್ವ ವಿಚಾರಗಳು ಮತ್ತು ಶಿಕ್ಷಣದ ಭಾಗವಾದ ಪಠ್ಯಕ್ರಮ ಇವುಗಳ ನಡುವೆ ಇರುವ ಸಂಬಂಧವನ್ನು ಈ ಘಟಕದಲ್ಲಿ ವಿಚಾರಮಾಡೋಣ.

## 2.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.6.3.1. ಲಿಂಗತ್ವ, ಸಂಸ್ಕೃತಿ ಮತ್ತು ಸಂಸ್ಥೆ; ಕಲಿಕಾರ್ಥಿಗಳಾಗಿ ಬಾಲಕಿಯರು

ಸಂಸ್ಕೃತಿ ಎಂಬುದು ವಿಶಾಲ ವ್ಯಾಪ್ತಿಯುಳ್ಳ ಪದ. ಇದು ಮಾನವ ಸಮಾಜದಲ್ಲಿನ ಸಾಮಾಜಿಕ ವರ್ತನೆಗಳು ಮತ್ತು ಮಾನಕಗಳನ್ನು ಒಳಗೊಳ್ಳುತ್ತದೆ. ಜೊತೆಗೆ ಆಯಾ ಸಮಾಜದ ಜ್ಞಾನ, ನಂಬಿಕೆಗಳು, ಕಲೆ, ಸಂಪ್ರದಾಯಗಳು, ಕಾನೂನುಗಳು, ವ್ಯಕ್ತಿಗಳ ಅಭ್ಯಾಸಗಳು ಮತ್ತು ಸಾಮರ್ಥ್ಯಗಳೂ ಸಂಸ್ಕೃತಿಯ ಪರಿಧಿಯಲ್ಲಿ ಬರುತ್ತವೆ. ಸಾಮಾಜಿಕ ಸಂಬಂಧಗಳನ್ನು ಬೆಸೆಯುವಲ್ಲಿ, ಸಾಮಾಜಿಕ ವ್ಯವಸ್ಥೆಯನ್ನು ನಿರ್ವಹಿಸುವಲ್ಲಿ ಮತ್ತು ಸವಾಲುಗಳನ್ನು ಎದುರಿಸುವಲ್ಲಿ ಇದು ಪ್ರಮುಖವಾಗುತ್ತದೆ. ನಮ್ಮ ದಿನನಿತ್ಯದ ಕಾರ್ಯಕಲಾಪಗಳನ್ನು ಮತ್ತು ಸಮಾಜದಲ್ಲಿನ ನಮ್ಮ ಅನುಭವಗಳನ್ನು ರೂಪಿಸುವಲ್ಲಿ ಇದರ ಪಾತ್ರವಿದೆ. ಇದು ಭೌತಿಕ ಮತ್ತು ಅಭೌತಿಕ ಅಂಶಗಳಿಂದ ರೂಪಿತವಾಗುವಂತಹುದು. ಇದು ಬದುಕಿನ ಮೊದಲ ಹಂತದಲ್ಲೇ ಕುದುರುವಂತಹುದು, ಆದರೆ ಬದುಕಿನುದ್ದಕ್ಕೂ ರೂಪುಗೊಳ್ಳುವುದು. ನಾವು ಯಾರು ಮತ್ತು ನಾವು ಹೇಗೆ ವರ್ತಿಸಬೇಕು ಎಂಬುದನ್ನು ಇದು ನಿರ್ಧರಿಸುತ್ತದೆ.

ಲಿಂಗತ್ವ ಎಂಬುದು ನಮಗೆ ತಿಳಿದಿರುವಂತೆ ಸಾಮಾಜಿಕವಾಗಿ ರೂಪುಗೊಳ್ಳುವಂತಹುದು. ಇದು ಪ್ರತಿ ವ್ಯಕ್ತಿಯ ಮನೋಭಾವಗಳು, ಪಾತ್ರಗಳು, ಜವಾಬ್ದಾರಿ ಮತ್ತು ವರ್ತನಾ ವಿನ್ಯಾಸಗಳ ಮೇಲೆ ವಿಶೇಷವಾದ ಪ್ರಭಾವವನ್ನು ಬೀರುತ್ತದೆ. ಈ ಲಿಂಗತ್ವ ವಿಚಾರಗಳು ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ. ಬಹುಸಂಸ್ಕೃತಿಯ ಸಮಾಜದಲ್ಲಿ ಅಧಿಕಾರ ಸಂಬಂಧದಿಂದ ರೂಪಿತವಾದ ಮಹಿಳೆಯರ ಮತ್ತು ಜನರ ವಿಚಾರಗಳಿವು. ಇದು ವೈವಿಧ್ಯತೆಗಳು ಮತ್ತು ವ್ಯತ್ಯಾಸಗಳನ್ನೊಳಗೊಂಡಂತೆ ಮಾನವ ಕಾಳಜಿಗಳನ್ನು ಕುರಿತದ್ದು. ಪ್ರಗತಿಪರ ಹಾಗೂ ಪ್ರಗತಿಶೀಲ ರಾಷ್ಟ್ರಗಳ ಸಂಸ್ಕೃತಿಗಳಲ್ಲಿ ವಿವಿಧ ರೀತಿಯ ತಾರತಮ್ಯಗಳು ವ್ಯಾಪಕವಾಗಿ ಎದ್ದುಕಾಣುತ್ತಿವೆ.

ಇದು ಬೇರೆ ಬೇರೆ ಸಂಸ್ಥೆಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಭಿನ್ನ ಮಟ್ಟಗಳಲ್ಲಿ ಕಾಣಿಸಿಕೊಳ್ಳುತ್ತದೆ ಎಂಬುದನ್ನು ನಾವು ಈಗಾಗಲೇ ವಿಚಾರಮಾಡಿದ್ದೇವೆ. ಈ ಸಂಸ್ಥೆ ಎಂಬುದು ಒಂದು ಸಾಮಾಜಿಕ ರಚನೆ. ಇದು ವ್ಯಕ್ತಿಗಳ ವ್ಯವಹಾರದ ನೆಲೆ. ಇದು ಜನರ ವರ್ತನೆಗಳ ಮೇಲೆ ಪ್ರಭಾವ ಬೀರುತ್ತದೆ. ಈ ಸಾಮಾಜಿಕ ಸಂಸ್ಥೆಗಳು ಸಮಾಜದಲ್ಲಿ ಜನರ ವರ್ತನೆಗಳನ್ನು ನಿಯಂತ್ರಿಸುತ್ತದೆ. ಸಮಾಜದಲ್ಲಿ ಅವು ನಿರ್ದಿಷ್ಟ ಪಾತ್ರವನ್ನು ವಹಿಸುತ್ತವೆ. ಸಾಮಾಜಿಕ ಅಂತರ್ ಕ್ರಿಯೆಗಳನ್ನು ರೂಪಿಸುವ ಸಮನ್ವಯ ವ್ಯವಸ್ಥೆಗಳು ಈ ಸಾಮಾಜಿಕ ಸಂಸ್ಥೆಗಳಲ್ಲಿ ರೂಪಿತವಾಗಿರುತ್ತವೆ. ಈ ಸಂಸ್ಥೆಗಳೇ ಒಂದು ಸಮಾಜದ ಸಂಸ್ಕೃತಿಯನ್ನು ಲಿಂಗತ್ವ ಕಾಳಜಿಗಳನ್ನು ಕಾಪಾಡಿಕೊಂಡು ಬರುತ್ತವೆ, ಪೋಷಿಸುತ್ತವೆ. ಇವು ಸಂಸ್ಕೃತಿಯ ನಿರ್ವಹಣೆಯನ್ನೂ ಮಾಡುತ್ತವೆ. ಹೀಗಾಗಿ ಸಂಸ್ಥೆಗಳು, ಲಿಂಗತ್ವ ಕಾಳಜಿಗಳು ಮತ್ತು ಸಂಸ್ಕೃತಿ ಇವು ಜೊತೆಜೊತೆಯಲ್ಲೇ ಹೋಗಬೇಕಾಗುತ್ತದೆ.

ಸಾಮಾಜಿಕ ವ್ಯವಸ್ಥೆಗೆ ಸಂಸ್ಕೃತಿಯು ಆಧಾರವಾಗುತ್ತದೆ. ಇದು ಸಮಾಜದಲ್ಲಿ ಲಿಂಗತ್ವ ಪಾತ್ರಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರುತ್ತವೆ. ಪ್ರಪಂಚದ ಹಲವಾರು ಸಂಸ್ಕೃತಿಗಳಲ್ಲಿ ಹಾಗೂ ಭಾರತದಲ್ಲಿನ ಸಂಸ್ಕೃತಿಯಲ್ಲಿ ಮಹಿಳೆಯರು ಮನೆವಾರ್ತೆಯನ್ನು ನೋಡಿಕೊಳ್ಳುವ, ಮನೆಯವರ ಅಗತ್ಯಗಳನ್ನು ಗಮನಿಸಿಕೊಳ್ಳುವ ಪಾತ್ರವನ್ನು ವಹಿಸುತ್ತಾರೆ. ಐತಿಹಾಸಿಕವಾಗಿ ಅವರು ಬಹಳ ಪಾಲು ಕುಟುಂಬದ ಕೆಲಸಗಳನ್ನು–ಬಟ್ಟೆ ಒಗೆಯುವುದು, ಪಾತ್ರೆ

ತೊಳೆಯುವುದು, ಅಡಿಗೆ ಮಾಡುವುದು, ಮಕ್ಕಳ ಪಾಲನೆ ಮಾಡುವುದು, ಹಿರಿಯರ ಪೋಷಣೆ ಮಾಡುವುದು, ಇತ್ಯಾದಿ–ಮಾಡುತ್ತಲೇ ಬಂದಿದ್ದಾರೆ. ನಮ್ಮ ಸಮೂಹ ಮಾಧ್ಯಮಗಳೂ ಹೆಂಗಸರ ಈ ಪಾತ್ರಗಳನ್ನೇ ಪೋಷಿಸಿಕೊಂಡು ಬಂದಿವೆ. ಮಹಿಳೆಯರು ಮನೆಯಿಂದ ಹೊರಗೆ ನೌಕರಿ ಮಾಡಲು ಪ್ರಾರಂಭಿಸಿರುವ ಈ ದಿನಗಳಲ್ಲೂ ಮನೆವಾರ್ತೆಯ ಹೆಚ್ಚಿನ ಪಾಲಿನ ಜವಾಬ್ದಾರಿ ಇನ್ನೂ ಅವರ ಮೇಲೆಯೇ ಇದೆ.

ಕುಟುಂಬ ಒಂದು ಸಂಸ್ಥೆಯಾಗಿ ಸಮಾಜದ ಸಂಸ್ಕೃತಿಯನ್ನು ವರ್ಗಾಯಿಸುತ್ತದೆ. ಲಿಂಗತ್ವ ವಿಚಾರಗಳೂ ಸಂಸ್ಕೃತಿಯ ಅವಿನಾಭಾವವಾಗಿರುವುದರಿಂದ ಸಮಾಜದ ಸಂಸ್ಕೃತಿ ತದ್ರೂಪದಲ್ಲೇ ಕುಟುಂಬವನ್ನು ಪ್ರವೇಶಿಸುತ್ತದೆ. ಇದೇ ಸಂಸ್ಕೃತಿಯನ್ನು ಪೋಷಕರು ಮಕ್ಕಳಿಗೆ ವರ್ಗಾಯಿಸುತ್ತಾರೆ. ಸಮಾಜದಲ್ಲಿ ಲಿಂಗತ್ವ ವಿಚಾರಗಳಲ್ಲಿ ತಾರತಮ್ಯವಿದ್ದರೆ ಅದು ಮನೆಯನ್ನೂ ಮಕ್ಕಳ ಮನಸ್ಸನ್ನೂ ಸಹಜವಾಗಿಯೇ ಪ್ರವೇಶಿಸುತ್ತದೆ. ಅದಕ್ಕನುಗುಣವಾಗಿ ಹೆಣ್ಣು ಮಕ್ಕಳು 'ಮನೆಯಾಟ' ಆಡಿದರೆ ಗಂಡುಮಕ್ಕಳು 'ಪೈಲೆಟ್ ಆಟ'ವನ್ನೋ ಮಾರ್ಕೆಟ್‌ಗೆ ಹೋಗುವ ಆಟವನ್ನೋ ಆಡುತ್ತಾರೆ. ಹೆಚ್ಚಿನ ಶಿಕ್ಷಣ, ಮಾಧ್ಯಮಗಳು ಹಾಗೂ ಮನೆಯ ಹೊರಗಿನ ವ್ಯವಹಾರಗಳಿಗೆ ತೆರೆದುಕೊಂಡ ಈಗಿನ ಮಕ್ಕಳು ಸ್ವಲ್ಪ ಮಟ್ಟಿಗಾದರೂ ಈ ಪಾತ್ರಗಳನ್ನು ಬದಲಾಯಿಸಿಕೊಳ್ಳುತ್ತಿರುವುದು ಸಂತೋಷದ ಸಂಗತಿ. ನಮ್ಮ ಸಂಸ್ಕೃತಿಯಲ್ಲಿ ಮೊದಲಿನಿಂದಲೂ ಮಹಿಳೆಯರನ್ನು ಮೃದು, ಭಾವನಾಜೀವಿ, ಪರಾವಲಂಬಿ, ಅತಿಮಾತು ಇತ್ಯಾದಿ ವಿಶೇಷಣಗಳಿಂದ ಅದೇ ಹುಡುಗ/ಪುರುಷರನ್ನು ಬಲಿಷ್ಠ, ಮೊಂಡು, ತಟಸ್ಥ, ಕಡಿಮೆ ಮಾತಿನವ, ಸ್ವಾವಲಂಬಿ ಇತ್ಯಾದಿಯಾಗಿ ವರ್ಣಿಸುವ ಪರಿಪಾಠವಿದೆ. ಅದು ಇಂದಿಗೂ ನಿಂತಿಲ್ಲ. ಇದೇ ವರ್ತನೆಗಳನ್ನು ಸಮಾಜ ಸಂಸ್ಕೃತಿಯ ಹೆಸರಿನಲ್ಲಿ ಭಿನ್ನ ಲಿಂಗದವರಿಂದ ಅಪೇಕ್ಷಿಸುತ್ತದೆ ಕೂಡ.

**ಕಲಿಕಾರ್ಥಿಗಳಾಗಿ ಬಾಲಕಿಯರು**

ಕಲಿಕಾರ್ಥಿಗಳಾಗಿ ಬಾಲಕಿಯರ ಅಗತ್ಯಗಳ ಹಿನ್ನೆಲೆಯಲ್ಲಿ ಅನೇಕ ಸಂಶೋಧನೆಗಳು ನಡೆದಿವೆ. ಅವುಗಳ ಫಲಿತಾಂಶಗಳನ್ನು ಕೆಳಕಂಡಂತೆ ಕ್ರೋಢೀಕರಿಸಬಹುದು:

- ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಉನ್ನತ ಶಿಕ್ಷಣದಲ್ಲಿ ಮುಂದುವರಿಯಲು ಹುಡುಗಿಯರಿಗೆ ಸ್ವಸಾಮರ್ಥ್ಯದ ಕುರಿತು ಹುಡುಗರಿಗಿಂತ ದೃಢವಾದ ನಂಬಿಕೆ ಅಗತ್ಯ.
- ಸ್ತ್ರೀತ್ವ ಮತ್ತು ಬುದ್ಧಿಮತ್ತೆಯ ನಡುವಿನ ಘರ್ಷಣೆಯ ಹಿನ್ನೆಲೆಯಲ್ಲಿ ಕೆಲವು ಹುಡುಗಿಯರು 'ಯಶಸ್ಸಿನ ಕುರಿತ ಭಯ'ವನ್ನು ಅನುಭವಿಸುತ್ತಾರೆ.
- ಹುಡುಗಿಯರು ಕುಟುಂಬದ ಜವಾಬ್ದಾರಿಯನ್ನು ಹೊರಬೇಕಾದ ಭವಿಷ್ಯದ ಅಗತ್ಯದ ಹಿನ್ನೆಲೆಯಲ್ಲಿ ಹೆಚ್ಚು ಗೌರವದ ನೌಕರಿ ತಮಗಲ್ಲ ಎಂದು ಭಾವಿಸುತ್ತಾರೆ.
- ಹುಡುಗರಷ್ಟೇ ಅಂಕಗಳನ್ನು ಪಡೆದಿದ್ದರೂ ಗಣಿತ ಮತ್ತು ವಿಜ್ಞಾನದಲ್ಲಿ ಜಾಣ್ಮೆಯನ್ನು ಒಪ್ಪಿಕೊಳ್ಳುವ ಹುಡುಗಿಯರ ಸಂಖ್ಯೆ ಹುಡುಗರಿಗಿಂತ ಕಡಿಮೆ.
- 'ಕಲಿತ ಅಸಹಾಯಕತೆ'ಯನ್ನು ತೋರಿಸುವಲ್ಲಿ ಹುಡುಗರಿಗಿಂತ ಹುಡುಗಿಯರ ಸಂಖ್ಯೆಯೇ ಹೆಚ್ಚು.
- ಹತ್ತನೆಯ ತರಗತಿಯ ನಂತರ ಹುಡುಗಿಯರು ವೃತ್ತಿಗೆ ಪೂರಕವಾದ ಕೋರ್ಸುಗಳನ್ನು ಆಯ್ದುಕೊಳ್ಳುವುದಕ್ಕಿಂತ ಆಸಕ್ತಿಗನುಗುಣವಾದ ಕೋರ್ಸುಗಳನ್ನು ಆಯ್ದುಕೊಳ್ಳುತ್ತಾರೆ.
- ಸಾಂಪ್ರದಾಯಿಕವಾಗಿ ಪುರುಷರಿಗೆಂದು ಭಾವಿಸುವ ವಿಷಯಗಳ ಅರ್ಹತೆಗಳಿಗಿಂತ ಹುಡುಗಿಯರು ಭೌತವಿಜ್ಞಾನ ವಿಷಯಗಳ ಪದವಿಪಡೆಯುವುದು ಕಾಣಬರುತ್ತದೆ.
- ಸಂಸ್ಕೃತಿಯ ಒತ್ತಾಯದಲ್ಲಿ ತಾಯಿ, ಹೆಂಡತಿ ಮತ್ತು ಸೇವಾಪೇಕ್ಷೆಯ ಪಾತ್ರಗಳನ್ನು ಭರಿಸುವ ಹಿನ್ನೆಲೆಯಲ್ಲಿ ಮಹಿಳೆಯರು ವಿಜ್ಞಾನ ಪದವಿ ನಮಗಲ್ಲ ಎಂದು ಭಾವಿಸುತ್ತಾರೆ.

ಆದರೆ ಇಂದು ಶಿಕ್ಷಣ, ಮಾಧ್ಯಮಗಳು ಹೆಚ್ಚು ಜನರನ್ನು ತಲುಪಿರುವ ಹಿನ್ನೆಲೆಯಲ್ಲಿ ಈ ಸನ್ನಿವೇಶಗಳು ಬದಲಾಗಿವೆ. ಹೆಚ್ಚು ಹೆಚ್ಚು ಹುಡುಗಿಯರು ವೃತ್ತಿ ಆಧಾರಿತ ಕೋರ್ಸುಗಳನ್ನು ಕಲಿತು ಪದವಿ ಪಡೆಯುತ್ತಿದ್ದಾರೆ. ಹೆಚ್ಚು ಗೌರವಯುತ ಸ್ಥಾನಗಳನ್ನು ಪಡೆಯುತ್ತಿದ್ದಾರೆ. ಇದರ ಪ್ರಮಾಣ ಒಟ್ಟು ಹುಡುಗಿಯರ ಸಂಖ್ಯೆಗೆ ಹೋಲಿಸದರೆ ಅತ್ಯಂತ ಕಡಿಮೆ ಇರಬಹುದು. ಆದರೆ ಗತಿ ಧನಾತ್ಮಕವಾಗಿದೆ ಎಂಬುದು ಸಮಾಧಾನಕರವಾದ ಸಂಗತಿ. ಈ ಕುರಿತು ಸರ್ಕಾರ, ಸಮುದಾಯ ಅತಿ ಹೆಚ್ಚಿನ ಪ್ರಯತ್ನ ಮಾಡಬೇಕಾಗಿದೆ. ಶಿಕ್ಷಿತ ಸದಸ್ಯರು ಪ್ರಗತಿಪರವಾಗಿ ಆಲೋಚಿಸಬಲ್ಲವರಾಗಿರುತ್ತಾರೆ. ಸಮಾಜದ ಋಣಾತ್ಮಕ ಸಂಸ್ಕೃತಿಯ ಅಂಶಗಳನ್ನು ನಿವಾರಿಸಬಲ್ಲವರಾಗಿರುತ್ತಾರೆ. ಶಿಕ್ಷಣ ಮಾತ್ರ ಎಲ್ಲವನ್ನೂ ಸಾಧಿಸಬಲ್ಲುದು ಎಂಬುದು ಈ ಎಲ್ಲದರ ಸಾರಾಂಶ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

ನಿಮ್ಮ ಸನ್ನಿವೇಶದಲ್ಲಿ ಶಿಕ್ಷಣ ಪಡೆಯಬೇಕಾದ ಹಿನ್ನೆಲೆಯಲ್ಲಿ ಹುಡುಗಿಯರನ್ನು ಗಮನಿಸಿ. ಅವರ ಅಗತ್ಯಗಳೇನು ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಿ. ಆ ಕುರಿತು ಶಾಲೆ/ಶಾಲೆಯ ಸಿಬ್ಬಂದಿ ಏನು ಮಾಡಬಹುದು ಎಂದು ಆಲೋಚಿಸಿ ಅದನ್ನು ಸಾಧಿಸಲು ಒಂದು ಕಾರ್ಯಯೋಜನೆ ತಯಾರಿಸಿ.

## 2.6.3.2. ಲಿಂಗತ್ವ ಮತ್ತು ಅಡಗು ಪಠ್ಯಕ್ರಮ

ಶಿಕ್ಷಣದಲ್ಲಿ ಲಿಂಗತ್ವ ವಿಚಾರಗಳನ್ನು ತಜ್ಞರನೇಕರು ವಿಶ್ಲೇಷಿಸಿದ್ದಾರೆ. ಈ ಅಂಶಗಳು ಗರಿಷ್ಠ ಮಟ್ಟದ ಸಂಸ್ಥೆಗಳ ಪಠ್ಯಕ್ರಮ ಚೌಕಟ್ಟುಗಳಲ್ಲಿ ಪ್ರತಿಬಿಂಬಿತವಾಗಿದೆ. 1975, 1988, 2000 ಮತ್ತು 2005ರ ಎನ್.ಸಿ.ಇ.ಆರ್.ಟಿ. ಯ ಪಠ್ಯಕ್ರಮ ಚೌಕಟ್ಟಿನಲ್ಲಿ ಶಿಕ್ಷಣದಲ್ಲಿ ಲಿಂಗತ್ವವನ್ನು ಕುರಿತು ವಿಚಾರಮಾಡಲಾಗಿದೆ. ಈ ಪಯಣ 'ಕಾಳಜಿ'ಯಿಂದ 'ಅಂತರ್ಗತತೆ'ಯವರೆಗೆ ಸಾಗಿಬಂದಿದೆ.

ಸಂಸ್ಕೃತಿಯ ಸಂವಹನ ಮತ್ತು ಸಂಸ್ಕರಣಗಳೆರಡಕ್ಕೆ ಸಂಬಂಧಿಸಿದಂತೆಯೂ ಪಠ್ಯಕ್ರಮದ ಪಾತ್ರ ಅತಿ ಮಹತ್ವದ್ದು. ಅದು ಸಂಸ್ಕೃತಿಯನ್ನು ವರ್ಗಾಯಿಸುವಂತೆಯೇ ಉದಾತ್ತವಾಗಿಸಲೂ ಶಕ್ತವಾಗಿರುತ್ತದೆ. ಈ ಪಠ್ಯಕ್ರಮವು ಪಠ್ಯಪುಸ್ತಕ, ಕಲಿಕಾ ಸಾಮಗ್ರಿಗಳು ಮತ್ತು ಅಡಗು ಪಠ್ಯಕ್ರಮವೆನಿಸಿಕೊಳ್ಳುವ ಶಾಲಾ ಪರಿಸರದಿಂದ ಅನ್ವಯವಾಗುತ್ತದೆ. ಎಲ್ಲ ಸಮಾಜದಲ್ಲೂ ಲಿಂಗತ್ವ ಆಧಾರಿತ ನಂಬಿಕೆಗಳು ಹಾಗೂ ಸಂಬಂಧಪಟ್ಟ ವಿಚಾರಗಳು ಚಾಲ್ತಿಯಲ್ಲಿರುವುದರಿಂದ ಅವು ಪಠ್ಯಕ್ರಮದಲ್ಲೂ ಪ್ರತಿಬಿಂಬಿತವಾಗುತ್ತವೆ. ಅಂದರೆ ಸಮಾಜದಲ್ಲಿ ಮಹಿಳೆಯರು ಮತ್ತು ಪುರುಷರ ವರ್ತನೆ ಹೇಗಿರಬೇಕು, ಅವರು ಯಾವ ಯಾವ ಕೆಲಸಗಳನ್ನು ಮಾಡಬೇಕು, ಯಾವ ಪಾತ್ರಗಳನ್ನು ವಹಿಸಬೇಕು ಎಂಬಿತ್ಯಾದಿ ಅಂಶಗಳನ್ನು ಪಠ್ಯಕ್ರಮ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸೂಚಿಸುತ್ತದೆ. ಮಕ್ಕಳು ಶಾಲಾ ಪರಿಸರವನ್ನು ಪ್ರವೇಶಿಸುವಾಗ ಪಠ್ಯಪುಸ್ತಕ ಮತ್ತು ಶಾಲಾ ಪರಿಸರದಲ್ಲಿ ಸೂಚಿತವಾಗುವ ಚಿತ್ರಗಳು ಲಿಂಗತ್ವದ ಪರಿಕಲ್ಪನೆಯನ್ನು ಗಟ್ಟಿಗೊಳಿಸಿ, ಅವರ ಸ್ವ ಪರಿಕಲ್ಪನೆ, ವರ್ತನೆಗಳು, ಆಶಯ ಮತ್ತು ಅಪೇಕ್ಷೆಗಳಲ್ಲಿ ನಾಟುತ್ತವೆ. ಈ ಕುರಿತ ಬದಲಾವಣೆಗಳನ್ನು ತರಬೇಕೆಂಬ ಆಶಯಗಳಿದ್ದರೆ, ಸಮಾಜದಲ್ಲಿನ ಸಂಸ್ಕೃತಿಯಲ್ಲಿ ಯಾವ ಬದಲಾವಣೆಗಳನ್ನು ತರಬೇಕು ಎಂಬುದನ್ನು ಸ್ಪಷ್ಟಪಡಿಸಿಕೊಂಡು, ಆ ಬದಲಾವಣೆಗಳನ್ನು ಪಠ್ಯಕ್ರಮದಲ್ಲಿ ಹೇಗೆ ಅಂತರ್ಗತಗೊಳಿಸಬೇಕು ಎಂಬುದನ್ನು ಗಂಭೀರವಾಗಿ ಆಲೋಚಿಸಿ, ಕಾರ್ಯರೂಪಕ್ಕೆ ತರಬೇಕು.

ಲಿಂಗತ್ವ ಸಂವೇದನಾಶೀಲ ಪಠ್ಯಕ್ರಮದ ಪ್ರಾಮುಖ್ಯತೆಯನ್ನು ಯುನೆಸ್ಕೊ ಒತ್ತಿ ಹೇಳಿದೆ. ಅದರ ಪ್ರಕಾರ, ಲಿಂಗತ್ವ ಸಂವೇದನಾಶೀಲ ಪಠ್ಯಕ್ರಮವು ಮಹಿಳೆಯರು ಮತ್ತು ಪುರುಷರನ್ನು ಮತ್ತು ಹುಡುಗರು ಹಾಗೂ ಹುಡುಗಿಯರನ್ನು ಸಮಾನತೆಯಿಂದ ಪರಿಗಣಿಸಲು ಅನುವು ಮಾಡಿಕೊಡುತ್ತದೆ. ಎಲ್ಲರೂ ಸಂಪೂರ್ಣ ಮಟ್ಟದ ವರ್ಗದವರು ಸಾಧನೆಯನ್ನು ಮಾಡಲು ಸಾಧ್ಯವಾಗಿಸುತ್ತದೆ. ಇದು ಶಾಲಾ ಸಿಬ್ಬಂದಿ ವರ್ಗದವರು ವಿದ್ಯಾರ್ಥಿ ವಿದ್ಯಾರ್ಥಿಗಳ ಜೊತೆ ಹೇಗೆ ನಡೆದುಕೊಳ್ಳುತ್ತಾರೆ ಮತ್ತು ಪಠ್ಯಪುಸ್ತಕದಲ್ಲಿ ಹುಡುಗ–ಹುಡುಗಿಯರನ್ನು ಹೇಗೆ ಬಿಂಬಿಸಲಾಗಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಲಿಂಗತ್ವ ಸಂವೇದನಾ ಶೀಲ ಮನೋಭಾವ ಮತ್ತು ಆ ಹಿನ್ನೆಲೆಯಲ್ಲಿನ ಕಲಿಕಾ ಸಾಮಗ್ರಿಗಳು ಮಹಿಳೆಯರು ಮತ್ತು ಪುರುಷರನ್ನು ಕುರಿತ ಪಡಿಯಚ್ಚುಮುಕ್ತ ಚಿತ್ರಗಳನ್ನು ಮಕ್ಕಳಿಗೆ ಒದಗಿಸುತ್ತವೆ.

ಪಠ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ಯಶಸ್ವಿ ಮಹಿಳೆಯರ ಚಿತ್ರಗಳನ್ನು ಮೂಡಿಸಿದಾಗ ಮತ್ತು ಪಾಠಬೋಧಿಸುವಾಗ ಅಂತಹ ದೃಷ್ಟಾಂತಗಳನ್ನು ಹೆಚ್ಚು ಬಳಸಿದಾಗ ಲಿಂಗ ಸಮಾನತೆಯ ಪಠ್ಯಕ್ರಮ ಸಮಾಜದ ವೈವಿಧ್ಯತೆಯನ್ನು ಮನಗಾಣಿಸುತ್ತದೆ. ಶಾಲೆಗಳಲ್ಲಿ ಬಳಸುವ ಕಲಿಕಾ ಸಾಮಗ್ರಿಗಳಾದ ಪಠ್ಯಪುಸ್ತಕಗಳು, ಕೈಪಿಡಿಗಳು, ಕಾರ್ಯತಖ್ತೆಗಳು ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿ ಅವುಗಳಲ್ಲಿ ಲಿಂಗತಾರತಮ್ಯದ ಯಾವುದೇ ಅಂಶಗಳು ಇಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅವುಗಳು ಲಿಂಗತ್ವ ಸಂವೇದನಾಶೀಲವಾಗಿವೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಇದನ್ನು ಗುರುತಿಸಬೇಕಾದ ಅಗತ್ಯ, ಗುರುತಿಸುವ ರೀತಿ–ವಿಧಾನಗಳನ್ನು ಸೇವಾ ಪೂರ್ವ ಶಿಕ್ಷಣದ ಹಂತದಲ್ಲೇ ಅಧ್ಯಾಪಕರು ಕಲಿಯುವ ಅವಕಾಶ ಮಾಡಿಕೊಡಬೇಕು.

ಲಿಂಗ ಸಮಾನ ಪಠ್ಯಕ್ರಮ ಅನ್ವಯವಾಗಬೇಕಾದರೆ, ಒಂದುಮಟ್ಟಿನ 'ಸಾಮಾನ್ಯ ಪಠ್ಯಕ್ರಮ'ವನ್ನು ಜಾರಿಗೊಳಿಸುವುದು ಒಳ್ಳೆಯದು. ಅಂದರೆ ಎಲ್ಲ ಮಕ್ಕಳೂ ಅಭ್ಯಾಸಮಾಡಲೇಬೇಕಾದ ಪಠ್ಯಾಂಶಗಳನ್ನು ಒಳಗೊಂಡ ಪಠ್ಯಕ್ರಮದ ಭಾಗವಿದು. ಇದರಲ್ಲಿ ಲಿಂಗತ್ವ ವಿಚಾರಗಳು, ಲೈಂಗಿಕ ಶಿಕ್ಷಣ, ಮಾನವ ಹಕ್ಕುಗಳು ಮತ್ತು ಜೀವನ ಕೌಶಲಗಳ ವಿಷಯಗಳನ್ನು ಅಳವಡಿಸಬೇಕು. ಇದನ್ನು ಭಾಗವಹಿಕೆ ಸಹಿತ ಬೋಧನಾ ಉಪಕ್ರಮಗಳ ಮೂಲಕ ಇವುಗಳನ್ನು ಬೋಧಿಸಬೇಕು. ಪ್ರಾದೇಶಿಕ ನಿರ್ದಿಷ್ಟ ಮತ್ತು ಸಂಸ್ಕೃತಿ ನಿರ್ದಿಷ್ಟವಾದ ಪಠ್ಯಕ್ರಮಗಳು ವಿದ್ಯಾರ್ಥಿ–ವಿದ್ಯಾರ್ಥಿನಿಯರು ವೃತ್ತಿ ಮತ್ತು ವೃತ್ತಿಗಳ ಆಯ್ಕೆ, ವಿವಾಹ, ಆರೋಗ್ಯ, ಪೌಷ್ಟಿಕತೆ, ಸುಭದ್ರತೆ ಮತ್ತು ನಾಯಕತ್ವದ ವಿಷಯಗಳಲ್ಲಿ ಮಾಹಿತಿಸಹಿತ ನಿರ್ಧಾರಗಳನ್ನು ಕೈಗೊಳ್ಳುವಂತೆ ತರಬೇತಿ ನೀಡಬೇಕು.

ಪಠ್ಯಕ್ರಮದಲ್ಲಿ ಲಿಂಗ ಸಮಾನತೆಯನ್ನು ಅನ್ವಯಿಸಿಕೊಂಡ ಶಿಕ್ಷಣ ವ್ಯವಸ್ಥೆಗಳು ಕೆಳಗಿನ ವಿಷಯಗಳಲ್ಲಿ ಸಮರ್ಥವಾಗಿರುತ್ತವೆ;

- ಲಿಂಗ ಸಮಾನತೆಯ ಬದ್ಧತೆಯನ್ನು ಸಾಧಿಸಲು ಪಠ್ಯಕ್ರಮ ಚೌಕಟ್ಟಿನ ಪರಿಷ್ಕರಣೆ ಮಾಡುವುದು;
- ಲಿಂಗ ಸಮಾನತೆಯನ್ನು ಪೋಷಿಸುವ ಮನೋಭಾವ ಮತ್ತು ಮೌಲ್ಯಗಳಿಗೆ ಪ್ರಾಮುಖ್ಯತೆ ನೀಡುವುದು;
- ಕೋರ್ಸಿನ ಪಠ್ಯವಸ್ತುವು ಲಿಂಗ ಸಮಾನತೆಯ ಮೌಲ್ಯ ಮತ್ತು ಮನೋಭಾವಗಳನ್ನು ಒಳಗೊಂಡಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು;
- ಪಠ್ಯಪುಸ್ತಕಗಳು ಮತ್ತು ಕಲಿಕಾ ಸಾಮಗ್ರಿಗಳು ಲಿಂಗ ಸಂವೇದನಾಶೀಲತೆಯಿಂದಿರುವಂತೆ ಪರಿಷ್ಕರಿಸುವುದು;
- ಲಿಂಗ ಅಸಮಾನತೆಯನ್ನು ಹುಟ್ಟುಹಾಕುವ ಲಿಂಗತ್ವ ಆಧಾರಿತ ಪಡಿಯಚ್ಚುಗಳನ್ನು ನಿವಾರಿಸುವುದು.

## ಅಡಗು ಪಠ್ಯಕ್ರಮದಲ್ಲಿ ಲಿಂಗತ್ವ ವಿಚಾರಗಳು

ಅಡಗು ಪಠ್ಯಕ್ರಮದ ಕುರಿತು ನೀವು ಈಗಾಗಲೇ ತಿಳಿದಿರುವಿರಿ. ಅದನ್ನು ಒಮ್ಮೆ ನೆನಪಿಸಿಕೊಳ್ಳೋಣ. ಅದು ಅಭಿವ್ಯಕ್ತವಾಗದ ಔಪಚಾರಿಕವಲ್ಲದ ಮಾನಕಗಳು, ವರ್ತನೆಗಳು ಮತ್ತು ಮೌಲ್ಯಗಳಿಗೆ ಸಂಬಂಧಿಸಿದವು. ಇವುಗಳನ್ನು ಮಕ್ಕಳು ಶಾಲೆಯಲ್ಲಿ ತರಗತಿಯಲ್ಲಿ ಔಪಚಾರಿಕವಾದ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಇತ್ಯಾದಿ ವಿಷಯಗಳನ್ನು ಕಲಿಯುವಂತೆ ಔಪಚಾರಿಕವಲ್ಲದ ಈ ಅಂಶಗಳನ್ನೂ ಶಾಲಾ ಪರಿಸರದಿಂದ ಕಲಿಯುತ್ತಾರೆ. ಅಧ್ಯಯನ ವಿಷಯಗಳಾದ ಆಗಿಲ್ಲದ ಎರಡೂ ಅಂಶಗಳನ್ನು ಮಕ್ಕಳು ಶಾಲೆಯಲ್ಲಿ ಕಲಿಯುತ್ತಾರೆ ಎಂಬುದು ಅಡಗು ಪಠ್ಯಕ್ರಮದ ಗ್ರಹಿಕೆ. ಈ ಮೂಲಕ ಮಕ್ಕಳು ಸಮಾಜದ ಪ್ರಸ್ತುತ ಸಮಾಜದ ಸಂಸ್ಕೃತಿಯಲ್ಲಿ ಒಪ್ಪಿಕೊಂಡಿರುವ ಸಾಮಾಜಿಕ ಮಾನಕಗಳು, ಮೌಲ್ಯಗಳು ಮತ್ತು ನಂಬಿಕೆಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳುತ್ತಾರೆ ಇಲ್ಲವೇ ಅದನ್ನು ಪ್ರಶ್ನಿಸುತ್ತಾರೆ. ಲಿಂಗತ್ವಕ್ಕೆ ಸಂಬಂಧಿಸಿದಂತೆ ಅಡಗು ಪಠ್ಯಕ್ರಮವು ಶಿಕ್ಷಣದ ಮೂಲಕ ಅಸಮಾನವಾದ ಲಿಂಗತ್ವ ಆಧಾರಿತ ಅಧಿಕಾರವನ್ನು ಮುಂದುವರಿಸುತ್ತದೆ ಅಥವಾ ಲಿಂಗ ಅಸಮಾನತೆಯ ಆಧಾರದ ಮೇಲಿನ ರೂಢಿರಿವಾಜುಗಳನ್ನು ಪ್ರಶ್ನಿಸಿ ಲಿಂಗ ಸಮಾನತೆಯ ರೂಢಿಗಳಾಗಿ ಅವುಗಳನ್ನು ಬದಲಿಸುವ ವಿಧಾನಗಳನ್ನು ರೂಢಿಗೆ

ತರಲು ಸಹಾಯವಾಗುತ್ತದೆ. ವಿವಿಧ ರೀತಿಯ ಶಾಲೆಗಳಲ್ಲಿ ರೂಢಿಯಲ್ಲಿರುವ ಅಭ್ಯಾಸಗಳು, ವಿಧಾನಗಳು, ನಿಯಮಗಳು, ಸಂಬಂಧಗಳು ವ್ಯವಸ್ಥೆಗಳು ಕಲಿಕೆಯ ವಿವಿಧ ಅಂಶಗಳಲ್ಲಿ ಅಡಗು ಪಠ್ಯಕ್ರಮದ ಯಶಸ್ಸಿಗೆ ಕಾರಣವಾಗುತ್ತವೆ. ಶೈಕ್ಷಣಿಕ ಆಡಳಿತಾಧಿಕಾರಿಗಳು, ಅಧ್ಯಾಪಕರು, ಸಹಪಾಠಿಗಳು ಮತ್ತು ಇತರ ಸಿಬ್ಬಂದಿಗಳ ಜೊತೆಗಿನ ಅಂತರ್ ಕ್ರಿಯೆಗಳಿಂದಾಗಿ ಉದ್ದೇಶಪೂರಿತವಲ್ಲದ ಕಲಿಕೆ ಉಂಟಾಗುತ್ತದೆ. ಇದು ಮಕ್ಕಳ ಒಟ್ಟು ವ್ಯಕ್ತಿತ್ವದ ಮೇಲೆ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ವಿದ್ಯಾರ್ಥಿಗಳು ಸಹಪಾಠಿಗಳು, ಅಧ್ಯಾಪಕರು, ಮತ್ತು ಇತರ ವಯಸ್ಕರ  ಜೊತೆಯಲ್ಲಿ ಹೇಗೆ ವರ್ತಿಸಬೇಕು, ವಿವಿಧ ವಂಶದ, ಗುಂಪಿನ, ವರ್ಗದ ಜನರನ್ನು ಯಾವ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕು, ಯಾವ ವಿಚಾರಗಳು ಸ್ವೀಕಾರಾರ್ಹ ಮತ್ತು ಯಾವುದು ಅಲ್ಲ ಇತ್ಯಾದಿ ಅಂಶಗಳಿಗೆ ಅಡಗು ಪಠ್ಯಕ್ರಮದಲ್ಲಿ ಸೂಚನೆಗಳು ಕಾಣುತ್ತವೆ. ಇದನ್ನು ಮಕ್ಕಳಾಗಲೀ ಅಧ್ಯಾಪಕರಾಗಲೀ ಸಮುದಾಯದವರಾಗಲೀ ಪರೀಕ್ಷಿಸುವುದಿಲ್ಲವಾದುದರಿಂದ ಇದನ್ನು ಅಡಗು ಪಠ್ಯಕ್ರಮ ಎಂದು ಹೇಳಲಾಗುತ್ತದೆ. ಲಿಂಗತ್ವದ ವಿಚಾರಗಳು ಅಡಗು ಪಠ್ಯಕ್ರಮದ ಪ್ರಮುಖ ಅಂಶಗಳು. ಸಾಮಾಜಿಕ ಜೀವನವನ್ನು ಸಂಘಟಿಸಲು ಬಹು ಮುಖ್ಯವಾದ ಅಂಶ ಎಂಬ ವಿಚಾರವನ್ನೂ ಒಳಗೊಂಡಂತೆ ಶಾಲೆಗಳು ಲಿಂಗತ್ವವನ್ನು ಕುರಿತ ಸಾಂಸ್ಕೃತಿಕ ಸಂದೇಶಗಳನ್ನು ಪೋಷಿಸುತ್ತಿರುತ್ತವೆ. ಇದರ ಬಗ್ಗೆ ಶಾಲೆಗಳು ಜಾಗರೂಕವಾಗಿರಬೇಕು. ಇದನ್ನು ಕುರಿತ ಆಲೋಚನೆಗಳನ್ನು ಮಕ್ಕಳಿಗೆ ತೆರೆದಿಟ್ಟು ಲಿಂಗ ಸಮಾನ ಸಂಸ್ಕೃತಿಯನ್ನು ಹುಟ್ಟುಹಾಕಲು ಪ್ರಯತ್ನಿಸಿ ಸಾಧಿಸಬೇಕು. ಹುಡುಗ ಹುಡುಗಿಯರಿಬ್ಬರಿಗೂ ಸ್ವರಕ್ಷಣಾ ಕೌಶಲಗಳನ್ನು ಕಲಿಸುವುದು ಈ ನಿಟ್ಟಿನಲ್ಲಿ ಅಗತ್ಯವಾದ ಆತ್ಮವಿಶ್ವಾಸವನ್ನು ಬೆಳೆಸಲು ಸಹಾಯಕವಾಗುತ್ತದೆ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2**

ಅಡಗು ಪಠ್ಯಕ್ರಮ ಎಂದರೇನು? ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದಂತೆ ಅದು ಏನನ್ನು ಬಿಂಬಿಸಬೇಕು ವಿವರಿಸಿ.

## 2.6.4. ಸಾರಾಂಶಿಸೋಣ

ಮಾನವಕುಲದ ಇತಿಹಾಸದಲ್ಲಿ ಒಂದು ಸಮಾಜದ ಸ್ಥಾನಮಾನವನ್ನು ನಿರ್ಧರಿಸುವ ಪ್ರಮುಖ ಅಂಶವೆಂದರೆ ಆ ಸಮಾಜದ ಸಂಸ್ಕೃತಿ.

ಸಂಸ್ಕೃತಿ ಎಂಬುದು ವಿಶಾಲ ವ್ಯಾಪ್ತಿಯುಳ್ಳ ಪದ. ಇದು ಮಾನವ ಸಮಾಜದಲ್ಲಿನ ಸಾಮಾಜಿಕ ವರ್ತನೆಗಳು ಮತ್ತು ಮಾನಕಗಳನ್ನು ಒಳಗೊಳ್ಳುತ್ತದೆ. ಜೊತೆಗೆ ಆಯಾ ಸಮಾಜದ ಜ್ಞಾನ, ನಂಬಿಕೆಗಳು, ಕಲೆ, ಸಂಪ್ರದಾಯಗಳು, ಕಾನೂನುಗಳು, ವ್ಯಕ್ತಿಗಳ ಅಭ್ಯಾಸಗಳು ಮತ್ತು ಸಾಮರ್ಥ್ಯಗಳೂ ಸಂಸ್ಕೃತಿಯ ಪರಿಧಿಯಲ್ಲಿ ಬರುತ್ತವೆ.

ಲಿಂಗತ್ವ ಎಂಬುದು ಸಾಮಾಜಿಕವಾಗಿ ರೂಪುಗೊಳ್ಳುವಂತಹುದು. ಇದು ಪ್ರತಿ ವ್ಯಕ್ತಿಯ ಮನೋಭಾವಗಳು, ಪಾತ್ರಗಳು, ಜವಾಬ್ದಾರಿ ಮತ್ತು ವರ್ತನಾ ವಿನ್ಯಾಸಗಳ ಮೇಲೆ ವಿಶೇಷವಾದ ಪ್ರಭಾವವನ್ನು ಬೀರುತ್ತದೆ. ಈ ಲಿಂಗತ್ವ ವಿಚಾರಗಳು ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ.

ಸಾಮಾಜಿಕ ವ್ಯವಸ್ಥೆಗೆ ಸಂಸ್ಕೃತಿಯು ಆಧಾರವಾಗುತ್ತದೆ. ಇದು ಸಮಾಜದಲ್ಲಿ ಲಿಂಗತ್ವ ಪಾತ್ರಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರುತ್ತವೆ.

ಕುಟುಂಬ ಒಂದು ಸಂಸ್ಥೆಯಾಗಿ ಸಮಾಜದ ಸಂಸ್ಕೃತಿಯನ್ನು ವರ್ಗಾಯಿಸುತ್ತದೆ. ಲಿಂಗತ್ವ ವಿಚಾರಗಳೂ ಸಂಸ್ಕೃತಿಯ ಅವಿನಾಭಾವವಾಗಿರುವುದರಿಂದ ಸಮಾಜದ ಸಂಸ್ಕೃತಿ ತದ್ರೂಪದಲ್ಲೇ ಕುಟುಂಬವನ್ನು ಪ್ರವೇಶಿಸುತ್ತದೆ. ಇದೇ ಸಂಸ್ಕೃತಿಯನ್ನು ಪೋಷಕರು ಮಕ್ಕಳಿಗೆ ವರ್ಗಾಯಿಸುತ್ತಾರೆ. ಸಮಾಜದಲ್ಲಿ ಲಿಂಗತ್ವ ವಿಚಾರಗಳಲ್ಲಿ ತಾರತಮ್ಯವಿದ್ದರೆ ಅದು ಮನೆಯನ್ನೂ ಮಕ್ಕಳ ಮನಸ್ಸನ್ನೂ ಸಹಜವಾಗಿಯೇ ಪ್ರವೇಶಿಸುತ್ತದೆ.

ಆದರೆ ಇಂದು ಶಿಕ್ಷಣ, ಮಾಧ್ಯಮಗಳು ಹೆಚ್ಚು ಜನರನ್ನು ತಲುಪಿರುವ ಹಿನ್ನೆಲೆಯಲ್ಲಿ ಲಿಂಗತ್ವ ವಿಚಾರಗಳಿಗೆ ಸಂಬಂಧಿಸಿದ ಸನ್ನಿವೇಶಗಳು ಬದಲಾಗಿವೆ.

ಶಿಕ್ಷಣವು ಲಿಂಗ ಸಮಾನ ಸಮಾಜವನ್ನು ಮೂಡಿಸಲು ಪ್ರತ್ಯಕ್ಷವಾಗಿ ವಿಷಯಗಳ ಕಲಿಕೆಯ ಮೂಲಕ ಹಾಗೂ ಅಡಗು ಪಠ್ಯಕ್ರಮದಲ್ಲಿ ಧನಾತ್ಮಕ ಸನ್ನಿವೇಶಗಳನ್ನು ಬಿಂಬಿಸುವ ಮೂಲಕ ಪ್ರಯತ್ನಿಸಬೇಕು.

## 2.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ-1**

ಕಾರ್ಯಯೋಜನೆಯನ್ನು ಸಾಕ್ಷಾತ್ಕರಿಸಿ, ನಿಮ್ಮ ಅನುಭವಗಳನ್ನು ದಾಖಲಿಸಿ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ-2**

ಕಲಿಕಾ ಸಾಮಗ್ರಿ ಭಾಗ 6.3.3.2 ಗಮನಿಸಿ.

## 2.6.6. ಘಟಕಾಂತ್ಯ ಅಭ್ಯಾಸಗಳು

1. ಲಿಂಗತ್ವ, ಸಂಸ್ಕೃತಿ ಮತ್ತು ಸಂಸ್ಥೆ ಇವುಗಳ ನಡುವಿನ ಸಂಬಂಧವನ್ನು ವಿವರಿಸಿ.

## 2.6.7. ಪರಾಮರ್ಶನ ಸೂಚಿ


1. http://www.publications.awe.asn.au/gender-and-the-national-curriculum
2. *UNESCO (2015). A Guide for Gender Equality in Teacher Education Policy and Practices (PDF). Paris, UNESCO. pp. 9–10, 59–61. ISBN 978-92-3-100069-0.*
3. *Kostas, Marios (20 June 2019). "Discursive construction of hegemonic masculinity and emphasised femininity in the textbooks of primary education: children's discursive agency and polysemy of the narratives". Gender and Education: 1–1*
4. Gender and the Curriculum in Wyse, D., Hayward, L and Pandya J (Eds.) The Sage Handbook of Curriculum, Pedagogy and Assessment. SAGE.
5. http://www.genderandeducation.com/issues/secondgeapolicyreportwolf/
6. http://www.genderandeducation.com/resources-2/pedagogies/curriculum/
7. https://www.edglossary.org/hidden-curriculum/


**********